ಮಂಗಳವಾರ, ಜುಲೈ 18, 2023 | ₹ 7.00
www.prajavani.net
prajavani.net prajavani prajavani prajavani
ಪ್ರಜಾ ವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನೋಟ....
ವಡೋದರಾದಲ್ಲಿ ಸೋಮವಾರ ನಡೆದ 'ರಾಖಿ ಔರ್ ರಾಣಿ ಕಿ ಪ್ರೇಮ್ ಕಹಾನಿ' ಸಿನಿಮಾ ಪ್ರಚಾರ ಕಾರ್ಯಕ್ರಮದಲ್ಲಿ ನಟಿ ಆಲಿಯಾ ಭಟ್ ಕಾಣಿಸಿಕೊಂಡಿದ್ದು ಹೀಗೆ

ಪೊನ್ಮುಡಿ ವಶಕ್ಕೆ • ತಮಿಳುನಾಡಿನಲ್ಲಿ ಕಾಂಗ್ರೆಸ್– ಡಿಎಂಕೆ ಮೈತ್ರಿ ಸಹಿಸದೆ ಮೋದಿ ಪ್ರತೀಕಾರ: ಟೀಕೆ

ಸಚಿವ, ಪುತ್ರನ ಮನೆ ಮೇಲೆ ಇ.ಡಿ ದಾಳಿ

ನವದೆಹಲಿ/ ಚೆನ್ನೈ (ಪಿಟಿಐ): ಅಕ್ರಮ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ತಮಿಳುನಾಡಿನ ಉನ್ನತ ಶಿಕ್ಷಣ ಸಚಿವ ಕೆ. ಪೊನ್ಮುಡಿ ಹಾಗೂ ಅವರ ಪುತ್ರ, ಸಂಸದ ಗೌತಮ್ ಸಿಗಮಣಿ ಅವರ ಮನೆ ಮೇಲೆ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಸೋಮವಾರ ದಾಳಿ ನಡೆಸಿದ್ದಾರೆ.

ಅಪ್ಪ ಮತ್ತು ಪುತ್ರನಿಗೆ ಸೇರಿದ ಚೆನ್ನೈ, ವೆಲ್ಲುಪುರಂನಲ್ಲಿರುವ ಮನೆ, ಇತರೇ ಸ್ಥಳಗಳಲ್ಲಿ 10 ಗಂಟೆಗಳ ಕಾಲ ಶೋಧ ನಡೆಸಿದ ಅಧಿಕಾರಿಗಳು ಹೆಚ್ಚಿನ ವಿಚಾರಣೆಗಾಗಿ ಸಚಿವ ಪೊನ್ಮುಡಿ ಅವರನ್ನು ವಶಕ್ಕೆ ಪಡೆದಿದ್ದಾರೆ.

ಕಾಂಗ್ರೆಸ್ ಮತ್ತು ಡಿಎಂಕೆ ಈ ದಾಳಿಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿವೆ. ಬೆಂಗಳೂರಿನಲ್ಲಿ ನಡೆಯುತ್ತಿರುವ ಪ್ರತಿಪಕ್ಷಗಳ ಸಭೆಯ ಬೆನ್ನಲ್ಲೇ ಡಿಎಂಕೆ–ಕಾಂಗ್ರೆಸ್ ಮೈತ್ರಿಯನ್ನು ಗುರಿಯಾಗಿಸಿಕೊಂಡು ಪ್ರಧಾನಿ ಮೋದಿ ಸರ್ಕಾರವು ಈ ಪ್ರತೀಕಾರಕ್ಕೆ ಇಳಿದಿದೆ ಎಂದು ಆಪಾದಿಸಿವೆ.

ಉದ್ಯೋಗಕ್ಕಾಗಿ ಹಣ ಪಡೆದ ಆರೋಪದ ಮೇಲೆ ಸಚಿವ ಸೆಂಥಿಲ್ ಬಾಲಾಜಿ ಮೇಲೆ ಕಳೆದ ತಿಂಗಳು ಇ.ಡಿ ದಾಳಿ ನಡೆದಿತ್ತು. ಸ್ಟಾಲಿನ್ ಸರ್ಕಾರದ ಮತ್ತೊಬ್ಬ ಸಚಿವರ ಮೇಲೆ ನಡೆದಿರುವ ಎರಡನೇ ದಾಳಿ ಇದಾಗಿದೆ.

ಪೊನ್ಮುಡಿ ಅವರು ತಿರುಕ್ಕೊಯಿಲೂರ್ ವಿಧಾನಸಭಾ ಕ್ಷೇತ್ರದ ಶಾಸಕರಾಗಿದ್ದರೆ, ಸಿಗಮಣಿ ಅವರು ಕಲ್ಲಕುರಿಚಿ ಲೋಕಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಾರೆ.

ಪ್ರಕರಣದ ಹಿನ್ನೆಲೆ ಏನು?: 2007ರಿಂದ 2011ರ ಅವಧಿಯಲ್ಲಿ ಪೊನ್ಮುಡಿ ಅವರು ಗಣಿ ಸಚಿವರಾಗಿದ್ದರು. ಈ ವೇಳೆ ನಿಯಮಾವಳಿಗಳನ್ನು ಉಲ್ಲಂಘಿಸಿ ಪುತ್ರ ಸೇರಿದಂತೆ ಕುಟುಂಬದ ಸದಸ್ಯರಿಗೆ ಗಣಿ ಮತ್ತು ಕ್ವಾರಿ ನಡೆಸಲು ಪರವಾನಗಿ ನೀಡಿದ್ದರು. ಇದರಿಂದ ಸರ್ಕಾರದ ಬೊಕ್ಕಸಕ್ಕೆ ₹ 28 ಕೋಟಿ ನಷ್ಟವಾಗಿತ್ತು. ಅಲ್ಲದೇ, ನಿರ್ದಿಷ್ಟ ಪ್ರದೇಶವನ್ನೂ ಮೀರಿ ಗಣಿಗಾರಿಕೆ ನಡೆಸಿದ ಆರೋಪವೂ ಇವರ ಮೇಲಿದೆ.

ಈ ಸಂಬಂಧ ದೂರು ದಾಖಲಿಸಿದ್ದ ಪೊಲೀಸರು ತನಿಖೆ ಪೂರ್ಣಗೊಳಿಸಿ ಸಚಿವರ ವಿರುದ್ಧ ಆರೋಪ ಪಟ್ಟಿ ಸಲ್ಲಿಸಿದ್ದರು. ಇದೇ ಪ್ರಕರಣದಲ್ಲಿ ವಿಚಾರಣೆಗೆ ತಡೆ ಕೋರಿ ಸಿಗಮಣಿ ಸಲ್ಲಿಸಿದ್ದ ಅರ್ಜಿಯನ್ನು ಮದ್ರಾಸ್ ಹೈಕೋರ್ಟ್ ವಜಾಗೊಳಿಸಿತ್ತು.

ಅರ್ಜಿದಾರರು ಅಕ್ರಮವಾಗಿ ಗಣಿಗಾರಿಕೆ ನಡೆಸಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಹಾಗಾಗಿ, ವಿಚಾರಣೆಗೆ ತಡೆ ನೀಡಲು ಸಾಧ್ಯವಿಲ್ಲ ಎಂದು ಹೇಳಿತ್ತು.

ಚೆನ್ನೈನಲ್ಲಿರುವ ಸಚಿವ ಕೆ. ಪೊನ್ಮುಡಿ ಮತ್ತು ಸಂಸದ ಗೌತಮ್ ಸಿಗಮಣಿ ಅವರಿಗೆ ಸೇರಿದ ನಿವಾಸದಲ್ಲಿ ಸೋಮವಾರ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಶೋಧ ಕಾರ್ಯ ನಡೆಸಿದರು –ಪಿಟಿಐ ಚಿತ್ರ

ಚುನಾವಣಾ ಪ್ರಚಾರಕ್ಕಿಳಿದ ಇ.ಡಿ: ಸ್ಟಾಲಿನ್

ತನ್ನ ಸಂಪುಟದ ಸಹೋದ್ಯೋಗಿ ಮೇಲಿನ ದಾಳಿಗೆ ಕೆಂಡಾಮಂಡಲವಾಗಿರುವ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್, 'ಇ.ಡಿ ಚುನಾವಣಾ ಪ್ರಚಾರಕ್ಕೆ ಇಳಿದಿದೆ. ಇಂದಿನ ದಾಳಿಯು ಪ್ರಚಾರದ ಅಣಕು ಪ್ರದರ್ಶನವಾಗಿದೆ' ಎಂದು ಟೀಕಿಸಿದ್ದಾರೆ.

'ಈಗಾಗಲೇ, ರಾಜ್ಯಪಾಲ ಆರ್.ಎನ್. ರವಿ ಅವರು ಡಿಎಂಕೆ ಪರ ಪ್ರಚಾರ ನಡೆಸುತ್ತಿದ್ದಾರೆ. ಇದಕ್ಕೆ ಈಗ ಇ.ಡಿ ಕೂಡ ಕೈಜೋಡಿಸಿದೆ. ಹಾಗಾಗಿ, ಚುನಾವಣಾ ಕೆಲಸ ನಮಗೆ ಹಗುರಗೊಂಡಿದೆ' ಎಂದು ವ್ಯಂಗ್ಯವಾಡಿದ್ದಾರೆ.

'ದಾಳಿಯಿಂದ ಪಕ್ಷಕ್ಕೆ ಸಣ್ಣ ಭಯವೂ ಇಲ್ಲ. ಜನರ ಮನಸ್ಸನ್ನು ಬೇರೆಡೆಗೆ ಸೆಳೆಯಲು ಇ.ಡಿಯಿಂದ ಇಂತಹ ನಾಟಕಗಳು ನಡೆಯುವುದು ಸರ್ವೇಸಾಮಾನ್ಯ' ಎಂದಿದ್ದಾರೆ.

'ಈ ದಾಳಿ ಎದುರಿಸಲು ಪಕ್ಷ ಸಮರ್ಥವಾಗಿದೆ. ಗುಟ್ಕಾ ಹಗರಣದಲ್ಲಿ ಎಐಎಡಿಎಂಕೆ ನಾಯಕರು ಭಾಗಿಯಾದ ಆರೋಪವಿದೆ. ಆದರೆ, ಕೇಂದ್ರದ ತನಿಖಾ ಸಂಸ್ಥೆಗಳು ಅವರ ಮೇಲೆ ಯಾವುದೇ ಕ್ರಮಕ್ಕೆ ಮುಂದಾಗಿಲ್ಲ' ಎಂದು ಡಿಎಂಕೆ ವಕ್ತಾರ ಎ. ಸರವಣನ್ ಟೀಕಿಸಿದ್ದಾರೆ.

ಸಿಪಿಎಂ ಮತ್ತು ಸಿಪಿಐ ಕೂಡ ಈ ದಾಳಿಯನ್ನು ಖಂಡಿಸಿದ್ದು, 'ರಾಜಕೀಯ ಲಾಭಕ್ಕಾಗಿ ಬಿಜೆಪಿಯು ಇಂತಹ ಕೀಳುಮಟ್ಟಕ್ಕೆ ಇಳಿದಿದೆ' ಎಂದು ಆಪಾದಿಸಿವೆ.

ಪಕ್ಷಗಳನ್ನು ಒಡೆಯಲು ಹಾಗೂ ಭಯ ಹುಟ್ಟಿಸಲು ಕೇಂದ್ರವು ಇ.ಡಿಯನ್ನು ಅಸ್ತ್ರವಾಗಿ ಬಳಸುತ್ತಿದೆ. ಇದರಿಂದ ಇಡೀ ರಾಷ್ಟ್ರವನ್ನು ನಿಯಂತ್ರಿಸಲು ಸಾಧ್ಯವಿಲ್ಲ

ಅರವಿಂದ ಕೇಜ್ರಿವಾಲ್
ಮುಖ್ಯಮಂತ್ರಿ, ದೆಹಲಿ

ವಿಪಕ್ಷಗಳು ಒಗ್ಗೂಡುವುದನ್ನು ಮೋದಿ ಸರ್ಕಾರಕ್ಕೆ ಸಹಿಸಲು ಆಗುತ್ತಿಲ್ಲ. ಹಾಗಾಗಿ, ಇ.ಡಿ ದಾಳಿಯ ಮೂಲಕ ಸೇಡಿನ ರಾಜಕೀಯ ನಡೆಸುತ್ತಿದೆ

ಮಲ್ಲಿಕಾರ್ಜುನ ಖರ್ಗೆ
ಅಧ್ಯಕ್ಷ, ಎಐಸಿಸಿ

ಸುದ್ದಿ 2 ನಿಮಿಷ

ಅಗತ್ಯ ವಸ್ತು ಕಾಯ್ದೆಯಡಿಗೆ ಬಿತ್ತನೆ ಬೀಜ ಪೂರೈಕೆ: ಫಡಣವೀಸ್

ಮುಂಬೈ (ಪಿಟಿಐ): ನಕಲಿ ಉತ್ಪನ್ನಗಳ ಹಾವಳಿಯಿಂದ ರೈತರು ಮೋಸ ಹೋಗುವುದನ್ನು ತಡೆಯಲು ಆಹಾರ ಧಾನ್ಯಗಳ ಬಿತ್ತನೆ ಬೀಜಗಳು ಮತ್ತು ರಸಗೊಬ್ಬರ ಪೂರೈಕೆಯನ್ನು ಅಗತ್ಯವಸ್ತುಗಳ ಕಾಯ್ದೆಯಡಿ ತರಲು ಮಹಾರಾಷ್ಟ್ರ ಸಚಿವ ಸಂಪುಟವು ನಿರ್ಧಾರ ತೆಗೆದುಕೊಂಡಿದೆ.

ವಿಧಾನಸಭೆಯ ಅಧಿವೇಶನದಲ್ಲಿ ಮಾತನಾಡಿದ ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್, ಈ ಕಾಯ್ದೆಯಡಿ ಬಂಧಿಸಲ್ಪಟ್ಟ ವ್ಯಕ್ತಿಗೆ ಸುಲಭವಾಗಿ ಜಾಮೀನು ಸಿಗುವುದಿಲ್ಲ ಎಂದು ಹೇಳಿದರು.

ವಿಳಂಬವಾದ ಮುಂಗಾರು, ಬೆಳೆ ವೈಫಲ್ಯದ ಕಾರಣದಿಂದ ಪರ್ಯಾಯ ಯೋಜನೆಯನ್ನು ಸರ್ಕಾರ ರೂಪಿಸಿದೆ. ಎರಡನೇ ಬಾರಿಗೆ ಬಿತ್ತನೆ ಸಾಧ್ಯತೆಯನ್ನೂ ಪರಿಗಣಿಸಲಾಗುವುದು ಎಂದು ಫಡಣವೀಸ್ ಅವರು ಹೇಳಿದರು.

'ರಾಜ್ಯದಲ್ಲಿ ಬೇಕಾದಷ್ಟು ಮಳೆಯಾಗಿಲ್ಲ. ಮುಂಗಾರು ಹಂಗಾಮಿನ ಅರ್ಧ ಅವಧಿ ಈಗಾಗಲೇ ಮುಗಿದು ಹೋಗಿದೆ. ಬಿತ್ತನೆ ಕೂಡ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಆಗಿದೆ. ಸರ್ಕಾರ ಸಂಪುಟ ವಿಸ್ತರಣೆಯಲ್ಲಿ ತಲ್ಲೀನವಾಗಿದೆ. ರೈತರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಗಂಭೀರವಾಗಿಲ್ಲ' ಎಂದು ಕಾಂಗ್ರೆಸ್ ಶಾಸಕ ಬಾಳಾಸಾಹೇಬ್ ಥೋರಟ್ ಅವರು ಹೇಳಿದರು.

ರೈತರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಚರ್ಚಿಸುವಂತೆ ಥೋರಟ್ ಅವರು, ಸ್ಪೀಕರ್ ರಾಹುಲ್ ನಾರ್ವೇಕರ್ ಅವರಿಗೆ ಮನವಿ ಮಾಡಿದ ನಂತರ, ಫಡಣವೀಸ್ ಅವರು ಸಂಪುಟ ತೆಗೆದುಕೊಂಡಿರುವ ನಿರ್ಧಾರ ಪ್ರಕಟಿಸಿದರು.

ಗಗನ ನೌಕೆಯ ಕಕ್ಷೆ ಬದಲಾವಣೆ: ಎರಡನೇ ಪ್ರಕ್ರಿಯೆ ಯಶಸ್ವಿ

ಚೆನ್ನೈ: ಭೂಕಕ್ಷೆಯಲ್ಲಿ ಪರಿಭ್ರಮಿಸುತ್ತಿರುವ 'ಚಂದ್ರಯಾನ 3'ರ ಬಾಹ್ಯಾಕಾಶ ನೌಕೆಯ ಕಕ್ಷೆ ಬದಲಿಸುವ ಎರಡನೇ ಹಂತದ ಪ್ರಕ್ರಿಯೆಯು ಸೋಮವಾರ ಯಶಸ್ವಿಯಾಗಿದ್ದು, ನೌಕೆಯು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದೆ ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು (ಇಸ್ರೊ) ತಿಳಿಸಿದೆ.

ಚಂದ್ರನ ದಕ್ಷಿಣ ಧ್ರುವದತ್ತ ತಲುಪಲು ನೌಕೆಗೆ ಅಗತ್ಯವಿರುವ ನೂಕುಬಲ ನೀಡುವ ದ್ವಿತೀಯ ಹಂತದ ಪ್ರಕ್ರಿಯೆಯೂ ಯಶಸ್ವಿಯಾಗಿದೆ. ಮುಂದಿನ ಹಂತದ ಪ್ರಕ್ರಿಯೆಯು ಮಂಗಳವಾರದಂದು ಭಾರತೀಯ ಕಾಲಮಾನ ಮಧ್ಯಾಹ್ನ 2ರಿಂದ 3 ಗಂಟೆಯ ನಡುವೆ ನಡೆಯಲಿದೆ ಎಂದು ಹೇಳಿದೆ.

ಆಗಸ್ಟ್ 1ರಿಂದ ಚಂದ್ರನ ಕಕ್ಷೆಗೆ ಗಗನನೌಕೆಯನ್ನು ಸೇರಿಸುವ ಕಾರ್ಯ ಆರಂಭವಾಗಲಿದೆ. ಭೂಕಕ್ಷೆ ದಾಟಿ ಚಂದಿರನ ಕಕ್ಷೆಯತ್ತ ಸಾಗಲು ಪ್ರೊಪಲ್ಷನ್ ಮಾಡ್ಯೂಲ್‌ಗೆ ಅಗತ್ಯ ನೂಕುಬಲ ಬೇಕಿದೆ. ಹಾಗಾಗಿ, ಜುಲೈ 31ರವರೆಗೆ ಈ ಪ್ರಕ್ರಿಯೆಯನ್ನು ವಿಜ್ಞಾನಿಗಳು ಮುಂದುವರಿಸಲಿದ್ದಾರೆ ಎಂದು ವಿವರಿಸಿದೆ.

ಆಗಸ್ಟ್ 17ರಂದು ಪ್ರೊಪಲ್ಷನ್ ಮಾಡ್ಯೂಲ್ ಮತ್ತು ಲ್ಯಾಂಡರ್ ಮಾಡ್ಯೂಲ್ ಅನ್ನು ಬೇರ್ಪಡಿಸುವ ಪ್ರಕ್ರಿಯೆ ನಡೆಯಲಿದೆ. ಆಗಸ್ಟ್ 23ರ ಸಂಜೆ 5.47ಕ್ಕೆ ಲ್ಯಾಂಡರ್ ಅನ್ನು ಸುರಕ್ಷಿತವಾಗಿ 'ಸಾಫ್ಟ್ ಲ್ಯಾಂಡಿಂಗ್' ಮಾಡಲಾಗುತ್ತದೆ ಎಂದು ತಿಳಿಸಿದೆ.

ಡಿಇಆರ್‌ಸಿ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ: ದೆಹಲಿ ಸಿ.ಎಂ, ಎಲ್‌ಜಿಗೆ ಸುಪ್ರೀಂ ಸಲಹೆ

ರಾಜಕೀಯ ಜಗಳ ಮೀರಿ ಚಿಂತನೆ ನಡೆಸಿ

ಪ್ರಜಾವಾಣಿ ವಾರ್ತೆ

ನವದೆಹಲಿ: 'ದೆಹಲಿ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ (ಡಿಇಆರ್‌ಸಿ) ಅಧ್ಯಕ್ಷ ಸ್ಥಾನಕ್ಕೆ ನಿವೃತ್ತ ನ್ಯಾಯಮೂರ್ತಿಯೊಬ್ಬರ ಆಯ್ಕೆಗಾಗಿ ರಾಜಕೀಯ ಜಗಳವನ್ನು ಮೀರಿ ಚಿಂತನೆ ನಡೆಸಬೇಕು' ಎಂದು ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಮತ್ತು ಲೆಫ್ಟಿನೆಂಟ್ ಗವರ್ನರ್ ವಿ.ಕೆ.ಸಕ್ಸೇನಾ ಅವರಿಗೆ ಸುಪ್ರೀಂ ಕೋರ್ಟ್ ಸೋಮವಾರ ಸಲಹೆ ನೀಡಿತು.

'ಎಲ್ಲವನ್ನೂ ಸುಪ್ರೀಂ ಕೋರ್ಟ್‌ನ ಮಾನದಂಡಗಳಿಗೆ ಅನುಸಾರವಾಗಿಯೇ ನಡೆಸಬೇಕೇ? ನೀವೇ ಚರ್ಚಿಸಿ, ಸಮ್ಮತ ಎನಿಸಿದ ಹೆಸರಿನ ಪಟ್ಟಿ ಮಾಡಿ. ಈ ಎರಡೂ (ಸರ್ಕಾರ, ಲೆಫ್ಟಿನೆಂಟ್ ಗವರ್ನರ್) ಸಾಂವಿಧಾನಿಕ ಆಡಳಿತ ಕೇಂದ್ರಗಳು. ರಾಜಕೀಯ ಜಗಳ ಮೀರಿ ಚಿಂತಿಸಬೇಕು' ಎಂದು ಹೇಳಿತು.

ಡಿಇಆರ್‌ಸಿ ಅಧ್ಯಕ್ಷರ ನೇಮಕ ಪ್ರಕರಣದ ವಿಚಾರಣೆಯ ವೇಳೆ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ, ಮನೋಜ್ ಮಿಶ್ರಾ ಅವರಿದ್ದ ಪೀಠವು, ಕ್ರಮವಾಗಿ ದೆಹಲಿ ಸರ್ಕಾರ ಮತ್ತು ಲೆಫ್ಟಿನೆಂಟ್ ಗವರ್ನರ್ ಅವರನ್ನು ಪ್ರತಿನಿಧಿಸಿದ್ದ ಹಿರಿಯ ವಕೀಲರಾದ ಎ.ಎಂ.ಸಿಂಘ್ವಿ ಮತ್ತು ಹರೀಶ್ ಸಾಳ್ವೆ ಅವರಿಗೆ ಈ ಸಲಹೆಯನ್ನು ನೀಡಿತು.

'ಪವಾಡ ಎಂಬಂತೆ ಅವರಿಬ್ಬರು (ಮುಖ್ಯಮಂತ್ರಿ, ಎಲ್.ಜಿ.,) ಒಪ್ಪಿದರೆ ನಮ್ಮದೇನೂ ಸಮಸ್ಯೆ ಇಲ್ಲ' ಎಂದು ಸಿಂಘ್ವಿ ಅವರು ಇದಕ್ಕೆ ಪ್ರತಿಕ್ರಿಯಿಸಿದರೆ, ಸಾಳ್ವೆ ಅವರು, 'ಕೋರ್ಟ್‌ನ ಸಲಹೆ ಸರಿಯಾಗಿದೆ. ಇದು, ಖಂಡಿತವಾಗಿ ಆಗಬೇಕು' ಎಂದು ಸಹಮತ ವ್ಯಕ್ತಪಡಿಸಿದರು. 'ದೆಹಲಿ ಸರ್ಕಾರ (ಮುಖ್ಯಮಂತ್ರಿ) ಮತ್ತು ಲೆಫ್ಟಿನೆಂಟ್ ಗವರ್ನರ್ ಇಬ್ಬರೂ ರಾಜಧಾನಿಯಲ್ಲಿ ಗಂಭೀರ ಸ್ವರೂಪದ ಆಡಳಿತಕ್ಕೆ ಮುಂದಾಗಬೇಕು ಹಾಗೂ ಒಮ್ಮತದಿಂದ ಡಿಇಆರ್‌ಸಿಯ ನೂತನ ಅಧ್ಯಕ್ಷರ ಹೆಸರು ಅಂತಿಮಗೊಳಿಸಬೇಕು' ಎಂದು ಪೀಠವು ಅಭಿಪ್ರಾಯಪಟ್ಟಿತು.

ಸುಪ್ರೀಂ ಕೋರ್ಟ್‌ನ ಪ್ರಸ್ತಾಪ ಮುತ್ಸದ್ದಿತನದಿಂದ ಕೂಡಿದ್ದಾಗಿದೆ ಎಂದು ಕೇಂದ್ರ ಸರ್ಕಾರವನ್ನು ಪ್ರತಿನಿಧಿಸಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಇದೇ ಸಂದರ್ಭದಲ್ಲಿ ಹೇಳಿದರು.

'ಇದಕ್ಕೆ ಸಂಬಂಧಿಸಿದಂತೆ ಕಾಯ್ದೆ ಇದ್ದಿದ್ದರೆ ನಾವೇ (ಪೀಠ) ಹೆಸರು ಶಿಫಾರಸು ಮಾಡುತ್ತಿದ್ದೆವು. ನಮ್ಮಲ್ಲಿ ಸಾಕಷ್ಟು ಮಂದಿ ಸೂಕ್ತವಾದ ಜನರಿದ್ದರು' ಎಂದು ಪೀಠ ಅಭಿಪ್ರಾಯಪಟ್ಟಿತು. ಪ್ರಕರಣದ ಮುಂದಿನ ವಿಚಾರಣೆಯನ್ನು ಕೋರ್ಟ್ ಗುರುವಾರಕ್ಕೆ ನಿಗದಿಪಡಿಸಿತು.

'ಕೆಲಸಕ್ಕೆ ತಡೆ ಸ್ವೀಕಾರಾರ್ಹವಲ್ಲ'

ನವದೆಹಲಿ (ಪಿಟಿಐ): ನ್ಯಾಯಾಲಯಗಳು ಕೆಲಸ ಮಾಡದಂತೆ ತಡೆಯುವುದನ್ನು ಸ್ವೀಕರಿಸಲಾಗುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಸೋಮವಾರ ಚಾಟಿ ಬೀಸಿದೆ. ಕಳೆದ ಒಂದು ವರ್ಷದಲ್ಲಿ ವಕೀಲರ ಸಂಘಗಳು ನಡೆಸಿರುವ ಮುಷ್ಕರಗಳ ಕುರಿತು ಯಾವ ಕ್ರಮ ಕೈಗೊಳ್ಳಲಾಗಿದೆ ಎಂಬ ಕುರಿತು ಅಫಿಡವಿಟ್ ಸಲ್ಲಿಸುವಂತೆ ಭಾರತೀಯ ವಕೀಲರ ಪರಿಷತ್‌ಗೆ ಹೇಳಿದೆ.

ವಕೀಲರು ನಡೆಸುವ ಮುಷ್ಕರಗಳಿಗೆ ಸಂಬಂಧಿಸಿ ಸುಪ್ರೀಂ ಕೋರ್ಟ್ ನೀಡಿದ್ದ ಆದೇಶವನ್ನು ಉಲ್ಲಂಘಿಸಲಾಗುತ್ತಿದೆ ಎಂದು ಆಕ್ಷೇಪಿಸಿ 'ಕಾಮನ್ ಕಾಸ್' ಎಂಬ ಎನ್‌ಜಿಒ ಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು.

ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಎಸ್.ಕೆ. ಕೌಲ್ ಮತ್ತು ಸುಧಾಂಶು ಧುಲಿಯಾ ಅವರಿದ್ದ ಪೀಠವು, ನ್ಯಾಯಾಲಯಗಳ ಕಾರ್ಯನಿರ್ವಹಣೆಯನ್ನು ಸ್ಥಗಿತಗೊಳಿಸುವಂತಿಲ್ಲ. ಮೊಕದ್ದಮೆಗಳ ಹೊರೆ ಹೆಚ್ಚಿರುವ ಕಾರಣ ಜನರು ಜಾಮೀನು ಪಡೆಯಲು ಕಷ್ಟಪಡುತ್ತಿದ್ದಾರೆ ಎಂದಿತು.

ನ್ಯಾಯಾಲಯ ಪ್ರಕ್ರಿಯೆಗಳಿಗೆ ತಡೆಯಾದರೆ, ಅವುಗಳಿಗಾಗಿ ಮತ್ತೆ ಸಮಯ ಹೊಂದಾಣಿಕೆ ಮಾಡುವುದು ಕಷ್ಟವಾಗುತ್ತದೆ. ಇವೆಲ್ಲಾ ಪ್ರಾಯೋಗಿಕ ಸಮಸ್ಯೆಗಳು ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಬಿಲ್ಕಿಸ್ ಬಾನು ಪ್ರಕರಣ: ಆ.7ರಿಂದ ಅಂತಿಮ ವಿಚಾರಣೆ

ಬಿಲ್ಕಿಸ್ ಬಾನು ಸಾಮೂಹಿಕ ಅತ್ಯಾಚಾರ ಮತ್ತು ಅವರ ಕುಟುಂಬ ಸದಸ್ಯರ ಕೊಲೆ ಪ್ರಕರಣದ 11 ಅಪರಾಧಿಗಳ ಅವಧಿ ಪೂರ್ವ ಬಿಡುಗಡೆ ಕ್ರಮವನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಯ ಅಂತಿಮ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಆಗಸ್ಟ್ 7ರಿಂದ ನಡೆಸಲಿದೆ.

ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ, ಉಜ್ಜಲ್ ಭುಯನ್ ಅವರಿದ್ದ ನ್ಯಾಯಪೀಠವು, 'ಅರ್ಜಿಯ ಸಂಬಂಧ ವಾದ, ಪ್ರತಿವಾದ ಮಂಡನೆ ಮುಗಿದಿದೆ ಮತ್ತು ಅಪರಾಧಿಗಳಿಗೆ ಪತ್ರಿಕಾ ಪ್ರಕಟಣೆ ಮೂಲಕ ಅಥವಾ ನೇರವಾಗಿ ನೋಟಿಸ್ ಜಾರಿ ಮಾಡಲಾಗಿದೆ' ಎಂಬ ಅಂಶವನ್ನು ಪರಿಗಣಿಸಿತು.

'ಈಗ ಅಂತಿಮ ವಿಚಾರಣೆಯನ್ನು ಆಗಸ್ಟ್ 7ಕ್ಕೆ ನಿಗದಿಪಡಿಸಲಾಗುವುದು. ಈ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲರೂ ಲಿಖಿತವಾಗಿ ತಮ್ಮ ವಾದವನ್ನು ಮಂಡಿಸಬೇಕು' ಎಂದು ನ್ಯಾಯಪೀಠವು ಸೂಚಿಸಿತು.

ಅಪರಾಧಿಗಳ ಅವಧಿಪೂರ್ವ ಬಿಡುಗಡೆಯನ್ನು ಪ್ರಶ್ನಿಸಿ ಬಿಲ್ಕಿಸ್ ಬಾನು, ಸಿಪಿಎಂ ಮಾಜಿ ಸಂಸದ ಸುಭಾಷಿಣಿ ಅಲಿ ಅರ್ಜಿ ಸಲ್ಲಿಸಿದ್ದರು. 'ಇದು ಅತಿ ಗಂಭೀರವಾದ ಅಪರಾಧ ಕೃತ್ಯ. ನಿರ್ದಿಷ್ಟ ಸಮುದಾಯದ ವಿರುದ್ಧದ ದ್ವೇಷದ ಕ್ರಮವಾಗಿತ್ತು' ಎಂದು ಅವರು ವಾದಿಸಿದ್ದಾರೆ.

ಸುಗ್ರೀವಾಜ್ಞೆ ಪ್ರಶ್ನಿಸಿದ್ದ ದೆಹಲಿ ಸರ್ಕಾರ ಅರ್ಜಿ ಸಂವಿಧಾನ ಪೀಠಕ್ಕೆ : ಇಂಗಿತ

ನವದೆಹಲಿ (ಪಿಟಿಐ): ದೆಹಲಿಯ ಸೇವಾ ವಿಷಯಗಳ ಆಡಳಿತಾತ್ಮಕ ನಿಯಂತ್ರಣ ಕುರಿತ ಕೇಂದ್ರ ಸರ್ಕಾರದ ಸುಗ್ರೀವಾಜ್ಞೆಯನ್ನು ಪ್ರಶ್ನಿಸಿ ದೆಹಲಿ ಸರ್ಕಾರವು ಸಲ್ಲಿಸಿರುವ ಅರ್ಜಿಯನ್ನು ಸಂವಿಧಾನ ಪೀಠದ ವಿಚಾರಣೆಗೆ ಒಪ್ಪಿಸುವ ಇಂಗಿತವನ್ನು ಸುಪ್ರೀಂ ಕೋರ್ಟ್ ನೀಡಿದೆ.

ಅರ್ಜಿಗೆ ಸಂಬಂಧಿಸಿ ಕೇಂದ್ರ ಸರ್ಕಾರ ಮತ್ತು ಲೆಫ್ಟಿನೆಂಟ್ ಗವರ್ನರ್‌ಗೆ ನೋಟಿಸ್ ಜಾರಿ ಮಾಡಿದ್ದ ಸುಪ್ರೀಂ ಕೋರ್ಟ್, ಸುಗ್ರೀವಾಜ್ಞೆಗೆ ಸಂಬಂಧಿಸಿದಂತೆ ಮಧ್ಯಂತರ ತಡೆಯಾಜ್ಞೆಯನ್ನು ನೀಡಲು ನಿರಾಕರಿಸಿತ್ತು. ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ನ್ಯಾಯಮೂರ್ತಿಗಳಾದ ಪಿ.ಎಸ್.ನರಸಿಂಹ ಮತ್ತು ಮನೋಜ್ ಮಿಶ್ರಾ ಅವರಿದ್ದ ಪೀಠವು, 'ಸಂವಿಧಾನದ 239ಎಎ ಅನ್ವಯ ಸುಗ್ರೀವಾಜ್ಞೆ ಹೊರಡಿಸಿರುವ ಕಾರಣ, ಇದು ಸಂವಿಧಾನದ ಪೀಠದ ವಿಚಾರಣೆಗೆ ಸೂಕ್ತ' ಎಂದಿತು.

'ಸಂವಿಧಾನದ 239ಎಎ (7) ಅನ್ವಯ ದತ್ತವಾಗಿರುವ ಅಧಿಕಾರವನ್ನು ಕೇಂದ್ರ ಸರ್ಕಾರ ಬಳಸಿದೆ. ದೆಹಲಿ ಸರ್ಕಾರದ ಹಿಡಿತದಿಂದ ಸೇವಾ ವಿಷಯಗಳ ಆಡಳಿತಾತ್ಮಕ ವಿಷಯಗಳನ್ನು ಹೊರತುಪಡಿಸಲು ಸಂವಿಧಾನಕ್ಕೆ ತಿದ್ದುಪಡಿ ತಂದಿದೆ. ಇದು, ಅನುಮತಿ ಯೋಗ್ಯವೇ? ಇದನ್ನು ಯಾವುದೇ ಸಂವಿಧಾನ ಪೀಠದ ತೀರ್ಪುಗಳು ಪರಾಮರ್ಶಿಸಿವೆ ಎಂದು ನನನ್ನಿಸುವುದಿಲ್ಲ' ಎಂದು ಮುಖ್ಯ ನ್ಯಾಯಮೂರ್ತಿ ಅಭಿಪ್ರಾಯಪಟ್ಟರು.

ಈ ಮೂಲಕ ವಿಷಯವನ್ನು ಸಂವಿಧಾನದ ಪೀಠದ ಪರಾಮರ್ಶೆಗೆ ಒಪ್ಪಿಸುವ ಇಂಗಿತವನ್ನು ಅವರು ನೀಡಿದರು.

'ಇದರಲ್ಲಿರುವ ಅಂಶವೆಂದರೆ ಪಟ್ಟಿ 1 (ರಾಜ್ಯಗಳು) ಅಥವಾ ಪಟ್ಟಿ 3ಕ್ಕೆ (ಸಮವ್ಯಾಪ್ತಿಯ) ಸಂಬಂಧಿಸಿದಂತೆ ಕಾಯ್ದೆ ರೂಪಿಸುವ ಅಧಿಕಾರ ಸಂಸತ್ತಿಗೆ ಇದೆ. ಇಲ್ಲಿ ಪಟ್ಟಿ 3 ಸಮವ್ಯಾಪ್ತಿಯನ್ನು ಉಳ್ಳದ್ದಾಗಿದೆ. ಈ ಅಂಶವನ್ನು ಸುಗ್ರೀವಾಜ್ಞೆಯ ವಿಧಿ 3ಎ ರಲ್ಲಿ ಉಲ್ಲೇಖಿಸಲಾಗಿದೆ. ಅಂದರೆ, ರಾಜ್ಯಗಳ ಶಾಸನಸಭೆಗಳಿಗೆ ಪ್ರವೇಶ 41ಕ್ಕೆ ಸಂಬಂಧಿಸಿದಂತೆ (ರಾಜ್ಯ ಲೋಕಸೇವಾ ಆಯೋಗ, ರಾಜ್ಯದ ಸಾರ್ವಜನಿಕ ಸೇವೆಗಳು) ಕಾಯ್ದೆಯನ್ನು ರೂಪಿಸುವ ಅಧಿಕಾರ ಇಲ್ಲ ಎಂಬುದಾಗಿದೆ' ಎಂದು ಸಿಜೆಐ ಅವಲೋಕಿಸಿದರು. ಕೇಂದ್ರವನ್ನು ಪ್ರತಿನಿಧಿಸಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಇದನ್ನು ವಿರೋಧಿಸಿದರು. 'ಸಂವಿಧಾನದ 239 ಎಎ (7) ಅನ್ವಯ ಸಂಸತ್ತು ರೂಪಿಸಿರುವ ಕಾಯ್ದೆಯನ್ನು ಸಂವಿಧಾನಕ್ಕೆ ತರಲಾಗಿರುವ ತಿದ್ದುಪಡಿ ಎಂದು ಭಾವಿಸಲಾಗದು' ಎಂದರು.

ದೆಹಲಿಯ ಸೇವಾ ವಿಷಯಗಳ ಆಡಳಿತಾತ್ಮಕ ನಿಯಂತ್ರಣಕ್ಕೆ ಸಂಬಂಧಿಸಿ ಕೇಂದ್ರ ಸರ್ಕಾರ ಮೇ 19ರಂದು ಸುಗ್ರೀವಾಜ್ಞೆಯನ್ನು ಹೊರಡಿಸಿತ್ತು. ಇದು, ಈ ಸಂಬಂಧ ಸುಪ್ರೀಂ ಕೋರ್ಟ್ ನೀಡಿದ್ದ ತೀರ್ಪಿಗೆ ವಿರುದ್ಧವಾದುದು ಎಂದು ದೆಹಲಿಯ ಆಮ್ ಆದ್ಮಿ ಪಕ್ಷದ ಸರ್ಕಾರ ಹೇಳಿತ್ತು.

ಕೇರಳಕ್ಕೆ ತೆರಳಲು ಮದನಿಗೆ ಒಪ್ಪಿಗೆ

ನವದೆಹಲಿ (ಪಿಟಿಐ): 2008ರ ಬೆಂಗಳೂರು ಸರಣಿ ಬಾಂಬ್ ಸ್ಫೋಟ ಪ್ರಕರಣದ ಆರೋಪಿ, ಪೀಪಲ್ಸ್ ಡೆಮಾಕ್ರಟಿಕ್ ಪಕ್ಷದ ಅಧ್ಯಕ್ಷ ಅಬ್ದುಲ್ ನಾಸರ್ ಮದನಿ ಅವರು ಚಿಕಿತ್ಸೆಗಾಗಿ ಕೇರಳಕ್ಕೆ ತೆರಳಿ, ಅಲ್ಲಿಯೇ ಉಳಿಯಲು ಸುಪ್ರೀಂ ಕೋರ್ಟ್ ಸೋಮವಾರ ಅನುಮತಿ ನೀಡಿದೆ.

ನ್ಯಾಯಮೂರ್ತಿಗಳಾದ ಎ.ಎಸ್. ಬೋಪಣ್ಣ ಮತ್ತು ಎಂ.ಎಂ. ಸುಂದರೇಶ್ ಅವರನ್ನೊಳಗೊಂಡ ನ್ಯಾಯಪೀಠವು, ವಿಚಾರಣೆ ಮುಗಿಯುವ ತನಕ ಬೆಂಗಳೂರಿನಲ್ಲೇ ಇರಬೇಕೆಂಬ ಮದನಿ ಅವರಿಗಿದ್ದ ಷರತ್ತನ್ನು ಮಾರ್ಪಡಿಸಿದೆ.

'ಅರ್ಜಿದಾರರಿಗೆ ಕೇರಳಕ್ಕೆ ತೆರಳಲು ಹಾಗೂ ಅಲ್ಲಿಯೇ ಉಳಿಯಲು ಅನುಮತಿ ನೀಡಲಾಗಿದೆ' ಎಂದು ನ್ಯಾಯಪೀಠವು ತಿಳಿಸಿದೆ.

ಬೇಹುಗಾರಿಕೆ: ಜೀವಾವಧಿ ಶಿಕ್ಷೆ

ಪ್ರಜಾವಾಣಿ ಚಿತ್ರ

ಅಹಮದಾಬಾದ್: ಪಾಕಿಸ್ತಾನದ ಗುಪ್ತಚರ ಸಂಸ್ಥೆಗಾಗಿ ಬೇಹುಗಾರಿಕೆ ನಡೆಸಿರುವ ಪ್ರಕರಣದಲ್ಲಿ ಅಪರಾಧಿಗಳಾದ ಮೂವರಿಗೆ ಇಲ್ಲಿನ ಸೆಷನ್ಸ್ ನ್ಯಾಯಾಲಯವು ಸೋಮವಾರ ಜೀವಾವಧಿ ಶಿಕ್ಷೆ ವಿಧಿಸಿದೆ.

ಸಿರಾಜುದ್ದೀನ್ ಕರ್ಮತಾಲಿ ಫಕೀರ್ ಅಲಿಯಾಸ್ ರಾಜು, ಆಯುಬ್ ಶೇಖ್ ಅಲಿಯಾಸ್ ಸಕೀರ್ ಮತ್ತು ನೌಶಾದ್ ಮಕ್ಸುದಲಿ ಸಯ್ಯದ್ ಎಂಬವರಿಗೆ ಹೆಚ್ಚುವರಿ ಪ್ರಧಾನ ನ್ಯಾಯಾಧೀಶರಾದ ಅಂಬಾಲಾಲ್ ಆರ್. ಪಟೇಲ್ ಅವರು ಶಿಕ್ಷೆ ವಿಧಿಸಿದ್ದಾರೆ.

ಸಶಸ್ತ್ರ ಪಡೆಗಳಿಗೆ ಸಂಬಂಧಿಸಿದ ಗೋಪ್ಯ ಮಾಹಿತಿಗಳನ್ನು ಪಾಕಿಸ್ತಾನದ ಗೂಢಚರ ಸಂಸ್ಥೆ ಐಎಸ್‌ಐನ ಏಜೆಂಟ್‌ಗೆ ರವಾನಿಸಿದ್ದ ಆರೋಪದಲ್ಲಿ ಈ ಮೂವರನ್ನು 2012ರಲ್ಲಿ ಅಹಮದಾಬಾದ್‌ನ ಅಪರಾಧ ವಿಭಾಗದ ಪೊಲೀಸರು ಬಂಧಿಸಿದ್ದರು. ಐಎಸ್‌ಐ ಏಜೆಂಟ್‌ನನ್ನು ತೈಮೂರ್ ಎಂದು ಪೊಲೀಸರು ಗುರುತಿಸಿದ್ದರು.

ಸಿರಾಜುದ್ದೀನ್ ಮತ್ತು ಆಯುಬ್ ತಮ್ಮ ಸಂಬಂಧಿಕರನ್ನು ಭೇಟಿಯಾಗಲು 2007ರಲ್ಲಿ ಪಾಕಿಸ್ತಾನದ ಕರಾಚಿಗೆ ತೆರಳಿದ್ದರು ಮತ್ತು ಆ ವೇಳೆ ಅವರಿಗೆ ಐಎಸ್‌ಐ ಏಜೆಂಟ್‌ನ ಪರಿಚಯವಾಗಿತ್ತು ಎಂಬ ವಿಚಾರವು ತನಿಖೆಯಿಂದ ತಿಳಿದುಬಂದಿರುವುದಾಗಿ ಪೊಲೀಸರು ತಿಳಿಸಿದ್ದರು.

2012ರಿಂದಲೂ ಸಿರಾಜುದ್ದೀನ್ ಜೈಲಿನಲ್ಲಿದ್ದು, ಉಳಿದ ಇಬ್ಬರು ಜಾಮೀನಿನ ಮೇಲೆ ಬಿಡುಗಡೆಗೊಂಡಿದ್ದರು ಎಂದು ಮೂಲಗಳು ತಿಳಿಸಿವೆ.

ಪಿಎಸ್‌ಐ ರಿವಾಲ್ವರ್‌ನೊಂದಿಗೆ ಪರಾರಿಯಾಗಿದ್ದ ಕಳ್ಳ ವಶಕ್ಕೆ

ಪ್ರಜಾವಾಣಿ ವಾರ್ತೆ

ಅಫಜಲಪುರ (ಕಲಬುರಗಿ ಜಿಲ್ಲೆ): ಪಟ್ಟಣದ ಪೊಲೀಸ್ ಠಾಣೆಯ ಪಿಎಸ್‌ಐ ಭೀಮರಾಯ ಅವರ ಸರ್ವಿಸ್ ರಿವಾಲ್ವರ್ ಕಿತ್ತುಕೊಂಡು ಪರಾರಿಯಾಗಿದ್ದ ಆರೋಪಿಯನ್ನು ಪೊಲೀಸರು ವಶಕ್ಕೆ ಪಡೆದು ರಿವಾಲ್ವರ್ ಜಪ್ತಿ ಮಾಡಿದ ಸಿನಿಮೀಯ ಘಟನೆಗೆ ಅಫಜಲಪುರ ಸೋಮವಾರ ಸಾಕ್ಷಿಯಾಯಿತು.

ಖಾಜಪ್ಪ

28 ಕಳ್ಳತನದ ಪ್ರಕರಣಗಳಲ್ಲಿ ಬೇಕಾಗಿದ್ದ ನೆರೆಯ ಮಹಾರಾಷ್ಟ್ರದ ಅಕ್ಕಲಕೋಟ ತಾಲ್ಲೂಕಿನ ಬಿಂಜಗೇರಿ ಗ್ರಾಮದ (ತಾಯಿಯ ಊರು ಅಫಜಲಪುರದ ಬಳೂರ್ಗಿ) ಖಾಜಪ್ಪ ಅಲಿಯಾಸ್ ಕಾಶಿನಾಥ ಗಾಯಕವಾಡನ ಪತ್ತೆಗಾಗಿ ಬೆಂಗಳೂರಿನ ಸಿಸಿಬಿ ಅಧಿಕಾರಿಗಳು ಸ್ಥಳೀಯ ಪೊಲೀಸರ ಸಹಕಾರದೊಂದಿಗೆ ಕಾರ್ಯಾಚರಣೆ ಆರಂಭಿಸಿದ್ದರು. ಭಾನುವಾರ ರಾತ್ರಿ ಸೊನ್ನ ಗ್ರಾಮದ ಬಳಿ ಆತ ಕಾರಿನಲ್ಲಿ ಪರಾರಿಯಾಗುತ್ತಿದ್ದ ಮಾಹಿತಿ ಬಂದ ಬಳಿಕ ಬೆನ್ನಟ್ಟಿದ ಪೊಲೀಸರು ರಿವಾಲ್ವರ್ ಬಳಸಿ ಕಾರಿನ ಕಿಟಕಿ ಒಡೆಯಲು ಮುಂದಾದರು ಎನ್ನಲಾಗಿದೆ. ಅಷ್ಟರಲ್ಲಿ ಪಿಎಸ್‌ಐ ಬಳಿ ಇದ್ದ ರಿವಾಲ್ವರ್ ಕಿತ್ತುಕೊಂಡು ಆತ ಪರಾರಿಯಾಗಿದ್ದ. ಬುಲೆಟ್‌ಗಳನ್ನು ತುಂಬಿಸಿದ್ದ ರಿವಾಲ್ವರ್ ಆರೋಪಿಗೆ ಸಿಕ್ಕಿದ್ದರಿಂದ ಆತಂಕಕ್ಕೊಳಗಾಗಿದ್ದ ಪೊಲೀಸರು ಇಡೀ ರಾತ್ರಿ ಹುಡುಕಾಟ ನಡೆಸಿದರೂ ಸಿಕ್ಕಿರಲಿಲ್ಲ.

ಪತ್ತೆಯಾಗಿದ್ದು ಹೇಗೆ?: ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಇಶಾ ಪಂತ್ ಅವರು ಸೋಮವಾರ ಬೆಳಿಗ್ಗೆ ಅಫಜಲಪುರಕ್ಕೆ ತೆರಳಿ ಕಾರ್ಯಾಚರಣೆ ನೇತೃತ್ವ ವಹಿಸಿದರು. ಅಷ್ಟರಲ್ಲಿ ಪೊಲೀಸರು ತಾಲ್ಲೂಕಿಗೆ ಹೊಂದಿಕೊಂಡಿರುವ ಮಹಾರಾಷ್ಟ್ರದ ಗ್ರಾಮಗಳಲ್ಲಿಯೂ ಹುಡುಕಾಟ ನಡೆಸಿದ್ದರು. ರಾತ್ರಿ ತನ್ನ ಇತರ ಸಹಚರರಾದ ಸಂಜೀವಕುಮಾರ್ ಮತ್ತು ರವಿಯೊಂದಿಗೆ ಅಫಜಲಪುರ ಹೊರವಲಯದ ನಿಂಬಾಳ ಎಂಬುವವರ ಪಪ್ಪಾಯಿ ತೋಟದಲ್ಲಿ ಅಡಗಿ ಕುಳಿತಿದ್ದ. ಪೊಲೀಸರು ಬರುತ್ತಿರುವ ಮಾಹಿತಿ ತಿಳಿದ ಖಾಜಪ್ಪ ಸಮೀಪದ ದೇವಸ್ಥಾನದ ಬಳಿ ಇರುವ ಬೇವಿನ ಮರದ ಮೇಲೆ ಏರಿದ್ದ. ಸಂಜೀವಕುಮಾರ್, ರವಿಯನ್ನು ಬಂಧಿಸಿದ ಪೊಲೀಸರು ಸುಳಿವಿನ ಮೇರೆಗೆ ಮರದ ಬಳಿ ಬಂದರು.

ಮರದ ಮೇಲಿದ್ದ ಖಾಜಪ್ಪ ರಿವಾಲ್ವರ್ ಕೈಯಲ್ಲಿ ಹಿಡಿದು ಗುಂಡು ಹಾರಿಸುವ ಬೆದರಿಕೆ ಹಾಕುತ್ತಿದ್ದ. 'ಕೆಳಗೆ ಇಳಿದರೆ ನನ್ನ ಮೇಲೆ ಗುಂಡಿನ ದಾಳಿ ಮಾಡುತ್ತೀರಿ. ಹೀಗಾಗಿ ಬರುವುದಿಲ್ಲ' ಎಂದು ಪಟ್ಟು ಹಿಡಿದಿದ್ದ.

ಸ್ಥಳಕ್ಕೆ ಕುಟುಂಬದ ಸದಸ್ಯರನ್ನು ಕರೆಸಿದ ಪೊಲೀಸರು, ಜೀವಕ್ಕೆ ಏನೂ ಅಪಾಯ ಮಾಡುವುದಿಲ್ಲ ಎಂದು ಅವರಿಂದಲೇ ಮನದಟ್ಟು ಮಾಡಿಸಿದರು. ಬಳಿಕ ಎಸ್ಪಿ ಕೈಗೆ ರಿವಾಲ್ವರ್ ಕೊಟ್ಟಿದ್ದಾನೆ. ಸಿಬ್ಬಂದಿ ತಕ್ಷಣ ರಿವಾಲ್ವರ್‌ನಿಂದ ಜೀವಂತ ಗುಂಡುಗಳನ್ನು ಹೊರಗೆ ತೆಗೆದರು. ಬಳಿಕ ವಶಕ್ಕೆ ಪಡೆದು ವಿಚಾರಣೆಗೆ ಪೊಲೀಸ್ ಠಾಣೆಗೆ ಕರೆದೊಯ್ದರು.

ಅಫಜಲಪುರದ ಹೊರವಲಯದಲ್ಲಿ ಖಾಜಪ್ಪ ತನ್ನ ಬಳಿ ಇದ್ದ ರಿವಾಲ್ವರ್‌ನ್ನು ಎಸ್ಪಿ ಇಶಾ ಪಂತ್ ಅವರಿಗೆ ನೀಡಿದರು

ಜೆಡಿಎಸ್ ಜೊತೆ ನಂಟು

ಕಳ್ಳತನದ ಆರೋಪಿ ಖಾಜಪ್ಪ ಎರಡು ವರ್ಷಗಳ ಹಿಂದೆ ಅಫಜಲಪುರ ಶಹರ ಘಟಕದ ಜೆಡಿಎಸ್ ಪಕ್ಷದ ಅಧ್ಯಕ್ಷನಾಗಿದ್ದ. ಕಳ್ಳತನದಲ್ಲಿ ಭಾಗವಹಿಸಿದ ಮಾಹಿತಿ ಬರುತ್ತಿದ್ದಂತೆ ಆತನನ್ನು ಹುದ್ದೆಯಿಂದ ಉಚ್ಚಾಟಿಸಲಾಗಿತ್ತು ಎಂದು ಜೆಡಿಎಸ್ ಮುಖಂಡರೊಬ್ಬರು ಮಾಹಿತಿ ನೀಡಿದರು.

ಜೈನ ಮುನಿ ಹತ್ಯೆ: ನ್ಯಾಯಾಂಗ ಬಂಧನಕ್ಕೆ ಆರೋಪಿಗಳು

ಪ್ರಜಾವಾಣಿ ವಾರ್ತೆ

ಚಿಕ್ಕೋಡಿ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಹಿರೇಕೋಡಿಯ ನಂದಿಪರ್ವತ ಆಶ್ರಮದ ಮುನಿ ಕಾಮಕುಮಾರ ನಂದಿ ಮಹಾರಾಜ ಅವರ ಕೊಲೆ ಆರೋಪಿಗಳನ್ನು ಜುಲೈ 21ರ ವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಆರೋಪಿಗಳಾದ ನಾರಾಯಣ ಮಾಳಿ ಹಾಗೂ ಹಸನ್ ದಲಾಯತ್ ಅವರನ್ನು ಏಳು ದಿನಗಳವರೆಗೆ ಪೊಲೀಸ್ ಕಸ್ಟಡಿಗೆ ನೀಡಲಾಗಿತ್ತು. ಅವಧಿ ಮುಗಿದ ಕಾರಣ ಪೊಲೀಸರು, ಸೋಮವಾರ ಮತ್ತೆ ಇಲ್ಲಿನ ಜೆಎಂಎಫ್‌ಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಿದರು. ನ್ಯಾಯಾಧೀಶ ಚಿದಾನಂದ ಬಡಿಗೇರ ಅವರು ವಿಚಾರಣೆ ನಡೆಸಿ ಐದು ದಿನಗಳವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದರು.

ನಾರಾಯಣ ಮಾಳಿ

ಹಸನ್ ದಲಾಯತ್

ಚಿಕ್ಕೋಡಿ ಸಿಪಿಐ ಆರ್. ಆರ್.ಪಾಟೀಲ ನೇತೃತ್ವದ ತಂಡ ಬಿಗಿಭದ್ರತೆಯಲ್ಲಿ ಆರೋಪಿಗಳನ್ನು ಬೆಳಗಾವಿಯ ಹಿಂಡಲಗಾ ಕೇಂದ್ರ ಕಾರಾಗೃಹಕ್ಕೆ ಕರೆದೊಯ್ದರು.

ಕಾಮಕುಮಾರ ನಂದಿ ಮಹಾರಾಜ ಅವರನ್ನು ಜುಲೈ 5ರಂದು ಕೊಲೆ ಮಾಡಲಾಗಿತ್ತು. ಜುಲೈ 8ರಂದು ಕಟಕಬಾವಿ ಗ್ರಾಮದ ಕೊಳವೆಬಾವಿಯಲ್ಲಿ ಅವರ ಶವ ತುಂಡರಿಸಿದ ಸ್ಥಿತಿಯಲ್ಲಿ ಪತ್ತೆಯಾಗಿತ್ತು.

ರಾಷ್ಟ್ರೀಯ ಭೋವಿ ಜನೋತ್ಸವ ಇಂದು

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಅವರು ಸಮಾಜ ಸೇವಾ ದೀಕ್ಷೆ ಪಡೆದು 25ನೇ ವರ್ಷಕ್ಕೆ ಪದಾರ್ಪಣೆ ಮಾಡಿರುವ ಸಂದರ್ಭವನ್ನು ಬೆಳ್ಳಿ ಮಹೋತ್ಸವವಾಗಿ ಸಂಭ್ರಮಿಸುತ್ತಿರುವ ಭಕ್ತರು, ಜುಲೈ 18ರಂದು ಮಠದ ಆವರಣದಲ್ಲಿ 'ರಾಷ್ಟ್ರೀಯ ಭೋವಿ ಜನೋತ್ಸವ' ಹಮ್ಮಿಕೊಂಡಿದ್ದಾರೆ.

ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ

ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಜನ್ಮದಿನವನ್ನು ಪ್ರತಿ ವರ್ಷ 'ಭೋವಿ ಜನೋತ್ಸವ'ವಾಗಿ ಅದ್ದೂರಿಯಾಗಿ ಆಚರಿಸಲಾಗುತ್ತದೆ. ಪ್ರತಿಭಾ ಪುರಸ್ಕಾರ, ವಧು–ವರರ ಸಮಾವೇಶ, ರಕ್ತದಾನ ಶಿಬಿರ, ಯುಪಿಎಸ್‌ಸಿ, ಕೆಪಿಎಸ್‌ಸಿಯಲ್ಲಿ ಸಾಧನೆ ಮಾಡಿದವರಿಗೆ ಹಾಗೂ ಪಿಎಚ್‌.ಡಿ ಪದವೀಧರರಿಗೆ ಸನ್ಮಾನ ಸೇರಿ ಹಲವು ಕಾರ್ಯಕ್ರಮಗಳು ನಡೆಯಲಿವೆ. ಪಟ್ಟಾಭಿಷೇಕದ 14ನೇ ವಾರ್ಷಿಕ ಮಹೋತ್ಸವ ಕೂಡ ಇದೇ ವೇಳೆ ಜರುಗಲಿದೆ.

ಜನೋತ್ಸವಕ್ಕೆ ಮಠವು ಸಕಲ ರೀತಿಯಲ್ಲಿ ಸಜ್ಜಾಗಿದೆ. ರಾಜ್ಯದ ವಿವಿಧೆಡೆಯಿಂದ ಸಮುದಾಯದ ಭಕ್ತರು ಮಠಕ್ಕೆ ಆಗಮಿಸಿ ಸ್ವಾಮೀಜಿ ಆಶೀರ್ವಾದ ಪಡೆಯಲಿದ್ದಾರೆ. ರಾಜ್ಯ ಹಿಂದುಳಿದ ಮತ್ತು ದಲಿತ ಮಠಾಧೀಶರ ಒಕ್ಕೂಟದ ಮಠಾಧೀಶರು ಪಾಲ್ಗೊಳ್ಳಲಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ, ಮಾಜಿ ಸಚಿವ ಅರವಿಂದ ಲಿಂಬಾವಳಿ, ಶಾಸಕರಾದ ಎಂ.ಚಂದ್ರಪ್ಪ, ಮಾನಪ್ಪ ವಜ್ಜಲ್, ಎ.ಸಿ.ಶ್ರೀನಿವಾಸ್, ವಿ.ವೆಂಕಟೇಶ್ ಅವರು ಭಾಗವಹಿಸಲಿದ್ದಾರೆ.

ಗುಹ್ಯದಲ್ಲಿ ಕಾಡಾನೆಗಳ ಪರೇಡ್

ಪ್ರಜಾವಾಣಿ ವಾರ್ತೆ

ಸಿದ್ದಾಪುರ: ಕೊಡಗು ಜಿಲ್ಲೆಯ ಗುಹ್ಯ ಗ್ರಾಮದ ಎ.ಟಿ ಕಾರ್ಯಪ್ಪ ಅವರ ಕಾಫಿ ತೋಟದಲ್ಲಿ 16 ಕಾಡಾನೆಗಳಿರುವ ಹಿಂಡು ಬೀಡುಬಿಟ್ಟಿದೆ. ಕಾಫಿ ತೋಟದ ರಸ್ತೆಯಲ್ಲಿ ಪರೇಡ್ ನಡೆಸಿದಂತೆ ಒಂದರ ಹಿಂದೊಂದು ಕಾಡಾನೆಗಳು ಹೆಜ್ಜೆ ಹಾಕಿವೆ.

ಕಣ್ಣಂಗಾಲ, ಪುಲಿಯೇರಿ ವ್ಯಾಪ್ತಿಯಲ್ಲಿ 11 ಕಾಡಾನೆಗಳಿರುವ ಮತ್ತೊಂದು ಹಿಂಡು ತೋಟಗಳಲ್ಲಿ ಓಡಾಡುತ್ತಿದೆ. ನಿರಂತರವಾಗಿ ಕಾಡಾನೆ ಹಾವಳಿಯಿಂದ ಬೇಸತ್ತ ಸ್ಥಳೀಯರು ಆನೆಗಳನ್ನು ಕಾಡಿಗೆ ಓಡಿಸಬೇಕು ಎಂದು ಒತ್ತಾಯಿಸಿದರು.

ಸೋಮವಾರ ಬೆಳಿಗ್ಗೆ ಅರಣ್ಯ ಇಲಾಖೆ ಕಾರ್ಯಾಚರಣೆ ನಡೆಸಿದ ವೇಳೆ, ಸಲಗವೊಂದು ದಾಳಿಗೆ ಮುಂದಾಗಿದ್ದರಿಂದ ಸಿಬ್ಬಂದಿಗಳು ಓಡಿ ಅಪಾಯದಿಂದ ಪಾರಾದರು.



ಕೊಡಗು ಜಿಲ್ಲೆಯ ಗುಹ್ಯ ಗ್ರಾಮದ ಕಾಫಿ ತೋಟದಲ್ಲಿ ಕಾಡಾನೆಗಳ ಹಿಂಡು ರಸ್ತೆಯಲ್ಲಿ ಪರೇಡ್ ನಡೆಸಿದಂತೆ ಹೆಜ್ಜೆ ಹಾಕಿದ ದೃಶ್ಯ ಸೋಮವಾರ ಕಂಡು ಬಂತು

ಭಯದಿಂದ ಕಾಫಿ ತೋಟಗಳ ಕಾರ್ಮಿಕರು ಸೋಮವಾರ ಕೆಲಸಕ್ಕೆ ತೆರಳಿಲ್ಲ. ಪದ್ಮ ಎಸ್ಟೇಟ್, ಗುಹ್ಯ ಎಸ್ಟೇಟ್, ಏಂಜಲ್ ಫೀಲ್ಡ್ ಎಸ್ಟೇಟ್ ಸೇರಿದಂತೆ ವಿವಿಧ ಕಾಫಿ ತೋಟಗಳು, ಬಾಳೆ, ಅಡಿಕೆ ಸೇರಿದಂತೆ ಅಪಾರ ಬೆಳೆ ನಾಶವಾಗಿದೆ.

ಅಂಗನವಾಡಿ ಅಕ್ಕಿಯಲ್ಲಿ ಹುಳದ ರಾಶಿ

ಪ್ರಜಾವಾಣಿ ವಾರ್ತೆ

ಹಾನಗಲ್ (ಹಾವೇರಿ ಜಿಲ್ಲೆ): ಅಂಗನವಾಡಿಗಳಿಗೆ ಕಳಪೆ ಮೊಟ್ಟೆ ಪೂರೈಕೆ ಬೆನ್ನಲ್ಲೇ, ಹಾನಗಲ್ ತಾಲ್ಲೂಕಿನ ಕೆಲವು ಗ್ರಾಮಗಳ ಅಂಗನವಾಡಿ ಕೇಂದ್ರಗಳಿಗೆ ಪೂರೈಕೆಯಾದ ಅಕ್ಕಿಯಲ್ಲಿ ವಿಪರೀತ ಹುಳುಗಳು ಪತ್ತೆಯಾಗಿದ್ದು ಪೋಷಕರ ಆತಂಕಕ್ಕೆ ಕಾರಣವಾಗಿದೆ.

ದಾಸ್ತಾನು ಮಾಡಿದ್ದ ಅಕ್ಕಿ ಸಂಗ್ರಹ ಮುಕ್ತಾಯದ ಬಳಿಕ ವಾರದ ಹಿಂದಷ್ಟೇ ಹೊಸದಾಗಿ ಪೂರೈಕೆಯಾದ ಅಕ್ಕಿ ಚೀಲಗಳನ್ನು ಬಿಚ್ಚಿದಾಗ ಹುಳಗಳ ರಾಶಿಯೇ ಹರಿದಾಡುತ್ತಿರುವುದು ಕಂಡುಬಂದಿದೆ. 'ಅಕ್ಕಿ ಸ್ವಚ್ಛ ಮಾಡುವಾಗ ಒಂದು ಮೊರದಷ್ಟು ಅಕ್ಕಿಯಲ್ಲಿ ಒಂದು ಹಿಡಿಯಷ್ಟು ಹುಳುಗಳು ಸಿಗುತ್ತವೆ' ಎಂಬ ದೂರುಗಳು ಕೇಳಿ ಬಂದಿವೆ.

'ಹಾನಗಲ್ ತಾಲ್ಲೂಕಿನಲ್ಲಿ ಎರಡು ದಿನಗಳಿಂದ ಕೆಲವು ಅಂಗನವಾಡಿ ಕೇಂದ್ರಗಳಲ್ಲಿ ಅಕ್ಕಿ ಸ್ವಚ್ಛಗೊಳಿಸುವ ಸಮಯದಲ್ಲಿ ಹೆಚ್ಚು ಹೆಚ್ಚು ಹುಳುಗಳು ಕಾಣಿಸಿಕೊಂಡ ಬಗ್ಗೆ ದೂರುಗಳು ಬಂದಿವೆ. ಈ ಬಗ್ಗೆ ಕಾರ್ಯಕರ್ತೆಯರು ಸಂಬಂಧಿತ ಮೇಲ್ವಿಚಾರಕಿಯರ ಗಮನಕ್ಕೆ ತಂದಿದ್ದಾರೆ. ಆದರೆ ಈ ವಿಷಯ ಗೋಪ್ಯವಾಗಿಡುವಂತೆ ಒತ್ತಡ ತರಲಾಗುತ್ತಿದೆ ಎನ್ನಲಾಗಿದೆ. ಹೀಗಾಗಿ ಈ ಬಗ್ಗೆ ಸೂಕ್ತ ತನಿಖೆಯಾಗಬೇಕು' ಎಂದು ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಫೆಡರೇಶನ್ ಜಿಲ್ಲಾ ಘಟಕದ ಅಧ್ಯಕ್ಷ ಹೊನ್ನಪ್ಪ ಮರೆಮ್ಮನವರ ಒತ್ತಾಯಿಸಿದ್ದಾರೆ.

ಅಕ್ಕಿಯನ್ನು ಸ್ವಚ್ಛಗೊಳಿಸುವಾಗ ಪತ್ತೆಯಾದ ಹುಳುಗಳು

'ಮಕ್ಕಳು ಮತ್ತು ಗರ್ಭಿಣಿಯರ ಅಪೌಷ್ಟಿಕತೆ ಹೋಗಲಾಡಿಸಲು ಅಂಗನವಾಡಿ ಕೇಂದ್ರಗಳಿಗೆ ಸರಬರಾಜಾಗುವ ಆಹಾರ ಗುಣಮಟ್ಟದಿಂದ ಕೂಡಿಲ್ಲ. ಕಳಪೆ ಗುಣಮಟ್ಟದ ಮೊಟ್ಟೆ, ಸತ್ವ ಇಲ್ಲದ ಅಕ್ಕಿಯನ್ನು ತಿಂದರೆ ಮಕ್ಕಳ ಆರೋಗ್ಯ ಹದಗೆಡುವುದಂತೂ ನಿಶ್ಚಿತ. ಕಳಪೆ ಆಹಾರ ಸಾಮಗ್ರಿ ಪೂರೈಸುವ ಮತ್ತು ಬೇಜವಾಬ್ದಾರಿ ತೋರುವ ಅಧಿಕಾರಿಗಳ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳಬೇಕು' ಎಂದು ಎಐಟಿಸಿ ಜಿಲ್ಲಾ ಸಂಚಾಲಕ ವಿನಾಯಕ ಕುರುಬರ ಆಗ್ರಹಿಸಿದ್ದಾರೆ.

ಮಂಗಳವಾರ, ಜುಲೈ 18, 2023 | ₹ 7.00
www.prajavani.net
prajavani.net prajavani prajavani prajavani
ಪ್ರಜಾ ವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ


ಮಹಾಕಾಳಿ
ಹೈದರಾಬಾದ್‌ನಲ್ಲಿ ಸೋಮವಾರ ನಡೆದ ಬೋನಲು ಹಬ್ಬದ ಮೆರವಣಿಗೆ ವೇಳೆ ಕಲಾವಿದರೊಬ್ಬರು ಮಹಾಕಾಳಿ ವೇಷ ಧರಿಸಿದ್ದರು

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ನುಡಿದಂತೆ ನಡೆದಿದ್ದೇವೆ...

ಶ್ರೀ ಸಿದ್ದರಾಮಯ್ಯ, ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು **ಶ್ರೀ ಡಿ.ಕೆ. ಶಿವಕುಮಾರ್**, ಮಾನ್ಯ ಉಪಮುಖ್ಯಮಂತ್ರಿಗಳು ಪ್ರಮಾಣ ವಚನ ಸಮಾರಂಭದಲ್ಲಿ ಭಾಗವಹಿಸಿದ ಸುಸಂದರ್ಭ.

ಸ್ತ್ರೀ ಸ್ವಾವಲಂಬನೆಯತ್ತ ಒಂದು ದಿಟ್ಟ ಹೆಜ್ಜೆ

ಗೃಹಲಕ್ಷ್ಮಿ

ಪ್ರತಿ ಮನೆ ಯಜಮಾನಿಗೆ ಪ್ರತಿ ತಿಂಗಳು

₹2000

ಶ್ರೀ ಸಿದ್ದರಾಮಯ್ಯ, ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಸಚಿವರಾದ **ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳ್ಕರ್** ರವರು ಪ್ರಮಾಣ ವಚನ ಸಮಾರಂಭದಲ್ಲಿ ಭಾಗವಹಿಸಿದ ಸುಸಂದರ್ಭ.

ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷಿ **ಗೃಹಲಕ್ಷ್ಮಿ** ಯೋಜನೆಯಡಿ ಪಡಿತರ ಕಾರ್ಡ್ ಹೊಂದಿದ ಕುಟುಂಬದ ಯಜಮಾನಿಗೆ

ಮಾಸಿಕ ರೂ. 2000/-
ಹಣ ವಿತರಣೆ

ನೋಂದಣಿ ದಿನಾಂಕ **19-07-2023** ರಿಂದ ಪ್ರಾರಂಭ

- ಈ ಯೋಜನೆಯ ಸೌಲಭ್ಯ ಪಡೆಯಲು ಕರ್ನಾಟಕ ಒನ್, ಬೆಂಗಳೂರು ಒನ್, ಗ್ರಾಮ ಒನ್ ಹಾಗೂ ಬಾಪೂಜಿ ಸೇವಾ ಕೇಂದ್ರಗಳಲ್ಲಿ ಉಚಿತವಾಗಿ ನೋಂದಾಯಿಸಿಕೊಳ್ಳಬಹುದು ಅಥವಾ ಸ್ವಯಂಸೇವಕ "ಪ್ರಜಾಪ್ರತಿನಿಧಿಗಳು" ಮನೆಮನೆಗೆ ತೆರಳಿ ಉಚಿತವಾಗಿ ನೋಂದಣಿ ಮಾಡಿಕೊಳ್ಳುತ್ತಾರೆ.
- ನೋಂದಣಿಗೆ ಬ್ಯಾಂಕ್ ಪಾಸ್‌ಬುಕ್ ಪ್ರತಿ, ಪಡಿತರ ಕಾರ್ಡ್ ಸಂಖ್ಯೆ, ಯಜಮಾನಿಯ ಮತ್ತು ಪತಿಯ ಆಧಾರ್ ಕಾರ್ಡ್ ಪ್ರತಿ ಹಾಗೂ ಮೊಬೈಲ್ ಸಂಖ್ಯೆ ಅಗತ್ಯವಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ **1902** ಕ್ಕೆ ಕರೆಮಾಡಿ ಅಥವಾ **8147 500 500** ನಂಬರ್‌ಗೆ ಪಡಿತರ ಕಾರ್ಡ್ ಸಂಖ್ಯೆಯನ್ನು ಎಸ್‌ಎಂಎಸ್ ಮಾಡಿ

ಎಲ್ಲಾ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿಯನ್ನು ಸಾಧಿಸಲು ನಿರಂತರ ಪ್ರಯತ್ನಿಸಿ ದೇಶದ ಪ್ರಗತಿಗಾಗಿ ಶ್ರಮಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ವಿಶೇಷ ಸೂಚನೆ : ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳು ಯಾವುದೇ ಮಧ್ಯವರ್ತಿಗಳ ಆಮಿಷಕ್ಕೆ ಒಳಗಾಗದೆ ಉಚಿತವಾಗಿ ನೋಂದಣಿ ಮಾಡಿಕೊಳ್ಳಿ.

ಮಾತಿಗೆ ಅವಕಾಶ ನೀಡಿಲ್ಲ ಎಂದು ಆರೋಪಿಸಿ ಗದ್ದಲ • ರೈತ ವಿರೋಧಿ ಮಸೂದೆ ಎಂದ ಬಿಜೆಪಿ

ಎಪಿಎಂಸಿ ಕಾಯ್ದೆ ರದ್ದು: ಮಸೂದೆಗೆ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳ ವಿರೋಧ ಮತ್ತು ಧರಣಿಯ ಮಧ್ಯೆಯೇ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ(ನಿಯಂತ್ರಣ ಮತ್ತು ಅಭಿವೃದ್ಧಿ)(ತಿದ್ದುಪಡಿ) ಮಸೂದೆ 2023 ಅನ್ನು ವಿಧಾನಸಭೆ ಸೋಮವಾರ ಅಂಗೀಕರಿಸಿತು.

'ರಾಜ್ಯ ಸರ್ಕಾರ ಪುನಃ ರೈತರನ್ನು ದಲ್ಲಾಳಿಗಳ ಕಪಿಮುಷ್ಟಿಗೆ ಸಿಲುಕಿಸುವ ಮತ್ತು ಕೃಷಿ ಉತ್ಪನ್ನಗಳ ಮಾರಾಟದ ಸ್ವಾತಂತ್ರ್ಯವನ್ನು ಕಸಿಯುವ ತಿದ್ದುಪಡಿ ತಂದಿದೆ. ಮಸೂದೆಯ ಕುರಿತು ಚರ್ಚೆಗೆ ಅವಕಾಶ ನೀಡದೇ ಸದಸ್ಯರ ಅಧಿಕಾರವನ್ನು ಮೊಟಕುಗೊಳಿಸಿದೆ' ಎಂದು ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಆಕ್ಷೇಪಿಸಿ ಸಭಾಧ್ಯಕ್ಷರ ಪೀಠದ ಮುಂದೆ ಧರಣಿ ನಡೆಸಿದರು. ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ಇದಕ್ಕೆ ಪ್ರತಿಯಾಗಿ ಕಾಂಗ್ರೆಸ್ ಸದಸ್ಯರೂ ಬಿಜೆಪಿ ವಿರುದ್ಧ ಧಿಕ್ಕಾರ ಮೊಳಗಿಸಿದರು.

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ(ನಿಯಂತ್ರಣ ಮತ್ತು ಅಭಿವೃದ್ಧಿ)(ತಿದ್ದುಪಡಿ) ಮಸೂದೆ 2023 ವಿರೋಧಿಸಿ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಸಭಾಧ್ಯಕ್ಷರ ಪೀಠದ ಮುಂದೆ ಧರಣಿ ನಡೆಸಿದರು

ಎಪಿಎಂಸಿಗಳಲ್ಲಿ ಕೃಷಿ ಉತ್ಪನ್ನಗಳ ಖರೀದಿ ಮತ್ತು ಮಾರಾಟದ ಮೇಲಿದ್ದ ನಿರ್ಬಂಧವನ್ನು ಬಿಜೆಪಿ ಸರ್ಕಾರ ತೆಗೆದುಹಾಕಿತ್ತು.ಕಾಂಗ್ರೆಸ್ ಸರ್ಕಾರ ಬಿಜೆಪಿ ಸರ್ಕಾರದ ತಿದ್ದುಪಡಿ ರದ್ದುಗೊಳಿಸಿ, ಹಿಂದಿನ ಕಾಯ್ದೆಯನ್ನು ಮತ್ತೆ ಜಾರಿಗೆ ತರಲು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಅವರು, ಮಸೂದೆಯ ಅಗತ್ಯದ ಕುರಿತು ಸದನಕ್ಕೆ ವಿವರ ನೀಡಿದರು.

ಬಿಜೆಪಿಯ ಎಸ್.ಟಿ.ಸೋಮಶೇಖರ್ ಮಾತನಾಡಿ, ' ಸಾಕಷ್ಟು ಅಧ್ಯಯನ ಮಾಡಿ, ರೈತರು ಮತ್ತು ವ್ಯಾಪಾರಿಗಳ ಜತೆ ಚರ್ಚೆ ನಡೆಸಿಯೇ ನಾವು ಕಾನೂನು ಮಾಡಿದ್ದೆವು. ನಿಮ್ಮ ಸರ್ಕಾರ ಬಂದು ಒಂದೂವರೆ ತಿಂಗಳಾಯಿತು. ಅಧ್ಯಯನ ನಡೆಸದೇ, ರೈತರು ಮತ್ತು ವ್ಯಾಪಾರಿಗಳ ಜತೆ ಚರ್ಚೆ ನಡೆಸದೇ ಏಕ ಪಕ್ಷೀಯವಾಗಿ ಮಸೂದೆ ತಂದಿದ್ದೀರಿ.ದಲ್ಲಾಳಿಗಳಿಗೆ ಅನುಕೂಲ ಮಾಡಲು ತಂದಿರುವ ಮಸೂದೆ ರೈತ ವಿರೋಧಿಯಾಗಿದೆ' ಎಂದು ಕಿಡಿಕಾರಿದರು.

> **ಈ ಮಸೂದೆ ತಂದಿದ್ದರಿಂದ ಬಿಜೆಪಿಯವರಿಗೆ ಮುಖಭಂಗವಾಗಿದೆ. ಬೇರೆ ದಾರಿ ಕಾಣದೇ ಧರಣಿ ಹಾದಿ ಹಿಡಿದಿದ್ದಾರೆ**
> **ಎಚ್.ಕೆ.ಪಾಟೀಲ,** ಕಾನೂನು ಸಚಿವ

ಈ ವಾದವನ್ನು ಒಪ್ಪದ ಸಚಿವ ಶಿವಾನಂದ ಪಾಟೀಲ, 'ಹಿಂದಿನ ಸರ್ಕಾರ ತಂದಿದ್ದ ಕಾಯ್ದೆಯ ಪರಿಣಾಮ, ಕೃಷಿ ಉತ್ಪನ್ನಗಳಿಗೆ ಸ್ಪರ್ಧಾತ್ಮಕ ಬೆಲೆ ಸಿಗದೆ ರೈತರ ಆದಾಯವೂ ಹೆಚ್ಚಲಿಲ್ಲ. ಎಪಿಎಂಸಿಗೆ ಬರುತ್ತಿದ್ದ ಆದಾಯವೂ ಕುಸಿದು ಹೋಯಿತು. ತಿದ್ದುಪಡಿಯಿಂದಾಗಿ ರೈತರಿಗೆ ಒಳ್ಳೆಯ ಬೆಲೆಯೂ ಸಿಗಲಿದೆ' ಎಂದು ಹೇಳಿದರು.

ಕಾಂಗ್ರೆಸ್‌ನ ಬಿ.ಆರ್ ಪಾಟೀಲ, ರೈತ ವಿರೋಧಿ ಕಾಯ್ದೆಯನ್ನು ಜಾರಿಗೆ ತಂದಿದ್ದ ಕೇಂದ್ರ ಸರ್ಕಾರ, ಸುಗ್ರೀವಾಜ್ಞೆ ಮೂಲಕ ಹೊಸ ಕಾನೂನು ಜಾರಿಗೆ ತರುವಂತೆ ರಾಜ್ಯಗಳಿಗೆ ಸೂಚಿಸಿತ್ತು. ರೈತರ ಹೋರಾಟದಿಂದಾಗಿ ಕೇಂದ್ರ ತನ್ನ ಕಾನೂನು ಹಿಂದಕ್ಕೆ ಪಡೆದಿತ್ತು. ರಾಜ್ಯ ಸರ್ಕಾರ ಮಾತ್ರ ಹಿಂದಕ್ಕೆ ಪಡೆದಿರಲಿಲ್ಲ ಎಂದರು.

ಜೆಡಿಎಸ್‌ನ ಎಚ್.ಡಿ.ರೇವಣ್ಣ, ಬಿಜೆಪಿಯ ಸಿದ್ದುಸವದಿ, ಆರಗ ಜ್ಞಾನೇಂದ್ರ, ಕಾಂಗ್ರೆಸ್‌ನ ಟಿ.ಬಿ. ಜಯಚಂದ್ರ, ಕೆ.ಎಂ.ಶಿವಲಿಂಗೇಗೌಡ ಮತ್ತು ಷಡಕ್ಷರಿ ಮಾತನಾಡಿದರು. ಬಿಜೆಪಿ ಮತ್ತು ಜೆಡಿಎಸ್‌ನ ಹಲವು ಸದಸ್ಯರು ತಮಗೆ ಮಾತನಾಡಲು ಅವಕಾಶ ನೀಡಲಿಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದರು. ರೇವಣ್ಣ ಅವರೂ ಕೂಡ ತಮ್ಮ ಮಾತು ಮೊಟಕು ಮಾಡಲಾಗಿದೆ ಎಂದು ಸಭಾಧ್ಯಕ್ಷ ಪೀಠದ ಮುಂದೆ ಧರಣಿಗೆ ಬಂದರು. ಜೆಡಿಎಸ್ ಮತ್ತು ಬಿಜೆಪಿ ಇತರ ಸದಸ್ಯರು ಅವರನ್ನು ಹಿಂಬಾಲಿಸಿದರು.

ಕಾಂಗ್ರೆಸ್ ಸದಸ್ಯರ ಗದರಿದ ಸಭಾಧ್ಯಕ್ಷ: ವಿರೋಧ ಪಕ್ಷದ ಸದಸ್ಯರು ಮಾತನಾಡುವಾಗ ಪದೇ ಪದೇ ಅಡ್ಡಿಪಡಿಸುತ್ತಿದ್ದ ಕಾಂಗ್ರೆಸ್ ಸದಸ್ಯರ ವಿರುದ್ಧ ಗರಂ ಆದ ಸಭಾಧ್ಯಕ್ಷ ಖಾದರ್, 'ವಿರೋಧ ಪಕ್ಷಗಳ ಸದಸ್ಯರು ಮಾತನಾಡುವಾಗ ಅದನ್ನು ಕೇಳುವ ತಾಳ್ಮೆ, ಸಹನೆ, ಸಹಿಷ್ಣುತೆ ಇರಬೇಕು. ಪದೇ ಪದೇ ಎದ್ದು ನಿಂತು ಗದ್ದಲ ಮಾಡಿ ಅಡ್ಡಿಪಡಿಸುವುದು ಸರಿಯಲ್ಲ' ಎಂದು ತರಾಟೆಗೆ ತೆಗೆದುಕೊಂಡರು.

ಸುದ್ದಿ 2 ನಿಮಿಷ

ಮುಜರಾಯಿ ದೇವಸ್ಥಾನಗಳಲ್ಲಿ ಮೊಬೈಲ್ ನಿಷೇಧ

ಬೆಂಗಳೂರು: ಮುಜರಾಯಿ ಮತ್ತು ಧಾರ್ಮಿಕ ದತ್ತಿ ಇಲಾಖೆಯ ಅಧೀನದಲ್ಲಿರುವ ದೇವಸ್ಥಾನಗಳಲ್ಲಿ ಮೊಬೈಲ್ ಬಳಕೆ ನಿಷೇಧಿಸಿ ಸುತ್ತೋಲೆ ಹೊರಡಿಸಲಾಗಿದೆ.

ದೇವಾಲಯದ ಆವರಣಗಳಲ್ಲಿ ಇತ್ತೀಚಿನ ದಿನಗಳಲ್ಲಿ ಮೊಬೈಲ್ ಬಳಕೆ ಹೆಚ್ಚುತ್ತಿದೆ. ಭಕ್ತರು ದೇವಾಲಯಕ್ಕೆ ಬಂದಾಗ ಮೊಬೈಲ್ ಬಳಕೆಯ ಶಬ್ದದಿಂದ ದೇವಾಲಯದ ಸಿಬ್ಬಂದಿ ಹಾಗೂ ದೇವರ ದರ್ಶನಕ್ಕೆ ಬರುವ ಭಕ್ತರಿಗೆ ಏಕ ಮನಸ್ಸಿನಿಂದ ಧ್ಯಾನ, ಪೂಜಾದಿಗಳನ್ನು ನಡೆಸಲು ತೊಂದರೆ ಆಗುತ್ತಿದೆ. ಈ ಹಿನ್ನೆಲೆಯಲ್ಲಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ದೇವಾಲಯಗಳಲ್ಲಿ ದೇವರ ದರ್ಶನ ಸಮಯದಲ್ಲಿ ಭಕ್ತರು ತಮ್ಮ ಮೊಬೈಲ್ ಫೋನ್ ಸ್ವಿಚ್ಡ್ ಆಫ್ ಮಾಡಬೇಕು ಎಂದು ಧಾರ್ಮಿಕ ದತ್ತಿ ಇಲಾಖೆ ಸೂಚಿಸಿದೆ.

ಈ ಬಗ್ಗೆ ಸೂಚನಾ ಪತ್ರದಲ್ಲಿ ಮಾಹಿತಿ ನೀಡುವಂತೆ ದೇವಾಲಯಗಳ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದೂ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಶಿಷ್ಟಾಚಾರ ಮರೆತ ಸಭಾಧ್ಯಕ್ಷ ಖಾದರ್!

ಬೆಂಗಳೂರು: ವಿರೋಧ ಪಕ್ಷಗಳ ನಾಯಕರ ಸಭೆಯಲ್ಲಿ ಭಾಗವಹಿಸಲು ನಗರದ ತಾಜ್ ವೆಸ್ಟ್ ಎಂಡ್ ಹೋಟೆಲ್‌ಗೆ ಬಂದಿರುವ ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಸೇರಿದಂತೆ ಎಐಸಿಸಿ ನಾಯಕರನ್ನು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಮತ್ತು ಉಪ ಸಭಾಧ್ಯಕ್ಷ ರುದ್ರಪ್ಪ ಲಮಾಣಿ ಭೇಟಿ ಮಾಡಿರುವುದು ಚರ್ಚೆಗೆ ಕಾರಣವಾಗಿದೆ.

ಸಭಾಧ್ಯಕ್ಷ ಮತ್ತು ಉಪಸಭಾಧ್ಯಕ್ಷರಾಗಿ ಆಯ್ಕೆಯಾದವರು ಪಕ್ಷದ ಚಟುವಟಿಕೆಯಿಂದ ದೂರ ಇರುತ್ತಾರೆ. ಆದರೆ, ಖಾದರ್ ಮತ್ತು ಲಮಾಣಿ ಅವರು ಈ ಶಿಷ್ಟಾಚಾರ ಮರೆತು ಬಿಜೆಪಿಯೇತರ ಪಕ್ಷಗಳ ರಾಷ್ಟ್ರೀಯ ನಾಯಕರನ್ನು ಭೇಟಿ ಮಾಡಿದರು. ಸಚಿವರಾದ ಜಿ. ಪರಮೇಶ್ವರ, ಕೆ.ಎಚ್ ಮುನಿಯಪ್ಪ, ಎಂ.ಬಿ. ಪಾಟೀಲ, ಎಚ್.ಕೆ. ಪಾಟೀಲ, ದಿನೇಶ್ ಗುಂಡೂರಾವ್, ಸತೀಶ ಜಾರಕಿಹೊಳಿ, ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಕೂಡಾ ಎಐಸಿಸಿ ನಾಯಕರನ್ನು ಭೇಟಿ ಮಾಡಿದರು.

ನಿಗದಿಗಿಂತ ಹೆಚ್ಚು ಕಾಮಗಾರಿ ₹ 8,506 ಕೋಟಿ ಬಾಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಗದಿಯಾಗಿದ್ದ ಮೊತ್ತಕ್ಕಿಂತ ಮೂರುಪಟ್ಟು ಹೆಚ್ಚುವರಿ ಕಾಮಗಾರಿಗೆ ಹಿಂದಿನ ಸರ್ಕಾರ ಮಂಜೂರಾತಿ ನೀಡಿದ್ದರಿಂದ ದೊಡ್ಡಪ್ರಮಾಣದಲ್ಲಿ ಗುತ್ತಿಗೆದಾರರ ಬಾಕಿ ಉಳಿದುಕೊಂಡಿದೆ. ಮೇ ಅಂತ್ಯದವರೆಗೆ ₹ 8,506 ಕೋಟಿ ಬಾಕಿ ಇದೆ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಸತೀಶ್ ಜಾರಕಿಹೊಳಿ

ವಿಧಾನ ಪರಿಷತ್‌ನಲ್ಲಿ ಸೋಮವಾರ ಜೆಡಿಎಸ್‌ನ ಗೋವಿಂದರಾಜು ಅವರು ಕೋಲಾರ ಜಿಲ್ಲೆಯ ಗುತ್ತಿಗೆದಾರರಿಗೆ ನೀಡಬೇಕಾದ ಬಾಕಿ ಕುರಿತು ಮಂಡಿಸಿದ ಗಮನ ಸೆಳೆಯುವ ಸೂಚನೆಗೆ ಉತ್ತರಿಸಿದ ಅವರು, 2023–24ನೇ ಸಾಲಿನ ಬಜೆಟ್‌ನಲ್ಲಿ ₹ 9 ಸಾವಿರ ಕೋಟಿ ಅನುದಾನ ಒದಗಿಸಲಾಗಿದೆ. ಪ್ರತಿ ತಿಂಗಳ ಬಾಕಿ ಆಧಾರದ ಮೇಲೆ ಹಂತಹಂತವಾಗಿ ವಿಭಾಗವಾರು ಹಣ ಬಿಡುಗಡೆ ಮಾಡಲಾಗುವುದು ಎಂದರು.

ರಾಜ್ಯ ಹೆದ್ದಾರಿ, ಸೇತುವೆಗಳು, ಕಟ್ಟಡಗಳು, ನಿರ್ವಹಣೆ, ದುರಸ್ತಿ ಸೇರಿದಂತೆ ಎಲ್ಲ ಕಾಮಗಾರಿಗಳಲ್ಲೂ ಬಾಕಿ ಉಳಿದುಕೊಂಡಿದೆ. ಆರ್ಥಿಕ ಸಂಕಷ್ಟದಲ್ಲಿರುವ ಗುತ್ತಿಗೆದಾರರ ಹಿತರಕ್ಷಣೆ ಮಾಡಲಾಗುವುದು. ಈಗಾಗಲೇ ಟೆಂಡರ್ ಪ್ರಕ್ರಿಯೆ ಮುಗಿದಿರುವ ಕಾಮಗಾರಿಗಳಿಗೆ ತಡೆ ನೀಡುವುದಿಲ್ಲ. ಹಿಂದಿನ ಸರ್ಕಾರ ಮಂಜೂರು ಮಾಡಿದ ಟೆಂಡರ್ ಆಗದ ಕಾಮಗಾರಿಗಳನ್ನು ಮರುಪರಿಶೀಲಿಸಲಾಗುವುದು ಎಂದು ಹೇಳಿದರು.

ವಸತಿ ಶಾಲೆಗಳ ಮೇಲ್ದರ್ಜೆಗೆ ₹7 ಸಾವಿರ ಕೋಟಿ ಬೇಕು

ಬೆಂಗಳೂರು: 'ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿರುವ 742 ವಸತಿ ಶಾಲೆಗಳನ್ನು ಮೇಲ್ದರ್ಜೆಗೇರಿಸಲು ₹7 ಸಾವಿರ ಕೋಟಿ ಬೇಕಾಗುತ್ತದೆ' ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ತಿಳಿಸಿದರು.

ಎಚ್.ಸಿ. ಮಹಾದೇವಪ್ಪ

ವಿಧಾನ ಪರಿಷತ್‌ನಲ್ಲಿ ಸೋಮವಾರ ಕಾಂಗ್ರೆಸ್‌ನ ಪ್ರಕಾಶ್ ಹುಕ್ಕೇರಿ ಅವರ ಗಮನಸೆಳೆಯುವ ಸೂಚನೆಗೆ ಉತ್ತರಿಸಿದ ಅವರು, 'ರಾಜ್ಯದಲ್ಲಿನ ಒಟ್ಟು 742 ವಸತಿ ಶಾಲೆಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವವು ಪರಿಶೀಲನೆಯಲ್ಲಿದೆ. ಅನುದಾನ ಲಭ್ಯತೆಯ ಅನುಸಾರ ಹಂತ ಹಂತವಾಗಿ ಈ ಶಾಲೆಗಳಲ್ಲಿ ಪಿಯುಸಿ ಆರಂಭಿಸಲಾಗುವುದು' ಎಂದು ವಿವರಿಸಿದರು.

ಪ್ರಕಾಶ್ ಹುಕ್ಕೇರಿ ಮಾತನಾಡಿ, 'ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚನ್ನಮ್ಮ, ಡಾ.ಬಿ.ಆರ್. ಅಂಬೇಡ್ಕರ್ ಹಾಗೂ ಇತರೆ ಸರ್ಕಾರಿ ವಸತಿ ಶಾಲೆಗಳಲ್ಲಿ ಓದುವ ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ನಂತರ ಶಿಕ್ಷಣ ಮೊಟಕುಗೊಳಿಸುತ್ತಿದ್ದಾರೆ. ಹೀಗಾಗಿ, ಈ ಎಲ್ಲ ಶಾಲೆಗಳಲ್ಲಿ ಪಿಯುಸಿ ಆರಂಭಿಸಬೇಕು' ಎಂದು ಒತ್ತಾಯಿಸಿದರು.

ಪಿಟಿಸಿಎಲ್ ತಿದ್ದುಪಡಿ ಮಸೂದೆ ಮಂಡನೆ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿಯವರ ಭೂಮಿಹಕ್ಕು ರಕ್ಷಣೆಗೆ ಸರ್ಕಾರ ಬದ್ಧವಾಗಿದೆ. ಅದಕ್ಕಾಗಿ ಕೊಟ್ಟ ಮಾತಿನಂತೆ ಇದೇ 19ರಂದು ಅಧಿವೇಶನದಲ್ಲಿ ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜಮೀನು ಪರಭಾರೆ ನಿಷೇಧ (ತಿದ್ದುಪಡಿ) ಮಸೂದೆ ಯನ್ನು ಮಂಡಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ವಿಧಾನಸೌಧದಲ್ಲಿ ಸೋಮವಾರ ಕಾಯ್ದೆ ತಿದ್ದುಪಡಿ ಕುರಿತು ಸಚಿವರು, ಅಧಿಕಾರಿಗಳು, ಕಾನೂನು ತಜ್ಞರು ಹಾಗೂ ವಿವಿಧ ಸಂಘಟನೆಗಳ ಮುಖಂಡರ ಜತೆ ಚರ್ಚಿಸಿದ ನಂತರ ಅವರು ಮಾತನಾಡಿದರು.

ಪರಿಶಿಷ್ಟ ಸಮುದಾಯದವರ ಹಿತಾಸಕ್ತಿ ವಿಷಯದಲ್ಲಿ ಯಾವ ಒತ್ತಡಕ್ಕೂ ಮಣಿಯುವುದಿಲ್ಲ. ರಾಜಿ ಮಾಡಿಕೊಳ್ಳುವ ಪ್ರಶ್ನೆಯೇ ಇಲ್ಲ. ಪರಿಶಿಷ್ಟರಿಗೆ ಸರ್ಕಾರ ಮಂಜೂರು ಮಾಡಿದ ಜಮೀನನ್ನು ಅನುಮತಿ ಇಲ್ಲದೇ ಮಾರಾಟ ಮಾಡುವುದಕ್ಕೆ ಈಗಿರುವ ಪಿಟಿಸಿಎಲ್ ಕಾಯ್ದೆ ನಿರ್ಬಂಧಿಸಿತ್ತು. ಆದರೆ, ಅಕ್ರಮ ಪರಭಾರೆ ಪ್ರಶ್ನಿಸಿ ಮನವಿ ಸಲ್ಲಿಸುವುದಕ್ಕೆ ಪಿಟಿಸಿಎಲ್ ಕಾಯ್ದೆಯಲ್ಲಿ ಕಾಲಮಿತಿ ನಿಗದಿಪಡಿಸಿರಲಿಲ್ಲ. ಕಾಲಮಿತಿ ನಿಗದಿಪಡಿಸದಿದ್ದರೆ ಅರ್ಜಿಗಳು ಮಾನ್ಯವಾಗುವುದಿಲ್ಲ ಎಂದು ಸುಪ್ರೀಂಕೋರ್ಟ್ ಹೇಳಿತ್ತು. ಹಾಗಾಗಿ, ಕಾಯ್ದೆ ಬಲ ಕಳೆದುಕೊಂಡಿತ್ತು ಎಂದರು.

ಭೂಮಿ ಕಳೆದುಕೊಂಡವರಿಗೆ ನ್ಯಾಯಾಲಯದಲ್ಲಿ ಹಿನ್ನಡೆಯಾಗದಂತೆ ಕ್ರಮ ಕೈಗೊಳ್ಳಲಾಗುವುದು. ಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲಾಗುವುದು ಎಂದರು.

ಉರಿಲಿಂಗ ಪೆದ್ದಿಮಠದ ಜ್ಞಾನಪ್ರಕಾಶ ಸ್ವಾಮೀಜಿ, ಶ್ರೀಧರ್ ಕಲಿವೀರ, ಬಸವರಾಜ ಕೌತಾಳ್, ಮಂಜು, ಇಂದೂಧರ ಹೊನ್ನಾಪುರ, ಹರಿರಾಮ್, ಮಾವಳ್ಳಿ ಶಂಕರ್, ವಿ.ನಾಗರಾಜ್, ಎನ್.ಮುನಿಸ್ವಾಮಿ, ಎನ್.ವೆಂಕಟೇಶ್, ಡಿ.ಜಿ.ಸಾಗರ್ ಸೇರಿದಂತೆ ವಿವಿಧ ಸಂಘಟನೆಗಳ 35ಕ್ಕೂ ಹೆಚ್ಚು ಮುಖಂಡರು ತಮ್ಮ ಅಭಿಪ್ರಾಯ ಹಂಚಿಕೊಂಡರು.

ಸಚಿವರಾದ ಜಿ.ಪರಮೇಶ್ವರ, ಕೆ.ಎಚ್. ಮುನಿಯಪ್ಪ, ಕೃಷ್ಣಬೈರೇಗೌಡ, ಎಚ್.ಸಿ.ಮಹದೇವಪ್ಪ, ಎಚ್.ಕೆ. ಪಾಟೀಲ, ಸತೀಶ ಜಾರಕಿಹೊಳಿ, ಪ್ರಿಯಾಂಕ್ ಖರ್ಗೆ, ಶಿವರಾಜ ತಂಗಡಗಿ, ಬಿ. ನಾಗೇಂದ್ರ, ಕೆ.ಎನ್. ರಾಜಣ್ಣ, ಆರ್.ಬಿ.ತಿಮ್ಮಾಪುರ, ಸಮಾಜ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಪಿ.ಮಣಿವಣ್ಣನ್, ಅಡ್ವೊಕೇಟ್ ಜನರಲ್ ಶಶಿಕಿರಣ್ ಶೆಟ್ಟಿ ಉಪಸ್ಥಿತರಿದ್ದರು.

ಡಾ.ಸಿ.ಎನ್. ಮಂಜುನಾಥ್ ಸೇವಾವಧಿ ವಿಸ್ತರಣೆ

ಬೆಂಗಳೂರು: ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಅವರ ಸೇವಾವಧಿಯನ್ನು ಆರು ತಿಂಗಳವರೆಗೆ ವಿಸ್ತರಿಸಲು ಸೋಮವಾರ ನಡೆದ ಸಂಸ್ಥೆಯ ಆಡಳಿತ ಮಂಡಳಿ ಸಭೆಯಲ್ಲಿ ನಿರ್ಧರಿಸಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಜಯದೇವ ಹೃದ್ರೋಗ ಸಂಸ್ಥೆಯ ಆಡಳಿತ ಮಂಡಳಿ ಸಭೆ ನಡೆಯಿತು. ಮಂಜುನಾಥ್ ಅವರ ಸೇವಾವಧಿ ಜುಲೈ 19ರಂದು ಕೊನೆಗೊಳ್ಳಲಿದೆ. ಮುಂದಿನ ಆರು ತಿಂಗಳವರೆಗೆ ಅವರ ಸೇವಾವಧಿ ವಿಸ್ತರಣೆಯ ಪ್ರಸ್ತಾವಕ್ಕೆ ಆಡಳಿತ ಮಂಡಳಿ ಒಪ್ಪಿಗೆ ನೀಡಿದೆ ಎಂದು ಮೂಲಗಳು ತಿಳಿಸಿವೆ.

ಜಯದೇವ ಹೃದ್ರೋಗ ಸಂಸ್ಥೆಯ ಮುಖ್ಯ ಕೇಂದ್ರ ಹಾಗೂ ಪ್ರಾದೇಶಿಕ ಕೇಂದ್ರಗಳಿಗೆ ಸಂಬಂಧಿಸಿದ ಹಲವು ಆಡಳಿತಾತ್ಮಕ ವಿಷಯಗಳು ಸಭೆಯ ಕಾರ್ಯಸೂಚಿಯಲ್ಲಿದ್ದವು. ಬಹುತೇಕ ಪ್ರಸ್ತಾವಗಳಿಗೆ ಆಡಳಿತ ಮಂಡಳಿ ಒಪ್ಪಿಗೆ ನೀಡಿದೆ ಎಂದು ಮೂಲಗಳು ಹೇಳಿವೆ.

ಅತ್ಯುತ್ತಮ ಶಾಸಕ ಪ್ರಶಸ್ತಿಗೆ ಕೆ.ಟಿ.ಶ್ರೀಕಂಠೇಗೌಡ ಆಯ್ಕೆ

ಬೆಂಗಳೂರು: ವಿಧಾನ ಪರಿಷತ್ತಿನ ಮಾಜಿ ಸದಸ್ಯ ಕೆ.ಟಿ. ಶ್ರೀಕಂಠೇಗೌಡ (ಜೆಡಿಎಸ್) ಅವರು ಕರ್ನಾಟಕ ವಿಧಾನ ಪರಿಷತ್‌ನ 2022ನೇ ಸಾಲಿನ 'ಅತ್ಯುತ್ತಮ ಪರಿಷತ್ ಶಾಸಕ' ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಜುಲೈ 18ರಂದು ಸಂಜೆ 6ಕ್ಕೆ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

21 ಮೀಟರ್ ಮೇಲ್ಪಟ್ಟ ಕಟ್ಟಡಗಳಿಗೆ ಎನ್‌ಒಸಿ ಕಡ್ಡಾಯ

ಬೆಂಗಳೂರು: ಕರ್ನಾಟಕ ಅಗ್ನಿಶಾಮಕ ದಳ(ತಿದ್ದುಪಡಿ) ಮಸೂದೆ 2023 ಕ್ಕೆ ವಿಧಾನಸಭೆ ಸೋಮವಾರ ಅನುಮೋದನೆ ನೀಡಿತು.

ಗೃಹ ಸಚಿವ ಜಿ.ಪರಮೇಶ್ವರ ಪರ್ಯಾಲೋಚನೆ ಕೋರಿ ಮಸೂದೆಯ ವಿವರ ನೀಡಿದರು. ಅಗ್ನಿಶಾಮಕ ಮತ್ತು ತುರ್ತುಸೇವೆಗಳ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆಯಲು ಅಗತ್ಯವಿರುವ ಕಟ್ಟಡಗಳ ಎತ್ತರವನ್ನು 15 ರಿಂದ 21 ಮೀಟರ್‌ಗೆ ಹೆಚ್ಚಿಸುವ ಉದ್ದೇಶದಿಂದ ಮಸೂದೆ ಮಂಡಿಸಲಾಗಿದೆ ಎಂದರು.

ಈ ತಿದ್ದುಪಡಿಗೆ ಹಿಂದಿನ ಸರ್ಕಾರ ಕಳೆದ ಮಾರ್ಚ್ 24 ರಂದು ಸುಗ್ರೀವಾಜ್ಞೆ ಹೊರಡಿಸಿತ್ತು. ಹೊಸ ಕಾಯ್ದೆ ಜಾರಿ ನಂತರ 21 ಮೀಟರ್‌ಗಿಂತ ಹೆಚ್ಚು ಎತ್ತರ ಇದ್ದರೆ ಅಗ್ನಿಶಾಮಕ ಮತ್ತು ತುರ್ತು ಸೇವೆ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಕಡ್ಡಾಯ. 19,294 ಪ್ರಕರಣಗಳಲ್ಲಿ 15,924 ರಲ್ಲಿ ನಿಯಮ ಮೀರಿವೆ ಎಂದರು.

ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ (ತಿದ್ದುಪಡಿ) ಮಸೂದೆ 2023 ಕ್ಕೂ ಅಂಗೀಕಾರ ದೊರೆಯಿತು. ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಪರ್ಯಾಲೋಚನೆಗೆ ಕೋರಿದರು.

ರಾಜ್ಯದಲ್ಲಿ ಶೇ 33ರಷ್ಟು ಮಾತ್ರ ಬಿತ್ತನೆ

ಒಟ್ಟು ವಿಸ್ತೀರ್ಣ (ಲಕ್ಷ ಹೆಕ್ಟೇರ್‌ಗಳಲ್ಲಿ)

ಜಿಲ್ಲೆ	ಗುರಿ	ಸಾಧನೆ	ಶೇ ಸಾಧನೆ	ಹಿಂದಿನ ವರ್ಷದ ಸಾಧನೆ
ಬೀದರ್	4.13	3.38	82%	3.03
ಕಲಬುರಗಿ	8.87	2.72	31%	4.96
ವಿಜಯಪುರ	7.37	0.01	14%	3.99
ಗದಗ	3.02	0.73	24%	2.71
ಧಾರವಾಡ	2.57	0.96	37%	2.59
ಉತ್ತರ ಕನ್ನಡ	0.65	0.34	52%	0.36
ಬಾಗಲಕೋಟೆ	2.68	1.52	57%	1.98
ಬೆಳಗಾವಿ	7.11	3.62	51%	6.43
ದಾವಣಗೆರೆ	2.37	0.67	28%	1.23
ಶಿವಮೊಗ್ಗ	1.29	0.37	29%	0.50
ಹಾಸನ	2.46	1.04	42%	1.08
ದಕ್ಷಿಣ ಕನ್ನಡ	0.09	0.01	9%	0.03
ಚಿಕ್ಕಮಗಳೂರು	0.97	0.13	13%	0.21
ಕೊಡಗು	0.32	0.02	7%	0.03
ಉಡುಪಿ	0.38	0.11	29%	0.14
ಮಂಡ್ಯ	1.96	0.22	11%	0.25
ಮೈಸೂರು	3.98	1.91	48%	2.14
ಯಾದಗಿರಿ	4.02	0.92	23%	1.32
ರಾಯಚೂರು	5.42	0.91	17%	1.89
ಹಾವೇರಿ	3.27	2.06	63%	2.69
ಕೊಪ್ಪಳ	3.11	1.25	40%	2.21
ಬಳ್ಳಾರಿ	1.74	0.09	5%	0.22
ವಿಜಯನಗರ	2.89	1.41	49%	1.62
ಚಿತ್ರದುರ್ಗ	2.98	0.41	14%	1.21
ತುಮಕೂರು	3.15	0.29	9%	0.33
ಚಿಕ್ಕಬಳ್ಳಾಪುರ	1.49	0.17	11%	0.09
ಬೆಂ.ಗ್ರಾಮಾಂತರ	0.70	0.02	2%	0.02
ಕೋಲಾರ	1.03	0.04	4%	0.05
ಬೆಂಗಳೂರು	0.23	0.00	1%	0.00
ರಾಮನಗರ	0.93	0.02	2%	0.04
ಚಾಮರಾಜನಗರ	1.18	0.45	38%	0.53



ನಾಲ್ವರು ಐಎಎಸ್ ಅಧಿಕಾರಿಗಳ ವರ್ಗ

ಬೆಂಗಳೂರು: ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಕಾರ್ಯನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ ಸೇರಿ ನಾಲ್ವರು ಐಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ರಾಜ್ಯ ಸರ್ಕಾರ ಸೋಮವಾರ ಆದೇಶ ಹೊರಡಿಸಿದೆ.

ರಮ್ಯಾ ಅವರನ್ನು ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ (ಬಿಎಂಆರ್‌ಡಿಎ) ಆಯುಕ್ತರನ್ನಾಗಿ ನೇಮಿಸಲಾಗಿದೆ.ಉಳಿದಂತೆ, ಎಂ.ಎಸ್. ದಿವಾಕರ ಅವರನ್ನು ವಿಜಯನಗರ ಜಿಲ್ಲಾಧಿಕಾರಿ, ಬಿ. ಸುಶೀಲಾ ಅವರನ್ನು ಯಾದಗಿರಿ ಜಿಲ್ಲಾಧಿಕಾರಿ, ಟಿ. ವೆಂಕಟೇಶ್ ಅವರನ್ನು ಬಳ್ಳಾರಿ ಜಿಲ್ಲಾಧಿಕಾರಿಯಾಗಿ ನಿಯೋಜಿಸಲಾಗಿದೆ.

1 ಕಿ.ಮೀ ಕಾರು ಎಳೆದೊಯ್ದ ಟಿಪ್ಪರ್

ಪ್ರಜಾವಾಣಿ ವಾರ್ತೆ

ಪಡುಬಿದ್ರಿ (ಉಡುಪಿ ಜಿಲ್ಲೆ): ಹಿಂದಿನಿಂದ ಡಿಕ್ಕಿ ಹೊಡೆದ ಕಾರನ್ನು ಟಿಪ್ಪರ್ ಸುಮಾರು ಒಂದು ಕಿ.ಮೀವರೆಗೂ ಎಳೆದೊಯ್ದ ಘಟನೆ ರಾಷ್ಟ್ರೀಯ ಹೆದ್ದಾರಿ 66ರ ಹೆಜಮಾಡಿಯ ಟೋಲ್‌ಗೇಟ್ ಸಮೀಪ ಸೋಮವಾರ ನಡೆದಿದೆ.

ಉಡುಪಿ ಕಡೆಯಿಂದ ಸಾಗುತ್ತಿದ್ದ ಸ್ಯಾಂಟ್ರೋ ಕಾರು ಟಿಪ್ಪರ್‌ನ ಹಿಂಬದಿಗೆ ಡಿಕ್ಕಿ ಹೊಡೆದು ಅಲ್ಲಿಯೇ ಸಿಲುಕಿಕೊಂಡಿದೆ. ಕಾರು ಹಿಂಬದಿಗೆ ಸಿಲುಕಿರುವುದು ಟಿಪ್ಪರ್ ಚಾಲಕನ ಗಮನಕ್ಕೆ ಬಾರದೆ ಆತ ಟಿಪ್ಪರ್ ಚಲಾಯಿಸಿಕೊಂಡು ಹೋಗಿದ್ದಾರೆ. ಇದನ್ನು ಗಮನಿಸಿದ ಹಿಂದಿನಿಂದ ಬರುತ್ತಿದ್ದ ಇನ್ನೊಂದು ಕಾರಿನ ಚಾಲಕ ಗದರಿ ಟಿಪ್ಪರ್ ನಿಲ್ಲಿಸಿದ್ದಾರೆ.

ಬಳಿಕ ಕಾರನ್ನು ಹೊರತೆಗೆದು ಸಣ್ಣ ಪುಟ್ಟ ಗಾಯಗಳಾಗಿದ್ದ ಸಾಗರ ಮೂಲದ ಜಾಫರ್ ಖಾನ್, ಶಾಹಿನಾ, ಯಾಸಿರ್ ಖಾನ್ ಅವರನ್ನು ಸುರತ್ಕಲ್‌ನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತು. ಮೂವರೂ ಸಾಗರದಿಂದ ಮಂಗಳೂರಿನ ಆಸ್ಪತ್ರೆಗೆ ತೆರಳುತ್ತಿದ್ದರು. ಪಡುಬಿದ್ರಿ ಪೊಲೀಸರು ಕಾರು ಹಾಗೂ ಟಿಪ್ಪರ್ ವಾಹನವನ್ನು ವಶಪಡಿಸಿಕೊಂಡಿದ್ದಾರೆ.

ಡಿಕ್ಕಿ ಹೊಡೆದ ಕಾರನ್ನು ಸುಮಾರು 1ಕಿ.ಮೀ ದೂರ ಟಿಪ್ಪರ್ ಎಳೆದೊಯ್ದಿದೆ

ಸಿ.ಎಂ ಕಾರ್ಯದರ್ಶಿ, ಸಲಹೆಗಾರರ ಹುದ್ದೆ ರದ್ದು ಕೋರಿ ಪಿಐಎಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಯಾದ ವಿಧಾನ ಪರಿಷತ್ ಸದಸ್ಯ ನಜೀರ್ ಅಹಮದ್, ಕೆ.ಗೋವಿಂದರಾಜ್, ಮುಖ್ಯಮಂತ್ರಿಗಳ ಮುಖ್ಯ ಸಲಹೆಗಾರ ಸುನೀಲ್ ಕನಗೋಲು ಹಾಗೂ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್ ಅವರ ನೇಮಕಾತಿಗಳನ್ನು ಪ್ರಶ್ನಿಸಿ ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಲಾಗಿದೆ.

ವಕೀಲ ಎಸ್.ಉಮಾಪತಿ ಸಲ್ಲಿಸಿರುವ ಈ ಅರ್ಜಿ ಇನ್ನಷ್ಟೇ ವಿಚಾರಣೆಗೆ ಬರಬೇಕಿದ್ದು, ಅರ್ಜಿಯಲ್ಲಿ ನಜೀರ್ ಅಹ್ಮದ್, ಕೆ.ಗೋವಿಂದರಾಜ್, ಸುನೀಲ್ ಕನಗೋಲು ಹಾಗೂ ಕೆ.ವಿ.ಪ್ರಭಾಕರ್ ಅವರನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ.

ಅರ್ಜಿಯಲ್ಲಿ ಏನಿದೆ?: 'ಈ ನಾಲ್ಕೂ ಜನರಿಗೆ ಹುದ್ದೆಗಳನ್ನು ಸೃಜಿಸಿ ಸಂಪುಟ ದರ್ಜೆ ಸ್ಥಾನಮಾನ ನೀಡಲಾಗಿದೆ. ಇವರಿಗೆ ನೀಡಲಾಗುವ ಸಂಬಳ, ಸಾರಿಗೆ, ವಸತಿ ಭತ್ಯೆ ಇತ್ಯಾದಿ ಖರ್ಚುಗಳು ರಾಜ್ಯದ ಬೊಕ್ಕಸಕ್ಕೆ ವೃಥಾ ಹೊರೆ. ಇವೆಲ್ಲಾ ರಾಜಕೀಯ ನೇಮಕಾತಿ ಹಾಗೂ ಏಕಪಕ್ಷೀಯ ನಿರ್ಧಾರಗಳಾಗಿವೆ. ಮುಖ್ಯಮಂತ್ರಿಗಳ ಕಚೇರಿ ಎಂಬುದು ಸಾರ್ವಜನಿಕ ಕಚೇರಿ. ಆದರೆ, ಇಲ್ಲೀಗ ಮುಖ್ಯಮಂತ್ರಿಗಳ ಬಂಧುಗಳು, ಅವರ ಹಿಂಬಾಲಕರಿಗೇ ಆಸ್ಪದ ನೀಡಲಾಗಿದೆ. ಕಾನೂನಿನಲ್ಲಿ ಇಂತಹ ಹುದ್ದೆಗಳನ್ನು ರೂಪಿಸಲು ಅವಕಾಶವಿಲ್ಲ. ನೇಮಕಾತಿ ಸಂವಿಧಾನ ವಿರೋಧಿಯಾಗಿದ್ದು ಕೂಡಲೇ ರದ್ದುಗೊಳಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

ಬದಲಾಗದ ಗೊಲ್ಲರಹಟ್ಟಿಯ ಸಂಪ್ರದಾಯ

ಊರಾಚೆ ಗುಡಿಸಲಲ್ಲಿ ಬಾಣಂತಿ, ಮಗು

ಪ್ರಜಾವಾಣಿ ವಾರ್ತೆ

ಕೋರ (ತುಮಕೂರು): ತುಮಕೂರು ತಾಲ್ಲೂಕು ಮಲ್ಲೇನಹಳ್ಳಿ ಗೊಲ್ಲರಹಟ್ಟಿಯ ಬಾಣಂತಿ ಹಾಗೂ ನವಜಾತ ಶಿಶುವನ್ನು ಊರಾಚೆಯ ಜಮೀನಿನಲ್ಲಿ ನಿರ್ಮಿಸಿರುವ ತಾತ್ಕಾಲಿಕ ಗುಡಿಸಲಿನಲ್ಲಿ ಇರಿಸಲಾಗಿದೆ.

ವಿಷಯ ತಿಳಿದು ಸೋಮವಾರ ಗುಡಿಸಲಿಗೆ ತೆರಳಿದ ಬೆಳ್ಳಾವಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಹಾಗೂ ಸಿಬ್ಬಂದಿಯು ಬಾಣಂತಿಯ ಕುಟುಂಬ ಸದಸ್ಯರ ಮನವೊಲಿಸಿ ಆಸ್ಪತ್ರೆಗೆ ಸೇರಿಸಲು ನಡೆಸಿದ ಯತ್ನ ಫಲ ನೀಡಲಿಲ್ಲ.

'ನಮ್ಮ ಸಮುದಾಯದಲ್ಲಿ ಸಂಪ್ರದಾಯದಂತೆ ಇನ್ನೂ ಕೆಲವು ದಿನ ತಾಯಿ ಮತ್ತು ಮಗುವನ್ನು ಗುಡಿಸಿಲಿನಲ್ಲಿಯೇ ಆರೈಕೆ ಮಾಡುತ್ತೇವೆ. ಸ್ವಲ್ಪ ದಿನ ಕಳೆದ ನಂತರ ಹಟ್ಟಿಗೆ ಕರೆದೊಯ್ಯುತ್ತೇವೆ' ಎಂದು ಬಾಣಂತಿ ಕುಟುಂಬದ ಹಿರಿಯರು ಹಟ ಹಿಡಿದರು.

ತುಮಕೂರು ತಾಲ್ಲೂಕಿನ ಮಲ್ಲೇನಹಳ್ಳಿ ಗೊಲ್ಲರಹಟ್ಟಿ ಊರಾಚೆ ಬಾಣಂತಿ ಮತ್ತು ಮಗುವನ್ನು ಇಟ್ಟಿರುವ ಗುಡಿಸಲು

'ಈ ರೀತಿ ಬಯಲಿನಲ್ಲಿ ನವಜಾತ ಶಿಶುವಿನೊಂದಿಗೆ ಬಾಣಂತಿ ವಾಸ ಮಾಡುವುದು ಒಳ್ಳೆಯದ್ದಲ್ಲ. ಸಂಪ್ರದಾಯದ ಹೆಸರಿನಲ್ಲಿ ತಾಯಿ, ಮಗುವಿನ ಜೀವಕ್ಕೆ ಕುತ್ತು ತರಬೇಡಿ ಎಂದು ಎಷ್ಟೇ ತಿಳಿಹೇಳಿದರೂ ಕುಟುಂಬ ಮನಸ್ಸು ಬದಲಿಸಲಿಲ್ಲ' ಎಂದು ಬೆಳ್ಳಾವಿ ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ.ರಾಧಕೃಷ್ಣ 'ಪ್ರಜಾವಾಣಿ'ಗೆ ತಿಳಿಸಿದರು.

ಕಾಂಗರೂ ಮಾದರಿಯಲ್ಲಿ ತಾಯಿ ಮತ್ತು ಮಗುವಿನ ಆರೈಕೆ ಮತ್ತು ಸ್ವಚ್ಛತೆ ಬಗ್ಗೆ ಕುಟುಂಬ ಸದಸ್ಯರಿಗೆ ತಿಳಿಹೇಳಿ ಬಂದಿದ್ದೇವೆ ಎಂದರು.

ಬಾಲಕಿಯರು ಋತುಮತಿಯಾದಾಗ, ಮಹಿಳೆಯರ ಮಾಸಿಕ ಋತುಚಕ್ರ ಮತ್ತು ಹೆರಿಗೆ ಸಂದರ್ಭದಲ್ಲಿ ನಿರ್ದಿಷ್ಟ ದಿನಗಳವರೆಗೆ ಗ್ರಾಮದಿಂದ ಹೊರಗೆ ಗುಡಿಸಲಿನಲ್ಲಿ ಇರುವ ಪದ್ಧತಿ ಬುಡಕಟ್ಟು ಸಂಪ್ರದಾಯ ಪಾಲಿಸುವ ಗೊಲ್ಲ ಸಮುದಾಯದಲ್ಲಿ ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿದೆ.

ಗೊಲ್ಲ ಸಮುದಾಯ ಹೆಚ್ಚಾಗಿರುವ ತುಮಕೂರು ಜಿಲ್ಲೆಯ ಕೆಲವು ಗ್ರಾಮಗಳ ಹೊರವಲಯದಲ್ಲಿ ಕೃಷ್ಣ ಕುಟೀರ ನಿರ್ಮಾಣ ಮಾಡಲಾಗಿದ್ದು, ಇಂತಹ ಸಂದರ್ಭದಲ್ಲಿ ಹೆಣ್ಣುಮಕ್ಕಳು ಮೂರರಿಂದ ಐದು ದಿನ ಉಳಿದುಕೊಳ್ಳುತ್ತಾರೆ ಎಂದು ಸಮುದಾಯದ ಹಿರಿಯರೊಬ್ಬರು ತಿಳಿಸಿದರು.

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಮಕ್ಕಳ ಮಾತುಗಳಿಗೆ ಕಿವಿಯಾಗಿ; ಅವರ ಸುರಕ್ಷತೆಗೆ ಭರವಸೆಯನ್ನು ನೀಡಿ

ಆಳ-ಅಗಲ
ಮತ್ತೆ ಮತ್ತೆ ಮೈತ್ರಿ ರಾಜಕಾರಣ

13.5 ಕೋಟಿ ಜನ ಬಡತನದಿಂದ ಹೊರಕ್ಕೆ 8
'ವರ್ಗಾವಣೆ ದಂಧೆಯಲ್ಲಿ ₹ 500 ಕೋಟಿ ಕೈ ಬದಲು' 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
66,589 ▲	19,711 ▲	₹61,000 (ಬೆಂಗಳೂರು)	₹77,100 (ಬೆಂಗಳೂರು)	82.05 ▲

'ಕೈ' 'ಕಮಲ'ಕ್ಕೆ ಮಿತ್ರರ ಹಂಬಲ

ಲೋಕಸಭೆಗೆ 2024ರಲ್ಲಿ ಚುನಾವಣೆ ನಡೆಯಲಿದೆ. ಪ್ರಮುಖ ರಾಷ್ಟ್ರೀಯ ಪಕ್ಷಗಳಾದ ಆಡಳಿತಾರೂಢ ಬಿಜೆಪಿ ಮತ್ತು ವಿರೋಧ ಪಕ್ಷ ಕಾಂಗ್ರೆಸ್ ಚುನಾವಣೆಗೆ ಸಜ್ಜಾಗಲು ತಾಲೀಮು ಆರಂಭಿಸಿವೆ. ಸತತ ಎರಡು ಅವಧಿಯಿಂದ ಅಧಿಕಾರದಲ್ಲಿರುವ ಬಿಜೆಪಿಯನ್ನು ಮಣಿಸಲೇಬೇಕು ಎಂಬ ಉದ್ದೇಶದಿಂದ ಕಾಂಗ್ರೆಸ್ ತಯಾರಿ ನಡೆಸಿದೆ. ಮೈತ್ರಿಕೂಟದ ಈ ಯುಗದಲ್ಲಿ ಏಕಾಂಗಿ ಹೋರಾಟ ಸಾಧ್ಯವಿಲ್ಲ ಎಂಬುದು ಬಿಜೆಪಿಗೂ ಮನವರಿಕೆ ಆಗಿದೆ. ಹೀಗಾಗಿ ಎರಡೂ ಪಕ್ಷಗಳು ಮಿತ್ರ ಪಕ್ಷಗಳನ್ನು ಒಟ್ಟುಗೂಡಿಸುವ ಯತ್ನ ನಡೆಸಿವೆ. ಕಾಂಗ್ರೆಸ್ ನೇತೃತ್ವದಲ್ಲಿ ಬೆಂಗಳೂರಿನಲ್ಲಿ, ಬಿಜೆಪಿ ನೇತೃತ್ವದಲ್ಲಿ ದೆಹಲಿಯಲ್ಲಿ ಮಂಗಳವಾರ ಸಭೆಗಳು ನಡೆಯಲಿವೆ

ಬಿಜೆಪಿ ವಿರೋಧಿ ಪಕ್ಷಗಳಿಂದ ಒಗ್ಗಟ್ಟಿನ ಜಪ

ವಿಪಕ್ಷಗಳ ಸಭೆಯಲ್ಲಿ ಮಮತಾ ಬ್ಯಾನರ್ಜಿ, ಸೋನಿಯಾ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ನಿತೀಶ್ ಕುಮಾರ್, ರಾಹುಲ್ ಗಾಂಧಿ ಮತ್ತಿತರರು ಭಾಗಿಯಾಗಿದ್ದರು —ಪಿಟಿಐ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ವಿರುದ್ಧ 'ಮಹಾ ಮೈತ್ರಿ ಕೂಟ' ರಚಿಸಿ 2024ರ ಲೋಕಸಭೆ ಚುನಾವಣೆಯಲ್ಲಿ ಕಣಕ್ಕಿಳಿದು, ರಾಷ್ಟ್ರ ರಾಜಕಾರಣದಲ್ಲಿ ಬದಲಾವಣೆ ತರುವ ಗುರಿಯೊಂದಿಗೆ ಬಿಜೆಪಿ ವಿರೋಧಿಯಾದ 26 ಪಕ್ಷಗಳ 40ಕ್ಕೂ ಹೆಚ್ಚು ಪ್ರಮುಖ ನಾಯಕರು ಮಹತ್ವದ ಚರ್ಚೆ ನಡೆಸಲು ಎರಡನೇ ಬಾರಿಗೆ ಒಂದೇ ಸೂರಿನಡಿ ಇಲ್ಲಿ ಸೇರಿದ್ದಾರೆ.

ಎಲ್ಲ ಪಕ್ಷಗಳ ನಾಯಕರು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಉಪಸ್ಥಿತಿಯಲ್ಲಿ ನಗರದ ತಾಜ್ ವೆಸ್ಟ್ ಎಂಡ್ ಹೋಟೆಲ್‌ನಲ್ಲಿ ಸೋಮವಾರ ರಾತ್ರಿ ಔತಣ ಕೂಟದಲ್ಲಿ ಅನೌಪಚಾರಿಕ ಚರ್ಚೆ ನಡೆಸಿದ್ದಾರೆ. ಮಂಗಳವಾರ (ಜುಲೈ 18) ನಡೆಯಲಿರುವ ಸಭೆಯ ಕಾರ್ಯಸೂಚಿ ಕುರಿತು ಸಮಾಲೋಚನೆ ನಡೆಸಿದ್ದಾರೆ.

ಮೈತ್ರಿಕೂಟಕ್ಕೆ ಏನು ಹೆಸರಿಡಬೇಕು? ಕಾರ್ಯಸೂಚಿ ಏನಿರಬೇಕು? ಸದ್ಯದಲ್ಲೇ ಎದುರಾಗಲಿರುವ ನಾಲ್ಕು ರಾಜ್ಯಗಳ ವಿಧಾನಸಭೆ ಚುನಾವಣೆಯಲ್ಲಿ ಒಗ್ಗೂಡಿ ಯಾವ ರೀತಿ ಕೆಲಸ ಮಾಡಬೇಕು? ಎಂಬ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಲಿದೆ. ಇದೇ 20ರಿಂದ ಆರಂಭವಾಗಲಿರುವ ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ಬಿಜೆಪಿ ವಿರುದ್ಧ ಹೋರಾಡಲು, ತಮ್ಮೊಳಗಿನ ಭಿನ್ನಾಭಿಪ್ರಾಯಗಳನ್ನು ನಿವಾರಿಸಿಕೊಳ್ಳಲು ಕೂಡಾ ಸಭೆಯಲ್ಲಿ ಪ್ರಯತ್ನಗಳು ನಡೆಯಲಿವೆ ಎಂದು ಗೊತ್ತಾಗಿದೆ.

ಸಭೆಯ ಕುರಿತು ಸೋಮವಾರ ಬೆಳಿಗ್ಗೆ ಮಾಹಿತಿ ನೀಡಿದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, 'ಇದು ವಿರೋಧ ಪಕ್ಷಗಳ ಎರಡನೇ ಸಭೆ. ರಾಷ್ಟ್ರ ರಾಜಕಾರಣದಲ್ಲಿ ಬದಲಾವಣೆ ತರುವ (ಗೇಮ್ ಚೇಂಜರ್) ಸಭೆ ಇದಾಗಲಿದೆ' ಎಂದರು.

'ಎಲ್ಲ ವಿರೋಧ ಪಕ್ಷಗಳನ್ನು ಏಕಾಂಗಿಯಾಗಿ ಎದುರಿಸಬಲ್ಲೆವು ಎಂದು ಬೀಗುತ್ತಿದ್ದವರು (ಬಿಜೆಪಿ) ಪಟ್ನಾ ಸಭೆ ಬಳಿಕ ಈಗ ಬೇರೆ ಪಕ್ಷಗಳ ಜೊತೆ ಮೈತ್ರಿಗೆ ಮುಂದಾಗಿದ್ದಾರೆ. ಇದು ವಿರೋಧ ಪಕ್ಷಗಳ ಒಗ್ಗಟ್ಟಿನ ಮೊದಲ ಯಶಸ್ಸು' ಎಂದರು. 'ಪ್ರಜಾಪ್ರಭುತ್ವದ ರಕ್ಷಣೆ, ಸಾಂವಿಧಾನಿಕ ಹಕ್ಕುಗಳು ಹಾಗೂ ಸ್ವಾಯತ್ತ ಸಂಸ್ಥೆಗಳ ರಕ್ಷಣೆಯ ಸದುದ್ದೇಶದಿಂದ ವಿರೋಧ ಪಕ್ಷಗಳು ಒಂದಾಗಿವೆ' ಎಂದು ಹೇಳಿದರು.

5ನೇ ಪುಟ ನೋಡಿ

ಹಳೆ–ಹೊಸ ಮಿತ್ರರೊಂದಿಗೆ ಬಿಜೆಪಿ ಸಭೆ ಇಂದು

ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಎನ್‌ಡಿಎ ಮಿತ್ರಪಕ್ಷಗಳ ಸಭೆಯ ಮುನ್ನಾದಿನವಾದ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ವಿವರ ನೀಡಿದರು ಪಿಟಿಐ ಚಿತ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: 2024ರ ಲೋಕಸಭಾ ಚುನಾವಣೆಯಲ್ಲಿ ಮತ್ತೊಮ್ಮೆ ಗೆದ್ದು ಕೇಂದ್ರದ ಗದ್ದುಗೆ ಏರಲು ರಣನೀತಿ ಹೆಣೆಯಲು ಹಾಗೂ ಸೀಟು ಹಂಚಿಕೆಯ ಕೊಡುಕೊಳ್ಳುವಿಕೆಯ ಪ್ರಾಥಮಿಕ ಹಂತದ ಮಾತುಕತೆ ನಡೆಸಲು ಎನ್‌ಡಿಎ ಮೈತ್ರಿಕೂಟದ ನಾಯಕರು ನವದೆಹಲಿಯಲ್ಲಿ ಮಂಗಳವಾರ ಸಭೆ ಸೇರಲಿದ್ದಾರೆ.

ಸಂಸತ್ತಿನ ಮುಂಗಾರು ಅಧಿವೇಶನಕ್ಕೆ ಮುಂಚಿತವಾಗಿ ಪ್ರಧಾನಿ ಮೋದಿ ಅಧ್ಯಕ್ಷತೆಯಲ್ಲಿ ನಡೆಯುವ ಈ ಸಭೆಯಲ್ಲಿ ಭಾಗಿಯಾಗುವಂತೆ ಮೈತ್ರಿಕೂಟದ ಹಳೆಯ ಹಾಗೂ ಹೊಸ ಗೆಳೆಯರಿಗೆ ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಆಹ್ವಾನ ನೀಡಿದ್ದಾರೆ. ಬಿಜೆಪಿ ವಿರುದ್ಧ ವಿರೋಧ ಪಕ್ಷಗಳು ಒಗ್ಗಟ್ಟಾಗುತ್ತಿರುವ ಬೆನ್ನಲ್ಲೇ, ಆಡಳಿತಾರೂಢ ಪಕ್ಷವು ಮಿತ್ರರ ಸಭೆ ಸಂಘಟಿಸಿ ಶಕ್ತಿ ಪ್ರದರ್ಶನ ಮಾಡಲು ಮುಂದಾಗಿದೆ.

ದೊಡ್ಡ ರಾಜ್ಯಗಳದ್ದೇ ತಲೆಬಿಸಿ: 2014ರಲ್ಲಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಳಿಕ ಬಿಜೆಪಿ ಮಹಾರಾಷ್ಟ್ರ, ಆಂಧ್ರ ಪ್ರದೇಶ, ಬಿಹಾರ , ಪಂಜಾಬ್ ಸೇರಿ ಹಲವು ರಾಜ್ಯಗಳಲ್ಲಿ ಮಿತ್ರ ಪಕ್ಷಗಳನ್ನು ಕಳೆದುಕೊಂಡಿದೆ. ಕೆಲ ವೊಂದು ಪಕ್ಷಗಳು ಕೆಲವೇ ಸಮಯದಲ್ಲಿ ಬಿಜೆಪಿಯ ಸಖ್ಯ ತ್ಯಜಿಸಿವೆ. ಅಲ್ಪ ಸಮಯದಲ್ಲೇ ಕೂಟಕ್ಕೆ ಮರಳಿವೆ. 2024ರಲ್ಲಿ ಮತ್ತೊಮ್ಮೆ ಭಾರತ ಗೆಲ್ಲಲು ಉತ್ತರ ಪ್ರದೇಶ, ಮಹಾರಾಷ್ಟ್ರ, ಬಿಹಾರ, ಕರ್ನಾಟಕ, ಮಧ್ಯ ಪ್ರದೇಶದಂತಹ ರಾಜ್ಯಗಳಲ್ಲಿ 2019ರ ಸಾಧನೆಯನ್ನು ಬಿಜೆಪಿಯು ಪುನರಾವರ್ತನೆ ಮಾಡಬೇಕಿದೆ.

38 ಪಕ್ಷಗಳು ಭಾಗಿ: ನಡ್ಡಾ

'ಮಂಗಳವಾರ ನಡೆಯುವ ಸಭೆಯಲ್ಲಿ 38 ಪಕ್ಷಗಳ ನಾಯಕರು ಭಾಗವಹಿಸುವುದನ್ನು ಖಚಿತಪಡಿಸಿದ್ದಾರೆ' ಎಂದು ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ವರ್ಷದಿಂದ ವರ್ಷಕ್ಕೆ ಎನ್‌ಡಿಎ ವ್ಯಾಪ್ತಿ ಹಿಗ್ಗುತ್ತಿದೆ. ನರೇಂದ್ರ ಮೋದಿ ಸರ್ಕಾರದ ಯೋಜನೆಗಳು ಮತ್ತು ನೀತಿಗಳ ಸಕಾರಾತ್ಮಕ ಪರಿಣಾಮದಿಂದಾಗಿ ಮೈತ್ರಿಕೂಟಕ್ಕೆ ಹೆಚ್ಚಿನ ಬಲ ಬಂದಿದೆ' ಎಂದರು.

5ನೇ ಪುಟ ನೋಡಿ

ರಾಸುಗಳ ಚಿಕಿತ್ಸೆಗೆ ಬಾರದ ಆಂಬುಲೆನ್ಸ್!

• ಸಿದ್ದು ಆರ್.ಜಿ.ಹಳ್ಳಿ

ಹಾವೇರಿ: ರೈತರ ಮನೆ ಬಾಗಿಲಿಗೆ ತೆರಳಿ, ಪಶುಗಳಿಗೆ ಸಕಾಲದಲ್ಲಿ ತುರ್ತು ಚಿಕಿತ್ಸೆ ಕೊಡಬೇಕು ಎಂಬ ಉದ್ದೇಶದಿಂದ ಜಾರಿಗೊಂಡ ಕೇಂದ್ರ ಸರ್ಕಾರದ 'ಪಶು ಸಂಜೀವಿನಿ' ಯೋಜನೆಯ ಹೊಸ ಆಂಬುಲೆನ್ಸ್‌ಗಳು ಒಂದು ವರ್ಷದಿಂದಲೂ ಸಂಚರಿಸದೆ ನಿಂತಲ್ಲೇ ನಿಂತು ಹಾಳಾಗುತ್ತಿವೆ. ಸಕಾಲದಲ್ಲಿ ಚಿಕಿತ್ಸೆ ಕೊಡಿಸಲು ಆಗದೆ ರಾಸುಗಳನ್ನು ಕಳೆದುಕೊಂಡ ರೈತರು ಕಣ್ಣೀರು ಸುರಿಸುತ್ತಿದ್ದಾರೆ.

ಈ ಪಶುಚಿಕಿತ್ಸಾ ಆಂಬುಲೆನ್ಸ್‌ನಲ್ಲಿ ಆಧುನಿಕ ಶಸ್ತ್ರಚಿಕಿತ್ಸಾ ಘಟಕ, ಪ್ರಯೋಗಶಾಲೆ ಮತ್ತು ಸ್ಕ್ಯಾನಿಂಗ್ ಉಪಕರಣಗಳನ್ನು ಅಳವಡಿಸಲಾಗಿದೆ. 'ಆಧುನಿಕವಾಗಿದ್ದರೂ ಆಂಬುಲೆನ್ಸ್ ಬಳಕೆಯಾಗದೇ ಲಕ್ಷಾಂತರ ರೂಪಾಯಿ ಮೌಲ್ಯದ ಯಂತ್ರೋಪಕರಣಗಳು ದೂಳು ಹಿಡಿದಿವೆ. ಇದರಿಂದ ಸಾರ್ವಜನಿಕರ ತೆರಿಗೆ ಹಣ ಪೋಲಾಗಿದೆ' ಎಂದು ರೈತ ರವೀಂದ್ರಗೌಡ ಪಾಟೀಲ ದೂರಿದರು.

₹44 ಕೋಟಿ ಅನುದಾನ: ಕೇಂದ್ರ ಸರ್ಕಾರದಿಂದ ₹44 ಕೋಟಿ ಅನುದಾನದಲ್ಲಿ ರಾಜ್ಯಕ್ಕೆ ಒಟ್ಟು 290 ಪಶು ಸಂಜೀವಿನಿ ಆಂಬುಲೆನ್ಸ್‌ಗಳು ಮಂಜೂರಾಗಿದ್ದವು. 2022ರ ಜುಲೈನಲ್ಲಿ ರಾಜ್ಯ ಸರ್ಕಾರ ಪ್ರತಿ ತಾಲ್ಲೂಕಿಗೆ ಒಂದು ಆಂಬುಲೆನ್ಸ್ ಸೌಲಭ್ಯ ನೀಡಿತ್ತು. ಆಂಬುಲೆನ್ಸ್‌ಗಳು ಪಶು ಆಸ್ಪತ್ರೆ ಅಂಗಳಕ್ಕೆ ಬಂದರೂ, ಚಾಲನೆ ಮಾಡಲು ಅಗತ್ಯ ಸಿಬ್ಬಂದಿಯಿಲ್ಲದೇ ಮೂಲೆ ಸೇರಿವೆ.

ರಾಜ್ಯದಲ್ಲಿ 2.90 ಕೋಟಿ ಜಾನುವಾರುಗಳಿದ್ದು, ರೈತರು 1962 ಸಂಖ್ಯೆಗೆ ಕರೆ ಮಾಡಿದರೆ ಆಂಬುಲೆನ್ಸ್ ಹಾಗೂ ವೈದ್ಯರು ಸ್ಥಳಕ್ಕೆ ಬರುವ ಯೋಜನೆ ಇದಾಗಿದೆ. ಸಿಬ್ಬಂದಿ ವೇತನ, ವಾಹನಗಳ ನಿರ್ವಹಣಾ ವೆಚ್ಚ ಸೇರಿ ಪ್ರತಿ ವಾಹನಕ್ಕೆ ತಿಂಗಳಿಗೆ ₹1.56 ಲಕ್ಷ ಅನುದಾನ ನಿಗದಿಪಡಿಸಲಾಗಿದೆ. ಇದಕ್ಕೆ ಕೇಂದ್ರ ಸರ್ಕಾರದ ಶೇ 60 ಮತ್ತು ರಾಜ್ಯ ಸರ್ಕಾರದ ಶೇ 40 ಅನುದಾನವನ್ನು ಬಳಕೆ ಮಾಡಿಕೊಳ್ಳಲು ನಿರ್ಧರಿಸಲಾಗಿದೆ.

ಬೆಳಗಾವಿ ವಿಭಾಗದ 7 ಜಿಲ್ಲೆಗಳ ಆಂಬುಲೆನ್ಸ್ ವಿವರ

ಜಿಲ್ಲೆ	ಆಂಬುಲೆನ್ಸ್‌ಗಳ ಸಂಖ್ಯೆ
ಬೆಳಗಾವಿ	17
ಹಾವೇರಿ	9
ಗದಗ	8
ಧಾರವಾಡ	8
ಬಾಗಲಕೋಟೆ	13
ವಿಜಯಪುರ	14
ಉತ್ತರ ಕನ್ನಡ ಜಿಲ್ಲೆ	13

ದನ–ಕರುಗಳು ಕಾಯಿಲೆಬಿದ್ದರೆ, ರೈತರು ಅಂದಿನ ದುಡಿಮೆ ಬಿಟ್ಟು ದೂರದ ಪಶು ಆಸ್ಪತ್ರೆಗಳಿಗೆ ಕರೆದೊಯ್ಯಬೇಕು. ಚಿಕಿತ್ಸೆ ಕೊಡಬೇಕಾದ ಆಂಬುಲೆನ್ಸ್‌ಗಳೇ ರೋಗಪೀಡಿತವಾಗಿವೆ

ಹರ್ಷವರ್ಧನ ಹಿರೇಗೌಡರ್, ಪಶು ಸಂಗೋಪಕ, ರಾಣೆಬೆನ್ನೂರು

ಏಪ್ರಿಲ್‌ನಲ್ಲೇ ಟೆಂಡರ್ ಪಡೆದ ಖಾಸಗಿ ಕಂಪನಿಗೆ ಜಿಲ್ಲೆಯ 9 ಆಂಬುಲೆನ್ಸ್‌ಗಳನ್ನು ಹಸ್ತಾಂತರ ಮಾಡಿದ್ದೇವೆ. ಕಾರಣಾಂತರದಿಂದ ಕಾರ್ಯಾಚರಣೆ ಆರಂಭಿಸಿಲ್ಲ

ಡಾ.ಎಸ್.ವಿ ಸಂತಿ, ಉಪನಿರ್ದೇಶಕ, ಪಶುಪಾಲನಾ ಇಲಾಖೆ, ಹಾವೇರಿ

5ನೇ ಪುಟ ನೋಡಿ

ಚಿನಕುರಳಿ
ಪ್ರಕಾಶ್ ಶೆಟ್ಟಿ

ಸೆನ್ಸೆಕ್ಸ್, ನಿಫ್ಟಿ ಸಾರ್ವಕಾಲಿಕ ದಾಖಲೆ 08

ದಾಖಲೆ ಒದಗಿಸದ ಆರೋಗ್ಯ ಇಲಾಖೆ

ಕೋವಿಡ್ ಭ್ರಷ್ಟಾಚಾರ ಉನ್ನತ ತನಿಖೆಗೆ ಶಿಫಾರಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ನಿಯಂತ್ರಣದ ಹೆಸರಿನಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ನಡೆದಿರುವ ಭ್ರಷ್ಟಾಚಾರ, ದುರಾಡಳಿತ ಮತ್ತು ಅಕ್ರಮಗಳ ಕುರಿತು ಪ್ರತಿಷ್ಠಿತ ಸ್ವಾಯತ್ತ ತನಿಖಾ ಸಂಸ್ಥೆಯಿಂದ ತನಿಖೆ ನಡೆಸುವಂತೆ ವಿಧಾನಮಂಡಲದ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ (ಪಿಎಸಿ) ಶಿಫಾರಸು ಮಾಡಿದೆ.

2020–21ನೇ ಸಾಲಿನಲ್ಲಿ ಪಿಎಸಿ ಅಧ್ಯಕ್ಷರಾಗಿದ್ದ ಈಗಿನ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ನೇತೃತ್ವದಲ್ಲಿ ಅನುಮೋದಿಸಿದ್ದ ವರದಿಯನ್ನು ಸೋಮವಾರ ವಿಧಾನಸಭೆಯಲ್ಲಿ ಮಂಡಿಸಲಾಯಿತು. ಔಷಧ, ವೈದ್ಯಕೀಯ ಸಾಧನಗಳ ಖರೀದಿ, ಬಳಕೆ, ಕೋವಿಡ್ ಸೋಂಕಿತರಿಗೆ ಆಸ್ಪತ್ರೆಗಳಲ್ಲಿ ಹಾಸಿಗೆ ಹಂಚಿಕೆ, ಖಾಸಗಿ ಆಸ್ಪತ್ರೆಗಳಿಗೆ ಚಿಕಿತ್ಸಾ ಶುಲ್ಕ ಪಾವತಿ ಸೇರಿದಂತೆ ಕೋವಿಡ್ ನಿಯಂತ್ರಣಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಆರೋಗ್ಯ ಇಲಾಖೆಯು ಸಮಿತಿಯೊಂದಿಗೆ ಹಂಚಿಕೊಂಡಿಲ್ಲ ಎಂದು ಪಿಎಸಿ ದೂರಿದೆ.

'ಕೋವಿಡ್ ನಿಯಂತ್ರಣದಲ್ಲಿ ರಾಜ್ಯ ಸರ್ಕಾರವು ವಿಫಲವಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ' ಎಂದು ಸಾರ್ವಜನಿಕ ಲೆಕ್ಕಪತ್ರ ಸಮಿತಿ ಹೇಳಿದೆ. ಸಮಿತಿಯ ಹಿಂದಿನ ಅಧ್ಯಕ್ಷರಾಗಿದ್ದ ಎಚ್.ಕೆ. ಪಾಟೀಲ ನೇತೃತ್ವದಲ್ಲಿ ಸಲ್ಲಿಸಿದ್ದ ವರದಿಯನ್ನು ಹಿಂದಿನ ಸಭಾಧ್ಯಕ್ಷರು ಅನುಮೋದಿಸಿರಲಿಲ್ಲ ಎಂಬ ಉಲ್ಲೇಖವೂ ವರದಿಯುಲ್ಲಿದೆ.

ಕೋವಿಡ್ ನಿಯಂತ್ರಣದ ಭಾಗವಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆಗಳಲ್ಲಿ ಔಷಧಿ, ವೈದ್ಯಕೀಯ ಉಪಕರಣ ಖರೀದಿಸಿರುವ ಕುರಿತು ಮಹಾಲೇಖಪಾಲರಿಂದ 'ವಿಶೇಷ ಲೆಕ್ಕಪರಿಶೋಧನೆ' ನಡೆಸಲು ನಿರ್ಧರಿಸಲಾಗಿತ್ತು. ಈ ಸಂಬಂಧ ಮಹಾಲೇಖಪಾಲರಿಗೆ ಸಮಿತಿಯು ಪತ್ರವನ್ನೂ ಬರೆದಿತ್ತು. ಆದರೆ, ಆರೋಗ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ವ್ಯತಿರಿಕ್ತ ಸ್ಪಷ್ಟನೆ ನೀಡಿದ್ದರು. ಇದರಿಂದ ವಿಶೇಷ ಲೆಕ್ಕಪರಿಶೋಧನೆ ಪ್ರಸ್ತಾವವನ್ನು ಮಹಾಲೇಖಪಾಲರು ಕೈಬಿಟ್ಟಿದ್ದರು ಎಂದು ವರದಿ ಹೇಳಿದೆ.

'ಮರಣ ಪ್ರಮಾಣ: ತಪ್ಪು ಮಾಹಿತಿ'

'2021ರ ಜನವರಿಯಿಂದ ಜುಲೈವರೆಗಿನ ಅವಧಿಯಲ್ಲಿ ಆರೋಗ್ಯ ಇಲಾಖೆಯು ಕೋವಿಡ್‌ನಿಂದ ಸಂಭವಿಸಿದ ಸಾವಿನ ಲೆಕ್ಕವನ್ನು ಮುಚ್ಚಿಟ್ಟಿತ್ತು. ಈ ಕುರಿತು ಸಮಿತಿಗೂ ತಪ್ಪು ಮಾಹಿತಿ ನೀಡಿತ್ತು' ಎಂದು ಸಮಿತಿ ದೂರಿದೆ.

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಹಾಗೂ ಆರೋಗ್ಯ ಇಲಾಖೆಯ ಅಂಕಿಅಂಶಗಳ ಮಧ್ಯೆ ಬೃಹತ್ ವ್ಯತ್ಯಾಸವಿದೆ. ಆರೋಗ್ಯ ಇಲಾಖೆಯು 1.20 ಲಕ್ಷದಷ್ಟು ಸಾವಿನ ಸಂಖ್ಯೆಯನ್ನು ಕಡಿಮೆ ತೋರಿಸಿದೆ. ಇದರಿಂದ ಇಷ್ಟೊಂದು ದೊಡ್ಡ ಸಂಖ್ಯೆಯ ಕುಟುಂಬಗಳನ್ನು ಕೋವಿಡ್ ಸಾವಿನ ಪರಿಹಾರ ಪಡೆಯುವುದರಿಂದ ವಂಚಿತರನ್ನಾಗಿ ಮಾಡಲಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದೆ. ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ಆಮ್ಲಜನಕ ಕೊರತೆಯಿಂದ ಹಲವರು ಮೃತಪಟ್ಟ ದುರ್ಘಟನೆ ಕುರಿತ ನ್ಯಾಯಾಂಗ ತನಿಖೆಯ ವರದಿಯನ್ನು ಸಮಿತಿಯ ಮುಂದೆ ಮಂಡಿಸುವಂತೆಯೂ ವರದಿಯಲ್ಲಿ ಸೂಚಿಸಲಾಗಿದೆ.

ಕಂಪನಿಯ ಸಿಇಒ ಭೇಟಿ ಬಳಿಕ ಸಿದ್ದರಾಮಯ್ಯ ಹೇಳಿಕೆ

'ತುಮಕೂರಿನಲ್ಲಿ ಫಾಕ್ಸ್‌ಕಾನ್ ಘಟಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವನಹಳ್ಳಿಯ ಐಟಿಐಆರ್ ವಲಯದಲ್ಲಿ ಐಫೋನ್ ತಯಾರಿಕಾ ಘಟಕಕ್ಕೆ ಪೂರಕವಾಗಿ ತುಮಕೂರಿನಲ್ಲಿ ಮತ್ತೊಂದು ಘಟಕವನ್ನು ಸ್ಥಾಪಿಸಲು ಫಾಕ್ಸ್‌ಕಾನ್ ಕಂಪನಿ ಮುಂದೆ ಬಂದಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸೋಮವಾರ ಭೇಟಿ ಮಾಡಿದ ಫಾಕ್ಸ್‌ಕಾನ್ ಸಿಇಒ ಬ್ರ್ಯಾಂಡ್ ಚೆಂಗ್ ನೇತೃತ್ವದ ಫಾಕ್ಸ್‌ಕಾನ್ ಕಂಪನಿಯ ಅಂಗಸಂಸ್ಥೆ ಫಾಕ್ಸ್‌ಕಾನ್ ಇಂಡಸ್ಟ್ರಿಯಲ್ ಇಂಟರ್ನೆಟ್ (ಎಫ್‌ಐಐ) ನಿಯೋಗವು ಈ ಕುರಿತು ಸಮಾಲೋಚನೆ ನಡೆಸಿತು. ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ, ಐಟಿ–ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಸಭೆಯಲ್ಲಿದ್ದರು.

ಸಭೆಯಲ್ಲಿ ಮಾತನಾಡಿದ ಸಿದ್ದರಾಮಯ್ಯ, ಐಫೋನ್ ತಯಾರಿಕಾ ಘಟಕಕ್ಕೆ ಪೂರಕವಾಗಿ ಮತ್ತೊಂದು ಘಟಕವನ್ನು ಸ್ಥಾಪಿಸಲು ಫಾಕ್ಸ್‌ಕಾನ್ ಮುಂದೆ ಬಂದಿರುವುದು ಒಳ್ಳೆಯ ಬೆಳವಣಿಗೆ. ಎಫ್‌ಐಐ ಘಟಕ ಸ್ಥಾಪಿಸಲಿದ್ದು, ಎಲ್ಲ ರೀತಿಯ ನೆರವನ್ನು ನೀಡಲಾಗುವುದು ಎಂದು ಹೇಳಿದರು.

ಸಚಿವ ಎಂ.ಬಿ.ಪಾಟೀಲ ಮಾತನಾಡಿ, ನಮ್ಮ ರಾಜ್ಯದಲ್ಲಿ ಫಾಕ್ಸ್‌ಕಾನ್ ಕಂಪನಿಯು ಸೆಮಿ ಕಂಡಕ್ಟರ್ ಸೇರಿದಂತೆ ಬೇರೆ ಯಾವುದೇ ಉದ್ದಿಮೆಯನ್ನು ಸ್ಥಾಪಿಸಲು ಬಯಸಿದರೆ ಅಗತ್ಯದ ಎಲ್ಲ ನೆರವನ್ನೂ ಒದಗಿಸುವ ಭರವಸೆ ನೀಡಿದರು.

ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ, ಮುಖ್ಯಮಂತ್ರಿಯವರ ಹೆಚ್ಚುವರಿ ಮುಖ್ಯಕಾರ್ಯದರ್ಶಿ ರಜನೀಶ್ ಗೋಯಲ್, ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಆಯುಕ್ತೆ ಗುಂಜನ್ ಕೃಷ್ಣ, ಎಫ್‌ಐಐ ಪ್ರಧಾನ ವ್ಯವಸ್ಥಾಪಕರುಗಳಾದ ಮೈಕೇಲ್ ಲಿಂಗ್, ಜೇಸನ್ ಲಾವು, ಆಂಜಿ ಲಿನ್, ನಿರ್ದೇಶಕರಾದ ಸೆಂಥಿಲ್ ಕುಮಾರ, ಭರತ್ ದಂಡಿ ಸಭೆಯಲ್ಲಿ ಉಪಸ್ಥಿತರಿದ್ದರು.

ತುಮಕೂರಿಗೆ ಭೇಟಿ ನೀಡಿದ ಐಫ್‌ಐಎ ನಿಯೋಗದ ಪ್ರತಿನಿಧಿಗಳು ಜಪಾನ್ ಇಂಡಸ್ಟ್ರಿಯಲ್ ಟೌನ್‌ಶಿಪ್‌ನಲ್ಲಿ ಜಮೀನನ್ನು ವೀಕ್ಷಣೆ ಮಾಡಿದರು.

ತುಮಕೂರಿನ ಘಟಕ

- ₹8,800 ಕೋಟಿ ಹೂಡಿಕೆ ಉದ್ದೇಶ
- 14,000 ಉದ್ಯೋಗ ಸೃಷ್ಟಿ ಗುರಿ
- 100 ಎಕರೆ ಘಟಕ ಸ್ಥಾಪನೆಗೆ ಬೇಕಾದ ಜಮೀನು

ತಯಾರಿಕೆ ಏನು?
ತುಮಕೂರಿನ ಘಟಕದಲ್ಲಿ ಫೋನ್ ಪರದೆ, ಹೊರ ಕವಚ ಹಾಗೂ ಇತರ ಬಿಡಿಭಾಗಗಳು ತಯಾರಾಗಲಿವೆ. ದೇವನಹಳ್ಳಿ ಬಳಿಯ ಉದ್ದೇಶಿತ ಐಫೋನ್ ತಯಾರಿಕಾ ಘಟಕವು 'ಎಂಡ್ ಅಸೆಂಬ್ಲಿ' ಘಟಕವಾಗಿದ್ದರೆ, ತುಮಕೂರಿನ ಘಟಕವು ಅದಕ್ಕೆ ಪೂರಕ ಘಟಕವಾಗಿರಲಿದೆ.

ಬಿಬಿಎಂಪಿ: ಇಬ್ಬರು ಜಂಟಿ ಆಯುಕ್ತರ ವರ್ಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ರಾಜ ರಾಜೇಶ್ವರಿನಗರ ಹಾಗೂ ಬೊಮ್ಮನಹಳ್ಳಿ ವಲಯದ ಜಂಟಿ ಆಯುಕ್ತರನ್ನು ವರ್ಗಾಯಿಸಿ ಸರ್ಕಾರ ಆದೇಶ ಹೊರಡಿಸಿದೆ.

ರಾಜರಾಜೇಶ್ವರಿ ನಗರ ವಲಯ ಜಂಟಿ ಆಯುಕ್ತರಾಗಿ ಸ್ಥಳ ನಿರೀಕ್ಷೆಯಲ್ಲಿದ್ದ ಅಜಿತ್ ಎಂ. ಅವರನ್ನು ನಿಯೋಜಿಸಲಾಗಿದೆ. ವರ್ಗವಾಗಿರುವ ಜಂಟಿ ಆಯುಕ್ತ ಎಸ್. ನಾಗರಾಜ್ ಅವರಿಗೆ ಸ್ಥಳ ತೋರಿಸಿಲ್ಲ.

ಬೊಮ್ಮನಹಳ್ಳಿ ವಲಯ ಜಂಟಿ ಆಯುಕ್ತರಾಗಿ ಹೈಕೋರ್ಟ್ ಅಡ್ವೊಕೇಟ್ ಜನರಲ್ ಕಚೇರಿಯಲ್ಲಿ ಆಡಳಿತಾಧಿಕಾರಿಯಾಗಿರುವ ಅಭಿಜಿನ್ ಬಿ ಅವರನ್ನು ವರ್ಗಾಯಿಸಲಾಗಿದೆ. ಇಲ್ಲಿನ ಜಂಟಿ ಆಯುಕ್ತ ಕೃಷ್ಣಮೂರ್ತಿ ಅವರಿಗೂ ಸ್ಥಳ ತೋರಿಸಿಲ್ಲ.

ಒಎಫ್‌ಸಿಗಾಗಿ ರಸ್ತೆ ಅಗೆತ: ಕ್ರಿಮಿನಲ್ ಪ್ರಕರಣಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂರು ತಿಂಗಳ ಹಿಂದೆ ಡಾಂಬರು ಹಾಕಿದ್ದ ರಸ್ತೆಗಳನ್ನು ಅಗೆದಿರುವ ಒಎಫ್‌ಸಿ ಸಂಸ್ಥೆಗಳು ಹಾಗೂ ಗುತ್ತಿಗೆದಾರರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದ್ದಾರೆ.

ವಿವಿ ಪುರ, ಸುಂಕೇನಹಳ್ಳಿ, ಜಯನಗರ ಹಾಗೂ ಹೊಂಬೇಗೌಡನಗರ ವಾರ್ಡ್‌ಗಳಲ್ಲಿ ಆರ್‌ಜೆಐಎಲ್, ಏರ್‌ಟೆಲ್ ಸೇರಿದಂತೆ ಮೂರ್ನಾಲ್ಕು ಸಂಸ್ಥೆಗಳು ರಸ್ತೆಗಳನ್ನು ಅಗೆದಿವೆ ಎಂದು ಬೆಂಗಳೂರು ದಕ್ಷಿಣ ಜಿಲ್ಲಾ ಬಿಜೆಪಿ ಘಟಕದ ಅಧ್ಯಕ್ಷ ರಮೇಶ್ ಎನ್. ಆರ್ ಅವರು ಸೋಮವಾರ ತುಷಾರ್ ಗಿರಿನಾಥ್ ಅವರಿಗೆ ದೂರು ನೀಡಿದ್ದರು. ಇದರಂತೆ ಕ್ರಮ ಕೈಗೊಳ್ಳುವಂತೆ ವಲಯ ಆಯುಕ್ತರು ಹಾಗೂ ಮುಖ್ಯ ಎಂಜಿನಿಯರ್‌ಗೆ ಅವರು ಆದೇಶಿಸಿದ್ದಾರೆ.

ಗ್ರಾಮೀಣ ಸಂಸ್ಥೆಗಳಿಗೆ ನಬಾರ್ಡ್‌ನಿಂದ ₹ 24,603 ಕೋಟಿ ಮರು ಹಣಕಾಸು ನೆರವು

₹3.5 ಲಕ್ಷ ಕೋಟಿ ಸಾಲ ವಿತರಣೆ ಗುರಿ

ಪ್ರಜಾವಾಣಿ ವಾರ್ತೆ

ಬೆಂಗಳೂರಿನಲ್ಲಿ ಸೋಮವಾರ ನಡೆದ ನಬಾರ್ಡ್‌ನ 42ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ದುರ್ಗದ ಸಿರಿಧಾನ್ಯ ರೈತ ಉತ್ಪಾದಕ ಸಂಸ್ಥೆ, ಕೊಪ್ಪಳದ 'ಸಿರಿ', ಹಾವೇರಿ 'ಭೂಸಿರಿ' ಸಂಸ್ಥೆಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಬೆಂಗಳೂರು ಕೃಷಿ ವಿವಿ ಕುಲಪತಿ ಎಸ್‌.ವಿ.ಸುರೇಶ್, ನಬಾರ್ಡ್‌ನ ಮುಖ್ಯ ಪ್ರಧಾನ ವ್ಯವಸ್ಥಾಪಕ ಟಿ.ರಮೇಶ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಇ.ವಿ.ರಮಣರೆಡ್ಡಿ, ಆರ್‌ಬಿಐನ ಮುಖ್ಯ ಪ್ರಧಾನ ವ್ಯವಸ್ಥಾಪಕ ಪಿ.ಎನ್‌.ರಘುನಾಥ್, ಕೆನರಾ ಬ್ಯಾಂಕ್‌ನ ಜಿಎಂ ಮುರಳಿ ಕೃಷ್ಣ ಇದ್ದರು – ಪ್ರಜಾವಾಣಿ ಚಿತ್ರ

ಬೆಂಗಳೂರು: 'ಈ ಸಾಲಿಗೆ ₹ 3.5 ಲಕ್ಷ ಕೋಟಿ ಕೃಷಿ ಸಾಲ ವಿತರಣೆಯ ಗುರಿ ಹೊಂದಲಾಗಿದೆ' ಎಂದು ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ.ಇ.ವಿ.ರಮಣ ರೆಡ್ಡಿ ಅವರು ಹೇಳಿದರು.

ನಗರದಲ್ಲಿ ಸೋಮವಾರ ನಡೆದ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ರಾಷ್ಟ್ರೀಯ ಬ್ಯಾಂಕ್‌ನ (ನಬಾರ್ಡ್) 42ನೇ ಸಂಸ್ಥಾಪನಾ ದಿನಾಚರಣೆ ಮತ್ತು ರೈತ ಉತ್ಪಾದಕ ಸಂಸ್ಥೆ ಹಾಗೂ ರಾಗಿ ಬೆಳೆ ಉತ್ಪಾದಕ ಸಂಸ್ಥೆಗಳಿಗೆ ಸನ್ಮಾನ ಸಮಾರಂಭದಲ್ಲಿ ಅವರು ಮಾತನಾಡಿದರು.

'ರಾಜ್ಯ ಸರ್ಕಾರ ಶೂನ್ಯ ಬಡ್ಡಿ ದರದಲ್ಲಿ ಅಲ್ಪಾವಧಿ ಸಾಲ ವಿತರಿಸುತ್ತಿದೆ. ಸಾಲದ ವಿತರಣೆ ಮೊತ್ತವನ್ನು ಈ ಬಾರಿ ಬಜೆಟ್‌ನಲ್ಲಿ ₹ 3 ಲಕ್ಷದಿಂದ ₹ 5 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಗ್ರಾಮೀಣ ಹಣಕಾಸು ಸಂಸ್ಥೆಗಳ ಬಲವರ್ಧನೆಗೆ ನಬಾರ್ಡ್ ನೆರವಾಗುತ್ತಿದೆ' ಎಂದು ಹೇಳಿದರು.

'ನಬಾರ್ಡ್' ನೆರವಿನಿಂದ ರಾಜ್ಯದಲ್ಲಿ ಹೆಚ್ಚುವರಿಯಾಗಿ 4 ಲಕ್ಷ ಹೆಕ್ಟೇರ್‌ಗೆ ನೀರಾವರಿ ಸೌಲಭ್ಯ, 44 ಸಾವಿರ ಕಿ.ಮೀಗೂ ಹೆಚ್ಚು ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಮಾಡಲಾಗಿದೆ. ಜತೆಗೆ, ಮಾರುಕಟ್ಟೆ, ಗೋದಾಮು ನಿರ್ಮಾಣ, ಕೃಷಿ ಉಪ ಕಸುಬುಗಳಿಗೆ ನೆರವು ನೀಡುತ್ತಿರುವುದು ಶ್ಲಾಘನೀಯ ಕೆಲಸ' ಎಂದು ಹೇಳಿದರು.

ನಬಾರ್ಡ್‌ನ ಮುಖ್ಯ ಪ್ರಧಾನ ವ್ಯವಸ್ಥಾಪಕ ಟಿ.ರಮೇಶ್ ಮಾತನಾಡಿ, '1982ರಲ್ಲಿ ನಬಾರ್ಡ್ ಬಜೆಟ್ ಗಾತ್ರವು ₹ 4,519 ಕೋಟಿ ಇತ್ತು. ಈಗ ₹ 8 ಲಕ್ಷ ಕೋಟಿಗೆ ಏರಿಕೆಯಾಗಿದೆ. ಪ್ರಸಕ್ತ ಸಾಲಿನಲ್ಲಿ ಗ್ರಾಮೀಣ ಹಣಕಾಸು ಸಂಸ್ಥೆಗಳಿಗೆ ನಬಾರ್ಡ್ ₹ 24,603 ಕೋಟಿ ಮರು ಹಣಕಾಸು ನೆರವು ಕಲ್ಪಿಸಿದ್ದು ಇದು ದಾಖಲೆಯಾಗಿದೆ' ಎಂದು ಬಣ್ಣಿಸಿದರು.

ಮೂರು ವರ್ಷಗಳಲ್ಲಿ 35 ಸಾವಿರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳನ್ನು ಬಹು ಸೇವಾ ಕೇಂದ್ರಗಳನ್ನಾಗಿ ಪರಿವರ್ತಿಸಲಾಗಿದೆ. 5,491 ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಗಣಕೀಕರಣ ಮಾಡಲು ಗುರುತಿಸಲಾಗಿದೆ ಎಂದು ವಿವರಿಸಿದರು.

ಆರ್‌ಬಿಐ ಮುಖ್ಯ ಪ್ರಧಾನ ವ್ಯವಸ್ಥಾಪಕ ಪಿ.ಎನ್. ರಘುನಾಥ್, ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್.ವಿ.ಸುರೇಶ್, ಕೆನರಾ ಬ್ಯಾಂಕ್‌ನ ಜನರಲ್ ಮ್ಯಾನೇಜರ್ ಎ. ಮುರಳಿ ಕೃಷ್ಣ ಇದ್ದರು.

ಸಂಸ್ಥಾಪನಾ ದಿನಾಚರಣೆಯಲ್ಲಿ ಚಿತ್ರದುರ್ಗ ಜಿಲ್ಲೆಯ ದುರ್ಗ ಸಿರಿಧಾನ್ಯ ಉತ್ಪಾದಕ ಸಂಸ್ಥೆ, ಕೊಪ್ಪಳದ ಸಿರಿ, ಹಾವೇರಿಯ ಭೂಸಿರಿ, ಉತ್ತರ ಕನ್ನಡದ ಪ್ರಗತಿ ಮಿತ್ರ, ಚಿಕ್ಕಬಳ್ಳಾಪುರದ ಯಲ್ಲಂಪಳ್ಳಿ ರೈತ ಉತ್ಪಾದಕ ಸಂಸ್ಥೆಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

38 ರೈತ ಉತ್ಪಾದನಾ ಸಂಸ್ಥೆ ಸ್ಥಾಪನೆ

ಇದು ಅಂತರರಾಷ್ಟ್ರೀಯ ಸಿರಿಧಾನ್ಯ ವರ್ಷವಾಗಿದೆ. ಈ ಬಾರಿ ಸಿರಿಧಾನ್ಯ ಬೆಳೆಯಲು ನಬಾರ್ಡ್ ಹೆಚ್ಚಿನ ಒತ್ತು ನೀಡುತ್ತಿದೆ. ಸಿರಿ ಧಾನ್ಯವನ್ನು ಮುಖ್ಯ ಆಹಾರವಾಗಿಸುವ ಪ್ರಯತ್ನಗಳು ನಡೆಯುತ್ತಿವೆ. ನಬಾರ್ಡ್ ಕೆಲವು ಕ್ರಮ ಸಹ ಕೈಗೊಂಡಿದೆ. ಇದಕ್ಕಾಗಿ 38 ರೈತ ಉತ್ಪಾದನಾ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ ಎಂದು ರಮಣ ರೆಡ್ಡಿ ಹೇಳಿದರು.

ಸಮುದಾಯದ ಮುಖಂಡ, ಮಾಜಿ ಸಚಿವ ಎಂ.ಆರ್‌.ಸೀತಾರಾಂ ಒತ್ತಾಯ

ಬಲಿಜರಿಗೆ ಉದ್ಯೋಗದಲ್ಲೂ ಮೀಸಲಾತಿ ಕೊಡಿ

ಪ್ರಜಾವಾಣಿ ವಾರ್ತೆ

ತುಮಕೂರು: ಬಲಿಜ ಸಮುದಾಯದ ಶಿಕ್ಷಣ ಮೀಸಲಾತಿಯನ್ನು ರಾಜಕೀಯ ಮತ್ತು ಉದ್ಯೋಗಕ್ಕೂ ವಿಸ್ತರಿಸುವಂತೆ ಸಮುದಾಯದ ಮುಖಂಡ, ಮಾಜಿ ಸಚಿವ ಎಂ.ಆರ್.ಸೀತಾರಾಂ ಒತ್ತಾಯಿಸಿದರು.

ನಗರದಲ್ಲಿ ಭಾನುವಾರ ಜಿಲ್ಲಾ ಬಲಿಜ ಸಂಘ, ಯೋಗಿನಾರಾಯಣ ಸೇವಾ ಸಮಿತಿ ಆಯೋಜಿಸಿದ್ದ ಯೋಗಿನಾರೇಯಣ ಯತೀಂದ್ರರ ಜೀವ ಸಮಾಧಿ ಮಹೋತ್ಸವ ಹಾಗೂ ವಿದ್ಯಾರ್ಥಿ ನಿಲಯದ ಉದ್ಘಾಟನೆ, ಪ್ರತಿಭಾ ಪುರಸ್ಕಾರ ವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಶಿಕ್ಷಣದಲ್ಲಿ ಬಲಿಜ ಸಮಾಜಕ್ಕೆ ದೊರೆತಿರುವ 2ಎ ಮೀಸಲಾತಿಯನ್ನು ಉದ್ಯೋಗ ಮತ್ತು ರಾಜಕೀಯಕ್ಕೂ

ತುಮಕೂರಿನಲ್ಲಿ ಭಾನುವಾರ ಜಿಲ್ಲಾ ಬಲಿಜ ಸಂಘ ಆಯೋಜಿಸಿದ್ದ ಯೋಗಿನಾರೇಯಣ ಯತೀಂದ್ರರ ಜೀವ ಸಮಾಧಿ ಮಹೋತ್ಸವ ಮತ್ತು ಬಲಿಜ ವಿದ್ಯಾರ್ಥಿನಿಯರ ಹೊಸ ಹಾಸ್ಟೆಲ್ ಉದ್ಘಾಟನಾ ಕಾರ್ಯಕ್ರಮದಲ್ಲಿ ಸಮುದಾಯದ ಹಿರಿಯರನ್ನು ಗೌರವಿಸಲಾಯಿತು. ಮಾಜಿ ಸಚಿವ ಎಂ.ಆರ್‌.ಸೀತಾರಾಂ, ನಟಿ ತಾರಾ ಅನುರಾಧ, ಮುಖಂಡರಾದ ಟಿ.ಆರ್‌.ಅಂಜನಪ್ಪ, ಎನ್‌.ಗೋವಿಂದರಾಜು, ಎಚ್‌.ಎ.ವೆಂಕಟೇಶ್, ಎಸ್‌.ಪಿ.ಚಿದಾನಂದ್, ಸಿ.ಮುನಿರಾಜು, ಚಿಕ್ಕನರಸಿಂಹಯ್ಯ ಇತರರು ಇದ್ದರು.

ವಿಸ್ತರಿಸಬೇಕು. ಸರ್ಕಾರದ ಮೇಲೆ ಒತ್ತಡ ತರಲು ಸಮುದಾಯ ಒಗ್ಗೂಡಿ ಹೋರಾಟ ನಡೆಸುವ ಅನಿವಾರ್ಯತೆ ಇದೆ. ಮೀಸಲಾತಿಗೆ ಒಗ್ಗಟ್ಟಿನ ಹೋರಾಟ ಒಂದೇ ಅಸ್ತ್ರ ಎಂದರು.

ಮಹಿಳಾ ಶಿಕ್ಷಣಕ್ಕೆ ಒತ್ತು ನೀಡಬೇಕು ಎಂಬ ಆಶಯ ಈಡೇರಿದೆ. ದಾನಿಗಳ ಸಹಾಯದಿಂದ ವಿದ್ಯಾರ್ಥಿ ನಿಲಯದ ಕಟ್ಟಡ ಸುಸಜ್ಜಿತವಾಗಿ ನಿರ್ಮಾಣ ಮಾಡಿದ್ದಾರೆ. ಸಮುದಾಯದ ಪ್ರತಿಭಾವಂತ, ಬಡ ವಿದ್ಯಾರ್ಥಿನಿಯರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಸಲಹೆ ಮಾಡಿದರು.

ಶಾಸಕ ಜಿ.ಬಿ.ಜ್ಯೋತಿಗಣೇಶ್, ನಟಿ ತಾರಾ ಅನುರಾಧ ಮತ್ತು ಸಮುದಾಯದ ಮುಖಂಡ ಎನ್. ಗೋವಿಂದರಾಜು ಮಾತನಾಡಿದರು. ಹಾಸ್ಟೆಲ್ ನಿರ್ಮಾಣಕ್ಕೆ ಸಹಕರಿಸಿದ ಸಮುದಾಯದ ಹಿರಿಯರು, ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು.

ಬಲಿಜ ವಿದ್ಯಾರ್ಥಿನಿಯರ ಹಾಸ್ಟೆಲ್

ತುಮಕೂರು ಜಿಲ್ಲಾ ಬಲಿಜ ಸಂಘದಿಂದ ನಗರದಲ್ಲಿ ಬಾಲಕಿಯರಿಗಾಗಿ ನೂತನವಾಗಿ ಆರಂಭಿಸಲಾದ ವಸತಿ ನಿಲಯದಲ್ಲಿ ಸಮುದಾಯದ ವಿದ್ಯಾರ್ಥಿನಿಯರಿಗೆ ಮಾತ್ರ ಪ್ರವೇಶ ನೀಡಲಾಗುತ್ತದೆ.

ಜಿಲ್ಲೆಯಷ್ಟೇ ಅಲ್ಲದೆ ಹೊರ ಜಿಲ್ಲೆಯವರಿಗೂ ಪ್ರವೇಶ ನೀಡಲಾಗುತ್ತದೆ. ಎಸ್ಸೆಸ್ಸೆಲ್ಸಿಯಿಂದ ಉನ್ನತ ಶಿಕ್ಷಣ, ಎಂಜಿನಿಯರಿಂಗ್, ವೈದ್ಯಕೀಯ ಸೇರಿದಂತೆ ಎಲ್ಲಾ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಸಮುದಾಯದ ವಿದ್ಯಾರ್ಥಿನಿಯರು ಪ್ರವೇಶ ಪಡೆಯಬಹುದು. ಪ್ರವೇಶ ಹಾಗೂ ಇತರೆ ಮಾಹಿತಿಗೆ ಮೊಬೈಲ್ ಸಂಖ್ಯೆ 9741669937 ಸಂಪರ್ಕಿಸಬಹುದು.

ಸುದ್ದಿ 2 ನಿಮಿಷ

ಆಡಿಯೊ ಸ್ಟೋರಿ ಚಾಲೆಂಜ್

ಬೆಂಗಳೂರು: ಯುವ ಕನ್ನಡಿಗರನ್ನು ಕನ್ನಡ ಓದಿನತ್ತ ಸೆಳೆಯುವ ಉದ್ದೇಶದಿಂದ ಮೈಲ್ಯಾಂಗ್ ಸಂಸ್ಥೆಯು ಆಡಿಯೊ ಸ್ಟೋರಿ ಚಾಲೆಂಜ್ ಆಯೋಜಿಸಿದೆ.

ಮೈಲ್ಯಾಂಗ್ ಆಡಿಯೊ ಅಪ್ಲಿಕೇಷನ್‌ನಲ್ಲಿ ಜುಲೈ 25ರವರೆಗೆ ಈ ಸ್ಪರ್ಧೆ ನಡೆಯಲಿದೆ. ಲೇಖಕರು ತಮ್ಮ ಕಥೆಯನ್ನು ಆ್ಯಪ್‌ನಲ್ಲಿ ಪ್ರಕಟಿಸಿ, ತಾವೇ ವಾಚಿಸಬಹುದು. ಅಲ್ಲದೇ ಗೆಳೆಯರನ್ನೂ ಆಹ್ವಾನಿಸಬಹುದು. ಕಥಾ ವಾಚಕರು ತಮ್ಮ ಇಷ್ಟದ ಕಥೆಯನ್ನು ಆಯ್ದುಕೊಂಡು ವಾಚಿಸಿ, ಪ್ರಕಟಿಸಬಹುದು. ಸ್ಪರ್ಧೆ ಕೊನೆಯಲ್ಲಿ ಯಾವ ಆಡಿಯೊ ಕಥೆಗೆ ಅತೀ ಹೆಚ್ಚು ಪ್ಲೇ ಕೌಂಟ್ ದೊರೆಯುವುದೋ ಅದಕ್ಕೆ ₹ 10ಸಾವಿರ ಬಹುಮಾನ ದೊರೆಯಲಿದೆ. ಕನ್ನಡದ ಕಥೆಗಾರರು, ಕಥಾ ವಾಚಕರು www.mylangaudio.in/kn/challengeನಲ್ಲಿ ಹೆಚ್ಚಿನ ವಿವರ ಪಡೆದುಕೊಳ್ಳಬಹುದು ಎಂದು ಮೈಲ್ಯಾಂಗ್ ಆಡಿಯೊದ ವಸಂತ ಶೆಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

510ನೇ ಸಂಗೀತ ಕಾರ್ಯಕ್ರಮ

ಬೆಂಗಳೂರು: ಸಪ್ತಕ ಸಂಸ್ಥೆ ಹಾಗೂ ಎಂಇಎಸ್ ಕಲಾವೇದಿ ಸಂಸ್ಥೆಯ ಸಹಯೋಗದಲ್ಲಿ 510ನೇ ಸಂಗೀತ ಕಾರ್ಯಕ್ರಮ ನಡೆಯಿತು.

ಸಪ್ತಕ ಸಂಸ್ಥೆಯ ಜಿ.ಎಸ್. ಹೆಗಡೆ ಹಾಗೂ ಗೀತಾ ಹೆಗಡೆ ದಂಪತಿ ಸಮಾಜ ಸೇವಕಿ ವಿಮಲಾ ರಂಗಾಚಾರ್ ಅವರಿಗೆ ಇಡಗುಂಜಿ ಮಹಾಗಣಪತಿ ದೇವರ ವಿಗ್ರಹ ನೀಡಿ ಸನ್ಮಾನಿಸಿದರು.

ಅನನ್ಯ ರವಿಕಿರಣ ಅವರ ಪ್ರಥಮ ಸಾರ್ವಜನಿಕ ಸಂಗೀತ ಕಾರ್ಯಕ್ರಮ ನಡೆಯಿತು. ಕೌಶಿಕ್ ಭಟ್ಟ ಹಾಗೂ ಸೂರ್ಯ ಉಪಾಧ್ಯಾಯ ತಬಲಾ ಹಾಗೂ ಹಾರ್ಮೋನಿಯಂ ವಾದಕರಾಗಿ ಸಹಕಾರ ನೀಡಿದರು.

ಸಿದ್ಧಾರ್ಥ ಬೆಳ್ಮಣ್ಣು ಅವರ ಗಾಯನಕ್ಕೆ ಷಡಜ ಗೋಡ್ಕಿಂಡಿ ಅವರು ಕೊಳಲ ದನಿ ಸೇರಿಸಿದರು. ರೂಪಕ ಕಲ್ಲೂರ್ಕರ್ ತಬಲಾ ಹಾಗೂ ಗೌರವ ಗಡಿಯಾರ ಹಾರ್ಮೋನಿಯಂ ವಾದನದಲ್ಲಿ ಸಹಕರಿಸಿದರು.

ಸತೀಶ್ ಆರ್‌ಪಿಐ ರಾಜ್ಯ ಘಟಕದ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ (ಅಠವಳೆ) ರಾಜ್ಯ ಘಟಕದ ಅಧ್ಯಕ್ಷರಾಗಿ ಸತೀಶ್ ಆಯ್ಕೆಯಾಗಿದ್ದಾರೆ.

ಕಾರ್ಯಾಧ್ಯಕ್ಷರಾಗಿ ಗೋವಿಂದಯ್ಯ, ಬನಶಂಕರಿ ನಾಗು, ಉಪಾಧ್ಯಕ್ಷರಾಗಿ ಎಸ್.ಎಸ್. ತಾವಡೆ, ಪ್ರಧಾನ ಕಾರ್ಯದರ್ಶಿಯಾಗಿ ಜಿ.ಸಿ. ವೆಂಕಟರಮಣಪ್ಪ, ಸಂಘಟನಾ ಕಾರ್ಯದರ್ಶಿಯಾಗಿ ಎ.ಎಂ.ಎ ಸುರೇಶ್, ಖಜಾಂಚಿಯಾಗಿ ಚಂದ್ರಶೇಖರ್ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ನ್ಯಾಯವಾದಿ ಸಣ್ಣನಾಯಕ ಘೋಷಿಸಿದರು.

ಕೊಬ್ಬರಿಗೆ ಬೆಂಬಲ ಬೆಲೆ: ವಿಧಾನಸೌಧ ಚಲೋ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿ ಕ್ವಿಂಟಲ್ ಕೊಬ್ಬರಿಗೆ ₹16,730 ಬೆಂಬಲ ಬೆಲೆ ನೀಡುವುದರ ಜತೆಗೆ ಖರೀದಿ ಕೇಂದ್ರಗಳನ್ನು ತೆರೆಯುವಂತೆ ಆಗ್ರಹಿಸಿ ಜುಲೈ 19ರಂದು ವಿಧಾನಸೌಧ ಚಲೋ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘ ತಿಳಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಜಿ.ಸಿ. ಬಯ್ಯಾರೆಡ್ಡಿ, 'ರಾಜ್ಯದಲ್ಲಿ 6.46 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತೆಂಗು ಬೆಳೆ ಬೆಳೆಯಲಾಗುತ್ತದೆ. ವಾರ್ಷಿಕ 2.18 ಲಕ್ಷ ಮೆಟ್ರಿಕ್ ಟನ್ ಕೊಬ್ಬರಿ ಉತ್ಪಾದನೆಯಾಗುತ್ತದೆ. ಹಿಂದೆ ಪ್ರತಿ ಕ್ವಿಂಟಲ್ ಕೊಬ್ಬರಿ ₹16 ಸಾವಿರದಿಂದ ₹18 ಸಾವಿರದವರೆಗೂ ಮಾರಾಟವಾಗುತ್ತಿತ್ತು. ಕೇಂದ್ರ ಸರ್ಕಾರದ ತಪ್ಪು ಆಮದು ನೀತಿ ಮತ್ತು ರಾಜ್ಯ ಸರ್ಕಾರದ ನಿರ್ಲಕ್ಷ್ಯದಿಂದ ಸದ್ಯ ಪ್ರತಿ ಕ್ವಿಂಟಲ್ ಕೊಬ್ಬರಿಗೆ ಕೇವಲ ₹6 ಸಾವಿರದಿಂದ ₹7 ಸಾವಿರದವರೆಗೂ ಮಾರಾಟವಾಗುತ್ತಿದೆ. ಇದರಿಂದ ತೆಂಗು ಬೆಳೆಯುವ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ' ಎಂದು ತಿಳಿಸಿದರು.

ತೆಂಗು ಮತ್ತು ಕೊಬ್ಬರಿಯನ್ನು ಎಪಿಎಂಸಿ ಮಾರುಕಟ್ಟೆಯ ಮೂಲಕವೇ ಖರೀದಿಸಬೇಕೆಂದು ಆಗ್ರಹಿಸಿ ಇದೇ 19ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಯಲಿದೆ' ಎಂದರು.

ಸೌದಿ ಅರೇಬಿಯಾದಲ್ಲಿ ಶಿಕ್ಷೆಗೆ ಗುರಿಯಾಗಿರುವ ಶೈಲೇಶ್ ಕುಮಾರ್ ಪ್ರಕರಣ

ಕೇಂದ್ರಕ್ಕೆ ಹೈಕೋರ್ಟ್ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸೌದಿ ಅರೇಬಿಯಾದಲ್ಲಿ ಶಿಕ್ಷೆಗೆ ಗುರಿಯಾಗಿರುವ ಮಂಗಳೂರಿನ ಶೈಲೇಶ್ ಕುಮಾರ್ ಅವರ ಮೇಲ್ಮನವಿ (ಸೌದಿಯಲ್ಲಿ ನಡೆಯುತ್ತಿರುವ ಪ್ರಕರಣ) ವಿಚಾರಣೆಯಲ್ಲಿ ಕೇಂದ್ರದ ನೆರವಿನ ಪಾತ್ರವನ್ನು ಪರಿಶೀಲಿಸಿದ ಹೈಕೋರ್ಟ್, ಈ ಸಂಬಂಧ ಕೇಂದ್ರ ಸರ್ಕಾರಕ್ಕೆ ಕೆಲವೊಂದು ನಿರ್ದೇಶನ ನೀಡಿದೆ.

'ಧರ್ಮನಿಂದನೆ ಆರೋಪದಡಿ ಸೌದಿ ಅರೇಬಿಯಾದಲ್ಲಿ ಜೈಲು ಶಿಕ್ಷೆಗೆ ಗುರಿಯಾಗಿರುವ ಮಂಗಳೂರಿನ ನಿವಾಸಿ ಜನಾರ್ದನ ಸಾಲಿಯಾನ ಶೈಲೇಶ್ ಕುಮಾರ್ ಅವರ ಪತ್ನಿಯಾದ ಮಂಗಳೂರಿನ ಬಿಕರ್ನಕಟ್ಟೆ ನಿವಾಸಿ ಕವಿತಾ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, 'ಮೇಲ್ಮನವಿ ವಿಚಾರಣೆ ವೇಳೆ ಶೈಲೇಶ್ ಅವರಿಗೆ ಶಿಕ್ಷೆ ಕಾಯಂ ಆದರೆ ಇಡೀ ಪ್ರಕ್ರಿಯೆ ವಿಫಲವಾಗುತ್ತದೆ. ಅಷ್ಟರೊಳಗೆ ಅವರನ್ನು ನೇಣಿಗೇರಿಸಿದರೆ ಏನು ಮಾಡಬೇಕು? ಅಲ್ಲಿ ಏನು ಬೇಕಾದರೂ ಆಗಬಹುದು. ಸೌದಿ ಅರೇಬಿಯಾದಲ್ಲಿ ಆದೇಶವನ್ನು ಅಧಿಕೃತಗೊಳಿಸಿದ ಮೇಲೆ ಅದನ್ನು ಪುನರ್ ಪರಿಶೀಲಿಸಲು ಸಾಧ್ಯವಿದೆಯೇ ಎಂಬುದನ್ನು ನೋಡಿಕೊಳ್ಳಬೇಕು' ಎಂದು ಕೇಂದ್ರದ ಪರ ವಕೀಲ ಮಧುಕರ ದೇಶಪಾಂಡೆ ಅವರಿಗೆ ಸೂಚಿಸಿತು.

ಅಂತೆಯೇ, 'ಸೌದಿ ಅರೇಬಿಯಾದಲ್ಲಿ ಶಿಕ್ಷೆಗೆ ಗುರಿಯಾಗಿರುವ ಮಂಗಳೂರಿನ ಶೈಲೇಶ್ ಕುಮಾರ್ ಅವರು ಮೇಲ್ಮನವಿಯ ವಿಚಾರಣೆಯ ವೇಳೆ ತಾವು ಇಚ್ಛಿಸುವ ವಕೀಲರನ್ನು ನೇಮಿಸಿಕೊಳ್ಳಬಹುದೇ? ಹೌದು ಎಂದಾದರೆ ಭಾರತ ಸರ್ಕಾರವು ಅವರಿಗೆ ವಕೀಲರ ನೆರವು ಒದಗಿಸಲಿದೆಯೇ? ಭಾರತದಲ್ಲಿ ಪೊಲೀಸ್ ವಿಚಾರಣೆ ನಡೆಯುತ್ತಿದ್ದು, ಅದು ಪೂರ್ಣಗೊಳ್ಳುವವರೆಗೆ ವಿಚಾರಣೆಯನ್ನು ಮುಂದೂಡುವಂತೆ ಭಾರತೀಯ ರಾಯಭಾರ ಕಚೇರಿಯನ್ನು ಕೋರಬಹುದೇ...? ಎಂಬುದನ್ನು ತಿಳಿಸಿ' ಎಂದು ನಿರ್ದೇಶಿಸಿತು.

ಇದಕ್ಕೆ ಮಧುಕರ್ ದೇಶಪಾಂಡೆ, 'ಮೇಲ್ಮನವಿ ಹಂತದಲ್ಲಿರುವ ಪ್ರಕರಣವನ್ನು ಬಾಕಿ ಉಳಿಸುವ ವಿಚಾರದಲ್ಲಿ ನಿರ್ಧಾರ ಕೈಗೊಳ್ಳಬೇಕಿದೆ. ಸೂಕ್ತ ವೇದಿಕೆಯ ಮೂಲಕ ಅದನ್ನು ನಾವು ಸೌದಿಗೆ ತಲುಪಿಸಬೇಕಿದೆ' ಎಂದರು. ವಿಚಾರಣೆಯನ್ನು ಆಗಸ್ಟ್ 8ಕ್ಕೆ ಮುಂದೂಡಲಾಗಿದೆ.

ಆರೋಪಿಗೆ ಜಾಮೀನು–ತಾಯಿಗೆ ಷರತ್ತು

ಬೆಂಗಳೂರು: ಅಪ್ರಾಪ್ತ ವಯಸ್ಸಿನ ಕಾಲೇಜು ವಿದ್ಯಾರ್ಥಿನಿ ಜೊತೆ ಬಲವಂತವಾಗಿ ಲೈಂಗಿಕ ಕ್ರಿಯೆ ನಡೆಸಿದ ಮತ್ತು ಆ ದೃಶ್ಯಗಳನ್ನು ವಿಡಿಯೊ ರೆಕಾರ್ಡ್ ಮಾಡಿಕೊಂಡು, ಕೊಲೆ ಬೆದರಿಕೆ ಹಾಕಿದ ಪ್ರಕರಣವೊಂದರಲ್ಲಿ ಬಂಧನದಲ್ಲಿರುವ ಅಪ್ರಾಪ್ತ ವಯಸ್ಸಿನ ಆರೋಪಿ ಬಾಲಕನಿಗೆ ಜಾಮೀನು ನೀಡಿರುವ ಹೈಕೋರ್ಟ್, ಬಾಲಕನ ತಾಯಿಗೆ ಕೆಲವೊಂದು ಷರತ್ತುಗಳನ್ನು ವಿಧಿಸಿದೆ.

ಈ ಸಂಬಂಧ ಬಾಲಕನ ತಾಯಿ ಸಲ್ಲಿಸಿದ್ದ ಕ್ರಿಮಿನಲ್ ಮರು ಪರಿಶೀಲನಾ ಅರ್ಜಿಯನ್ನು ನ್ಯಾಯಮೂರ್ತಿ ಅನಿಲ್ ಬಿ.ಕಟ್ಟಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ. 'ಬಾಲ ನ್ಯಾಯ (ಆರೈಕೆ ಮತ್ತು ಸಂರಕ್ಷಣೆ) ಕಾಯ್ದೆ-2015ರ ಕಲಂ 12ರ ಅಡಿ ಜಾಮೀನು ಕೋರಿ ಅಪ್ರಾಪ್ತ ಆರೋಪಿ ಅರ್ಜಿಯನ್ನು ನಿರ್ಧರಿಸುವಾಗ ಅಪರಾಧ ಪ್ರಕರಣದ ಗಂಭೀರತೆ ಪರಿಗಣಿಸುವ ಅಗತ್ಯವಿಲ್ಲ' ಎಂಬ ಆರೋಪಿ ಪರ ವಕೀಲರ ವಾದಾಂಶವನ್ನು ಪರಿಗಣಿಸಿದೆ.

ಷರತ್ತು: 'ಆರೋಪಿಯು ಭವಿಷ್ಯದಲ್ಲಿ ಅಪರಾಧ ಹಿನ್ನೆಲೆಯುಳ್ಳವರೊಂದಿಗೆ ಸಂಪರ್ಕ ಬೆಳೆಸದಂತೆ ಮತ್ತು ಅಪರಾಧ ಕೃತ್ಯದಲ್ಲಿ ಭಾಗಿಯಾಗದಂತೆ ನೋಡಿಕೊಂಡು ಪ್ರತಿ ಮೂರು ತಿಂಗಳಿಗೊಮ್ಮೆ ಬಾಲ ನ್ಯಾಯಮಂಡಳಿಗೆ ವರದಿ ಸಲ್ಲಿಸಬೇಕು. ಮಗನ ವ್ಯಾಸಂಗ ಮುಂದುವರಿಸುವ ಅಥವಾ ರಚನಾತ್ಮಕ ಚಟುವಟಿಕೆಗಳನ್ನು ಪಾಲ್ಗೊಳ್ಳುವುದನ್ನು ಖಾತರಿಪಡಿಸಬೇಕು. ಅನುತ್ಪಾದಕ ಮತ್ತು ಮನೋರಂಜನಾ ಚಟುವಟಿಕೆಗಳಲ್ಲಿ ಹೆಚ್ಚಿನ ಸಮಯ ವ್ಯರ್ಥ ಮಾಡದಂತೆ ನೋಡಿಕೊಳ್ಳಬೇಕು. ಅದನ್ನು ದೃಢಪಡಿಸಿ ಪ್ರಮಾಣ ಪತ್ರ ಸಲ್ಲಿಸಬೇಕು' ಎಂದು ಆರೋಪಿಯ ತಾಯಿಗೆ ಷರತ್ತು ವಿಧಿಸಿದೆ.

'ತಾಯಿಯು 2023ರ ಆಗಸ್ಟ್ 1ರಿಂದ ಪ್ರತಿ3 ತಿಂಗಳಿಗೆ ಒಮ್ಮೆ ಬಾಲ ನ್ಯಾಯಮಂಡಳಿ ಅಧಿಕಾರಿಗೆ ವರದಿ ಸಲ್ಲಿಸಬೇಕು. ಅಧಿಕಾರಿಯು ಆರೋಪಿ ಬಾಲಕನ ಚಟುವಟಿಕೆ ಮೇಲೆ ದೃಷ್ಟಿ ಹರಿಸಬೇಕು. ನಿರಂತರವಾಗಿ ಆತನ ಕುರಿತು ಸಾಮಾಜಿಕ ತನಿಖಾ ವರದಿ ಸಿದ್ಧಪಡಿಸಿ ಬಾಲ ನ್ಯಾಯಮಂಡಳಿಗೆ ಸಲ್ಲಿಸಬೇಕು' ಎಂದು ಷರತ್ತಿನಲ್ಲಿ ವಿವರಿಸಲಾಗಿದೆ.

ಪ್ರಕರಣವೇನು?: 'ಆರೋಪಿ ಬಾಲಕನೂ ಸೇರಿದಂತೆ ಏಳು ಮಂದಿ ಸ್ನೇಹಿತರು ಕಾಲೇಜಿನ ವಿದ್ಯಾರ್ಥಿನಿಯೊಬ್ಬರನ್ನು ಬಲವಂತವಾಗಿ ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಸಾಮೂಹಿಕವಾಗಿ ಲೈಂಗಿಕ ಕ್ರಿಯೆ ನಡೆಸಿದ್ದರು. ಆ ದೃಶ್ಯಗಳನ್ನು ಮೊಬೈಲ್‌ನಲ್ಲಿ ಚಿತ್ರೀಕರಿಸಿಕೊಂಡಿದ್ದರು. ಘಟನೆ ಬಹಿರಂಗಪಡಿಸಿದರೆ ವಿಡಿಯೋವನ್ನು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಮಾಡಲಾಗುವುದು ಮತ್ತು ಕೊಲೆ ಮಾಡುತ್ತೇವೆ ಎಂದು ಬೆದರಿಕೆ ಹಾಕಿದ್ದರು' ಎಂಬ ಆರೋಪಗಳಡಿ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಸಿಬಿಐ ತನಿಖೆ–ಡಿಕೆಶಿ ಮೇಲ್ಮನವಿ: ತಡೆ ಮುಂದುವರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆದಾಯ ಮೀರಿ ಆಸ್ತಿ ಗಳಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಸಿಬಿಐ ತನಿಖೆ ನಡೆಸಲು ಅನುಮತಿ ನೀಡಿ ರಾಜ್ಯ ಸರ್ಕಾರ ಹೊರಡಿಸಿದ್ದ ಅಧಿಸೂಚನೆ ಪ್ರಶ್ನಿಸಿ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿದ್ದ ಏಕಸದಸ್ಯ ನ್ಯಾಯಪೀಠದ ಆದೇಶಕ್ಕೆ ನೀಡಿರುವ ಮಧ್ಯಂತರ ತಡೆಯಾಜ್ಞೆಯನ್ನು ಹೈಕೋರ್ಟ್ ಪುನಃ ಮೂರು ವಾರಗಳ ಕಾಲ ವಿಸ್ತರಿಸಿದೆ.

ಈ ಕುರಿತಂತೆ ಶಿವಕುಮಾರ್ ಸಲ್ಲಿಸಿದ್ದ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಶಿವಕುಮಾರ್ ಪರ ವಕೀಲ ಎಂ.ಎಸ್. ರಾಜೇಂದ್ರ ಅವರು ಹಿರಿಯ ವಕೀಲರು ಹಾಜರಿಲ್ಲದ ಕಾರಣ ಪ್ರಕರಣವನ್ನು ಕೆಲ ಸಮಯ ಮುಂದೂಡುವಂತೆ ಕೋರಿದರು. ಇದೇ ವೇಳೆ ಸಿಬಿಐ ಪರ ವಕೀಲ ಪಿ. ಪ್ರಸನ್ನಕುಮಾರ್ ಅವರೂ ವಾದ ಮಂಡನೆಗೆ ಸಮಯಾವಕಾಶ ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ವಿಚಾರಣೆಯನ್ನು ಮೂರು ವಾರಗಳ ಕಾಲ ಮುಂದೂಡಿತಲ್ಲದೆ, ಮಧ್ಯಂತರ ತಡೆ ಆದೇಶವನ್ನು ಮುಂದಿನ ವಿಚಾರಣೆವರೆಗೂ ವಿಸ್ತರಿಸಿತು.

'ಎರಡೂವರೆ ವರ್ಷಗಳಲ್ಲಿ ಸಿಬಿಐ ಈಗಾಗಲೇ ಶೇ 90ರಷ್ಟು ತನಿಖೆ ಪೂರ್ಣಗೊಳಿಸಿದೆ. ಈ ಕುರಿತಂತೆ ತನಿಖೆಯ ವಸ್ತುಸ್ಥಿತಿ ವರದಿಯನ್ನು ಕೋರ್ಟ್‌ಗೂ ಸಲ್ಲಿಸಲಾಗಿದೆ. ಇಷ್ಟೆಲ್ಲಾ ಸಮಯ ಕಳೆದ ಮೇಲೆ ಅರ್ಜಿದಾರರು ಅಧಿಸೂಚನೆ ಪ್ರಶ್ನಿಸುವುದಾಗಲೀ ಅಥವಾ ರದ್ದುಗೊಳಿಸಿ ಎಂದು ಕೋರುವುದಾಗಲಿ ಕಾನೂನು ಪ್ರಕಾರ ಸಾಧ್ಯವಿಲ್ಲ.

ಇದು ಆದಾಯ ತೆರಿಗೆ ಕಾನೂನುಗಳ ಪ್ರಕಾರ ದಾಖಲಾಗಿರುವ ವಿಶೇಷ ಕ್ರಿಮಿನಲ್ ಪ್ರಕರಣ' ಎಂಬ ಸಿಬಿಐ ವಾದಾಂಶವನ್ನು ಎತ್ತಿಹಿಡಿದಿದ್ದ ಏಕಸದಸ್ಯ ನ್ಯಾಯಪೀಠ ಶಿವಕುಮಾರ್ ಅರ್ಜಿಯನ್ನು ವಜಾಗೊಳಿಸಿತ್ತು.

ಸುಗ್ರೀವಾಜ್ಞೆ: ಕೇಂದ್ರದ ಸಮರ್ಥನೆ

ನವದೆಹಲಿ(ಪಿಟಿಐ): ದೆಹಲಿಯ ಚುನಾಯಿತ ಸರ್ಕಾರವು ನಿರ್ದಿಷ್ಟವಾಗಿ ಗುಪ್ತದಳ ಇಲಾಖೆಯ ಕೆಲವು ಅಧಿಕಾರಿಗಳನ್ನು ಗುರಿಯಾಗಿಸಿ ಕ್ರಮಕೈಗೊಂಡಿದ್ದರಿಂದಾಗಿ ಸುಗ್ರೀವಾಜ್ಞೆಯನ್ನು ಹೊರಡಿಸಲಾಯಿತು ಕೇಂದ್ರ ಸರ್ಕಾರ ಸೋಮವಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಈ ಸಂಬಂಧ ಕೇಂದ್ರ ಪ್ರಮಾಣಪತ್ರವನ್ನು ಸಲ್ಲಿಸಿದೆ. ಸಾರ್ವಜನಿಕ ಸೇವೆ, ಪೊಲೀಸ್, ಭೂಮಿಯನ್ನು ಹೊರತುಪಡಿಸಿ ಇತರೆ ಆಡಳಿತದ ಮೇಲೆ ದೆಹಲಿ ಸರ್ಕಾರಕ್ಕೆ ಅಧಿಕಾರವಿದೆ ಎಂದು ಸುಪ್ರೀಂ ಕೋರ್ಟ್ ಮೇ 11ರಂದು ತೀರ್ಪು ನೀಡಿತ್ತು. ರಾಜಕೀಯ ಸೂಕ್ಷ್ಮತೆಯುಳ್ಳ ಪ್ರಕರಣಗಳು ಹಾಗೂ ಇತರೆ ಕ್ರಿಮಿನಲ್ ಪ್ರಕರಣಗಳಿಗೆ ಸಂಬಂಧಿಸಿದ ಭ್ರಷ್ಟಾಚಾರ ದೂರುಗಳನ್ನು ಗಮನಿಸುವ ಗುಪ್ತದಳ ಇಲಾಖೆಯ ಅಧಿಕಾರಿಗಳನ್ನೇ ಗುರಿಯಾಗಿಸಿ ಚುನಾಯಿತ ಸರ್ಕಾರವು ಕ್ರಮಕೈಗೊಳ್ಳುತ್ತಿತ್ತು. ಅಧಿಕಾರಿಗಳಿಗೆ ಕಿರುಕುಳ ನೀಡುತ್ತಿತ್ತು ಎಂದೂ ಪ್ರಮಾಣಪತ್ರದಲ್ಲಿ ತಿಳಿಸಿದೆ.

ಖಾಸಗಿ ಶಾಲೆಯಲ್ಲಿ ಕನ್ನಡ ಬೋಧನೆ ಕೈಬಿಡುವ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಚಾಲುಕ್ಯ ವೃತ್ತದಲ್ಲಿರುವ ಸೋಫಿಯಾ ಶಾಲೆಯಲ್ಲಿ ಕನ್ನಡ ಬೋಧನೆ ಕೈಬಿಡುವ ವಿಚಾರವು ಚರ್ಚೆಯಾಗಿದ್ದು, ಇದಕ್ಕೆ ಕನ್ನಡ ಸಂಘಟನೆಗಳು ಆಕ್ಷೇಪಿಸಿವೆ.

ಶಾಲೆಯ 8ನೇ ತರಗತಿಯಲ್ಲಿ 2ನೇ ಭಾಷೆಯಾಗಿ ಕನ್ನಡ ಬೋಧಿಸುವುದನ್ನು ಕೈಬಿಡಲು ಕಾನೂನು ಹೋರಾಟಕ್ಕೆ ಅಣಿಯಾಗುತ್ತಿದೆ ಎಂಬ ವಿಚಾರವು ಜಾಲತಾಣದಲ್ಲಿ ಹರಿದಾಡುತ್ತಿದೆ. ಈ ವಿಚಾರ ವಿರೋಧಿಸಿ ಕನ್ನಡಿಗ ಸಂಘಟನೆಗಳ ಮುಖಂಡರು ಪ್ರತಿಕ್ರಿಯಿಸಿದ್ದಾರೆ.

ಶಾಲೆಯ ವಿದ್ಯಾರ್ಥಿಗಳ 50ಕ್ಕೂ ಹೆಚ್ಚು ಪೋಷಕರೇ ಕನ್ನಡ ವಿಷಯ ಬೋಧಿಸದಂತೆ ಪತ್ರ ಬರೆದಿದ್ದಾರೆ ಎನ್ನಲಾಗಿದೆ. ಇದಕ್ಕೆ ಆಡಳಿತ ಮಂಡಳಿ ಪ್ರತಿಕ್ರಿಯಿಸಿ, 'ಈ ಕುರಿತು ಶೀಘ್ರದಲ್ಲಿಯೇ ಅಂತಿಮ ತೀರ್ಮಾನ ಕೈಗೊಳ್ಳುತ್ತೇವೆ. ನಿಮ್ಮ ಬೆಂಬಲ ಬಹಳ ಮುಖ್ಯ. ಈ ವಿಷಯ ಕುರಿತು ಸ್ಪಷ್ಟತೆ ಪಡೆದುಕೊಳ್ಳುತ್ತಿದ್ದೇವೆ' ಎಂದು ತಿಳಿಸಿದೆ. ಇದಕ್ಕೆ ಸಂಬಂಧಿಸಿದಂತೆ ಕೆಲವು ಪ್ರಕ್ರಿಯೆಗಳು ನಡೆದಿವೆ ಎಂದು ಹೇಳಲಾಗಿದೆ. 'ಕನ್ನಡ ಬೇಡವೆಂದು ವಿದ್ಯಾರ್ಥಿಗಳಿಂದಲೇ ಪೋಷಕರು ಪತ್ರ ಬರೆಯಿಸಿ ಶಾಲೆಗೆ ಹಾಗೂ ಶಿಕ್ಷಣ ಇಲಾಖೆಗೆ ಕಳುಹಿಸಿದ್ ದಾರೆ. ಇದಕ್ಕೆ ಆಡಳಿತ ಮಂಡಳಿಯೂ ಬೆಂಬಲ ಸೂಚಿಸುತ್ತಿದೆ' ಎಂದು ಕನ್ನಡ ಸಂಘಟನೆಗಳು ದೂರಿವೆ. ಇದಕ್ಕೆ ಸಂಬಂಧಿಸಿದಂತೆ ಪೋಷಕರೊಬ್ಬರ ಬರಹವು ವಾಟ್ಸ್‌ಆ್ಯಪ್‌ನಲ್ಲಿ ಹರಿದಾಡುತ್ತಿದೆ.

ಕನ್ನಡಿಗರ ಸರ್ಕಾರ ಕೊಟ್ಟ ಜಾಗದಲ್ಲಿ ಸೋಫಿಯಾ ಶಾಲೆ ನಿರ್ಮಿಸಲಾಗಿದೆ. 100 ವರ್ಷದ ಇತಿಹಾಸವುಳ್ಳ ಶಾಲೆಯಲ್ಲಿ 8ನೇ ತರಗತಿಯಿಂದ ಕನ್ನಡ ಬೇಡವೆಂದು 50 ಪೋಷಕರು ಶಾಲೆಯ ಪ್ರಾಂಶುಪಾಲ ಬಳಿ ಹೋಗಿದ್ದಾರೆ. ಇದರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಕನ್ನಡಿಗರೊಬ್ಬರು ಆಗ್ರಹಿಸಿದ್ದಾರೆ. ವಿಷಯಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯೆ ಪಡೆಯಲು ಶಾಲೆಯ ಪ್ರತಿನಿಧಿಯೊಬ್ಬರನ್ನು ಸಂಪರ್ಕಿಸಲು ಪ್ರಯತ್ನಿಸಿದರೂ ಅವರು ಲಭ್ಯವಾಗಲಿಲ್ಲ.

ಸುದೀಪ್ ವಿರುದ್ಧ ಕುಮಾರ್ ಧರಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿರ್ಮಾಪಕ ಎಂ.ಎನ್.ಕುಮಾರ್ ಅವರ ವಿರುದ್ಧ ಎಸಿಎಂಎಂ ನ್ಯಾಯಾಲಯದಲ್ಲಿ ನಟ ಸುದೀಪ್ ಅವರು ಕ್ರಿಮಿನಲ್ ಮಾನನಷ್ಟ ಮೊಕದ್ದಮೆ ದಾಖಲಿಸಿದ ಬೆನ್ನಲ್ಲೇ ಎಂ.ಎನ್. ಕುಮಾರ್ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ (ಕೆಎಫ್‌ಸಿಸಿ) ಎದುರು ಸೋಮವಾರದಿಂದ ಧರಣಿ ಆರಂಭಿಸಿದ್ದಾರೆ.

'ಶಿವರಾಜ್‌ಕುಮಾರ್, ರವಿಚಂದ್ರನ್ ಅವರು ಮಧ್ಯಸ್ಥಿಕೆ ವಹಿಸಿ ಈ ಸಮಸ್ಯೆಯನ್ನು ಬಗೆಹರಿಸಬೇಕು. ಅವರು ಬರುವ ವರೆಗೂ ಧರಣಿ ಮುಂದುವರಿಸುತ್ತೇನೆ' ಎಂಬ ಬೇಡಿಕೆಯನ್ನು ವಾಣಿಜ್ಯ ಮಂಡಳಿ ಮುಂದೆ ಕುಮಾರ್ ಇರಿಸಿದ್ದಾರೆ. ಸೋಮವಾರ ಸಂಜೆಯವರೆಗೂ ಧರಣಿ ನಡೆಸಿದ ಕುಮಾರ್, ಮಂಗಳವಾರ ಬೆಳಗ್ಗಿನಿಂದ ಧರಣಿ ಮುಂದುವರಿಸಲು ನಿರ್ಧರಿಸಿದ್ದಾರೆ. ಈ ವೇಳೆ ಸುದ್ದಿಗಾರರ ಜೊತೆ ಮಾತನಾಡಿದ ಕುಮಾರ್, 'ನನಗೆ ಎದುರಾಗಿರುವ ಸಮಸ್ಯೆಯನ್ನು ವಾಣಿಜ್ಯ ಮಂಡಳಿ ಮುಖಾಂತರವೇ ಬಗೆಹರಿಸಿಕೊಳ್ಳಬೇಕು. ಈ ಮಂಡಳಿ ಚಿತ್ರರಂಗಕ್ಕೆ ಮಾತೃಸಂಸ್ಥೆ. ನಾವು ನೀಡಿದ ಮನವಿಗೆ ಸರಿಯಾದ ಸ್ಪಂದನ ಮಂಡಳಿಯಿಂದ ಸಿಕ್ಕಿಲ್ಲ. ಹೀಗಾಗಿ ಧರಣಿ ಆರಂಭಿಸಿದ್ದೇನೆ. ನನಗೆ ಆಗಿರುವ ಅನ್ಯಾಯ ಮುಂದೆ ಯಾವ ನಿರ್ಮಾಪಕರಿಗೂ ಆಗಬಾರದು. ವಾಣಿಜ್ಯ ಮಂಡಳಿ ನನ್ನ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ಧರಣಿ ಕೂತಿದ್ದೇನೆ' ಎಂದರು. 'ನಾನು ಸುದೀಪ್ ಅವರ ಬಗ್ಗೆ ಕೆಟ್ಟದಾಗಿ ಮಾತನಾಡಲಿಲ್ಲ. ನನಗೆ ಅವರಿಂದ ಸ್ಪಂದನ ಸಿಗುತ್ತಿಲ್ಲ ಎಂದಿದ್ದೆ. ಏನು ಸಮಸ್ಯೆ ಇದೆಯೋ ಅದನ್ನು ಮಂಡಳಿಯಲ್ಲೇ ಬಗೆಹರಿಸಿಕೊಳ್ಳೋಣ. ವಾಣಿಜ್ಯ ಮಂಡಳಿ ಅಧ್ಯಕ್ಷರು ಈ ಸಮಸ್ಯೆಯನ್ನು ಹಿರಿಯ ಕಲಾವಿದರ ಗಮನಕ್ಕೆ ತರಬೇಕು. ಸುದೀಪ್ ಅವರು ಸಭೆಗೆ ಬಂದರೆ ಅವರಿಗೆ ದಾಖಲೆ ನೀಡುತ್ತೇನೆ. ರಾಜಿ ಸಂಧಾನಕ್ಕೆ ನಾವು ತಯಾರಿದ್ದೇವೆ. ಇಂಥ ಸಮಸ್ಯೆ ಬಗೆಹರಿಸಲು ವಾಣಿಜ್ಯ ಮಂಡಳಿ ಇದೆ. ಇಲ್ಲಿ ಈ ಸಮಸ್ಯೆಗೆ ಪರಿಹಾರ ಸಾಧ್ಯವಾಗದೇ ಇದ್ದರೆ ನ್ಯಾಯಾಲಯದ ಮೆಟ್ಟಿಲೇರುವುದು ಅನಿವಾರ್ಯ' ಎಂದರು ಕುಮಾರ್.

ಚಲನಚಿತ್ರ ವಾಣಿಜ್ಯ ಮಂಡಳಿ ಮುಂದೆ ಧರಣಿ ನಿರತ ಎಂ.ಎನ್.ಕುಮಾರ್ (ಬಲದಿಂದ ಎರಡನೆಯವರು). ಮಂಡಳಿಯ ಮಾಜಿ ಕಾರ್ಯದರ್ಶಿ ಎ.ಗಣೇಶ್, ನಿರ್ಮಾಪಕ, ವಿತರಕ ಎಂ.ಕುಮಾರ್ ಹಾಗೂ ನಿರ್ಮಾಪಕ ಡಿ.ಕೆ.ರಾಮಕೃಷ್ಣ ಇದ್ದಾರೆ – ಪ್ರಜಾವಾಣಿ ಚಿತ್ರ

'ಜುಲೈ 13ಕ್ಕೆ ನನಗೆ ಸುದೀಪ್ ಅವರಿಂದ ನೋಟಿಸ್ ಸಿಕ್ಕಿದೆ. ಇದಕ್ಕೆ ಜುಲೈ 14ಕ್ಕೆ ಪ್ರತಿಕ್ರಿಯೆ ನೀಡಿದ್ದೇನೆ. ಅವರು ಕಳುಹಿಸಿದ ನೋಟಿಸ್ ಆಂಗ್ಲ ಭಾಷೆಯಲ್ಲಿದ್ದ ಕಾರಣ, ಸ್ಪಷ್ಟವಾಗಿ ಅರ್ಥವಾಗುತ್ತಿಲ್ಲ. ಹೀಗಾಗಿ ಕನ್ನಡದಲ್ಲಿ ಕಳುಹಿಸಿ ಎಂದು ಪ್ರತಿಕ್ರಿಯೆಯಲ್ಲಿ ಉಲ್ಲೇಖಿಸಿದ್ದೇನೆ. ನನ್ನ ಬಳಿ ಮೂರು ದಾಖಲೆಗಳಿದ್ದು, ಅವುಗಳನ್ನು ಮಂಗಳವಾರ ಮಾಧ್ಯಮಗಳಿಗೆ ನೀಡುತ್ತೇನೆ' ಎಂದರು.

ಇಂದು ಭೇಟಿ: ಎಂ.ಎನ್.ಕುಮಾರ್ ಬೇಡಿಕೆಯನ್ನು ತಿಳಿಸಲು ಮಂಡಳಿ ಅಧ್ಯಕ್ಷ ಭಾ.ಮ.ಹರೀಶ್ ಅವರು ಮಂಗಳವಾರ ನಟ ಶಿವರಾಜ್‌ಕುಮಾರ್ ಅವರನ್ನು ಭೇಟಿಯಾಗಲಿದ್ದಾರೆ.

ಪ್ರಜಾವಾಣಿ @75

ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ

(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)

ಸಂಪರ್ಕಕ್ಕೆ

8147623791

080 45557204

readerservicecell@deccanherald.co.in

ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ bit.ly/40dPCqy

ಕರ್ನಾಟಕ ಲೇಖಕಿಯರ ಸಂಘ: ಇದೇ 23ರಂದು ಪ್ರಶಸ್ತಿ ಪ್ರದಾನ

ಸಾಹಿತ್ಯ ಕೃತಿಗಳಿಗೆ ವಾರ್ಷಿಕ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೇಖಕಿಯರ ಸಂಘವು 2021 ಮತ್ತು 2022ನೇ ಸಾಲಿನ ವಿವಿಧ ವಾರ್ಷಿಕ ದತ್ತಿ ಪ್ರಶಸ್ತಿಗಳನ್ನು ಘೋಷಿಸಿದ್ದು, ಇದೇ 23ರಂದು ಇಲ್ಲಿನ ಜೆ.ಸಿ. ರಸ್ತೆಯಲ್ಲಿರುವ ನಯನ ಸಭಾಂಗಣದಲ್ಲಿ ಮಧ್ಯಾಹ್ನ 3 ಗಂಟೆಗೆ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಂಡಿದೆ.

ಸಂಘದ ಅಧ್ಯಕ್ಷೆ ಎಚ್.ಎಲ್.ಪುಷ್ಪ ಅವರು ಪ್ರಶಸ್ತಿಗೆ ಆಯ್ಕೆಯಾದವರ ಪಟ್ಟಿಯನ್ನು ಪ್ರಕಟಿಸಿದ್ದಾರೆ.

'ಕಾಕೋಳು ಸರೋಜಮ್ಮ (ಕಾದಂಬರಿ) ಪ್ರಶಸ್ತಿ'ಗೆ ಲೀಲಾ ಮಣ್ಣಾಲ ಅವರ 'ರಾಜ್ಯ ರಾಜಶ್ರೀ ಹರ್ಷವರ್ಧನ', 'ಭಾಗ್ಯ ನಂಜಪ್ಪ (ವಿಜ್ಞಾನ ಸಾಹಿತ್ಯ) ಪ್ರಶಸ್ತಿ'ಗೆ ಎಸ್. ಸುಧಾ ಅವರ 'ಮಾನವನ ಅನುವಂಶೀಯ ಕಾಯಿಲೆಗಳು' ಹಾಗೂ ಸುಕನ್ಯಾ ಸೂನಗಹಳ್ಳಿ ಅವರ 'ಬೆಳೆರೋಗಗಳು ಕೀಟಗಳು ಮತ್ತು ಅವುಗಳ ನಿರ್ವಹಣೆ' ಕೃತಿ, 'ನಾಗರತ್ನ ಚಂದ್ರಶೇಖರ್ (ಲಲಿತ ಪ್ರಬಂಧ) ಪ್ರಶಸ್ತಿ'ಗೆ ಸಹನಾ ಕಾಂತಬೈಲು ಅವರ 'ಇದು ಬರಿ ಮಣ್ಣಲ್ಲ' ಮತ್ತು ನಳಿನಿ ಟಿ. ಭೀಮಪ್ಪ ಅವರ 'ಸೆಲ್ಫೀ...(ನಮ್ಮನ್ಮದೇ ಪ್ರಪಂಚ)' ಕೃತಿ ಆಯ್ಕೆಯಾಗಿವೆ.



'ಜಿ.ವಿ. ನಿರ್ಮಲಾ (ಅನುವಾದಿತ ಕಾದಂಬರಿ/ ಕಥಾ ಸಂಕಲನ/ ಜೀವನ ಚರಿತ್ರೆ) ಪ್ರಶಸ್ತಿ'ಗೆ ಗೀತಾ ಶೆಣೈ ಅವರ 'ಕನಸಿನ ಹೂಗಳು' ಹಾಗೂ ಸುಮಂಗಲಾ ಮಮ್ಮಿಗಟ್ಟಿ ಅವರ 'ಕಥಾ ನವಮಿ' ಕೃತಿ, 'ತ್ರಿವೇಣಿ ಸಾಹಿತ್ಯ ಪುರಸ್ಕಾರ'ಕ್ಕೆ ರೇಣುಕಾ ಕೋಡಗುಂಟಿ ಅವರ 'ನಿಲುಗನ್ನಡಿ' ಹಾಗೂ ಶೋಭಾ ಗುನ್ನಾಪುರ ಅವರ 'ಭೂಮಿಯ ಋಣ', 'ಕಮಲಾ ರಾಮಸ್ವಾಮಿ (ಪ್ರವಾಸ ಸಾಹಿತ್ಯ) ಪ್ರಶಸ್ತಿ'ಗೆ ಎಸ್.ಪಿ. ವಿಜಯಲಕ್ಷ್ಮಿ ಅವರ 'ನಕ್ಷತ್ರಗಳ ನೆಲದಲ್ಲಿ' ಹಾಗೂ ಜಯಶ್ರೀ ದೇಶಪಾಂಡೆ ಅವರ 'ಹಲವು ನಾಡು ಹೆಜ್ಜೆ ಹಾಡು', 'ನುಗ್ಗೆಹಳ್ಳಿ ಪಂಕಜ (ಹಾಸ್ಯ ಕೃತಿ) ಪ್ರಶಸ್ತಿ'ಗೆ ರೇಷ್ಮಾ ಭಟ್ ಅವರ 'ಲಘುಬಗೆ' ಹಾಗೂ ಚಂದ್ರಾವತಿ ಬಡ್ಡಡ್ಕ ಅವರ 'ಲಘುಬಿಗು', 'ಗುಣಸಾಗರಿ ನಾಗರಾಜ್ (ಮಕ್ಕಳ ಸಾಹಿತ್ಯ) ಪ್ರಶಸ್ತಿ'ಗೆ ಶಾಲಿನಿ ಮೂರ್ತಿ ಅವರ 'ಕಥೆಗಳ ತೋರಣ' ಹಾಗೂ ವಾಣಿ ಪೆರಿಯೋಡಿ ಅವರ 'ಮಕ್ಕಳಿಗಾಗಿ ಸಂವಿಧಾನ' ಕೃತಿಗಳು ಆಯ್ಕೆಯಾಗಿವೆ.

'ಇಂದಿರಾ ವಾಣಿರಾವ್ (ನಾಟಕ) ಪ್ರಶಸ್ತಿ'ಗೆ ಜಯಶ್ರೀ ಸಿ. ಕಂಬಾರ ಅವರ 'ಹೊಸದಾರಿ' ಹಾಗೂ ಬಿ.ಎಂ. ಭಾರತಿ ಹಾದಿಗೆ ಅವರ 'ನಿಂಗವ್ವ ನಾಗತಿ ಮತ್ತು ಇತರ ನಾಟಕಗಳು', 'ಜಯಮ್ಮ ಕರಿಯಣ್ಣ (ಸಂಶೋಧನೆ) ಪ್ರಶಸ್ತಿ'ಗೆ ವಿಜಯಾದೇವಿ ಅವರ 'ಅಲ್ಲಮ ಪ್ರಭುದೇವರು' ಹಾಗೂ ಉಷಾದೇವಿ ಉದಯ ಹಿರೇಮಠ ಅವರ 'ವಚನೋದ್ಯಾನ', 'ತ್ರಿವೇಣಿ ದತ್ತಿನಿಧಿ (ಕಥೆ/ ಕಾದಂಬರಿ- ಪ್ರಥಮ, ದ್ವಿತೀಯ, ತೃತೀಯ) ಪ್ರಶಸ್ತಿ'ಗೆ ಶ್ರೀದೇವಿ ಕೆರೆಮನೆ ಅವರ 'ಚಿತ್ತಚಿತ್ತಾರ', ಜಯಂತಿ ಚಂದ್ರಶೇಖರ ಅವರ 'ವಸುಂಧರ', ಮಮತಾ ವಾರನಹಳ್ಳಿ ಅವರ 'ಕಾಡು ಮಲ್ಲಿಗೆ', ಆಶಾ ರಘು ಅವರ 'ಮಾಯೆ', ಅಕ್ಷತಾ ಕೃಷ್ಣಮೂರ್ತಿ ಅವರ 'ಅಬ್ಬೋಲಿ', ನೂರ್ ಜಹಾನ್ ಹೊಸಪೇಟೆ ಅವರ 'ಅನಾಥೆ', ಮಾಲತಿ ಹೆಗಡೆ ಅವರ 'ಅವನಿ', ಅರ್ಪಣ. ಎಚ್.ಎಸ್. ಅವರ 'ಕೆಂಪು ಹಾಗೂ ಇತರ ಬಹುಮಾನಿತ ಕಥೆಗಳು' ಮತ್ತು ಗಾಯತ್ರಿ ರಾಜ್ ಅವರ 'ಟ್ರಾಯ್' ಕೃತಿ ಭಾಜನವಾಗಿವೆ.

ಉಷಾ. ಪಿ.ರೈ ಅವರ ಹೆಸರಿನಲ್ಲಿ ನೀಡುವ ಪ್ರಶಸ್ತಿಗೆ ಎಲ್.ಸಿ.ಸುಮಿತ್ರ ಅವರ 'ಅಂಗೈ ಅಗಲದ ಆಕಾಶ', 'ನಿರುಪಮಾ (ಕತೆಗಳು) ಪ್ರಶಸ್ತಿ'ಗೆ ಕಾವ್ಯ ಎಸ್. ಮನಮನೆ ಅವರ 'ಅನುದೇವಾ ಹೊರಗಣವಳು' ಹಾಗೂ ಅಕ್ಷತಾ ರಾಜ್ ಪೆರ್ಲ ಅವರ 'ಸುಳಿ ಕಂಡ ಸುಕ್ಕು' ಕತೆ ಆಯ್ಕೆಯಾಗಿವೆ. ನಿರುಪಮಾ (ಕತೆಗಳು) ಪ್ರಶಸ್ತಿಗೆ 2021ನೇ ಸಾಲಿನಲ್ಲಿ ಮುದ್ರಣ ಮಾಧ್ಯಮದಲ್ಲಿ ಪ್ರಕಟವಾದ ಟಿ.ಎಸ್. ಶ್ರವಣಕುಮಾರಿಯವರ 'ಚದುರಂಗದ ಕುದುರೆ', ಡಿಜಿಟಲ್ ಮಾಧ್ಯಮದಲ್ಲಿ ಪ್ರಕಟವಾದ ಡಾ.ಮೈತ್ರೇಯಿಣಿ ಗದಿಗೆಪ್ಪಗೌಡರ ಅವರ 'ನಮ್ಮನಾವರಿಸಿದ ಜ್ಞಾನದ ಭ್ರೂಣ ಬುದ್ಧ' ಕಥೆ ಆಯ್ಕೆಯಾಗಿವೆ.

ಸಮಗ್ರ ಸಾಧನೆಗೆ ನೀಡುವ 'ಕೆ.ಟಿ. ಬನಶಂಕರಮ್ಮ ಪ್ರಶಸ್ತಿ'ಗೆ ಕೊಪ್ಪಳದ ಮಮ್ತಾಜ್ ಬೇಗಂ, ತುಮಕೂರಿನ ರಂಗಮ್ಮ ಹೋದೇಕಲ್ಲು, ಶಿರಸಿಯ ಮಾಧವಿ ಭಂಡಾರಿ ಆಯ್ಕೆಯಾಗಿದ್ದಾರೆ. 'ಶ್ರೀಲೇಖಾ (ಭಾಷಾಂತರ ಸಾಹಿತ್ಯ) ಪ್ರಶಸ್ತಿ'ಗೆ ನಾಗರೇಖಾ ಗಾಂವ್ಕರ್ ಅವರ 'ದಿ ಡೈರಿ ಆಫ್ ಎ ಯಂಗ್ ಗರ್ಲ್', ಮಾಲತಿ ಮುದಕವಿಯವರ 'ಘಾಸಿಗೆ ಸಾಕ್ಷಿ', 'ಪ್ರೇಮಾ ಭಟ್ ಮತ್ತು ಎ.ಎಸ್.ಭಟ್ ದತ್ತಿ ಪ್ರಶಸ್ತಿ'ಗೆ ಸಂಕ್ರಮಣ ಪ್ರಕಾಶನ ಸಂಸ್ಥೆಯ ನೀಲಾ ಪಾಟೀಲ, ಮಹಿಳಾ ಸಾಹಿತ್ಯಕ ಹುಬ್ಬಳ್ಳಿ ಪ್ರಕಾಶನದ ಹನುಮಾಕ್ಷಿ ಗೋಗಿ, ಕವಿ ಪ್ರಕಾಶನದ ಡಾ.ಎಚ್.ಎಸ್.ಅನುಪಮಾ ಆಯ್ಕೆಯಾಗಿದ್ದಾರೆ ಎಂದು ಸಂಘದ ಕಾರ್ಯದರ್ಶಿ ಭಾರತಿ ಹೆಗಡೆ ತಿಳಿಸಿದ್ದಾರೆ.

ವಿದ್ಯಾರ್ಥಿಗಳಿಗೆ ಉಚಿತ ತರಬೇತಿ

ಬೆಂಗಳೂರು: ಹಂಪಿನಗರದ ಆರ್‌ಪಿಸಿ ಲೇಔಟ್‌ನಲ್ಲಿರುವ ಇನ್‌ಸ್ಪೈರ್ ಐಎಎಸ್ ಹಾಗೂ ಕೆಎಎಸ್ ತರಬೇತಿ ಸಂಸ್ಥೆಯು ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗೆ ಅನುಕೂಲ ಆಗುವಂತೆ ಉಚಿತ ತರಬೇತಿ ಶಿಬಿರ ಹಮ್ಮಿಕೊಂಡಿದೆ.

80 ವಿದ್ಯಾರ್ಥಿಗಳಿಗೆ ಮಾನಸಿಕ ಸಾಮರ್ಥ್ಯ ವಿಷಯ ಕುರಿತು ತರಬೇತಿ ನೀಡಲಾಗುವುದು. ತರಗತಿಗಳು ಐದು ದಿನ ನಡೆಯಲಿದೆ. ಈ ತರಬೇತಿಯು ಕೆಎಎಸ್, ಪೊಲೀಸ್ ಕಾನ್‌ಸ್ಟೆಬಲ್, ಪಿಎಸ್‌ಐ, ಪಿಡಿಒ, ಎಸ್‌ಡಿಎ, ಎಫ್‌ಡಿಎ ಬ್ಯಾಂಕಿಂಗ್ ಸೇರಿದಂತೆ ಇತರೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅನುಕೂಲವಾಗಲಿದೆ ಎಂದು ಸಂಸ್ಥೆಯ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಸಕ್ತರು ಸಂಸ್ಥೆಯ ಕಚೇರಿಗೆ ಬಂದು ಹೆಸರು ನೋಂದಾಣಿ ಮಾಡಿಕೊಳ್ಳಬೇಕು. ಹೊರ ಜಿಲ್ಲೆಯ ವಿದ್ಯಾರ್ಥಿಗಳು ಮೊಬೈಲ್: 70900 90033ಕ್ಕೆ ಕರೆ ಮಾಡಿ ಹೆಸರು ನೋಂದಣಿ ಮಾಡಿಕೊಳ್ಳಬಹುದು ಎಂದು ಕೋರಿದ್ದಾರೆ.

ನಗರದಲ್ಲಿ ಇಂದು

ಸ್ವಚ್ಛತಾ ಕಾರ್ಯಕ್ರಮ: ಆಯೋಜನೆ: ಸೋಷಿಯಲಿಸ್ಟ್ ಪಾರ್ಟಿ (ಇಂಡಿಯಾ), ಸ್ಥಳ: ಜೆ.ಸಿ. ನಗರದ ಆರ್ಚ್‌ನಿಂದ, ದಿನ್ನೂರು ಮುಖ್ಯರಸ್ತೆವರೆಗೆ, ಬೆಳಿಗ್ಗೆ 7ರಿಂದ

ಭೀಮನ ಅಮಾವಾಸ್ಯೆ ಅಂಗವಾಗಿ ಬನಶಂಕರಿದೇವಿಗೆ ವಿಶೇಷ ಪೂಜಾ ಮಹೋತ್ಸವ: ಮಹಾಮಂಗಳಾರತಿ, ಆಯೋಜನೆ ಮತ್ತು ಸ್ಥಳ: ಬನಶಂಕರಿ ದೇವಸ್ಥಾನದ ಸೇವಾ ಟ್ರಸ್ಟ್, ದೊಡ್ಡಮಾವಳ್ಳಿ, ಬೆಳಿಗ್ಗೆ 9.30ರಿಂದ

'ವಚನ ಕಲಿ–ನಲಿ' ತರಗತಿಗಳಲ್ಲಿ ವಚನ ಬಿತ್ತನೆ ಸಾಂಸ್ಕೃತಿಕ ಪಯಣ: ಉದ್ಘಾಟನೆ: ವೂಡೇ ಪಿ. ಕೃಷ್ಣ, ಅತಿಥಿಗಳು: ವಿಶ್ವನಾಥ ಪಿ. ಹಿರೇಮಠ, ಡಿ.ಎನ್. ಚನ್ನವೀರಪ್ಪ, ಅಧ್ಯಕ್ಷತೆ: ಎ.ಎ. ಕುದ್ರೋಳಿ, ಆಶಯ ನುಡಿ: ಎಸ್. ಪಿನಾಕಪಾಣಿ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಆರ್ಯನ್ ಪ್ರೆಸಿಡೆನ್ಸಿ ಶಾಲೆ, ನಾಗರಬಾವಿ, ಬೆಳಿಗ್ಗೆ 9.30

ಕರ್ನಾಟಕ ಸವಿತಾ ಕ್ಷೌರಿಕರ ಹಿತರಕ್ಷಣಾ ವೇದಿಕೆಯ ವಾರ್ಷಿಕೋತ್ಸವ ಸಮಾರಂಭ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಸವಿತಾನಂದನಾಥ ಸ್ವಾಮೀಜಿ, ಅಧ್ಯಕ್ಷತೆ: ಸಿ. ಕೃಷ್ಣಮೂರ್ತಿ ಕಮ್ಮನಹಳ್ಳಿ, ಅತಿಥಿಗಳು: ಡಾ. ಜಿ. ಪರಮೇಶ್ವರ್, ಕೆ.ಎನ್. ರಾಜಣ್ಣ, ಶಿವರಾಜ್ ತಂಗಡಗಿ, ಉದ್ಘಾಟನೆ: ಎಂ.ಸಿ. ವೇಣುಗೋಪಾಲ್, ಉಪಸ್ಥಿತಿ: ಜಯಪ್ರಕಾಶ್ ಹೆಗ್ಡೆ, ಭಾಷಣ: ಸಿ.ಎಸ್. ದ್ವಾರಕನಾಥ್, ಉಪಸ್ಥಿತಿ: ವಿ. ರಾಮಚಂದ್ರ ಬಾಣಸವಾಡಿ, ಆಯೋಜನೆ: ಕರ್ನಾಟಕ ಸವಿತಾ ಕ್ಷೌರಿಕರ ಹಿತರಕ್ಷಣಾ ವೇದಿಕೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 11.30

ಅಧಿಕ ಮಾಸದ ಹರಿಭಜನೆ: ಅಲಕನಂದ ಭಜನಾ ಮಂಡಳಿ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಜಯನಗರ, ಸಂಜೆ 5.30ರಿಂದ

'ಅತ್ಯುತ್ತಮ ಶಾಸಕ ಪ್ರಶಸ್ತಿ' ಪ್ರದಾನ: ಅಧ್ಯಕ್ಷತೆ: ಬಸವರಾಜ ಹೊರಟ್ಟಿ, ಉಪಸ್ಥಿತಿ: ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಅತಿಥಿಗಳು: ಎಚ್.ಕೆ. ಪಾಟೀಲ, ಎನ್.ಎಸ್. ಬೋಸರಾಜು, ಸಲೀಂ ಅಹಮದ್, ಕೋಟ ಶ್ರೀನಿವಾಸ ಪೂಜಾರಿ, ವೈ.ಎ. ನಾರಾಯಣಸ್ವಾಮಿ, ಎಸ್.ಎಲ್. ಭೋಜೇಗೌಡ, ಆಯೋಜನೆ: ಕರ್ನಾಟಕ ವಿಧಾನ ಪರಿಷತ್ತು, ಸ್ಥಳ: ಸಮ್ಮೇಳನ ಸಭಾಂಗಣ, ಕೊಠಡಿ ಸಂಖ್ಯೆ 334, ವಿಧಾನಸೌಧ, ಸಂಜೆ 6

ಶ್ರೀಮದ್ಭಾಗವತ ಸಪ್ತಾಹ ಪ್ರವಚನ: ಜಗನ್ನಾಥಾಚಾರ್ ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಶೇಷಾದ್ರಿಪುರ, ಸಂಜೆ 6

ಪ್ರವಚನ ವಾಹಿನಿ: 'ಭಗವಂತ ಮತ್ತು ಭಕ್ತನ ಅವಿನಾಭಾವ ಸಂಬಂಧ'ದ ಕುರಿತ ಉಪನ್ಯಾಸ: ಪವಮಾನಾಚಾರ್ ಎಂ., ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30ರಿಂದ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ nagaradalli_indu@prajavani.co.in

ಸುಧಾ, ಮಯೂರ ಓದಿರಿ

ಬೆಂಗಳೂರು ವಿ.ವಿ. • ಗುತ್ತಿಗೆ ನೌಕರನ ಅಕ್ರಮ, ಎಫ್‌ಐಆರ್ ದಾಖಲು

41 ಉತ್ತರ ಪತ್ರಿಕೆ ತಿದ್ದುಪಡಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- 2019ರಿಂದ 2023 ಅವಧಿಯಲ್ಲಿ ಅಕ್ರಮ
- ಉತ್ತರ ಪತ್ರಿಕೆಗಳ ಫಲಿತಾಂಶಕ್ಕೆ ತಡೆ
- ಕೆಲಸಕ್ಕೆ ಗೈರಾಗಿ ನೌಕರ ನಾಪತ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಪದವಿ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಸೇರಿದ್ದ 41 ಉತ್ತರ ಪತ್ರಿಕೆಗಳನ್ನು ತಿದ್ದುಪಡಿ ಮಾಡಲಾಗಿದ್ದು, ಈ ಅಕ್ರಮ ಎಸಗಿರುವ ಆರೋಪದಡಿ ಗುತ್ತಿಗೆ ನೌಕರ ಟಿ. ಮಂಜುನಾಥ್ ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

'2019ರಿಂದ 2023ರವರೆಗಿನ ಅವಧಿಯಲ್ಲಿ ನಡೆದಿರುವ ಅಕ್ರಮದ ಬಗ್ಗೆ ವಿಶ್ವವಿದ್ಯಾಲಯದ ಕುಲಸಚಿವ (ಮೌಲ್ಯಮಾಪನ) ಡಾ. ಶ್ರೀನಿವಾಸ್ ದೂರು ನೀಡಿದ್ದಾರೆ. ಪರೀಕ್ಷಾ ಭವನದ ಗುತ್ತಿಗೆ ನೌಕರ ಟಿ. ಮಂಜುನಾಥ್ (45) ಹಾಗೂ ಇತರರ ವಿರುದ್ಧ ವಂಚನೆ ಆರೋಪದಡಿ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಜ್ಞಾನಭಾರತಿ ಠಾಣೆ ಪೊಲೀಸ್ ಮೂಲಗಳು ಹೇಳಿವೆ.

'ವಿಶ್ವವಿದ್ಯಾಲಯದ ಪದವಿ (ಯು.ಜಿ) ಹಾಗೂ ಸ್ನಾತಕೋತ್ತರ (ಪಿ.ಜಿ) ಪರೀಕ್ಷೆಗಳ ಉತ್ತರ ಪತ್ರಿಕೆ ಮೌಲ್ಯಮಾಪನ ಪ್ರಕ್ರಿಯೆಯನ್ನು ಡಿಜಿಟಲೀಕರಣಗೊಳಿಸಲಾಗಿದೆ. ಉತ್ತರ ಪತ್ರಿಕೆಗಳನ್ನು ಸ್ಕ್ಯಾನಿಂಗ್ ಮಾಡಿ, ನಂತರ ಮೌಲ್ಯಮಾಪನ ಪ್ರಕ್ರಿಯೆ ಆರಂಭಿಸಲಾಗುತ್ತದೆ. ಇದೇ ಕೆಲಸಕ್ಕೆ ನಿಯೋಜನೆಗೊಂಡಿದ್ದ ನೌಕರ ಮಂಜುನಾಥ್, ಭಾಗಶಃ ಖಾಲಿ ಬಿಡಲಾಗಿದ್ದ 41 ಉತ್ತರ ಪತ್ರಿಕೆಗಳನ್ನು ಅಕ್ರಮವಾಗಿ ಪುನಃ ಬರೆಸಿ ಫಲಿತಾಂಶದ ಮೇಲೆ ಪರಿಣಾಮ ಬೀರುವಂತೆ ಮಾಡಿರುವುದಾಗಿ ದೂರಿನಲ್ಲಿ ಕುಲಸಚಿವರು ಆರೋಪಿಸಿದ್ದಾರೆ' ಎಂದು ತಿಳಿಸಿವೆ.

ಬಂಡಲ್‌ಗಳಲ್ಲಿ ಉತ್ತರ ಪತ್ರಿಕೆಗಳು: 'ಪದವಿ ಹಾಗೂ ಸ್ನಾತಕೋತ್ತರ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ಬಂಡಲ್‌ಗಳಲ್ಲಿ ಇರಿಸಲಾಗುತ್ತದೆ. ನಿಗದಿತ ಬಂಡಲ್‌ಗಳನ್ನು ತೆರೆದು ಒಂದೊಂದೇ ಉತ್ತರ ಪತ್ರಿಕೆಯನ್ನು ಪರೀಕ್ಷಾ ಭವನದ ನೌಕರರು ಸ್ಕ್ಯಾನಿಂಗ್ ಮಾಡುತ್ತಾರೆ. ನಂತರ, ಅದೇ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಲಾಗುತ್ತದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬಂಡಲ್‌ನಿಂದ ಅಕ್ರಮವಾಗಿ ಉತ್ತರ ಪತ್ರಿಕೆಗಳನ್ನು ಹೊರಗೆ ತೆಗೆದಿದ್ದ ಆರೋಪಿಗಳು, ಸಂಬಂಧಪಟ್ಟ ವಿದ್ಯಾರ್ಥಿಗಳಿಂದ ಪುನಃ ಉತ್ತರ ಬರೆಸಿದ್ದಾರೆ. ಅದೇ ಉತ್ತರ ಪತ್ರಿಕೆಯನ್ನು ಸ್ಕ್ಯಾನ್ ಮಾಡಿ ಪುನಃ ಬಂಡಲ್‌ನೊಳಗೆ ಸೇರಿಸಿರುವುದಾಗಿ ಮೇಲ್ನೋಟಕ್ಕೆ ಕಂಡುಬರುತ್ತಿದೆ' ಎಂದು ತಿಳಿಸಿವೆ.

ಹಣಕ್ಕಾಗಿ ಸಂಚು ರೂಪಿಸಿ ಕೃತ್ಯ: 'ಆರೋಪಿ ಟಿ. ಮಂಜುನಾಥ್, 2019ರಿಂದ ಪರೀಕ್ಷಾ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರ ಜೊತೆ ಮತ್ತಷ್ಟು ಗುತ್ತಿಗೆ ನೌಕರರು ಕೆಲಸಕ್ಕಿದ್ದಾರೆ. ಇವರಲ್ಲಿ ಹಲವರು, ಹಣಕ್ಕಾಗಿ ಸಂಚು ರೂಪಿಸಿ ಮೌಲ್ಯಮಾಪನದಲ್ಲಿ ಅಕ್ರಮ ಎಸಗಿರುವ ಅನುಮಾನವಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಏಪ್ರಿಲ್ 25ರಿಂದ ಕೆಲಸಕ್ಕೆ ಗೈರಾಗಿರುವ ಮಂಜುನಾಥ್, ವಾಪಸು ಕಚೇರಿಗೆ ಬಂದಿಲ್ಲ. ರಜೆ ಬಗ್ಗೆಯೂ ಅಧಿಕಾರಿಗಳಿಗೆ ಯಾವುದೇ ಮಾಹಿತಿ ನೀಡಿಲ್ಲ' ಎಂದು ತಿಳಿಸಿವೆ.

'41 ಉತ್ತರ ಪತ್ರಿಕೆಗಳ ಫಲಿತಾಂಶವನ್ನು ಈಗಾಗಲೇ ತಡೆ ಹಿಡಿಯಲಾಗಿದೆ ಎಂದು ದೂರುದಾರರು ತಿಳಿಸಿದ್ದಾರೆ. ಗುತ್ತಿಗೆ ನೌಕರ, ವಿದ್ಯಾರ್ಥಿಗಳು ಹಾಗೂ ಪ್ರಕರಣಕ್ಕೆ ಸಂಬಂಧಪಟ್ಟ ಎಲ್ಲರನ್ನೂ ವಿಚಾರಣೆ ನಡೆಸಿ ಹೆಚ್ಚಿನ ಮಾಹಿತಿ ಸಂಗ್ರಹಿಸಲಾಗುವುದು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ನ್ಯೂನತೆ ನಿವಾರಣೆಗೆ ಹೊಸ ತಂತ್ರಾಂಶ'

'ಮೌಲ್ಯಮಾಪನ ಡಿಜಿಟಲೀಕರಣ ಪ್ರಕ್ರಿಯೆ 2009ರಿಂದ ಆರಂಭವಾಗಿದೆ. ಕೋವಿಡ್ ಸಂದರ್ಭದಲ್ಲಿ ಅನಿವಾರ್ಯ ಕಾರಣದಿಂದಾಗಿ ಪದವಿ ಹಾಗೂ ಸ್ನಾತಕೋತ್ತರ ಪರೀಕ್ಷೆಗಳನ್ನು ಒಟ್ಟಿಗೆ ನಡೆಸಲಾಗಿತ್ತು. 5 ಲಕ್ಷದಿಂದ 6 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು' ಎಂದು ಕುಲಸಚಿವ ಶ್ರೀನಿವಾಸ್ ದೂರಿನಲ್ಲಿ ತಿಳಿಸಿದ್ದಾರೆ.

'ಸ್ಕ್ಯಾನಿಂಗ್ ಹಾಗೂ ಡಿಜಿಟಲ್ ಮೌಲ್ಯಮಾಪನ ನೂತನ ಪದ್ಧತಿಯಾಗಿದ್ದರಿಂದ ಫಲಿತಾಂಶದಲ್ಲಿ ನ್ಯೂನತೆ ಕಂಡುಬಂದಿತ್ತು. ಇದಾದ ನಂತರ, ಹೊಸ ತಂತ್ರಾಂಶ ಪರಿಚಯಿಸಲಾಗಿದೆ. ಎಲ್ಲ ನ್ಯೂನತೆಗಳ ನಿವಾರಣೆಯಾಗಿ, 2022ರಿಂದ ನಿಖರ ಫಲಿತಾಂಶ ನೀಡಲಾಗುತ್ತಿದೆ' ಎಂದಿದ್ದಾರೆ.

ಸುದ್ದಿ 2 ನಿಮಿಷ

ಚಪ್ಪಲಿ ಹುಡುಕಿಕೊಡುವಂತೆ ಪೊಲೀಸರಿಗೆ ಯುವಕನ ಕರೆ!

ಬೆಂಗಳೂರು: 'ನನ್ನ ಚಪ್ಪಲಿ ಕಳ್ಳತನವಾಗಿದ್ದು, ಹುಡುಕಿಕೊಡಿ' ಎಂದು ಯುವಕನೊಬ್ಬ 'ನಮ್ಮ 112' ನಿಯಂತ್ರಣ ಕೊಠಡಿಗೆ ಕರೆ ಮಾಡಿ ದೂರು ನೀಡಿದ್ದು, ಸ್ಥಳಕ್ಕೆ ಹೋದ ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ ಯುವಕನಿಗೆ ಬುದ್ಧಿ ಹೇಳಿ ಬಿಟ್ಟು ಕಳುಹಿಸಿದ್ದಾರೆ.

ಹೈಗ್ರೌಂಡ್ ಠಾಣೆ ವ್ಯಾಪ್ತಿಯ ಕಾರ್ ಸ್ಟ್ರೀಟ್‌ನಲ್ಲಿರುವ ಸಭಾ ಭವನವೊಂದಕ್ಕೆ ಭಾನುವಾರ ರಾತ್ರಿ ಬಂದಿದ್ದ ಯುವಕ, ಹೊರಗಡೆ ಚಪ್ಪಲಿ ಬಿಟ್ಟು ಒಳಗೆ ಹೋಗಿದ್ದ. ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡು ಕೆಲ ನಿಮಿಷಗಳ ನಂತರ ಹೊರಗೆ ಬಂದಿದ್ದ. ಆದರೆ, ಸ್ಥಳದಲ್ಲಿ ಚಪ್ಪಲಿಗಳು ಇರಲಿಲ್ಲ. ಚಪ್ಪಲಿಗಾಗಿ ಹಲವೆಡೆ ಹುಡುಕಾಟ ನಡೆಸಿದರೂ ಪತ್ತೆಯಾಗಿರಲಿಲ್ಲ. ನಿಯಂತ್ರಣ ಕೊಠಡಿಗೆ ಕರೆ ಮಾಡಿದ್ದ ಯುವಕ, 'ಸಭಾಭವನದಲ್ಲಿ ಚಪ್ಪಲಿಗಳು ಕಳ್ಳತನವಾಗುತ್ತಿವೆ. ನನ್ನ ಚಪ್ಪಲಿ ಸಹ ಇಂದು ಕಳ್ಳತನವಾಗಿದೆ. ಪೊಲೀಸರನ್ನು ಸ್ಥಳಕ್ಕೆ ಕಳುಹಿಸಿ. ಚಪ್ಪಲಿ ಹುಡುಕಿಕೊಡಿ' ಎಂದು ದೂರಿದ್ದರು. ಗಸ್ತಿನಲ್ಲಿದ್ದ ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ, ಸ್ಥಳಕ್ಕೆ ಹೋಗಿದ್ದರು.

ಯುವಕನಿಂದ ಮಾಹಿತಿ ಪಡೆದಿದ್ದ ಸಿಬ್ಬಂದಿ, ಚಪ್ಪಲಿಗಾಗಿ ಕೆಲ ನಿಮಿಷ ಹುಡುಕಾಟ ನಡೆಸಿದ್ದರು. ಆದರೆ, ಚಪ್ಪಲಿ ಸಿಕ್ಕಿರಲಿಲ್ಲ. ಯುವಕನನ್ನು ತರಾಟೆಗೆ ತೆಗೆದುಕೊಂಡ ಸಿಬ್ಬಂದಿ, 'ಚಪ್ಪಲಿ ಕಳವು ಬಗ್ಗೆ ದೂರು ನೀಡಬೇಡ' ಎಂದು ಬುದ್ಧಿವಾದ ಹೇಳಿ ಬಿಟ್ಟು ಕಳುಹಿಸಿದ್ದಾರೆ. ಯುವಕ ಯಾರು ಹಾಗೂ ವಿಳಾಸವೇನು ಎಂಬುದು ಗೊತ್ತಾಗಿಲ್ಲ.

₹10 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ

ಬೆಂಗಳೂರು: ಶಬ್ದಕೋಶದೊಳಗಿನ ರಹಸ್ಯ ಲಾಕರ್‌ನಲ್ಲಿ ಡ್ರಗ್ಸ್ ಬಚ್ಚಿಟ್ಟು ಮಾರುತ್ತಿದ್ದ ಆರೋಪದಡಿ ಮಾರ್ಕ್ ಜಿಸ್ಟ್ (32) ಅವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ನೈಜೀರಿಯಾದ ಮಾರ್ಕ್, ನಗರದ ಪರಿಚಯಸ್ಥ ಗ್ರಾಹಕರಿಗೆ ಡ್ರಗ್ಸ್ ಮಾರುತ್ತಿದ್ದ. ಈ ಬಗ್ಗೆ ಮಾಹಿತಿ ಸಂಗ್ರಹಿಸಿ ಕಾರ್ಯಾಚರಣೆ ನಡೆಸಿ ಈತನನ್ನು ಬಂಧಿಸಲಾಗಿದೆ. ₹ 10 ಲಕ್ಷ ಮೌಲ್ಯದ ಕೊಕೇನ್, ದ್ವಿಚಕ್ರ ವಾಹನ ಹಾಗೂ ₹ 10 ಸಾವಿರ ನಗದು ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಮೂಲಗಳು ಹೇಳಿವೆ.

'ಡ್ರಗ್ಸ್ ಮಾರಾಟಕ್ಕೆಂದು ಆರೋಪಿ, 'ದಿ ನ್ಯೂ ಇಂಗ್ಲಿಷ್' ಹೆಸರಿನ ದೊಡ್ಡ ಗಾತ್ರದ ಶಬ್ದಕೋಶ ಖರೀದಿಸಿದ್ದ. ಅದರೊಳಗಿನ ಪುಟಗಳನ್ನು ಹರಿದು ಹಾಕಿ, ರಹಸ್ಯ ಲಾಕರ್ ಮಾಡಿಸಿದ್ದ. ಚಿಕ್ಕ ಪೊಟ್ಟಣಗಳಲ್ಲಿ ಡ್ರಗ್ಸ್ ತುಂಬಿ, ಲಾಕರ್‌ನೊಳಗೆ ಬಚ್ಚಿಡುತ್ತಿದ್ದ. ನಂತರ, ಶಬ್ದಕೋಶ ಹಿಡಿದು ಸುತ್ತಾಡಿ ಡ್ರಗ್ಸ್ ಮಾರುತ್ತಿದ್ದ. ಈತನ ಕೃತ್ಯದ ಬಗ್ಗೆ ಯಾರಿಗೂ ಅನುಮಾನ ಬರುತ್ತಿರಲಿಲ್ಲ.'

'ಆರೋಪಿ ಶಬ್ದಕೋಶ ಹಿಡಿದು ಹೊರಟರೆ, ಕಾಲೇಜಿಗೆ ತೆರಳುತ್ತಿರಬಹುದೆಂದು ಜನ ಅಂದುಕೊಳ್ಳುತ್ತಿದ್ದರು. ದಾಳಿ ಮಾಡಿದ ಸಂದರ್ಭದಲ್ಲಿಯೇ ಈತನ ಶಬ್ದಕೋಶದ ರಹಸ್ಯ ಲಾಕರ್ ಪತ್ತೆಯಾಯಿತು' ಎಂದು ಮೂಲಗಳು ತಿಳಿಸಿವೆ.

ಚಿಕ್ಕಬಾಣಾವರದಲ್ಲಿ ಕೃತ್ಯ • ಕುಡಿದು ಜಗಳ ಮಾಡುತ್ತಿದ್ದ ಚಾಂದ್‌ಪಾಷಾ

ಮಗನಿಗೆ ಬೆಂಕಿ ಹಚ್ಚಿ ಕೊಂದ ತಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಬಾಣಾವರದಲ್ಲಿ ಚಾಂದ್ ಪಾಷಾ (42) ಎಂಬುವವರನ್ನು ಬೆಂಕಿ ಹಚ್ಚಿ ಸುಟ್ಟು ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿರುವ ಆರೋಪದಡಿ ತಾಯಿ ಸೋಫಿಯಾ ಬಿ. (60) ವಿರುದ್ಧ ಸೋಲದೇವನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಸೋಮವಾರ ಸಂಜೆ ನಡೆದಿರುವ ಘಟನೆಯಲ್ಲಿ ಚಾಂದ್ ಪಾಷಾ ಸ್ಥಳದಲ್ಲಿಯೇ ಸುಟ್ಟು ಮೃತಪಟ್ಟಿದ್ದಾರೆ. ಪ್ರತ್ಯಕ್ಷದರ್ಶಿಗಳು ನೀಡಿರುವ ಹೇಳಿಕೆ ಆಧರಿಸಿ ಕೊಲೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ತಾಯಿಯನ್ನು ವಶಕ್ಕೆ ಪಡೆದು ಮುಂದಿನ ಕ್ರಮ ಜರುಗಿಸಲಾಗುವುದು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸೋಫಿಯಾ ಅವರ ಪತಿ ಹಲವು ವರ್ಷಗಳ ಹಿಂದೆಯೇ ತೀರಿಕೊಂಡಿದ್ದಾರೆ. ಸೋಫಿಯಾ ಅವರಿಗೆ ಚಾಂದ್‌ಪಾಷಾ ಸೇರಿ ನಾಲ್ವರು ಮಕ್ಕಳು. ಮೂವರು ಮಕ್ಕಳು, ಪ್ರತ್ಯೇಕವಾಗಿ ಬೇರೆಡೆ ವಾಸವಿದ್ದಾರೆ.'

'ಚಾಂದ್‌ಪಾಷಾ ಅವರಿಗೂ ಮದುವೆಯಾಗಿತ್ತು. ಮದ್ಯವ್ಯಸನಿಯಾಗಿದ್ದ ಚಾಂದ್, ನಿತ್ಯವೂ ಕುಡಿದು ಬಂದು ಮನೆಯಲ್ಲಿ ಗಲಾಟೆ ಮಾಡುತ್ತಿದ್ದರು. ಇವರ ಕಾಟದಿಂದ ಬೇಸತ್ತ ಪತ್ನಿ, ತವರು ಮನೆಗೆ ಹೋಗಿದ್ದಾರೆ. ಇದರಿಂದಾಗಿ ಚಾಂದ್, ತಾಯಿ ಸೋಫಿಯಾ ಜೊತೆ ವಾಸವಿದ್ದರು' ಎಂದು ಮೂಲಗಳು ತಿಳಿಸಿವೆ.

'ತಾಯಿ–ಮಗ ಮಾತ್ರ ಮನೆಯಲ್ಲಿರುತ್ತಿದ್ದರು. ಸೋಫಿಯಾ ಅವರೇ ಕೂಲಿ ಕೆಲಸ ಮಾಡಿ ಮಗನನ್ನು ಸಾಕುತ್ತಿದ್ದರು. ಸಣ್ಣ–ಪುಟ್ಟ ಕೆಲಸ ಮಾಡುತ್ತಿದ್ದ ಚಾಂದ್, ಕೈಗೆ ಬಂದ ಹಣವನ್ನೆಲ್ಲ ಮದ್ಯ ಖರೀದಿಗೆ ಖರ್ಚು ಮಾಡುತ್ತಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

ಎಚ್ಚರಿಸಲು ಹೋಗಿ ಕೊಲೆ: 'ಸೋಫಿಯಾ ಅವರು ಸೀಮೆಎಣ್ಣೆ ಸ್ಟೌವ್ ಮೇಲೆ ಅಡುಗೆ ಮಾಡಿಕೊಳ್ಳುತ್ತಿದ್ದರು. ಭಾನುವಾರ ರಾತ್ರಿ ಚಾಂದ್, ವಿಪರೀತ ಕುಡಿದು ಮನೆಗೆ ಬಂದಿದ್ದರು. ಪುನಃ ಜಗಳ ಶುರುವಾಗಿತ್ತು. ಸೋಮವಾರ ಪುನಃ ಕುಡಿದು ಬಂದರೆ, ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚುವುದಾಗಿ ತಾಯಿ ಬೆದರಿಸಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಸೋಮವಾರ ಬೆಳಿಗ್ಗೆ ಮನೆಯಿಂದ ಹೊರಗೆ ಹೋಗಿದ್ದ ಚಾಂದ್, ಪುನಃ ಮದ್ಯ ಕುಡಿದು ಮಧ್ಯಾಹ್ನ 4 ಗಂಟೆ ಸುಮಾರಿಗೆ ವಾಪಸು ಬಂದಿದ್ದರು. ನಿಂತುಕೊಳ್ಳಲು ಸಾಧ್ಯವಾಗದೇ ಮನೆ ಎದುರು ಮಲಗಿದ್ದರು. ಅವರನ್ನು ನೋಡಿದ್ದ ತಾಯಿ, ಕೋಪದಲ್ಲಿ ಬೈದಾಡಿದ್ದರು. ಚಾಂದ್ ಪಕ್ಕದಲ್ಲಿದ್ದ ತಲೆದಿಂಬಿಗೆ ಸ್ವಲ್ಪ ಸೀಮೆಎಣ್ಣೆ ಸುರಿದಿದ್ದ ತಾಯಿ, 'ನನ್ನ ಮಾತನ್ನು ನೀನು ಕೇಳುತ್ತಿಲ್ಲ. ಬೆಂಕಿ ಹಚ್ಚುತ್ತೇನೆ' ಎಂದು ಬೆದರಿಸಿದ್ದರು. ಅದಕ್ಕೂ ಮಗ, ಕ್ಯಾರೆ ಎಂದಿರಲಿಲ್ಲ.'

'ತಾಳ್ಮೆ ಕಳೆದುಕೊಂಡ ತಾಯಿ, ಚಾಂದ್ ಮೈ ಮೇಲೆ ಅರ್ಧ ಲೀಟರ್ ಸೀಮೆಎಣ್ಣೆ ಸುರಿದಿದ್ದರು. 'ಕುಡಿಯುವುದಿಲ್ಲವೆಂದು ಹೇಳು. ಇಲ್ಲದಿದ್ದರೆ, ಬೆಂಕಿ ಹಚ್ಚುತ್ತೇನೆ' ಎಂದು ಪುನಃ ಬೆದರಿಸಿದ್ದರು. ಅದಕ್ಕೂ ಮಗ ಪ್ರತಿಕ್ರಿಯಿಸಿರಲಿಲ್ಲ. ಮತ್ತಷ್ಟು ಕೋಪಗೊಂಡ ತಾಯಿ, ಕಡ್ಡಿ ಗೀರಿ ಮಗನ ಮೇಲೆ ಎಸೆದಿದ್ದರು. ಕ್ಷಣಾರ್ಧದಲ್ಲಿ ಬೆಂಕಿ ಹೊತ್ತಿಕೊಂಡು, ಚಾಂದ್ ಮೈ ತುಂಬ ಆವರಿಸಿತ್ತು.'

'ಬೆಂಕಿಯಲ್ಲಿ ಮಗ ಸುಡುವುದನ್ನು ನೋಡಿ ಚೀರಾಡಿದ್ದ ತಾಯಿ, ರಕ್ಷಿಸುವಂತೆ ಸ್ಥಳೀಯರಲ್ಲಿ ಗೋಳಾಡಿದ್ದಳು. ಆದರೆ, ಬೆಂಕಿ ಕೆನ್ನಾಲಗೆ ಹೆಚ್ಚಾಗಿದ್ದರಿಂದ ರಕ್ಷಣೆ ಸಾಧ್ಯವಾಗಿರಲಿಲ್ಲ. ಮಾಹಿತಿ ಬರುತ್ತಿದ್ದಂತೆ ಸ್ಥಳಕ್ಕೆ ಹೋಗಿ, ಮೃತದೇಹವನ್ನು ಆಸ್ಪತ್ರೆಗೆ ಸಾಗಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸೀಮೆಎಣ್ಣೆ ಮಾರಾಟದ ಬಗ್ಗೆ ತನಿಖೆ'

'ಸೀಮೆಎಣ್ಣೆ ಮಾರಾಟವನ್ನು ರಾಜ್ಯದಲ್ಲಿ ನಿರ್ಬಂಧಿಸಲಾಗಿದೆ. ಆದರೆ, ಸೋಫಿಯಾ ಅವರಿಗೆ ಸೀಮೆಎಣ್ಣೆ ಎಲ್ಲಿ ಸಿಕ್ಕಿತು. ಅದನ್ನು ಮಾರಿದವರು ಯಾರು ಎಂಬುದನ್ನು ತಿಳಿಯಲು ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಅಪರಾಧ ಸುದ್ದಿ

ಅನಂತಪುರದ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ 31ನೇ ಘಟಿಕೋತ್ಸವದಲ್ಲಿ 'ಸಮರ್ಥನಂ' ಅಂಗವಿಕಲರ ಸಂಸ್ಥೆ ಅಧ್ಯಕ್ಷ ಡಾ.ಜಿ.ಕೆ.ಮಹಾಂತೇಶ್ ಅವರಿಗೆ ಆಂಧ್ರಪ್ರದೇಶದ ರಾಜ್ಯಪಾಲ ಎಸ್. ಅಬ್ದುಲ್ ನಜೀರ್ ಅವರು ಗೌರವ ಡಾಕ್ಟರೇಟ್ ಪ್ರದಾನ ಮಾಡಿದರು. ಉನ್ನತ ಶಿಕ್ಷಣ ಸಚಿವ ಬೊಟ್ಚಾ ಸತ್ಯನಾರಾಯಣ ಇದ್ದರು

ಕಾಳಸಂತೆಯಲ್ಲಿ ಸಿಲಿಂಡರ್ ಮಾರಾಟ ಜಾಲ ಪತ್ತೆ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಹಕರ ಮನೆಗಳಿಗೆ ತಲುಪಬೇಕಿದ್ದ ಗೃಹ ಬಳಕೆ ಅನಿಲ ಸಿಲಿಂಡರ್‌ಗಳನ್ನು ಕಾಳಸಂತೆಯಲ್ಲಿ ಮಾರುತ್ತಿರುವ ಜಾಲವನ್ನು ಸಿಸಿಬಿ ಪೊಲೀಸರು ಭೇದಿಸಿದ್ದಾರೆ.

ಇಂಡೇನ್, ಭಾರತ್, ಎಚ್‌.ಪಿ, ಗೋಗ್ಯಾಸ್ ಹಾಗೂ ಇತರೆ ಕಂಪನಿಗಳ ಸಿಲಿಂಡರ್‌ಗಳನ್ನು ಕಾಳಸಂತೆಯಲ್ಲಿ ದುಪ್ಪಟ್ಟು ಹಣಕ್ಕೆ ಮಾರಾಟ ಮಾಡುತ್ತಿರುವುದು ಸಿಸಿಬಿ ತನಿಖೆಯಿಂದ ಪತ್ತೆಯಾಗಿದೆ. ಆರೋಪಿಗಳ ಕೃತ್ಯದಿಂದಾಗಿ ಮಾರುಕಟ್ಟೆಯಲ್ಲಿ ಸಿಲಿಂಡರ್ ಅಭಾವ ಸೃಷ್ಟಿಯಾಗುತ್ತಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ರಿಫಿಲ್ಲಿಂಗ್ ದಂಧೆಯಲ್ಲಿ ತೊಡಗಿದ್ದ ಬಿಟಿಎಂ ಎರಡನೇ ಹಂತದ ನಿವಾಸಿ ಎಂ.ಸುಮಂತ್ (32), ದೀಪಕ್ (30), ರಾಜು (21), ಪ್ರಕಾಶ್ (21) ಹಾಗೂ ರಿತಿಕ್ (19) ಅವರನ್ನು ಇತ್ತೀಚೆಗಷ್ಟೇ ಸಿಸಿಬಿ ಪೊಲೀಸರು ಬಂಧಿಸಿದ್ದರು. ಇವರಿಂದ ₹ 35 ಲಕ್ಷ ಮೌಲ್ಯದ 694 ಸಿಲಿಂಡರ್ ಹಾಗೂ 75 ರಿಫಿಲ್ಲಿಂಗ್ ರಾಡ್‌ಗಳನ್ನು ಜಪ್ತಿ ಮಾಡಿದ್ದರು. ಪರಪ್ಪನ ಅಗ್ರಹಾರ ಠಾಣೆ ವ್ಯಾಪ್ತಿಯಲ್ಲೂ ರಿಫಿಲ್ಲಿಂಗ್ ದಂಧೆ ನಡೆಸಿ ಇಬ್ಬರು ಸಿಕ್ಕಿಬಿದ್ದಿದ್ದಾರೆ.

'ಗ್ರಾಹಕರು ಕಾಯ್ದಿರಿಸುವ ಸಿಲಿಂಡರ್‌ಗಳನ್ನು ಏಜೆನ್ಸಿ ಸಿಬ್ಬಂದಿಯೇ ಕಾಳಸಂತೆಯಲ್ಲಿ ಮಾರುತ್ತಿದ್ದಾರೆ. ನಿಗದಿತ ಸಮಯಕ್ಕೆ ಗ್ರಾಹಕರಿಗೆ ಅಡುಗೆ ಅನಿಲ ಸಿಲಿಂಡರ್ ಸಿಗುತ್ತಿಲ್ಲ. ನಗರ ಹಾಗೂ ರಾಜ್ಯದ ಇತರೆಡೆ ಈ ಜಾಲ ವ್ಯಾಪಿಸಿರುವುದು ಕಂಡುಬರುತ್ತಿದೆ' ಎಂದು ಸಿಸಿಬಿ ಮೂಲಗಳು ಹೇಳಿವೆ.

ಎರಡು ಏಜೆನ್ಸಿ ಮೇಲೆ ದಾಳಿ: ಗೃಹ ಬಳಕೆ ಸಿಲಿಂಡರ್‌ಗಳನ್ನು ಅಕ್ರಮವಾಗಿ ಸಂಗ್ರಹಿಸಿಟ್ಟುಕೊಂಡು ಸಣ್ಣ ಸಿಲಿಂಡರ್‌ಗಳಿಗೆ ರಿಫಿಲ್ಲಿಂಗ್ ಮಾಡುತ್ತಿದ್ದ ಎರಡು ಏಜೆನ್ಸಿಗಳ ಮೇಲೆ ಪ್ರತ್ಯೇಕ ದಾಳಿ ಮಾಡಿದ್ದ ಸಿಸಿಬಿ ಪೊಲೀಸರು ಹಾಗೂ ಪರಪ್ಪನ ಅಗ್ರಹಾರ ಠಾಣೆ ಪೊಲೀಸರು, ಏಜೆನ್ಸಿ ಮಾಲೀಕರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

'ಪರಪ್ಪನ ಅಗ್ರಹಾರ ಠಾಣೆ ವ್ಯಾಪ್ತಿಯ ಸಿ.ಕೆ. ನಗರದಲ್ಲಿರುವ ಎಸ್.ಎಲ್.ಆರ್ ಎಂಟರ್‌ಪ್ರೈಸಸ್ ಹಾಗೂ ವೆಂಕಟೇಶ್ವರ್ ಗ್ಯಾಸ್ ಏಜೆನ್ಸಿ ಮೇಲೆ ಇತ್ತೀಚೆಗೆ ದಾಳಿ ಮಾಡಲಾಗಿತ್ತು. ಎರಡೂ ಕಡೆ ಗೃಹ ಬಳಕೆ ಸಿಲಿಂಡರ್‌ಗಳು ಪತ್ತೆಯಾಗಿವೆ' ಎಂದು ಪೊಲೀಸರು ಹೇಳಿದರು.

'ಏಜೆನ್ಸಿಗಳ ಮಾಲೀಕರಾದ ರಘು ಹಾಗೂ ಮಲ್ಲಿಕಾರ್ಜುನ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಅವರಿಬ್ಬರು ಇದುವರೆಗೂ ಎಷ್ಟು ಸಿಲಿಂಡರ್ ಬಳಕೆ ಮಾಡಿದ್ದರು. ಯಾವೆಲ್ಲ ಏಜೆನ್ಸಿಗಳ ಜೊತೆ ಒಡನಾಟ ಹೊಂದಿ ಕೃತ್ಯ ಎಸಗುತ್ತಿದ್ದರು ಎಂಬುದನ್ನು ತಿಳಿಯಲು ತನಿಖೆ ಮುಂದುವರಿಸಲಾಗಿದೆ' ಎಂದು ತಿಳಿಸಿದರು.

ಸಾರ್ವಜನಿಕರ ಜೀವಕ್ಕೆ ಕುತ್ತು: 'ಆರೋಪಿಗಳು, ಗ್ಯಾಸ್ ರಿಫಿಲ್ಲಿಂಗ್ ಮಾಡಲು ಯಾವುದೇ ಅನುಮತಿ ಪಡೆದಿರಲಿಲ್ಲ. ಇವರ ಕೃತ್ಯದಿಂದ ಸಾರ್ವಜನಿಕರ ಜೀವಕ್ಕೆ ಕುತ್ತು ಉಂಟಾಗುವ ಹಾಗೂ ಆಸ್ತಿಗೆ ಹಾನಿಯಾಗುವ ಸಾಧ್ಯತೆ ಇತ್ತು. ರಿಫಿಲ್ಲಿಂಗ್ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಲಾಗಿತ್ತು' ಎಂದು ಪೊಲೀಸರು ಹೇಳಿದರು.

'ಏಜೆನ್ಸಿಗಳ ಮಾಹಿತಿ ಸಂಗ್ರಹ'

'ಗ್ರಾಹಕರು ತಮ್ಮ ಮೊಬೈಲ್ ನಂಬರ್‌ನಿಂದ ಸಿಲಿಂಡರ್ ಕಾಯ್ದಿರಿಸುತ್ತಿದ್ದಾರೆ. ಅಂಥ ಗ್ರಾಹಕರಿಗೆ ನಿಗದಿತ ದಿನದಂದು ಸಿಲಿಂಡರ್ ಸಿಗುತ್ತಿಲ್ಲ. ಏಜೆನ್ಸಿ ಸಿಬ್ಬಂದಿ, ಸಿಲಿಂಡರ್ ಮಾರಾಟ ಮಾಡುತ್ತಿರುವ ಮಾಹಿತಿ ಇದೆ. ಈ ನಿಟ್ಟಿನಲ್ಲಿ ತಪ್ಪಿತಸ್ಥ ಏಜೆನ್ಸಿ ಹಾಗೂ ಸಿಬ್ಬಂದಿ ಬಗ್ಗೆ ಮಾಹಿತಿ ಸಂಗ್ರಹಿಸಲಾಗುತ್ತಿದೆ' ಎಂದು ಸಿಸಿಬಿ ಮೂಲಗಳು ಹೇಳಿವೆ. 'ಸಿಲಿಂಡರ್ ಅಕ್ರಮ ಮಾರಾಟ ಹಾಗೂ ರಿಫಿಲ್ಲಿಂಗ್ ಬಗ್ಗೆ ಮಾಹಿತಿ ಇದ್ದರೆ ಸಾರ್ವಜನಿಕರು ಪೊಲೀಸರ 112 ನಿಯಂತ್ರಣ ಕೊಠಡಿಗೆ ಮಾಹಿತಿ ನೀಡಬಹುದು' ಎಂದು ತಿಳಿಸಿವೆ.

ಕಸದ ಲಾರಿ ಡಿಕ್ಕಿ: ವೃದ್ಧೆ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಕಸ ಸಾಗಣೆ ಲಾರಿ ಡಿಕ್ಕಿ ಹೊಡೆದು ಮುನಿಯಮ್ಮ (60) ಮೃತಪಟ್ಟಿದ್ದು, ಈ ಸಂಬಂಧ ಹಲಸೂರು ಗೇಟ್ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಕೊಡಿಗೆಹಳ್ಳಿಯ ಗಂಗಾ ಭವಾನಿ ರಸ್ತೆಯ ನಿವಾಸಿ ಮುನಿಯಮ್ಮ ಅವರು ಸೋಮವಾರ ಮಧ್ಯಾಹ್ನ ರಸ್ತೆ ದಾಟುತ್ತಿದ್ದ ವೇಳೆ ಈ ಅವಘಡ ಸಂಭವಿಸಿದೆ. ನಿರ್ಲಕ್ಷ್ಯ ಹಾಗೂ ಅತೀ ವೇಗದ ಚಾಲನೆ ಆರೋಪದಡಿ ಪ್ರಕರಣ ದಾಖಲಿಸಿಕೊಂಡು, ಬಿಬಿಎಂಪಿ ಲಾರಿ ಚಾಲಕ ಶಿವಕುಮಾರ್‌ನನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಸಿಗ್ನಲ್ ಜಂಪ್ ಮಾಡಿದ್ದ ಚಾಲಕ: 'ಚಾಲಕ ಶಿವಕುಮಾರ್, ಲಾರಿ (ಕೆಎ 05 ಎಎಫ್ 7198) ಚಲಾಯಿಸಿಕೊಂಡು ನೃಪತುಂಗ ರಸ್ತೆಯಿಂದ ಕಾರ್ಪೊರೇಷನ್ ವೃತ್ತದತ್ತ ಹೊರಟಿದ್ದ. ಹಡ್ಸನ್ ವೃತ್ತದ ಸಿಗ್ನಲ್‌ನಲ್ಲಿ ಕೆಂಪು ದೀಪ ಹೊತ್ತಿಕೊಂಡಿತ್ತು. ಅದನ್ನು ಲೆಕ್ಕಿಸದೇ ಸಿಗ್ನಲ್ ಜಂಪ್ ಮಾಡಿ ಅತೀ ವೇಗವಾಗಿ ಲಾರಿ ಚಲಾಯಿಸಿದ್ದ' ಎಂದು ಪೊಲೀಸರು ತಿಳಿಸಿದರು.

'ವೃದ್ಧೆ ಮುನಿಯಮ್ಮ ಅವರು ಝೀಬ್ರಾ ಕ್ರಾಸಿಂಗ್‌ನಲ್ಲಿ ರಸ್ತೆ ದಾಟುತ್ತಿದ್ದರು. ಲಾರಿ, ವೃದ್ಧೆಗೆ ಡಿಕ್ಕಿ ಹೊಡೆದಿತ್ತು. ರಸ್ತೆಯಲ್ಲಿ ಬಿದ್ದಿದ್ದ ಅವರ ಕಾಲಿನ ಮೇಲೆ ಲಾರಿ ಚಕ್ರ ಹರಿದಿತ್ತು. ತೀವ್ರ ಗಾಯಗೊಂಡು ನರಳಾಡುತ್ತಿದ್ದ ಮುನಿಯಮ್ಮ ಅವರನ್ನು ವೃತ್ತದಲ್ಲಿದ್ದ ಸಿಬ್ಬಂದಿ ಸಮೀಪದ ಆಸ್ಪತ್ರೆಗೆ ಕರೆದೊಯ್ದಿದ್ದರು. ಅಲ್ಲಿ ಅವರು ತೀರಿಕೊಂಡರು' ಎಂದು ಹೇಳಿದರು.

'ಚಾಲಕ ಶಿವಕುಮಾರ್ ಸಿಗ್ನಲ್ ಜಂಪ್ ಮಾಡಿದ್ದರಿಂದ ಅಪಘಾತ ಸಂಭವಿಸಿದೆ. ಲಾರಿ ಜಪ್ತಿ ಮಾಡಿ, ಶಿವಕುಮಾರ್‌ನನ್ನು ಸೆರೆ ಹಿಡಿಯಲಾಗಿದೆ. ಈತ ಮದ್ಯ ಕುಡಿದಿರುವ ಅನುಮಾನವಿದ್ದು, ವೈದ್ಯಕೀಯ ಪರೀಕ್ಷೆ ವರದಿ ಬಂದ ಬಳಿಕವೇ ಹೆಚ್ಚಿನ ಮಾಹಿತಿ ತಿಳಿಯಲಿದೆ' ಎಂದು ತಿಳಿಸಿದರು.

ಪರೀಕ್ಷೆಯಲ್ಲಿ ನಕಲು ವಿದ್ಯಾರ್ಥಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರೀಕ್ಷೆಯಲ್ಲಿ ನಕಲು ಮಾಡುವಾಗ ಮೇಲ್ವಿಚಾರಕರಿಗೆ ಸಿಕ್ಕಿಬಿದ್ದು, ಅವಮಾನಗೊಂಡ ವಿದ್ಯಾರ್ಥಿ ಆದಿತ್ಯ ಪ್ರಭು (19) ಎಂಟನೇ ಮಹಡಿಯಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಸಂಬಂಧ ಗಿರಿನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಮಂಗಳೂರಿನ ಆದಿತ್ಯ ಪ್ರಭು, ಪಿಇಎಸ್ ಕಾಲೇಜಿನ ಮಾನವಿಕ ವಿಜ್ಞಾನ ವಿಭಾಗದಲ್ಲಿ ಎರಡನೇ ಸೆಮಿಸ್ಟರ್‌ನಲ್ಲಿ ಓದುತ್ತಿದ್ದರು. ಅವರು ಸೋಮವಾರ ಪರೀಕ್ಷೆಗೆ ಹಾಜರಾಗಿದ್ದರು. ಪರೀಕ್ಷೆ ಸಂದರ್ಭದಲ್ಲಿ ನಕಲು ಮಾಡಲು ಮೊಬೈಲ್ ಬಳಸುತ್ತಿದ್ದರು. ಅದನ್ನು ನೋಡಿದ್ದ ಮೇಲ್ವಿಚಾರಕ, ಮೊಬೈಲ್ ಕಸಿದುಕೊಂಡಿದ್ದರು. ನಂತರ, ಆದಿತ್ಯಾ ಜೊತೆ ಕಾಲೇಜಿನ ಶಿಕ್ಷಕರು ಆಪ್ತ ಸಮಾಲೋಚನೆ ನಡೆಸಿದ್ದರು. ನಕಲು ಮಾಡಿದ್ದ ಸಂಗತಿಯನ್ನು ಪೋಷಕರಿಗೆ ತಿಳಿಸುವುದಾಗಿ ಆದಿತ್ಯಾ ಅವರಿಗೆ ಹೇಳಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸಹಪಾಠಿಗಳ ಎದುರು ಈಗಾಗಲೇ ಅವಮಾನವಾಗಿದೆ. ಇದರ ಜೊತೆಗೆ, ಪೋಷಕರಿಗೆ ವಿಷಯ ತಿಳಿಸಿದರೆ ಮತ್ತಷ್ಟು ಕಷ್ಟವಾಗುತ್ತದೆ ಎಂದು ತಿಳಿದ ಆದಿತ್ಯಾ, ಕೊಠಡಿಯಿಂದ ಹೊರಗೆ ಓಡಿ ಬಂದಿದ್ದರು. ಕಾಲೇಜು ಕಟ್ಟಡದ 8ನೇ ಮಹಡಿಯಿಂದ ಜಿಗಿದಿದ್ದರು. ತೀವ್ರ ಗಾಯಗೊಂಡು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಜೆ.ಪಿ. ನಗರದಲ್ಲಿ ಘಟನೆ: ತಂದೆ- ಮಗ ಬಂಧನ

ಕೋಳಿ ಅಂಗಡಿ ಜಗಳ: ನಿವೃತ್ತ ಎಂಜಿನಿಯರ್ ಹತ್ಯೆ

ಪ್ರಜಾವಾಣಿ ವಾರ್ತೆ

ವೆಂಕಟೇಶಪ್ಪ



ಅಭಿಷೇಕ್ ಹಾಗೂ ನಾಗರಾಜಪ್ಪ

ಬೆಂಗಳೂರು: ಕೋಳಿ ಅಂಗಡಿ ವಿಚಾರದಲ್ಲಿ ಉಂಟಾಗಿದ್ದ ವೈಷಮ್ಯದಿಂದಾಗಿ ನಿವೃತ್ತ ಎಂಜಿನಿಯರ್ ವೆಂಕಟೇಶಪ್ಪ ಅವರನ್ನು ಡ್ಯಾಗರ್‌ನಿಂದ ಇರಿದು ಹತ್ಯೆ ಮಾಡಲಾಗಿದೆ. ಕೃತ್ಯ ಎಸಗಿದ ಆರೋಪದಡಿ ತಂದೆ–ಮಗನನ್ನು ಜೆ.ಪಿ.ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಜೆ.ಪಿ. ನಗರ ನಿವಾಸಿ ವೆಂಕಟೇಶಪ್ಪ, ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್‌ನ (ಐಟಿಐ) ನಿವೃತ್ತ ಎಂಜಿನಿಯರ್. ಇವರನ್ನು ಕೊಲೆ ಮಾಡಿರುವ ಆರೋಪದಡಿ ಬಸವೇಶ್ವರ ನಗರದ ನಿವಾಸಿ ಅಭಿಷೇಕ್ (26) ಹಾಗೂ ಈತನ ತಂದೆ ನಾಗರಾಜಪ್ಪನನ್ನು (55) ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಮಾತುಕತೆ ನೆಪದಲ್ಲಿ ಸೋಮವಾರ ಮಧ್ಯಾಹ್ನ ಮನೆಗೆ ಬಂದಿದ್ದ ಆರೋಪಿಗಳು, ವೆಂಕಟೇಶಪ್ಪ ಅವರಿಗೆ ಡ್ಯಾಗರ್‌ನಿಂದ ಇರಿದು ಪರಾರಿಯಾಗಿದ್ದರು. ಪ್ರಕರಣ ದಾಖಲಾದ ಕೆಲ ಗಂಟೆಗಳಲ್ಲಿಯೇ ಆರೋಪಿಗಳನ್ನು ಸೆರೆ ಹಿಡಿಯಲಾಗಿದೆ' ಎಂದು ತಿಳಿಸಿದರು.

ಹಲವು ದಿನಗಳ ವೈಷಮ್ಯ: 'ವೆಂಕಟೇಶಪ್ಪ ಅವರಿಗೆ ಜೆ.ಪಿ. ನಗರ ಹಾಗೂ ಬಸವೇಶ್ವರನಗರ ಎರಡೂ ಕಡೆಯೂ ಪ್ರತ್ಯೇಕ ಮನೆಗಳಿದ್ದವು. ಸದ್ಯ ಜೆ.ಪಿ.ನಗರದಲ್ಲಿ ಪತ್ನಿ ಜೊತೆ ವಾಸವಿದ್ದ ವೆಂಕಟೇಶಪ್ಪ, ಆಗಾಗ ಬಸವೇಶ್ವರನಗರ ಮನೆಗೆ ಹೋಗಿ ಬರುತ್ತಿದ್ದರು. ಅದೇ ಮನೆ ಎದುರು ಆರೋಪಿ ಅಭಿಷೇಕ್ ಹಾಗೂ ನಾಗರಾಜಪ್ಪ ವಾಸವಿದ್ದರು' ಎಂದು ಪೊಲೀಸರು ಹೇಳಿದರು.

'ಆರೋಪಿ ಅಭಿಷೇಕ್, ಬಿ.ಕಾಂ ಪದವೀಧರ. ನಾಗರಾಜಪ್ಪ, ಆಟೊ ಚಾಲಕ. ಕೆಲಸ ಸಿಗದಿದ್ದರಿಂದ ಅಭಿಷೇಕ್ ಮನೆಯಲ್ಲಿದ್ದ. ಆತನಿಗೆ ಕೋಳಿ ಮಾಂಸ ಮಾರಾಟ ಅಂಗಡಿ ಇಟ್ಟುಕೊಡಲು ನಾಗರಾಜಪ್ಪ ಯೋಚಿಸಿದ್ದ. ಅದಕ್ಕಾಗಿ ತಮ್ಮ ಮನೆ ನೆಲಮಹಡಿಯಲ್ಲಿ ಮಳಿಗೆ ತೆರೆಯಲು ಸಿದ್ಧತೆ ನಡೆಸುತ್ತಿದ್ದರು' ಎಂದರು.

'ಕೋಳಿ ಮಾಂಸ ಮಾರಾಟ ಅಂಗಡಿ ತೆರೆಯಲು ವಿರೋಧಿಸಿದ್ದ ವೆಂಕಟೇಶಪ್ಪ, ಸ್ಥಳೀಯರ ಮೂಲಕ ಒತ್ತಡ ಹೇರಿಸಿದ್ದರು. ಯಾವುದೇ ಕಾರಣಕ್ಕೂ ಅಂಗಡಿ ತೆರೆಯದಂತೆ ತಾಕೀತು ಮಾಡಿದ್ದರು. 'ನಾನೇ ಹಣ ಕೊಡುತ್ತೇನೆ. ಕೋಳಿ ಮಾಂಸ ಅಂಗಡಿ ಬದಲು ಬೇರೆ ಅಂಗಡಿ ಮಾಡಿ' ಎಂದು ವೆಂಕಟೇಶಪ್ಪ ಹೇಳಿದ್ದರು. ಅದಕ್ಕೆ ತಂದೆ–ಮಗ ಒಪ್ಪಿರಲಿಲ್ಲ' ಎಂದು ಪೊಲೀಸರು ಹೇಳಿದರು.

ಡ್ಯಾಗರ್ ಸಮೇತ ಬಂದು ಕೊಲೆ: 'ವೆಂಕಟೇಶಪ್ಪ ಬದುಕಿದರೆ ಕೋಳಿ ಮಾಂಸ ಮಾರಾಟ ಅಂಗಡಿ ತೆರೆಯಲು ಬಿಡುವುದಿಲ್ಲವೆಂದು ತಿಳಿದ ತಂದೆ–ಮಗ, ಕೊಲೆ ಮಾಡಲು ಸಂಚು ರೂಪಿಸಿದ್ದರು. ಮಾತುಕತೆ ನೆಪದಲ್ಲಿ ಡ್ಯಾಗರ್ ಸಮೇತ ಜೆ.ಪಿ.ನಗರದ ಮನೆಗೆ ಸೋಮವಾರ ಮಧ್ಯಾಹ್ನ ಬಂದಿದ್ದರು' ಎಂದು ಪೊಲೀಸರು ತಿಳಿಸಿದರು.

'ಪರಿಚಯಸ್ಥರಾಗಿದ್ದರಿಂದ ಇಬ್ಬರನ್ನೂ ಬರಮಾಡಿಕೊಂಡಿದ್ದ ವೆಂಕಟೇಶಪ್ಪ, ಆತ್ಮೀಯತೆಯಿಂದ ಮಾತನಾಡುತ್ತಿದ್ದರು. ಚಹಾ ಮಾಡಿಕೊಂಡು ಬರುವಂತೆ ಪತ್ನಿಯನ್ನು ಅಡುಗೆ ಕೋಣೆಗೆ ಕಳುಹಿಸಿದ್ದರು. ಇದೇ ಸಂದರ್ಭದಲ್ಲಿ ಆರೋಪಿ ಅಭಿಷೇಕ್, ಏಕಾಏಕಿ ದಾಳಿ ಮಾಡಿ ಡ್ಯಾಗರ್‌ನಿಂದ ವೆಂಕಟೇಶಪ್ಪ ಅವರ ಹೊಟ್ಟೆಗೆ ಇರಿದಿದ್ದ' ಎಂದು ಹೇಳಿದರು.

ನೈಋತ್ಯ ರೈಲ್ವೆ
ಇ–ಟೆಂಡರು ಸೂಚನೆ ಸಂ.: E-GSU-ELE-2023-24-OT-10
ದಿನಾಂಕ: 12.07.2023
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಬೆಂಗಳೂರು ದಂಡು ಮತ್ತು ವೈಟ್‌ಫೀಲ್ಡ್ ನಡುವಿನ ಟ್ರ್ಯಾಕ್‌ಗಳ ಚತುಷ್ಪಥೀಕರಣಕ್ಕೆ ಸಂಬಂಧಿಸಿದಂತೆ, ಕೃಷ್ಣರಾಜಪುರಂ, ಹೂಡಿ ಹಾಲ್ಟ್, ವೈಟ್‌ಫೀಲ್ಡ್ ಪ್ಯಾನೆಲ್ ಕ್ಯಾಬಿನ್, ಸ್ಯಾಟಲೈಟ್ ಗೂಡ್ಸ್ ಟರ್ಮಿನಲ್ ಮತ್ತು ವೈಟ್‌ಫೀಲ್ಡ್ ನಿಲ್ದಾಣಗಳಲ್ಲಿ ವಿದ್ಯುತ್ ಕಾಮಗಾರಿ ವ್ಯವಸ್ಥೆ.	ರೂ. 1,93,27,327.33

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 04.08.2023, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್ ಗತಿ ಶಕ್ತಿ ಘಟಕ / ಬೆಂಗಳೂರು
PUB/244/AAD/PRB/SWR/2023-24
S.W.Railways SWRRLY SWRRLY

ನೈಋತ್ಯ ರೈಲ್ವೆ
ಇ–ಟೆಂಡರು ಸೂಚನೆ ಸಂ.: 21 UBL 2023-24
ದಿನಾಂಕ: 10.07.2023
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಹುಬ್ಬಳ್ಳಿ ವಿಭಾಗ: ಗದಗ –ಬಳ್ಳಾರಿ ವಿಭಾಗ: ಕೊಪ್ಪಳ–ಗಿಣಿಗೇರ ನಿಲ್ದಾಣಗಳ ನಡುವೆ ಆರ್‌ಹೆಚ್ ಗಿರ್ಡರ್/ಕಟ್ ಅಂಡ್ ಕವರ್ ಮಾದರಿ ಯಲ್ಲಿ ಕಿಮೀ. 124/3–4ರಲ್ಲಿ ಎಲ್‌ಸಿ ಸಂ. 71ಕ್ಕೆ ಬದಲು ಸೀಮಿತ ಎತ್ತರದ ಸುರಂಗಮಾರ್ಗ (ಎಲ್‌ಎಚ್‌ಎಸ್) ನಿರ್ಮಾಣ ಕಾರ್ಯ.	ರೂ. 5,98,06,263/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 07.08.2023, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ವರಿಷ್ಠ ವಿಭಾಗೀಯ ಇಂಜಿನಿಯರ್/ ಸಂಯೋಜನೆ ಹುಬ್ಬಳ್ಳಿ
PUB/245/AAD/PRB/SWR/2023-24
S.W.Railways SWRRLY SWRRLY

Mr. Rohinton Rashid Wadia (PAN: AAAPW1770F) jointly with Amy Jamshed Kapadia (deceased) and Jehan Darabsha Wadia (deceased) holding 14 shares of Bosch Limited (formerly: Motor Industries Company Limited) Hosur Road, Adugodi, Bangalore -560030 in Folio K03638 bearing Share Certificate Numbers 00002551, 00059178, I0012598 and PPN01693 and distinctive Numbers from 1172718 to 1172723, 1706320 to 1706324, 3161910 to 3161910 and 826559 to 826560 for 14 shares of INR. 100/- each.
I hereby give notice that the said Share Certificate(s) are lost and I have applied to the Company for issue of duplicate Share Certificates and exchange of the same with face value of INR 10/- each certificate(s).
The public is hereby warned against purchasing or dealing in anyway with the said Share Certificates. The Company may issue duplicate Share Certificates if no objection is received by the Company within 30 days of the publication of this advertisement, after which no claim will be entertained by the Company in that behalf.
Rohinton Rashid Wadia
Place: Mumbai Date: 18.7.2023

ನೈಋತ್ಯ ರೈಲ್ವೆ
ಇ–ಟೆಂಡರು ಸೂಚನೆ ಸಂ. 28/MYS/2023
ದಿನಾಂಕ: 12.07.2023
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರಸಂ.	ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
1	ಮೈಸೂರು ವಿಭಾಗ: ಹೊಳೆನರಸೀಪುರ ಮತ್ತು ಅರಸೀಕೆರೆಯಲ್ಲಿ ಟ್ರ್ಯಾಕ್ ಮಶೀನ್ ಸಿಬ್ಬಂದಿಗೆ ಬೇಕಾದ ವಿಶ್ರಾಂತಿ ಗೃಹಗಳ ಪೂರೈಕೆ.	ರೂ. 37,66,136/-
2	ಉಪ ಕಾಮಗಾರಿ–1: ವರಿಷ್ಠ ವಿಭಾಗೀಯ ಇಂಜಿನಿಯರ್/ಉ/ಮೈಸೂರು ವ್ಯಾಪ್ತಿ: ಚಿಕ್ಕಜಾಜೂರು, ಶಿವಾನಿ ಮತ್ತು ಚಿತ್ರದುರ್ಗದಲ್ಲಿ ಟ್ರ್ಯಾಕ್ ಮಶೀನ್ ಸಿಬ್ಬಂದಿಗೆ ಬೇಕಾದ ವಿಶ್ರಾಂತಿ ಗೃಹಗಳ ಪೂರೈಕೆ. ಉಪ ಕಾಮಗಾರಿ–2: ಎ: ಚಿಕ್ಕಜಾಜೂರಿನಲ್ಲಿ ರೈಲ್ವೆ ಇನ್‌ಸ್ಟಿಟ್ಯೂಟ್‌ನ ನಿರ್ಮಾಣ. ಉಪ ಕಾಮಗಾರಿ–2: ಬಿ: ಚಿಕ್ಕಜಾಜೂರಿನಲ್ಲಿ ಒಳಾಂಗಣ ಶಟಲ್ ಬ್ಯಾಡ್ಮಿಂಟನ್ ಕೋರ್ಟ್‌ನ ನಿರ್ಮಾಣ. ಉಪ ಕಾಮಗಾರಿ–3: ಎ: ಚಿಕ್ಕಜಾಜೂರಿನಲ್ಲಿ ಪ್ರಸ್ತಾವನೆಯ ರನ್ನಿಂಗ್ ರೂಂನ ವಿಸ್ತರೀಕರಣ. ಉಪ ಕಾಮಗಾರಿ–3: ಬಿ: ಚಿಕ್ಕಜಾಜೂರು – ಪ್ರಸ್ತುತವಿರುವ ಜಿಎಲ್‌ಆರ್‌ನ ಸ್ಥಳಾಂತರಕ್ಕೆ ಬದಲಾಗಿ 50,000 ಲಿ. ಸಾಮರ್ಥ್ಯವುಳ್ಳ ಜಿಎಲ್‌ಆರ್‌ನ ನಿರ್ಮಾಣ.	ರೂ. 1,83,82,163/-
3	ಚಿಕ್ಕಜಾಜೂರು–ರಾಯದುರ್ಗ ವಿಭಾಗ: ಟಿಬಿಟಿಆರ್–324 ನಂ. 25ಟಿ ಆಕ್ಸೆಲ್ ಲೋಡ್‌ಗೆ ಜೋಡಣೆಯಾಗುವಂತೆ ಸ್ಟೀಲ್ ಗಿರ್ಡರ್ ಬ್ರಿಡ್ಜ್‌ಗಳ ನಿರ್ಮಾಣಕ್ಕಾಗಿ ಸ್ಟೀಲ್ ಚ್ಯಾನೆಲ್ ಸ್ಲೀಪರ್‌ಗಳನ್ನು ಹೆಚ್ ಬೀಮ್ ಸ್ಲೀಪರುಗಳಾಗಿ ಬದಲಾಯಿಸುವುದು.	ರೂ. 1,31,14,953/-
4	ಉಪ–ಕಾಮಗಾರಿ–1: ಸಹಾಯಕ ವಿಭಾಗೀಯ ಇಂಜಿನಿಯರ್ / ದಾವಣಗೆರೆ ಉಪ–ವಿಭಾಗದ ಅಮರಾವತಿ ಕಾಲೋನಿ, ತೆಲಿಗಿ, ಹರಪ್ಪನಹಳ್ಳಿ, ಹರಿಹರ ಮತ್ತು ರಾಣೆಬೆನ್ನೂರು ನಿಲ್ದಾಣಗಳಲ್ಲಿ ಎಫ್‌ಒಬಿಗಳನ್ನು ಹೊಳಪಿಸುವುದು ಹಾಗೂ ದುರಸ್ತಿ ಮಾಡುವುದು. ಉಪ–ಕಾಮಗಾರಿ–2: ಸಹಾಯಕ ವಿಭಾಗೀಯ ಇಂಜಿನಿಯರ್ / ದಾವಣಗೆರೆ ವಿಭಾಗ – ಅಮರಾವತಿ ಕಾಲೋನಿ, ತೆಲಿಗಿ, ಹರಪ್ಪನಹಳ್ಳಿ, ಬೆಣ್ಣೆಹಳ್ಳಿ, ದಾವಣಗೆರೆ (ಎಸ್‌ಎಂ ಕಚೇರಿ ಮುಂಭಾಗ), ಹರಿಹರ ಮತ್ತು ರಾಣೆಬೆನ್ನೂರು ನಿಲ್ದಾಣಗಳಲ್ಲಿ ಪ್ಲಾಟ್‌ಫಾರ್ಮ್ ಅಡಗುತಾಣಗಳನ್ನು ಹೊಳಪಿಸುವುದು ಹಾಗೂ ದುರಸ್ತಿ ಮಾಡುವುದು.	ರೂ. 22,64,009/-
5	ಸಹಾಯಕ ವಿಭಾಗೀಯ ಇಂಜಿನಿಯರ್ / ಸಕಲೇಶಪುರ ಉಪ ವಿಭಾಗ: ದುರ್ಬಲವಾದ ಸ್ಥಳದಲ್ಲಿ ಕಾವಲುಗಾರರಿಗಾಗಿ ಪೋರ್ಟಬಲ್ ಕ್ಯಾಬಿನ್ ಮತ್ತು ಶೌಚಾಲಯದ ಪೂರೈಕೆ.	ರೂ. 43,65,810/-
6	ಮೈಸೂರು ವಿಭಾಗ: ಮೈಸೂರು, ಕಬಕಪುತ್ತೂರು, ಸುಬ್ರಮಣ್ಯ ರೋಡ್ ಮತ್ತು ಸಕಲೇಶಪುರದಲ್ಲಿ ಟ್ರ್ಯಾಕ್ ಮಶೀನ್ ಸಿಬ್ಬಂದಿಗೆ ಬೇಕಾದ ವಿಶ್ರಾಂತಿ ಗೃಹಗಳ ಪೂರೈಕೆ.	ರೂ. 75,32,272/-
7	ಉಪ ಕಾಮಗಾರಿ–1: ಹಾಸನ–ಮಂಗಳೂರು ಜಂ. ವಿಭಾಗದಲ್ಲಿ ಕಿಮೀ. 163/300–700 ರಲ್ಲಿ ಬ್ರಿಡ್ಜ್ ಸಂ. 597 (4x45.72+8x24.40ಮೀ. ಗಿರ್ಡರ್ – ನೇತ್ರಾವತಿ ಬ್ರಿಡ್ಜ್) ಮತ್ತು ಹಾಸನ–ಮಂಗಳೂರು ಜಂ. ವಿಭಾಗದಲ್ಲಿ ಕಿಮೀ. 9/800–10/000 ರಲ್ಲಿ ಬ್ರಿಡ್ಜ್ ಸಂ. 28 (3x18.30 ಮೀ ಗಿರ್ಡರ್ – ಯಗಚಿ) ರ ಹೈಡ್ರೋ ಮೆಟ್ರೊಲಾಜಿಕಲ್ ದತ್ತಾಂಶವನ್ನು ಸಂಗ್ರಹಿಸುವುದು. ಉಪ ಕಾಮಗಾರಿ–2: ಬೆಂಗಳೂರು–ಮೈಸೂರು ವಿಭಾಗದಲ್ಲಿ ಕಿಮೀ. 114/100–200 ರಲ್ಲಿ ಬ್ರಿಡ್ಜ್ ಸಂ. 706ಎ (1x45.72 ಮೀ ಜಿಬಿ–ಲೋಕಪಾವನಿ) ರ ಹೈಡ್ರೋ ಮೆಟ್ರೊಲಾಜಿಕಲ್ ದತ್ತಾಂಶವನ್ನು ಸಂಗ್ರಹಿಸುವುದು. ಉಪ ಕಾಮಗಾರಿ–3: ಹರಿಹರ–ಹುಬ್ಬಳ್ಳಿ ವಿಭಾಗದಲ್ಲಿ ಕಿಮೀ. 339/9–17 ರಲ್ಲಿ ಬ್ರಿಡ್ಜ್ ಸಂ. 90 (16x19.30+ 2x6.10 ಮೀ ಡೆಕ್ ಗಿರ್ಡರ್ – ತುಂಗಭದ್ರಾ) ರ ಹೈಡ್ರೋ ಮೆಟ್ರೊಲಾಜಿಕಲ್ ದತ್ತಾಂಶವನ್ನು ಸಂಗ್ರಹಿಸುವುದು.	ರೂ. 42,47,607/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 03.08.2023, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ವರಿಷ್ಠ ವಿಭಾಗೀಯ ಇಂಜಿನಿಯರ್ / ಸಂಯೋಜನೆ ಮೈಸೂರು
PUB/243/AAD/PRB/SWR/2023-24
S.W.Railways SWRRLY SWRRLY

ನೈಋತ್ಯ ರೈಲ್ವೆ
ಇ–ಟೆಂಡರು ಸೂಚನೆ ಸಂ. CAO/CN/BNC/42/2023
ದಿನಾಂಕ: 13.07.2023
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರಸಂ.	ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
1	1. ಉರುಕೆರೆ ಯಾರ್ಡ್‌ನಲ್ಲಿ ಭೂಮಿಯ ಕೆಲಸ, ಬ್ಲಾಂಕೆಟಿಂಗ್, ಚಿಕ್ಕ ಬ್ರಿಡ್ಜ್‌ಗಳು, ಪ್ರಮುಖ ಬ್ರಿಡ್ಜ್‌ಗಳು, ಅಪ್ರೋಚ್‌ನೊಂದಿಗಿರುವ ರಸ್ತೆಯ ಕೆಳಸೇತುವೆಗಳು (ಉಳಿದ ಕೆಲಸ) ಮತ್ತು ಪಿ.ವೇ, ಚ್ಯಾ. 0/300 ರಿಂದ ಚ್ಯಾ. 12/800 ವರೆಗೆ ಬಾಲಾಸ್ಟ್‌ಗಳ ಪೂರೈಕೆ ಮತ್ತು ಎಫ್‌ಒಬಿ, ಪಿಎಫ್ ಅಡಗುತಾಣ, ಪಿಎಫ್ ನಿರ್ಮಾಣ, ಸ್ಟೇಷನ್ ಬಿಲ್ಡಿಂಗ್, ಪ್ರಯಾಣಿಕರ ಸವಲತ್ತುಗಳು ಹಾಗೂ ಅಪ್ರೋಚ್‌ರಸ್ತೆಗಳ ನಿರ್ಮಾಣ ಕಾರ್ಯಗಳು. 2. ಉರುಕೆರೆ ಯಾರ್ಡ್‌ನಲ್ಲಿ ಚ್ಯಾ. 0/300 ರಿಂದ ಚ್ಯಾ. 12/800 ವರೆಗೆ ಸಾಮಾನ್ಯ ಎಲೆಕ್ಟ್ರಿಕಲ್ ಕಾಮಗಾರಿ (ಜಂಟಿ ಕಾಮಗಾರಿ). (ಟೆಂಡರು ಉಲ್ಲೇಖ ಸಂ.: TK-RDG-91R-1)	ರೂ. 66,28,87,210.05
2	ಬೆಂಗಳೂರು–ಜೋಲಾರ್‌ಪೇಟೆ ವಿಭಾಗ: ಸರ್ ಎಂ ವಿಶ್ವೇಶ್ವರಯ್ಯ ಟರ್ಮಿನಲ್, ಬೆಂಗಳೂರು (ಎಸ್‌ಎಂವಿಬಿ): ಸಾಮಾನ್ಯ ಎಲೆಕ್ಟ್ರಿಕಲ್ ಕೆಲಸವನ್ನೊಳಗೊಂಡಂತೆ 4ನೇ ಪಿಟ್ ಲೈನ್‌ನ ನಿರ್ಮಾಣ, 4 ಪಿಟ್ ಲೈನ್‌ಗಳ ಮೇಲಿನ ಕವರ್ಡ್ ಶೆಡ್, ಸರ್ವೀಸ್ ಬಿಲ್ಡಿಂಗ್ ಮತ್ತು ಸಂಬಂಧಿಸಿದ ಟ್ರ್ಯಾಕ್ ಕೆಲಸಗಳು ಹಾಗೂ ವಂದೇ ಭಾರತ್ ಚೇರ್‌ಕಾರ್ ರೈಲುಗಳ ನಿರ್ವಹಣೆಗಾಗಿ ಟಿಆರ್‌ಡಿ ಕಾಮಗಾರಿ. (ಜಂಟಿ ಕಾಮಗಾರಿ). (ಟೆಂಡರು ಉಲ್ಲೇಖ ಸಂ. SMVB-VANDEBHARAT-01-R1)	ರೂ. 45,77,04,771.68
3	ಮೈಸೂರು ವಿಭಾಗದ 12 ನಂ. ಲೆವೆಲ್ ಕ್ರಾಸಿಂಗ್‌ಗಳಾದ ಎಲ್‌ಸಿ ಸಂ. 123, 138, 200, 47, 3, 97, 7, 45, 152, 20, 79 & 130 ಗಳಲ್ಲಿ ಹಾಗೂ ಬೆಂಗಳೂರು ವಿಭಾಗದ 8 ನಂ. ಲೆವೆಲ್ ಕ್ರಾಸಿಂಗ್‌ಗಳಾದ ಎಲ್‌ಸಿ ಸಂ. 10, 11, 38, 39, 27, 46, 58 & 26 ಗಳ ನಿರ್ಮೂಲನೆಗಾಗಿ ಕಾರ್ಯಸಾಧತೆಯ ಅಧ್ಯಯನಕ್ಕಾಗಿ ವಿಸ್ತೃತವಾದ ಯೋಜನಾ ವರದಿಯನ್ನು ತಯಾರು ಮಾಡುವುದು ಹಾಗೆಯೇ ಜಿಎಡಿ ಸಬ್‌ಬೇಗಳೊಂದಿಗೆ ಆರ್‌ಒಬಿ/ಆರ್‌ಒಬಿಗಳ ನಿರ್ಮಾಣ. (ಟೆಂಡರು ಉಲ್ಲೇಖ ಸಂ. TK-DVG-21)	ರೂ. 80,25,627.00

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: ಕ್ರಸಂ. 1ಕ್ಕೆ 01.08.2023 ಮತ್ತು ಕ್ರಸಂ. 2 & 3ಕ್ಕೆ 03.08.2023, 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಇಂಜಿನಿಯರ್/ನಿರ್ಮಾಣ/ಕಾಮಗಾರಿ ಬೆಂಗಳೂರು ದಂಡು
PUB/247/AAD/PRB/SWR/2023-24
S.W.Railways SWRRLY SWRRLY

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Part-Time Jobs

PART TIME Job SMS Typing Work Laptop, Sellphone, Simcard Company Provide (Fee 1099): 6395537135/ 6397285477

REAL ESTATE SELLING

Sites

Rajajinagar

30*45 SITE 2nd Site from main road, 6th Block, Sale 14500/- p.sft. 9341256998/ 9739217086.

BUSINESS

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

Business to Business

Business

SAWDUST PELLETS AVAILABLE
6 mm diameter available in bulk quantity
Company Name
ELORA GREEN BIO FUELS PRIVATE LIMITED.
Address: 11/19, Mazda Apts Anand Park, Aundh Pune - 411007
Contact
9890990393
sales@eloragreen.com

PERSONAL

Change of Name

CHANGE OF NAME
I, DANIEL RICHARD S/o Irudayaraj R/o J-103, Sumadhura Pranavam MTB, Graphite India Road, Hoodi, Bengaluru-560048, have changed my minor daughter's name from TESSIE KATELYN to TESSIE KATELYN DANIEL RICHARD vide affidavit dated 15/07/2023 before Notary K.S.Giridhar, Bangalore.

I, ASMITA AMLA D/o. Vishal Amla residing at No.7A, 1103, Maple A Wing, Godrej Woodsman Estate, Hebbal, Bangalore- 560024 have changed my name from ASMITA to ASMITA AMLA vide affidavit dated 17/07/2023 Before Notary L.B. Anasuyamma, Bengaluru.

CHANGE OF NAME
I, M.B. MEHBOOB S/o Late Mohammed Budn Sab R/a #73, 40 Feet Road, Near KTG College, Srigandhadakavalu, Hegganahalli, Bangalore North, PO: Vishwaneedam, Bangalore- 560091 declare that M.B. MEHBOOB, MEHBOOB M.B., MOHAMED BUDDAN SAB MAHABOOB above all Names are one and the same person. Henceforth, I Known as M.B. MEHBOOB S/o Late Mohammed Budn Sab vide affidavit dated 14.7.2023 before Notary M. Devaraja, Bangalore.

I, KALPESH KUMAR RATHOD Residing At #.07, Ratna Sundaram 2nd floor, 34th cross, Jayanagar 4th Block, Bengaluru-11 Have Changed my Name to KALPESH RATHOD Vide Affidavit Dated 17/07/2023 before Notary Mamatha N.K Bangalore

CHANGE OF NAME
I, BHOGESH M A, R/at. # 211, 10th Block, Banashankari 6th Stage, Near Jattiganahalli, Bangalore-560060 have changed my son's name from MAYURA B to SRIPADA vide affidavit dated 12/07/2023 before Notary Ravi, Bangalore.

I, MUKESH CHANDRA MEHTA R/a,#.304, Ambience platinum, K.R. Road cross, opposite Basavanagudi police station, Basavanagudi, Bangalore- 560004 Have Changed My name to MUKESH CHAND MEHTA vide Affidavit Dated 06/07/2023 Before Notary Chandrashekaraiah, Bangalore

RAMJAN ALI, 6493512P, HAV/ASH, 65-3-607, Ex-Service Man Colony, Near Venkataswaraswamy Temple, Gajuwaka, Visakhapatnam, Andhra Pradesh changed son's name MD AAYAN to MOHAMMED AAYAN, 12/07/2023, Notary K.V. Mani, Bangalore

I, GANPATH G PRAJAPAT, Residing at Bengaluru-562125, have changed my name as G. GANAPATH, vide affidavit dated 15/7/2023 before Notary P.C.Ramaiah, Bengaluru

DH ಪ್ರಜಾವಾಣಿ JOB CORNER
BOOK JOB ADS ON WEEKDAY + SUNDAY
@ 803/-* Per Sqcm Single Column
@ 825/-* Per Sqcm Multi Column
*conditions apply
For more information Contact:
9845114560 : 9731810277
9901641752 : 9886213331
080 - 45557163 / 164

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಗುರು ರಾಘವೇಂದ್ರ ಸಹಕಾರ ಬ್ಯಾಂಕ್ • ವಿಧಾನ ಪರಿಷತ್‌ನಲ್ಲಿ ಸಹಕಾರ ಸಚಿವ ರಾಜಣ್ಣ ಹೇಳಿಕೆ

ಅವ್ಯವಹಾರದ ತನಿಖೆ ಸಿಬಿಐಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ಅವ್ಯವಹಾರದ ತನಿಖೆಯನ್ನು ಸಿಬಿಐಗೆ ವಹಿಸಲು ಕ್ರಮ ಕೈಗೊಳ್ಳಲಾಗುವುದು' ಎಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್‌ನ ಯು.ಬಿ. ವೆಂಕಟೇಶ್ ಅವರ ಗಮನಸೆಳೆಯುವ ಸೂಚನೆಗೆ ಉತ್ತರಿಸಿದ ಸಚಿವರು, 'ಈ ಪ್ರಕರಣದ ವಿಚಾರಣೆಯನ್ನು ಸಿಬಿಐಗೆ ವಹಿಸುವ ಬಗ್ಗೆ ಇದೇ ವರ್ಷದ ಜನವರಿ 17ರಂದೇ ಅಂದಿನ ಸಹಕಾರ ಸಚಿವರ ಅಧ್ಯಕ್ಷತೆಯ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿತ್ತು. ಆದರೆ, ನಿರ್ಣಯವನ್ನು ಜಾರಿಗೊಳಿಸಲಿಲ್ಲ' ಎಂದು ತಿಳಿಸಿದರು.

'ಒಳಾಡಳಿತ ಇಲಾಖೆಯು ಬ್ಯಾಂಕ್‌ಗೆ ಸಂಬಂಧಿಸಿದ ಮಾಹಿತಿಗಳನ್ನು ಇಂಗ್ಲಿಷ್‌ನಲ್ಲಿ ಸಲ್ಲಿಸುವಂತೆ ಸೂಚಿಸಿದೆ.

ಕೆ.ಎನ್‌.ರಾಜಣ್ಣ

ಹೀಗಾಗಿ, ಎಲ್ಲ ದಾಖಲೆಗಳನ್ನು ಇಂಗ್ಲಿಷ್‌ಗೆ ಅನುವಾದಿಸುವಂತೆ ಭಾಷಾಂತರ ಇಲಾಖೆಯ ನಿರ್ದೇಶಕರಿಗೆ ಮೇ 5ರಂದು ಪತ್ರ ಬರೆಯಲಾಗಿತ್ತು' ಎಂದು ವಿವರಿಸಿದರು.

'ಆದರೆ, ಭಾಷಾಂತರಕ್ಕೆ ನೀಡಿರುವ ದಾಖಲೆಗಳು ಅಗಾಧವಾಗಿವೆ. ಮಾನವ ಸಂಪನ್ಮೂಲ ಕೊರತೆ ಇರುವುದರಿಂದ ರಾಜ್ಯ ಸರ್ಕಾರ ಸೂಚಿಸಿರುವ ಭಾಷಾಂತರಕಾರರನ್ನು ಸಂಪರ್ಕಿಸಿ ಭಾಷಾಂತರಕ್ಕೆ ತಗಲುವ ವೆಚ್ಚಗಳನ್ನು ಭರಿಸಿ ಅನುವಾದ ಕಾರ್ಯ ಮಾಡಿಕೊಳ್ಳಬೇಕು ಎಂದು ತಿಳಿಸಿತು. ಹೀಗಾಗಿ, ಜೂನ್ 19ರಂದು ಸರ್ಕಾರ ಸೂಚಿಸಿರುವ ಭಾಷಾಂತರಕಾರರಿಗೆ ದಾಖಲೆಗಳನ್ನು ನೀಡಲಾಗಿದೆ. 500 ಪುಟಗಳ ದಾಖಲೆಗಳು ಇಂಗ್ಲಿಷ್‌ಗೆ ತರ್ಜುಮೆಗೊಂಡ ನಂತರ ಅಗತ್ಯ ತನಿಖೆಗೆ ಕ್ರಮಕೈಗೊಳ್ಳಲಾಗುವುದು' ಎಂದು ವಿವರಿಸಿದರು.

ಯು.ಬಿ. ವೆಂಕಟೇಶ್ ಮಾತನಾಡಿ, 'ಈ ಪ್ರಕರಣದಲ್ಲಿ ಹಿಂದಿನ ಬಿಜೆಪಿ ಸರ್ಕಾರ ಅನ್ಯಾಯ ಮಾಡಿತು. ಹಿಂದಿನ ಸಹಕಾರ ಸಚಿವರಿಗೆ ಕಾಲು ಹಿಡಿಯುತ್ತೇನೆ ಎಂದು ಹೇಳಿದ್ದೆ. ಆದರೆ, ಯಾವುದೇ ಕ್ರಮಕೈಗೊಳ್ಳಲಿಲ್ಲ. ಬ್ಯಾಂಕ್‌ನಲ್ಲಿ ನಡೆದಿರುವ ಅಕ್ರಮಗಳಿಂದ ಬಡ ಬ್ರಾಹ್ಮಣರು ಸಂಕಷ್ಟಕ್ಕೆ ಸಿಲುಕಿದ್ದಾರೆ' ಎಂದು ದೂರಿದರು.

ವೆಂಕಟೇಶ್ ಅವರ ಮಾತಿಗೆ ಬಿಜೆಪಿ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು. ಬಿಜೆಪಿ ಸರ್ಕಾರವೇ ಸಿಬಿಐ ತನಿಖೆಗೆ ನಿರ್ಧಾರ ಕೈಗೊಂಡಿತ್ತು ಎಂದು ಪ್ರತಿಪಾದಿಸಿದಾಗ ಮಾತಿನ ಚಕಮಕಿ ನಡೆಯಿತು.

ಜನಸೇವಾ ಟ್ರಸ್ಟ್‌ಗೆ ಜಮೀನು ಮಂಜೂರಾತಿಗೆ ತಡೆ: ಬಿಜೆಪಿ ಆಕ್ಷೇಪ

ಬೆಂಗಳೂರು: ಆರ್‌ಎಸ್‌ಎಸ್‌ನ ಅಂಗಸಂಸ್ಥೆಯಾದ ಜನಸೇವಾ ಟ್ರಸ್ಟ್‌ಗೆ ಮಂಜೂರು ಮಾಡಿದ್ದ ಜಮೀನು ಹಂಚಿಕೆಗೆ ತಡೆ ನೀಡಿರುವುದಕ್ಕೆ ಬಿಜೆಪಿ ಸದಸ್ಯರು ವಿಧಾನ ಪರಿಷತ್‌ನಲ್ಲಿ ಆಕ್ಷೇಪ ವ್ಯಕ್ತಪಡಿಸಿದರು.

ಶೂನ್ಯ ವೇಳೆಯಲ್ಲಿ ಬಿಜೆಪಿಯ ಕೋಟ ಶ್ರೀನಿವಾಸ ಪೂಜಾರಿ ಅವರು ವಿಷಯ ಪ್ರಸ್ತಾಪಿಸಿ, 'ಆರ್ಥಿಕವಾಗಿ ಹಿಂದುಳಿದ, ಶೋಷಿತರ ಮಕ್ಕಳಿಗೆ ಶಿಕ್ಷಣ ನೀಡುವ ಉದ್ದೇಶದಿಂದ ಈ ಟ್ರಸ್ಟ್ ಆರಂಭಿಸಲಾಗಿದೆ. ಈ ಸಂಸ್ಥೆಗೆ ಹಿಂದಿನ ಸರ್ಕಾರ ತಾವರೆಕೆರೆ ಹೋಬಳಿಯಲ್ಲಿ 35 ಎಕರೆ 33 ಗುಂಟೆ ಜಮೀನು ಮಂಜೂರು ಮಾಡಿತ್ತು. ಆದರೆ, ಆರ್‌ಎಸ್‌ಎಸ್‌ನ ಅಂಗಸಂಸ್ಥೆ ಎನ್ನುವ ಒಂದೇ ಕಾರಣಕ್ಕೆ ಕಾಂಗ್ರೆಸ್ ಸರ್ಕಾರ ತಡೆ ನೀಡಿದೆ' ಎಂದು ದೂರಿದರು.

'ಕಾಂಗ್ರೆಸ್ ಸರ್ಕಾರ ಸೇಡಿನ ರಾಜಕೀಯ ಮಾಡುತ್ತಿದೆ. ಇದು ಖಂಡನೀಯ. ದುರುದ್ದೇಶದಿಂದ ಕೂಡಿರುವ ಈ ಆದೇಶವನ್ನು ಕೂಡಲೇ ವಾಪಸ್ ಪಡೆಯಬೇಕು' ಎಂದು ಒತ್ತಾಯಿಸಿದರು. ಬಿಜೆಪಿಯ ಇತರ ಸದಸ್ಯರು ಸಹ ದನಿಗೂಡಿಸಿ, ಸರ್ಕಾರದ ಧೋರಣೆಗೆ ಆಕ್ಷೇಪ ವ್ಯಕ್ತಪಡಿಸಿದರು. ಇನ್ನೆರಡು ದಿನಗಳಲ್ಲಿ ಸರ್ಕಾರದ ವತಿಯಿಂದ ಈ ವಿಷಯದ ಬಗ್ಗೆ ಉತ್ತರ ಕೊಡಿಸುವುದಾಗಿ ಸಭಾಪತಿ ಬಸವರಾಜ ಹೊರಟ್ಟಿ ಅವರು ಭರವಸೆ ನೀಡಿದರು.

ಚರ್ಚೆಗೆ ನಾಂದಿ ಹಾಡಿದ 'ಸೆಂಚುರಿ ಕ್ಲಬ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಬ್ಬನ್ ಪಾರ್ಕ್ ವಲಯದ ವ್ಯಾಪ್ತಿಯಿಂದ ಸೆಂಚುರಿ ಕ್ಲಬ್ ಹೊರಗಿಡಬೇಕು' ಎಂದು ಬಿಜೆಪಿಯ ತೇಜಸ್ವಿನಿ ಗೌಡ ಪ್ರಸ್ತಾಪಿಸಿದ ವಿಷಯವು ಸೋಮವಾರ ವಿಧಾನ ಪರಿಷತ್‌ನಲ್ಲಿ ಚರ್ಚೆಗೆ ನಾಂದಿಯಾಯಿತು.

ಸರ್ಕಾರಿ ನೌಕರರ ಭವನ, ಪ್ರೆಸ್‌ಕ್ಲಬ್ ಸೇರಿದಂತೆ ಹಲವು ಕಟ್ಟಡಗಳನ್ನು ಕಬ್ಬನ್ ಪಾರ್ಕ್ ವ್ಯಾಪ್ತಿಯಿಂದ ಹೊರಗಿಡಲಾಗಿದೆ. ಆದರೆ, 2013ರಲ್ಲಿ ಸ್ಥಾಪಿತವಾದ, ಮೈಸೂರು ಮಹಾರಾಜರು ಭೂಮಿ ನೀಡಿದ ಸೆಂಚುರಿ ಕ್ಲಬ್‌ಗೆ (ಮೂಲ ಹೆಸರು ಕಾಸ್ಮೊ ಪಾಲಿಟನ್ ಕ್ಲಬ್) ಅಂತಹ ಅವಕಾಶ ನೀಡಿಲ್ಲ. ಐತಿಹಾಸಿಕ ಕ್ಲಬ್‌ನ ಅಭಿವೃದ್ಧಿ ಮತ್ತು ಬೆಳವಣಿಗೆಗೆ ತೊಡಕಾಗಿದೆ. ಇಂತಹ ತಾರತಮ್ಯ ಏಕೆ ಎಂದು ತೇಜಸ್ವಿನಿ ಪ್ರಶ್ನಿಸಿದರು.

ಜೆಡಿಎಸ್‌ನ ಎಸ್.ಎಲ್. ಭೋಜೇಗೌಡ ಮಾತನಾಡಿ, 'ಸಂಜೆ ಏಳಾದರೆ ಸಾಕು ನಮಗೆಲ್ಲ ಕ್ಲಬ್‌ಗಳು ಸೆಳೆಯುತ್ತವೆ. ಇಸ್ಪೀಟ್ ಎಲೆಗಳು ನೆನಪಾಗುತ್ತವೆ. ಒತ್ತಡದ ಬದುಕಿನಲ್ಲಿ ಒಂದಷ್ಟು ಚೈತನ್ಯ ಪಡೆಯಲು ಕ್ಲಬ್ ಅನಿವಾರ್ಯ. ನಿಯಮದ ಪ್ರಕಾರ 103 ಎಲೆಗಳ ಆಟ ನಿಯಮ ಬಾಹಿರವಲ್ಲ. ಆದರೆ, ಪೊಲೀಸರು ತಮಗೆ ಅನುಕೂಲವಾಗದೇ ಇದ್ದಾಗ ಅದರ ಜತೆ 500 ಎಲೆ ಜೋಡಿಸಿ ಪ್ರಕರಣ ದಾಖಲಿಸುತ್ತಾರೆ' ಎಂದರು.

ಮರುತಿಬ್ಬೇಗೌಡ ಮಾತನಾಡಿ, 'ಶಾಸಕರು, ಮಾಜಿ ಶಾಸಕರಿಗೂ ಒಂದು ಕ್ಲಬ್ ಬೇಕಿದೆ. ಜಾಗ ಇನ್ನೂ ಅಂತಿಮವಾಗಿಲ್ಲ. ಇಂತಹ ವಿಷಯಗಳನ್ನು ಸದನದಲ್ಲಿ ಪ್ರಸ್ತಾಪಿಸಲು ನಮಗೂ ನಾಚಿಕೆಯಾಗುತ್ತದೆ' ಎಂದರು.

ಬಿಜೆಪಿಯ ಎನ್.ರವಿಕುಮಾರ್, 'ಸೆಂಚುರಿ ಕ್ಲಬ್ ವಿಷಯದಲ್ಲಿ ಅಧಿಕಾರಿಗಳೇ ದಾರಿ ತಪ್ಪಿಸುತ್ತಿದ್ದಾರೆ. ಇದರ ಹಿಂದೆ ಷಡ್ಯಂತ್ರವಿದೆ' ಎಂದರು.

ಅವರ ಮಾತಿಗೆ ಆಕ್ಷೇಪ ವ್ಯಕ್ತಪಡಿಸಿದ ಕಾಂಗ್ರೆಸ್‌ನ ಯು.ಬಿ.ವೆಂಕಟೇಶ್, 'ನಾಲ್ಕು ವರ್ಷ ನಿಮ್ಮದೇ ಸರ್ಕಾರವಿತ್ತು. ಆಗ ಕೆಲಸ ಮಾಡಿಸಿಕೊಳ್ಳದೆ, ಈಗ ಅಧಿಕಾರಿಗಳನ್ನು ದೂರುತ್ತಿರುವುದು ಸರಿಯಲ್ಲ' ಎಂದು ಟೀಕಿಸಿದರು.

ವಿಷಯ ಕುರಿತು ಉತ್ತರ ನೀಡಿದ ಸಭಾ ನಾಯಕ ಎನ್.ಎಸ್. ಬೋಸರಾಜು, 'ಸೆಂಚುರಿ ಕ್ಲಬ್ ಜಾಗ 4.37 ಎಕರೆ ಇದೆ. ಅಭಿವೃದ್ಧಿ ಹಾಗೂ ಕಾರ್ಯಚಟುವಟಿಕೆಗೆ ಯಾವುದೇ ಅಡ್ಡಿ ಇಲ್ಲ. ಕಬ್ಬನ್ ಪಾರ್ಕ್ ವ್ಯಾಪ್ತಿಯಿಂದ ಹೊರಗಿಟ್ಟರೆ ಕೇಂದ್ರ ಗ್ರಂಥಾಲಯಕ್ಕೆ ಹೊಂದಿಕೊಂಡಿರುವ ಪ್ರವೇಶ ದ್ವಾರ ಶಾಶ್ವತವಾಗಿ ಮುಚ್ಚಬೇಕಾಗುತ್ತದೆ. ದ್ವಾರ ಬಳಕೆ ಕುರಿತು ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ದೂರಿನ ವಿಚಾರಣೆ ನಡೆಯುತ್ತಿದೆ' ಎಂದರು.

ಅಶ್ವತ್ಥನಾರಾಯಣ– ಕಾಂಗ್ರೆಸ್ ಸದಸ್ಯರ ವಾಕ್ಸಮರ

ರಾಮನಗರಕ್ಕೆ ಕೊಳಚೆ ನೀರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಮನಗರದ ಅಭಿವೃದ್ಧಿ ವಿಚಾರವಾಗಿ ಬಿಜೆಪಿಯ ಡಾ.ಸಿ.ಎನ್. ಅಶ್ವತ್ಥನಾರಾಯಣ ಮತ್ತು ಕಾಂಗ್ರೆಸ್ ಸದಸ್ಯರ ಮಧ್ಯೆ ವಿಧಾನಸಭೆಯಲ್ಲಿ ಸೋಮವಾರ ಜಟಾಪಟಿ ನಡೆಯಿತು.

ಬಜೆಟ್ ಮೇಲೆ ಮಾತನಾಡುವ ಸಂದರ್ಭದಲ್ಲಿ ಕಾಂಗ್ರೆಸ್‌ನ ಇಕ್ಬಾಲ್ ಹುಸೇನ್ ಅವರು, 'ರಾಮನಗರ ದೇಶಕ್ಕೆ ಒಬ್ಬ ಪ್ರಧಾನಿ, ಮೂರರಿಂದ– ನಾಲ್ಕು ಮುಖ್ಯಮಂತ್ರಿಗಳನ್ನು ನೀಡಿದ್ದರೂ ಒಂಬತ್ತು ದಿನಗಳಿಗೊಮ್ಮೆ ಮಾತ್ರ ಕುಡಿಯುವ ನೀರು ಪೂರೈಸಲಾಗುತ್ತಿದೆ. ಕೊಳಕು ನೀರು ಪೂರೈಸಲಾಗುತ್ತಿದೆ' ಎಂದರು.

'ಇಕ್ಬಾಲ್ ಹುಸೇನ್ ಅವರು ಸದನಕ್ಕೆ ತಪ್ಪು ಮಾಹಿತಿ ನೀಡುತ್ತಿದ್ದಾರೆ. ನಮ್ಮ ಸರ್ಕಾರ ಇದ್ದಾಗ ರಾಮನಗರಕ್ಕೆ ಕಾವೇರಿ ನೀರು ಒದಗಿಸಲು ₹40 ಕೋಟಿ ಒದಗಿಸಿದ್ದೆವು. ಇವರ ಸರ್ಕಾರ ಬಂದ ಮೇಲೆ ರಾಮನಗರಕ್ಕೆ ಒದಗಿಸಿದ್ದ ವೈದ್ಯಕೀಯ ಕಾಲೇಜನ್ನು ಕನಕಪುರಕ್ಕೆ ಕದ್ದೊಯ್ದಿದ್ದಾರೆ. ಈಗ ಕುಡಿಯಲು ಕೊಳಚೆ ನೀರು ಒದಗಿಸಲಾಗುತ್ತಿದೆ ಎಂದು ಹೇಳುತ್ತಿದ್ದಾರೆ' ಎಂದು ಅಶ್ವತ್ಥನಾರಾಯಣ ಹೇಳಿದಾಗ ಕಾಂಗ್ರೆಸ್ ಸದಸ್ಯರು ಗದ್ದಲ ಎಬ್ಬಿಸಿದರು.

ಅಶ್ವತ್ಥನಾರಾಯಣ ಅವರು ಮಾತನಾಡುವ ವೈಖರಿಯನ್ನು ಗೇಲಿ ಮಾಡಿದ ಸಚಿವ ಕೆ.ಎನ್.ರಾಜಣ್ಣ, 'ನೀವು ನಾಟಕಗಳಲ್ಲಿ ಮಾತನಾಡುವ ರೀತಿಯಲ್ಲಿ ಮಾತನಾಡುತ್ತೀರಿ. ನಾಟಕ ಕಂಪನಿಯಿಂದ ಬಂದಿದ್ದೀರಾ' ಎಂದು ಹೀಯಾಳಿಸಿದರು.

ಇದರಿಂದ ರೇಗಿದ ಅಶ್ವತ್ಥನಾರಾಯಣ, 'ನೀವೇನು ಘನಂದಾರಿಯಂತೆ ಮಾತನಾಡುತ್ತೀರಾ, ನೀವು ಮಾತನಾಡುವ ಧಾಟಿ, ಧ್ವನಿ, ಹಾವ ಭಾವಗಳೂ ನಾಟಕೀಯವಾಗಿಲ್ಲವೇ? ನನ್ನ ಬಗ್ಗೆ ಏಕೆ ಮಾತನಾಡುತ್ತೀರಿ' ಎಂದು ತಿರುಗೇಟು ನೀಡಿದರು. ಇಬ್ಬರ ಮಧ್ಯೆ ಮಾತಿನ ಚಕಮಕಿ ನಡೆಯಿತು.

'ನೀವು ಕಿರುಚಾಡ ಬೇಡಿ' ಎಂದು ರಾಜಣ್ಣ ಹೇಳಿದಾಗ, 'ನೀವೂ ಹಾಗೇ ತಾನೆ ಮಾತನಾಡುವುದು' ಎಂದು ಏರಿದ ಧ್ವನಿಯಲ್ಲಿ ಪ್ರತಿಕ್ರಿಯಿಸಿದರು. ಕಾಂಗ್ರೆಸ್‌ನ ಸದಸ್ಯರು ಅಶ್ವತ್ಥನಾರಾಯಣ ವಿರುದ್ಧ ಮುಗಿಬಿದ್ದಾಗ, ಸಭಾಧ್ಯಕ್ಷ ಯು.ಟಿ.ಖಾದರ್ ಸದಸ್ಯರನ್ನು ಸಮಾಧಾನಪಡಿಸಿ ಕೂರಿಸಿದರು.

ಕಳೆದ ವರ್ಷ ರಾಮನಗರದಲ್ಲಿ 5 ದಿನಗಳ ಕಾಲ ಭಾರಿ ಮಳೆ ಬಂದು ಕೆರೆ ಕೋಡಿ ಹರಿದು ಮನೆಗಳಿಗೆ ನೀರು ನುಗ್ಗಿತ್ತು. ಆಗ ಮುಖ್ಯಮಂತ್ರಿ ಆಗಿದ್ದ ಬಸವರಾಜ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಮತ್ತು ಉಸ್ತುವಾರಿ ಅಶ್ವತ್ಥನಾರಾಯಣ ಬಂದು ಪರಿಹಾರದ ಭರವಸೆ ನೀಡಿದ್ದರು. ಈವರೆಗೆ ಒಂದು ಪೈಸೆ ಕೂಡಾ ಬಂದಿಲ್ಲ ಎಂದು ಇಕ್ಬಾಲ್ ಹುಸೇನ್ ಹೇಳಿದರು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಅಶ್ವತ್ಥನಾರಾಯಣ ಅವರು, ಪರಿಹಾರ ಕೊಟ್ಟಿಲ್ಲ ಎನ್ನುವುದು ತಪ್ಪು ಮಾಹಿತಿ. ಎಲ್ಲ ಸಂತ್ರಸ್ತರಿಗೂ ತಾರತಮ್ಯ ಮಾಡದೇ ಪರಿಹಾರ ನೀಡಲಾಗಿದೆ ಎಂದು ಹೇಳಿದರು.

'ಚಿನ್ನದ ಅಂಗಡಿ ಮಾಲೀಕರಿಗೆ ಕಿರುಕುಳ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಿನ್ನ ಜಪ್ತಿ ಮಾಡಿಕೊಳ್ಳುವ ನೆಪದಲ್ಲಿ ಪೊಲೀಸರು ಗಿರವಿ ಮತ್ತು ಚಿನ್ನದ ಅಂಗಡಿ ಮಾಲೀಕರಿಗೆ ಪೊಲೀಸರು ಕಿರುಕಳ ನೀಡುತ್ತಿದ್ದಾರೆ' ಎಂದು ಜೆಡಿಎಸ್‌ನ ಟಿ.ಎ. ಶರವಣ ದೂರಿದರು.

ವಿಧಾನ ಪರಿಷತ್‌ನಲ್ಲಿ ನಿಯಮ 72ರ ಅಡಿಯಲ್ಲಿ ಗಮನಸೆಳೆಯುವ ಸೂಚನೆ ಮಂಡಿಸಿದ ಅವರು, 'ಪೊಲೀಸ್ ಅಧಿಕಾರಿಗಳು ನಿಯಮಗಳನ್ನು ಪಾಲಿಸುತ್ತಿಲ್ಲ. ಸಮವಸ್ತ್ರ ಸಹ ಧರಿಸಿರುವುದಿಲ್ಲ' ಎಂದರು.

'ಮಾಲೀಕರಿಗೆ ನೋಟಿಸ್ ಸಹ ಕೊಡುವುದಿಲ್ಲ. ಜಪ್ತಿ ಮಾಡುವ ಸಂದರ್ಭದಲ್ಲಿ ವಿಡಿಯೊ ಚಿತ್ರೀಕರಣ ಮಾಡಬೇಕು ಎನ್ನುವ ನಿಯಮ ಇದೆ. ಆದರೆ, ಪೊಲೀಸರು ಸಿಸಿಟಿವಿ ಕ್ಯಾಮೆರಾಗಳನ್ನೇ ಸ್ವಿಚ್‌ಆಫ್ ಮಾಡಿಸುತ್ತಾರೆ' ಎಂದು ದೂರಿದರು.

'ಚಿಕ್ಕಮಗಳೂರು ಪೊಲೀಸರು ಚುನಾವಣೆ ಸಂದರ್ಭದಲ್ಲಿ ಚಿನ್ನ ಜಪ್ತಿ ಮಾಡಿದ್ದರು. ಜಿಎಸ್‌ಟಿ ಸೇರಿದಂತೆ ಎಲ್ಲ ದಾಖಲೆಗಳನ್ನು ನೀಡಿದ್ದರೂ ನನಗೆ ಎಷ್ಟು ಕೊಡ್ತಿಯಾ ಎಂದು

ಶರವಣ

ಪೊಲೀಸ್ ಅಧಿಕಾರಿಯೊಬ್ಬರು ಕೇಳಿದ್ದರು' ಎಂದು ವಿವರಿಸಿದರು.

ಈ ಬಗ್ಗೆ ಉತ್ತರಿಸಿದ ಗೃಹ ಸಚಿವ ಡಾ.ಜಿ. ಪರಮೇಶ್ವರ, 'ಚಿನ್ನ, ಬೆಳ್ಳಿ ಆಭರಣಗಳನ್ನು ಜಪ್ತಿ ಮಾಡಲು ಪ್ರಮಾಣೀಕೃತ ಕಾರ್ಯಾಚರಣೆ ವಿಧಾನಗಳಿವೆ(ಎಸ್‌ಒಪಿ). ಈ ಬಗ್ಗೆ ಅಧಿಕಾರಿಗಳಿಗೆ ಸೂಚನೆಗಳನ್ನು ನೀಡಲಾಗಿದೆ. ಶೀಘ್ರ ಚಿನ್ನಾಭರಣ ಸಂಘದ ಪದಾಧಿಕಾರಿಗಳ ಸಭೆ ಕರೆದು ಸಮಸ್ಯೆಗಳನ್ನು ಇತ್ಯರ್ಥ ಗೊಳಿಸಲು ಪ್ರಯತ್ನಿಸಲಾಗುವುದು' ಎಂದು ಭರವಸೆ ನೀಡಿದರು.

ಸದನದಲ್ಲಿ ಕೇಳಿಸಿದ್ದು..

- ಸರ್ಕಾರಿ ನೌಕರರಿಗೆ ಸಂಬಳಕ್ಕಿಂತ ಗಿಂಬಳ ಜಾಸ್ತಿ. ಕೆಲವರನ್ನು ಹೊರತುಪಡಿಸಿದರೆ ಬಹುತೇಕ ಮಂದಿ ಲಂಚ ಪಡೆಯುತ್ತಿದ್ದಾರೆ.
  -**ಮರಿತಿಬ್ಬೇಗೌಡ,** ಜೆಡಿಎಸ್ ಸದಸ್ಯ
- ಯುಜಿಸಿ ವೇತನ ಪಡೆಯುತ್ತಿರುವ ಪ್ರಾಧ್ಯಾಪಕರಿಗೆ ಬದ್ಧತೆ ಇರಬೇಕು. ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು. ಆದರೆ, ಕೆಲವರು ಕಾಲಹರಣದಲ್ಲೇ ತೊಡಗಿರುತ್ತಾರೆ.
  -**ಡಾ.ಎಂ.ಸಿ. ಸುಧಾಕರ್,** ಉನ್ನತ ಶಿಕ್ಷಣ ಸಚಿವ
- ಐಎಎಸ್ ಅಧಿಕಾರಿಗಳು ತಮ್ಮ ಬಡ್ತಿಗೆ ಒಂದು ದಿನವೂ ತಡ ಮಾಡುವುದಿಲ್ಲ. ಆದರೆ, 12 ವರ್ಷಗಳಿಂದ ಕಾಯುತ್ತಿರುವ ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರಿಗೆ ಬಡ್ತಿ ನೀಡುವ ಪ್ರಕ್ರಿಯೆಗೆ ತಡೆಯೊಡ್ಡಿದ್ದಾರೆ.
  -**ವೈ.ಎ. ನಾರಾಯಣಸ್ವಾಮಿ,** ಬಿಜೆಪಿ

'ಸಾಧನೆ ಮಾಡಿದವರಲ್ಲಿ ಸರ್ಕಾರಿ ಶಾಲೆಯವರೇ ಹೆಚ್ಚು'

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: 'ಸರ್.ಎಂ. ವಿಶ್ವೇಶ್ವರಯ್ಯ, ಇನ್ಫೋಸಿಸ್ ನಾರಾಯಣ ಮೂರ್ತಿಯಂತಹ ಮಹಾನ್ ವ್ಯಕ್ತಿಗಳು ಸರ್ಕಾರಿ ಶಾಲೆಯಲ್ಲಿ ಶಿಸ್ತು, ಶ್ರದ್ಧೆಯಿಂದ ಕಲಿತು ಈ ದೇಶದಲ್ಲಿ ಸಾಧನೆ ಮಾಡಿದ್ದಾರೆ' ಎಂದು ಶಾಸಕ ಎಸ್. ಮುನಿರಾಜು ಹೇಳಿದರು.

ಅಬ್ಬಿಗೆರೆಯ ಸರ್ಕಾರಿ ಪ್ರೌಢಶಾಲೆಯಲ್ಲಿ ಎಸ್ಸೆಸ್ಸೆಲ್ಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ, ಲೇಖನ ಸಾಮಗ್ರಿ ನೀಡಿ ಮಾತನಾಡಿದರು.

'ಈ ಶಾಲೆಯ ಬಡ ಮತ್ತು ಮಧ್ಯಮ ವರ್ಗದ ವಿದ್ಯಾರ್ಥಿಗಳು ಬದುಕಿನ ಕಷ್ಟಗಳನ್ನು ಅರಿತು ಬೆರೆತು ಬೆಳೆಯುವವರು. ಅಚಲ ಸಂಕಲ್ಪ ಉಳ್ಳವರು. ಇಂದು ಪ್ರತಿಭಾ ಪುರಸ್ಕಾರ ಪಡೆಯುತ್ತಿರುವ ವಿದ್ಯಾರ್ಥಿಗಳನ್ನು ನೋಡಿ ಕಿರಿಯರು ಮುಂದಿನ ದಿನಗಳಲ್ಲಿ ಅವರಂತೆ ಸಾಧನೆ ಮಾಡಿ

ಅಬ್ಬಿಗೆರೆಯ ಸರ್ಕಾರಿ ಪ್ರೌಢಶಾಲೆಯಲ್ಲಿ ಎಸ್ಸೆಸ್ಸೆಲ್ಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಶಾಸಕ ಎಸ್‌. ಮುನಿರಾಜು ಅವರು ಪ್ರೋತ್ಸಾಹ ಧನ ಹಾಗೂ ಲೇಖನ ಸಾಮಗ್ರಿ ವಿತರಿಸಿದರು. ಪಾಲಿಕೆ ಮಾಜಿ ಸದಸ್ಯ ಕೆ.ನಾಗಭೂಷಣ್, ಅಬ್ಬಿಗೆರೆ ಲೋಕೇಶ್, ಸಮಾಜ ಸೇವಕ ಅಬ್ಬಿಗೆರೆ ರಾಜಣ್ಣ, ದಾಸರಹಳ್ಳಿ ಬಿಜೆಪಿ ಮಂಡಲ ಅಧ್ಯಕ್ಷ ಸೋಮಶೇಖರ್ ಇದ್ದರು.

ಶಾಲೆಗೆ, ತಂದೆ ತಾಯಿ, ಗುರುಗಳಿಗೆ ಕೀರ್ತಿ ತರಬೇಕು' ಎಂದರು.

ಪಾಲಿಕೆ ಮಾಜಿ ಸದಸ್ಯ ಕೆ. ನಾಗಭೂಷಣ್, ಅಬ್ಬಿಗೆರೆ ಲೋಕೇಶ್, ಸಮಾಜ ಸೇವಕ ಅಬ್ಬಿಗೆರೆ ರಾಜಣ್ಣ, ದಾಸರಹಳ್ಳಿ ಬಿಜೆಪಿ ಮಂಡಲ ಅಧ್ಯಕ್ಷ ಸೋಮಶೇಖರ್, ರಾಜೇಂದ್ರ, ಶಾಲೆಯ ಶಿಕ್ಷಕರು ಮತ್ತು ವಿದ್ಯಾರ್ಥಿಗಳಿದ್ದರು.

100ನೇ ದಿನದ ಕಾರ್ಯಕ್ರಮಕ್ಕೆ ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ 100 ದಿನ ಸಂದರ್ಭಕ್ಕೆ ಪೂರಕವಾಗಿ ವಿವಿಧ ಕೆಲಸಗಳ ಬಗ್ಗೆ ಹೆಚ್ಚು ಒತ್ತು ನೀಡಲಾಗುತ್ತಿದ್ದು, ಕಸ, ಪಾದಚಾರಿ ಮಾರ್ಗದ ಸ್ವಚ್ಛತೆ ಬಗ್ಗೆ ಹೆಚ್ಚು ಗಮನಹರಿಸಲಾಗುತ್ತಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಈಗಾಗಲೇ ತ್ಯಾಜ್ಯ ರಹಿತ ಸ್ಥಳ (ಬ್ಲ್ಯಾಕ್ ಸ್ಪಾಟ್) ಹಾಗೂ ಪಾದಚಾರಿ ಮಾರ್ಗಗಳ ಸ್ವಚ್ಛತೆಗೆ ಸೂಚಿಸಿದ್ದಾರೆ. ಈ ಬಗ್ಗೆ ಬಿಬಿಎಂಪಿ ಕಾರ್ಯಗತವಾಗಿದ್ದು, 100 ದಿನದ ಕಾರ್ಯಕ್ರಮದೊಳಗೆ ಹೆಚ್ಚಿನ ಸಾಧನೆ ಮಾಡುವ ಗುರಿ ಇದೆ ಎಂದು ಸುದ್ದಿಗಾರರಿಗೆ ತಿಳಿಸಿದರು.

ತ್ಯಾಜ್ಯ ವಿಲೇವಾರಿಯಲ್ಲಿ ಈಗಾಗಲೇ ಮಾರ್ಷಲ್‌ಗಳು, ಲಿಂಕ್ ವರ್ಕರ್ಸ್, ಕಿರಿಯ ಆರೋಗ್ಯ ಅಧಿಕಾರಿ, ಮೇಲ್ವಿಚಾರಕರು ಕಾರ್ಯನಿರ್ವಹಿಸುತ್ತಿದ್ದಾರೆ. ಇದನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ನಿರ್ವಹಣೆ ಮಾಡಬೇಕು. ಈ ಬಗ್ಗೆ ಸೋಮವಾರ ನಡೆದ ವಲಯ ಆಯುಕ್ತರ ಸಭೆಯಲ್ಲೂ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ ಎಂದರು.

ಮಳೆಗಾಲದ ಸಂದರ್ಭದಲ್ಲಿ ರಸ್ತೆಯಲ್ಲಿ ನೀರು ನಿಲ್ಲದಂತೆ, ಸರಾಗವಾಗಿ ಹರಿಯುವಂತೆ ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. 198 ಸ್ಥಳಗಳಲ್ಲಿ ಸಮಸ್ಯೆಯನ್ನು ನಿವಾರಿಸಲು ಶಾಶ್ವತ ಕ್ರಮ ಕೈಗೊಳ್ಳಲಾಗಿದೆ. ಇದನ್ನು ಮತ್ತೊಮ್ಮೆ ಪರಿಶೀಲಿಸಿ, ಕ್ರಮ ಕೈಗೊಳ್ಳಲಾಗುತ್ತದೆ. ಅಗತ್ಯವಿರುವ ಕಡೆ ಪಂಪ್‌ಗಳನ್ನು ಬಳಸಿ ನೀರು ಹೊರಹಾಕಲಾಗುವುದು ಎಂದರು.

ಇಂದಿರಾ ಕ್ಯಾಂಟೀನ್‌ಗೆ ಸಂಬಂಧಿಸಿದಂತೆ ಟೆಂಡರ್ ಕರೆಯುವ ಪ್ರಕ್ರಿಯೆಗೆ ಸರ್ಕಾರದಿಂದ ಅನುಮೋದನೆ ಪಡೆಯಬೇಕಿದೆ. ಪ್ರತಿ ವರ್ಷ ಸುಮಾರು ₹80 ಕೋಟಿ ವೆಚ್ಚವಾಗುತ್ತದೆ. ಹೀಗಾಗಿ ಸಚಿವ ಸಂಪುಟದಿಂದ ಸಮ್ಮತಿ ದೊರೆತ ಮೇಲೆ ಟೆಂಡರ್ ಕರೆಯಲಾಗುವುದು ಎಂದು ತುಷಾರ್ ತಿಳಿಸಿದರು.

ಬಿಬಿಎಂಪಿ ಶಾಲೆ ಮಕ್ಕಳಿಗೆ ಸ್ವೆಟರ್ ಕೊಡುವುದು ತಡವಾಗಿದೆ. ಕಳೆದ ವರ್ಷಕ್ಕಿಂತಲೂ ಬೇಗ ವಿತರಿಸಲಾಗುವುದು. ಎರಡು ಬಾರಿ ಟೆಂಡರ್ ಕರೆದರೂ ಪ್ರತಿಕ್ರಿಯೆ ಬಂದಿಲ್ಲ. ಹೀಗಾಗಿ 4ಜಿ ವಿನಾಯಿತಿಗೆ ಸರ್ಕಾರಕ್ಕೆ ಮನವಿ ಮಾಡಿಕೊಳ್ಳಲಾಗಿದೆ. ಅಲ್ಲಿಂದ ಸಮ್ಮತಿ ದೊರೆತ ಮೇಲೆ ಲಿಡ್ಕರ್ ಮೂಲಕ ವಿತರಿಸಲಾಗುವುದು ಎಂದು ಅವರು ಹೇಳಿದರು.

ಗುರಿ ಮುಟ್ಟದಿದ್ದರೆ ವರ್ಗ...

ತುಷಾರ್

ಬಿಬಿಎಂಪಿ ಈ ಬಾರಿ ತೆರಿಗೆ ಸಂಗ್ರಹದ ಮೇಲೆ ಹೆಚ್ಚಿನ ಗಮನ ಹರಿಸಿದೆ. ಪ್ರತಿಯೊಬ್ಬ ಕಂದಾಯ ಅಧಿಕಾರಿಗಳಿಗೆ ಗುರಿ ನೀಡಲಾಗಿದ್ದು, ಅವರು ಅದನ್ನು ತಲುಪದಿದ್ದರೆ ಬೇರೆ ವಲಯಕ್ಕೆ ವರ್ಗಾಯಿಸಲಾಗುತ್ತದೆ ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಎಚ್ಚರಿಸಿದ್ದಾರೆ.

ಕಳೆದ ವರ್ಷ ₹3,300 ಕೋಟಿಯಷ್ಟು ತೆರಿಗೆ ಸಂಗ್ರಹವಾಗಿದೆ. ಈ ಬಾರಿ ಶೇ 50ರಷ್ಟು ಹೆಚ್ಚಿಗೆ ಮಾಡಲಾಗುತ್ತಿದೆ. ₹4,567 ಕೋಟಿ ಗುರಿ ನೀಡಲಾಗಿದೆ. ಯಾವ ವಲಯದಿಂದ ದಿನ, ವಾರಕ್ಕೆ ಎಷ್ಟು ಸಂಗ್ರಹ ಮಾಡಬೇಕು ಎಂಬ ಮಾಹಿತಿಯನ್ನೂ ರವಾನಿಸಲಾಗಿದೆ ಎಂದರು.

ಕಂದಾಯ ಅಧಿಕಾರಿಗಳು ಗುರಿ ಮುಟ್ಟದಿದ್ದರೆ, ಬೇರೆ ವಲಯದ 'ನಾನ್ ಎಕ್ಸಿಕ್ಯೂಟಿವ್' ಹುದ್ದೆಗೆ ವರ್ಗಾಯಿಸಲಾಗುತ್ತದೆ ಎಂದು ತಿಳಿಸಿದರು.

ಫ್ಲೆಕ್ಸ್, ಬ್ಯಾನರ್ ತೆರವು

ನಗರದಲ್ಲಿ ಫ್ಲೆಕ್ಸ್ ಹಾಗೂ ಬ್ಯಾನರ್‌ಗೆ ಅವಕಾಶ ನೀಡುವಂತೆಯೇ ಇಲ್ಲ. ಅವುಗಳ ತೆರವಿಗೆ ಕ್ರಮ ಕೈಗೊಳ್ಳಲಾಗುತ್ತದೆ. ಯಾರ ಮೇಲಾದರೂ ಕ್ರಮ ಕೈಗೊಳ್ಳುವ ಬದಲು, ತೆರವು ಮಾಡುವುದು ಮುಖ್ಯ ಎಂದು ತುಷಾರ್ ಗಿರಿನಾಥ್ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

12 ಸಾವಿರ ಅಕ್ರಮ ಎ ಖಾತಾ: ಬಿಬಿಎಂಪಿ ವ್ಯಾಪ್ತಿಯಲ್ಲಿ ಅಕ್ರಮವಾಗಿ 12 ಸಾವಿರ ಆಸ್ತಿಗಳಿಗೆ ಎ ಖಾತಾ ನೀಡಲಾಗಿದೆ. ಅವುಗಳೆಲ್ಲನ್ನೂ ಬಿ ಖಾತೆಗೆ ವರ್ಗಾಯಿಸಲು ವಲಯ ಆಯುಕ್ತರಿಗೆ ಸೂಚನೆ ನೀಡಲಾಗಿದೆ. ಈ ಬಗ್ಗೆ ತನಿಖೆ ಮುಂದುವರಿದಿದೆ ಎಂದರು.

ಕ್ಷೇಮ ಕುಶಲ

ಮಕ್ಕಳ ಸುರಕ್ಷತೆಯಲ್ಲಿ ಪೋಷಕರ ಪಾತ್ರ

ಡಾ. ಕಿರಣ್ ವಿ. ಎಸ್.

ಇಂದಿನ ಜಗತ್ತು ಕೌಶಲವನ್ನು ಆಧರಿಸಿದೆ. ಸ್ವತಂತ್ರವಾಗಿ, ಯಾರ ದಾಕ್ಷಿಣ್ಯಕ್ಕೂ ಒಳಗಾಗದೆ ಬದುಕಲು ವಿದ್ಯೆಯ, ನೈಪುಣ್ಯದ ಬೆಂಬಲ ಅತ್ಯಗತ್ಯ. ಹೆಚ್ಚು ಫೀಸನ್ನು ಕಟ್ಟಿ ಹೆಸರಾಂತ ಶಾಲೆಗೆ ಸೇರಿಸಿಬಿಟ್ಟರೆ ವಿದ್ಯೆ ತಾನಾಗಿಯೇ ಬಂದುಬಿಡುತ್ತದೆ ಎನ್ನುವ ಭ್ರಮೆ ಈಗ ಉಳಿದಿಲ್ಲ. ಜಗತ್ತು ಹೆಚ್ಚು ಸ್ಪರ್ಧಾತ್ಮಕವಾಗುತ್ತಿದೆ ಎನಿಸಿದಾಗ ಅದಕ್ಕೆ ತಮ್ಮ ಮಗುವನ್ನು ಸಜ್ಜುಗೊಳಿಸಲು ಪೋಷಕರೂ ಉತ್ಸುಕರಾಗಿರುತ್ತಾರೆ. ಅಂತೆಯೇ, ಬದಲಾಗುತ್ತಿರುವ ಪ್ರಪಂಚದಲ್ಲಿ ಮಕ್ಕಳ ಸುರಕ್ಷತೆಯ ಕಡೆಗೂ ಗಮನ ಹರಿಸಬೇಕು. ಇಂತಹ ಹಲವಾರು ವಿಷಯಗಳಲ್ಲಿ ಪೋಷಕರು ಸಮತೋಲನವನ್ನು ಕಾಯ್ದುಕೊಳ್ಳುವುದು ಮುಖ್ಯವಾಗುತ್ತದೆ. ಶಾಲೆಗೆ ಹೋಗಲು ಆರಂಭಿಸಿದ ಮಕ್ಕಳನ್ನು ಸುರಕ್ಷತೆಯ ದೃಷ್ಟಿಯಿಂದ ಪೋಷಕರು ಹೇಗೆ ಸಜ್ಜುಗೊಳಿಸಬಹುದು ಎಂಬುದರ ಬಗ್ಗೆ ಒಂದು ಜಿಜ್ಞಾಸೆ.

> ಇಂದಿನ ಡಿಜಿಟಲ್ ಪ್ರಪಂಚದಲ್ಲಿ ಮಕ್ಕಳು ಕೇವಲ ದೈಹಿಕವಾಗಿ ಅಲ್ಲದೆ ಮಾನಸಿಕವಾಗಿಯೂ ಅಸುರಕ್ಷಿತರಾಗಿರುತ್ತಾರೆ...

ಶಾಲೆಯಿಂದ ಬರುವ ಮಕ್ಕಳು ಅನುಭವಗಳ ಮೂಟೆ ಹೊತ್ತು ಮರಳುತ್ತಾರೆ. ಅವೆಲ್ಲವೂ ಅವರ ನಿರಂತರ ಮಾತುಗಳಲ್ಲಿ ಹರಿಯುತ್ತವೆ. ಕನಿಷ್ಠ ಒಬ್ಬ ಪೋಷಕರು ಆ ದನಿಗೆ ಬೇಸರವಿಲ್ಲದೆ ಕಿವಿಯಾಗಬೇಕು. ಮಗುವಿನ ಬಹುತೇಕ ಮಾತುಗಳು ನಮಗೆ ಅರ್ಥರಹಿತವಾಗಿರಬಹುದು ಅಥವಾ ಪುನರುಕ್ತಿಯಾಗಬಹುದು. ಆದರೆ ಮಗುವಿನ ಪಾಲಿಗೆ ಅವು ಮನದ ಭಾವಗಳನ್ನು ಹಂಚಿಕೊಳ್ಳುವ ಏಕೈಕ ಆರೋಗ್ಯಕರ ಮಾರ್ಗ. ನಾವು ಆಸಕ್ತಿಯಿಂದ ಅವರ ಮಾತುಗಳನ್ನು ಕೇಳುತ್ತಿದ್ದೇವೆ ಎಂದರೆ ಮಕ್ಕಳು ನಿರ್ಭೀತರಾಗುತ್ತಾರೆ. ಶಾಲೆಯ ಆಗುಹೋಗುಗಳ ಬಗೆಗಿನ ಕೆಲವೊಂದು ಸೂಕ್ಷ್ಮ ವಿಚಾರಗಳು ನಮಗೆ ತಿಳಿಯುವುದು ಹೀಗೆಯೇ. ಮಕ್ಕಳ ಜೊತೆಗೆ ಅನುಚಿತವಾಗಿ ವರ್ತಿಸಬಲ್ಲ ಪುಂಡರು, ನಿರ್ಲಕ್ಷ್ಯ ಧೋರಣೆಯ ಶಿಕ್ಷಕರು, ನೈರ್ಮಲ್ಯದ ಪರಿವೆಯಿಲ್ಲದ ಕೆಲಸಗಾರರು ಮೊದಲಾದವರ ಬಗ್ಗೆ ಮಕ್ಕಳಿಗೆ ನಿರ್ಣಾಯಕವಾಗಿ ಹೇಳಲು ಬಾರದು. ಆದರೆ, ಅವೆಲ್ಲವೂ ಅವರ ಶಕ್ತಿಯುತ ನೆನಪಿನಲ್ಲಿ ದಾಖಲಾಗುತ್ತವೆ. ಅವರ ಮಾತಿನ ನಡುವೆ ಇಂತಹ ಪ್ರಸಂಗಗಳು ಅನುಷಂಗಿಕವಾಗಿ ಹೊರಬರುತ್ತವೆ. ಮಕ್ಕಳ ಸುರಕ್ಷತೆಯ ದೃಷ್ಟಿಯಿಂದ ಅವರ ಮಾತುಗಳನ್ನು ಗಮನವಿಟ್ಟು ಕೇಳಬೇಕು. ಅಪಾಯಕಾರಿಯಾದ ಸಂಗತಿಗಳನ್ನು ಕೂಡಲೇ ಶಾಲೆಯ ಗಮನಕ್ಕೆ ತರಬೇಕು.

ಸಣ್ಣವಯಸ್ಸಿನ ಮಕ್ಕಳಿಗೆ ತಮ್ಮ ದೇಹದ ಯಾವ ಅಂಗವನ್ನು ಅಪರಿಚಿತರು ಸ್ಪರ್ಶಿಸಬಹುದು; ಯಾವುದನ್ನು ಮುಟ್ಟಬಾರದು ಎಂಬ ವಿಷಯವನ್ನು ಆಗಾಗ ಜಾಣ್ಮೆಯಿಂದ ಹೇಳುತ್ತಿರಬೇಕು. 'ಸುರಕ್ಷಿತ ಸ್ಪರ್ಶ; ಅಸುರಕ್ಷಿತ ಸ್ಪರ್ಶ'ಗಳ ಆಟವನ್ನು ಆಡಿಸುವ ಮೂಲಕ ಅವರಲ್ಲಿ ಇಂತಹ ಅರಿವನ್ನು ಗಟ್ಟಿಗೊಳಿಸಬೇಕು. ಯಾವುದೇ ಸಂದರ್ಭದಲ್ಲೂ ಯಾರಾದರೂ ಅಸುರಕ್ಷಿತ ಸ್ಪರ್ಶವನ್ನು ಮಾಡಿದರೆ ಪೋಷಕರಿಗೆ ತಿಳಿಸಬೇಕು ಎನ್ನುವ ಮಾತನ್ನು ಮಕ್ಕಳಿಗೆ ಮನದಟ್ಟು ಮಾಡಿಸಬೇಕು.

ಅಪರಿಚಿತರ ಬಗ್ಗೆ ಮಕ್ಕಳಿಗೆ ಮನವರಿಕೆ ಮಾಡಿಕೊಡುವುದು ಬಹಳ ಮುಖ್ಯ. ಪೋಷಕರ ಫೋನ್ ಸಂಖ್ಯೆ ಮಕ್ಕಳಿಗೆ ಬಾಯಿಪಾಠವಾದರೆ ಒಳಿತು. ಯಾವುದಕ್ಕೂ ಮಕ್ಕಳ ಜೇಬಿನಲ್ಲಿ ಪೋಷಕರ ಹೆಸರು, ಫೋನ್ ಸಂಖ್ಯೆ ಇರುವ ಚೀಟಿಯೊಂದನ್ನು ಪ್ಲಾಸ್ಟಿಕ್ ಹೊದಿಕೆಯಿಂದ ಸುರಕ್ಷಿತಗೊಳಿಸಿ ಸದಾ ಇಟ್ಟಿರಬೇಕು. ಯಾವುದೇ ಅಪರಿಚಿತರ ಜೊತೆಗೂ ಯಾವುದೇ ಕಾರಣಕ್ಕೂ ಹೋಗಬಾರದೆನ್ನುವ ನಿಯಮವನ್ನು ಮಕ್ಕಳ ಮನಸ್ಸಿನಲ್ಲಿ ಬೇರೂರುವಂತೆ ಪದೇ ಪದೇ ಹೇಳುತ್ತಿರಬೇಕು. ಹಿರಿಯರ ದೈನಂದಿನ ವೇಳಾಪಟ್ಟಿಯಲ್ಲಿ ಯಾವುದಾದರೂ ವ್ಯತ್ಯಾಸ ಆಗುವುದಿದ್ದರೆ, ಅದನ್ನು ಮಕ್ಕಳಿಗೆ ನಾಜೂಕಾಗಿ ಮೊದಲೇ ತಿಳಿಸಿರಬೇಕು. ಮಕ್ಕಳ ಸುರಕ್ಷತೆಯನ್ನು ನಮ್ಮ ಜೀವನದ ಭಾಗವಾಗಿ ಪರಿಗಣಿಸುವುದು ಇಂದಿನ ಅಗತ್ಯಗಳಲ್ಲಿ ಒಂದು.

ಅಹಿತಕರ ಅನುಭವಗಳ ಬಗ್ಗೆ ಮಾತನಾಡಲು ಮಕ್ಕಳು ಹಿಂಜರಿಯುತ್ತಾರೆ. ಆ ರೀತಿಯ ಮಾತುಗಳನ್ನು ಆಡುವಾಗ ಹೆದರಿಕೆಯಿಂದಲೇ ಆರಂಭಿಸುತ್ತಾರೆ. ಮಾತಿನ ಆರಂಭದಲ್ಲಿ ಪರಸ್ಪರ ಸಂಬಂಧವಿಲ್ಲದ ವಾಕ್ಯಗಳನ್ನು ಪೋಣಿಸಬಹುದು. ಹಾಗೆಯೇ ಮುಂದುವರೆದು, ಸ್ವಲ್ಪ ವಿಶ್ವಾಸ ಬೆಳೆದ ನಂತರ ಅವರನ್ನು ಕಾಡುತ್ತಿರುವ ಭಾವಗಳಿಗೆ ಸರಿಯಾದ ಮಾತುಗಳು ಬರಬಹುದು. ಆಗಲೂ ಬಹುತೇಕ ಮಕ್ಕಳ ದನಿ ಕ್ಷೀಣವಾಗಿಯೇ ಇರುತ್ತದೆ. ಹಿರಿಯರು ಇದನ್ನು ಗುರುತಿಸಬೇಕು. ಒಂದು ವೇಳೆ ಸಂಯಮ ತಪ್ಪಿ ಮಕ್ಕಳನ್ನು ಗದರಿದರೆ, ಹೊರಬರಹುದಾದ ಸತ್ಯ ಅಲ್ಲೇ ದಮನವಾಗಬಹುದು. ಮಕ್ಕಳು ಮಾತನಾಡಲು ಬಯಸುವ ಪ್ರತಿಯೊಂದು ಸಂದರ್ಭವನ್ನೂ ಅತ್ಯಂತ ತಾಳ್ಮೆಯಿಂದ ನಿಭಾಯಿಸಬೇಕಾಗುತ್ತದೆ. ಈ ವಿಷಯದಲ್ಲಿ ಹಿರಿಯರು ಎಷ್ಟು ಪ್ರಾಮಾಣಿಕ ಸಹಾನುಭೂತಿ ತೋರುತ್ತಾರೋ, ಮಕ್ಕಳ ಭೀತಿ ಅಷ್ಟು ಕಡಿಮೆಯಾಗಿ, ಅವರು ಮುಕ್ತವಾಗಿ ಮಾತನಾಡುವಂತಾಗುತ್ತದೆ. ನಾವು ಅವರ ಹೆದರಿಕೆಯನ್ನು ಪರಿಹರಿಸಬಲ್ಲವೆಂದು ಮಕ್ಕಳು ನಂಬಿದರೆ ಮಾತ್ರ ನಮ್ಮಲ್ಲಿ ವಿಷಯಗಳನ್ನು ಹಂಚಿಕೊಳ್ಳಬಲ್ಲರು. ಆ ನಂಬಿಕೆಯನ್ನು ಅವರಲ್ಲಿ ತುಂಬುವುದು ಮುಖ್ಯ.

ಅಹಿತಕರ ಘಟನೆಗಳನ್ನು ಹೇಗೆ ನಿಭಾಯಿಸಬಹುದು ಎನ್ನುವ ಬಗ್ಗೆ ಮಕ್ಕಳಿಗೆ ಪ್ರಾತ್ಯಕ್ಷಿಕೆ ನೀಡುವುದು ಉಪಯುಕ್ತ. ಕೆಲವು ಕಾಲ್ಪನಿಕ ಪ್ರಸಂಗಗಳನ್ನು ಹೇಳಿ 'ಇಂತಹ ಸಂದರ್ಭದಲ್ಲಿ ನೀನೇನು ಮಾಡುತ್ತೀಯೆ?' ಎಂದು ಮಕ್ಕಳನ್ನು ನೇರವಾಗಿ ಕೇಳಬೇಕು. ಇಂತಹ ತರಬೇತಿ ಮಕ್ಕಳ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ. ಅಪರಿಚಿತರು ಏನನ್ನಾದರೂ ಕೇಳಿದರೆ ಗಟ್ಟಿಯಾಗಿ 'ಇಲ್ಲ' ಎನ್ನುವುದನ್ನು ಹೇಳಿಕೊಡಬೇಕು. ಅಪರಿಚಿತರು ಏಕಾಂತದಲ್ಲಿ ಮಾತನಾಡಲು ಪ್ರಯತ್ನಿಸಿದರೆ ಕೂಡಲೇ ಅಲ್ಲಿಂದ ಓಡಿಹೋಗಿ ಯಾವುದಾದರೂ ಪರಿಚಿತ ವ್ಯಕ್ತಿಗೆ ವಿಷಯ ತಿಳಿಸಬೇಕೆಂಬುದನ್ನು ಮಕ್ಕಳ ಮನಸ್ಸಿನಲ್ಲಿ ನಾಟಿಸಬೇಕು.

ಇಂದಿನ ಡಿಜಿಟಲ್ ಪ್ರಪಂಚದಲ್ಲಿ ಮಕ್ಕಳು ಕೇವಲ ದೈಹಿಕವಾಗಿ ಅಲ್ಲದೆ ಮಾನಸಿಕವಾಗಿಯೂ ಅಸುರಕ್ಷಿತರಾಗಬಲ್ಲರು. ಪ್ರಸ್ತುತ ವಿದ್ಯಾಭ್ಯಾಸದಲ್ಲಿ ಕಂಪ್ಯೂಟರ್ ಮತ್ತು ಅಂತರ್ಜಾಲ ಅತ್ಯಗತ್ಯವಾಗಿದೆ. ಮಕ್ಕಳಿಗೆ ಡಿಜಿಟಲ್ ಜಗತ್ತಿನಲ್ಲಿ ಮುಕ್ತವಾಗಿ ವ್ಯವಹರಿಸುವುದು ಕಡ್ಡಾಯವಾಗುತ್ತಿದೆ. ಇದರಿಂದ ಆಗಬಹುದಾದ ದುಷ್ಪರಿಣಾಮಗಳ ಸಾಧ್ಯತೆಗಳು ಕೆಲವೊಮ್ಮೆ ನಮ್ಮ ಊಹೆಗೂ ಮೀರಿದವು. ಹೀಗಾಗಿ, ಮಕ್ಕಳ ಆನ್‌ಲೈನ್ ಪ್ರಪಂಚದತ್ತ ನಿಗಾ ಇಟ್ಟಿರುವುದು ಪೋಷಕರ ಜವಾಬ್ದಾರಿ. ಮಕ್ಕಳು ಕದ್ದು-ಮುಚ್ಚಿ ಕಂಪ್ಯೂಟರ್ ಬಳಸುವ ಬದಲಿಗೆ ಹಿರಿಯರ ಅನುಮತಿಯೊಡನೆ, ಅವರ ದೇಖರೇಖಿಯಲ್ಲಿ ಉಪಯೋಗಿಸುವುದನ್ನು ಪ್ರೋತ್ಸಾಹಿಸಬೇಕು. ಸಾಧ್ಯವಾದರೆ ಮಕ್ಕಳಿಗೆ ಪ್ರತ್ಯೇಕ ಕಂಪ್ಯೂಟರಿನ ಅನುಕೂಲ ಆಗಬೇಕು. ಅದು ಆಗದಿದ್ದರೆ, ಹಿರಿಯ ಕಂಪ್ಯೂಟರಿನಲ್ಲಿ ಮಕ್ಕಳಿಗಾಗಿಯೇ ಪ್ರತ್ಯೇಕ ಖಾತೆ ಮಾಡಿಕೊಡಬೇಕು. ಹಿರಿಯರು ಬಳಸಬಹುದಾದ ಜಾಲತಾಣಗಳಿಗೆ ಮಕ್ಕಳು ಸೇರಲು ಆಸ್ಪದ ಇರಬಾರದು. ಮಕ್ಕಳಿಗೆ ಸುರಕ್ಷಿತ ಎನಿಸುವ ಜಾಲತಾಣಗಳನ್ನು ಮಾತ್ರ ಬಳಸುವಂತಹ ವ್ಯವಸ್ಥೆಯಾಗಬೇಕು.

ಮಕ್ಕಳ ಸುರಕ್ಷತೆ ಒಂದು ನಿರಂತರ ಪಯಣ. ಅದನ್ನು ಮಕ್ಕಳ ಜೊತೆಗಿನ ಪರ್ಯಾಪ್ತ ಸಂವಹನದ ಮೂಲಕ ಸದಾ ಚಾಲ್ತಿಯಲ್ಲಿ ಇಟ್ಟಿರಬೇಕು. ಸಣ್ಣ ವಯಸ್ಸಿನಲ್ಲಿ ಆರಂಭವಾಗುವ ಈ ಪ್ರಯತ್ನ ಮಕ್ಕಳ ಬೆಳವಣಿಗೆಯ ಆಯಾ ಹಂತಗಳಲ್ಲಿ ವಿಕಸನವಾಗುತ್ತಾ ಪಕ್ವವಾಗುವುದು ಮುಖ್ಯ. ❖

ಮಧ್ಯವಯಸ್ಸಿನ ಮುಗ್ಗಟ್ಟುಗಳು

ಲಾವಣ್ಯಗೌರಿ ವೆಂಕಟೇಶ್

ಬಾಲ್ಯ, ಯೌವನ, ನಡುವಯಸ್ಸು ಹಾಗೂ ವೃದ್ಧಾಪ್ಯ – ಇವು ಮಾನವನ ಬದುಕಿನ ನಾಲ್ಕು ಘಟ್ಟಗಳು. ಪ್ರತಿ ಹಂತದಲ್ಲೂ ಮನುಷ್ಯನ ವರ್ತನೆ ಬೇರೆ ಬೇರೆಯಾಗಿರುತ್ತದೆ. ಹರೆಯ ಹಾಗೂ ಮುಪ್ಪಿನ ನಡುವೆ ಬರುವುದೇ ಮಧ್ಯ ವಯಸ್ಸು. ಸುಮಾರು 40ರಿಂದ 60ರ ವಯಸ್ಸಿನಲ್ಲಿ ತಮ್ಮದೇ ಜೀವನದ ಬಗ್ಗೆ ವಿಮರ್ಶೆ ಹುಟ್ಟಿಕೊಳ್ಳುತ್ತದೆ. ಇದು ಇಲ್ಲಿಯವರೆಗಿನ ಹೋರಾಟವಾಗಿರಬಹುದು, ವೃತ್ತಿಜೀವನಕ್ಕೆ ಸಂಬಂಧಿಸಿದ್ದಿರಬಹುದು ಅಥವಾ ಭವಿಷ್ಯದ ಭಯವಿರಲೂಬಹುದು. ಸಾಧಾರಣವಾಗಿ ಮಧ್ಯವಯಸ್ಸಿಗೆ ಬರುವ ವೇಳೆಗೆ ಮಕ್ಕಳು ದೊಡ್ಡವರಾಗಿರುತ್ತಾರೆ. ನಡುವಯಸ್ಕರು ಉದ್ಯೋಗದಲ್ಲಿ ಒಂದು ಹಂತಕ್ಕೆ ತಲುಪಿರುತ್ತಾರೆ. ವಯಸ್ಸಾದ ಪೋಷಕರ ಜವಾಬ್ದಾರಿ ಇರುತ್ತದೆ. ನಿವೃತ್ತಿಜೀವನದ ಬಗ್ಗೆ ಒಂದು ಸ್ಪಷ್ಟತೆ ಬಂದಿರುತ್ತದೆ. ಆದರೂ ಒಂದು ರೀತಿಯ ದುಗುಡ ಕಾಡಲು ಆರಂಭವಾಗುತ್ತದೆ.

ಬದುಕಿನ ಬಂಡಿಯನ್ನೊಮ್ಮೆ ತಿರುಗಿಸಿದಾಗ ನೋಡಿದಾಗ, ಇದುವರೆವಿಗೂ ತಾನು ಮಾಡಿದ್ದು ಸರಿಯೋ ತಪ್ಪೋ ಎಂಬ ಜಿಜ್ಞಾಸೆ ಕಾಡತೊಡಗುತ್ತದೆ. ಮುಂದಿನ ಬದುಕು ಹೇಗೆ ಎಂಬ ಪ್ರಶ್ನೆ ದುತ್ತೆಂದು ಎದುರು ನಿಲ್ಲುತ್ತದೆ. ಎಲ್ಲವೂ ಸರಿ ಇದೆ ಎನ್ನುವಾಗಲೇ ಈ ಮಧ್ಯವಯಸ್ಸಿನ ಮುಗ್ಗಟ್ಟು ಹಲವರಲ್ಲಿ ಗೊಂದಲ ತರುತ್ತದೆ. ಈ ಬಿಕ್ಕಟ್ಟಿಗೆ ಹೆಣ್ಣು ಗಂಡೆಂಬ ಭೇದವಿಲ್ಲ. ಕೆಲವರು ತಮ್ಮ ಭಾವನೆಗಳಿಗೆ ತಕ್ಕಂತೆ ತಮ್ಮ ಜೀವನಶೈಲಿಯನ್ನು ಬದಲಿಸಿಕೊಳ್ಳುತ್ತಾರೆ. ಮತ್ತೆ ಕೆಲವರಿಗೆ ಬದುಕೇ ಅಸಹನೀಯವಾಗಿ ತೋರುತ್ತದೆ.

> ಎಲ್ಲ ಮಧ್ಯವಯಸ್ಕರನ್ನೂ ಸಮಸ್ಯೆಗಳು ಕಾಡಬೇಕೆಂದಿಲ್ಲ. ಕೆಲವರು ಭಾವನೆಗಳನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿರುತ್ತಾರೆ. ನಮ್ಮ ಜೀವನಶೈಲಿ ನಮ್ಮ ನೆಮ್ಮದಿಯನ್ನು ನಿರ್ಧರಿಸುತ್ತದೆ

ಸಾಮಾನ್ಯವಾಗಿ ಮಹಿಳೆಯರಿಗೆ ಋತುಬಂಧದ ಸಮಯದಲ್ಲಾಗುವ ಬದಲಾವಣೆಗಳನ್ನು ನಡುವಯಸ್ಸಿನ ಸಮಸ್ಯೆಯೆಂದು ಪರಿಗಣಿಸಲಾಗುತ್ತದೆ. ಮಹಿಳೆಯರಿಗೆ ಮಾತ್ರವಲ್ಲದೆ ಪುರುಷರಿಗೂ ಮಧ್ಯವಯಸ್ಸು ಸಮೀಪಿಸುತ್ತಿರುವಂತೆಯೇ ಒಂದು ಬಗೆಯ ವ್ಯಸನ ಕಾಡಲು ಆರಂಭಿಸುತ್ತದೆ. ಕೆಲಸದ ಬಗ್ಗೆ ನಿರಾಸೆ ಮೂಡಬಹುದು. ಒತ್ತಡ ಹೆಚ್ಚಾಗಿ ಖಿನ್ನತೆಗೆ ಜಾರಬಹುದು. ಯಾವುದೂ ಮೊದಲಿನಂತೆ ಇಲ್ಲ ಎಂದೆನಿಸಬಹುದು. ಸಿಟ್ಟು, ಸಿಡುಕು ಹೆಚ್ಚಾಗಬಹುದು. ತಮ್ಮ ದೇಹದ ಬಗ್ಗೆಯೇ ಕೀಳರಿಮೆ ಮೂಡಬಹುದು. ಒಂಟಿತನ ಕಾಡಬಹುದು. ಮುಂದಿನ ಜೀವನದ ಬಗ್ಗೆ ಭಯ ಹುಟ್ಟಬಹುದು. ಒಟ್ಟಿನಲ್ಲಿ ಏನೋ ನಿರಾಶೆ, ಹತಾಶೆಯ ಭಾವ ಆವರಿಸಬಹುದು. ಇದಕ್ಕೆ ಬದುಕಿನ ಬವಣೆಗಳೇ ಕಾರಣವಾಗಬೇಕೆಂದಿಲ್ಲ. ಎಲ್ಲವೂ ಚೆನ್ನಾಗಿಯೇ ಇದ್ದಾಗಲೂ ಯಾರಿಗೆ ಬೇಕಾದರೂ ಅನಿಸಬಹುದಾದ ಭಾವನೆಗಳು ಇವು. ಈ ಮಧ್ಯವಯಸ್ಸಿನ ಸಮಸ್ಯೆಗಳು ಎಲ್ಲರಲ್ಲೂ ಒಂದೇ ರೀತಿ ಇರುವುದಿಲ್ಲ. ಇದುವರೆವಿಗೂ ಇಷ್ಟವಾಗುತ್ತಿದ್ದ ಕೆಲಸಗಳು, ಆಶಯಗಳು, ವ್ಯಕ್ತಿಗಳು ಇಷ್ಟವಾಗದೇ ಹೋಗಬಹುದು! ಇದಕ್ಕೆ ಇಂಥದ್ದೇ ಎಂದು ನಿರ್ದಿಷ್ಟವಾದ ಕಾರಣಗಳಿಲ್ಲ. ಇವು ಬದುಕಿನಲ್ಲಿ ನಡೆದ ಅನಿರೀಕ್ಷಿತ ಅಹಿತಕರ ಘಟನೆಗಳಿಂದ ಶುರುವಾಗಬಹುದು. ಏನೂ ಆಗದೆಯೂ ಬದುಕಿನಲ್ಲಿ ಹೊಸತನ್ನು ಹುಡುಕುವ ಗೀಳಿನಿಂದಲೂ ಉದಯಿಸಬಹುದು. ಬದುಕಿನ ಏಕತಾನತೆಯಿಂದಲೂ ಮಧ್ಯವಯಸ್ಸಿನ ಮಗ್ಗಟ್ಟು ಉಂಟಾಗಬಹುದು.

ಈ ಸಮಸ್ಯೆಗಳು ಎಲ್ಲಾ ಮಧ್ಯವಯಸ್ಕರನ್ನೂ ಕಾಡಬೇಕೆಂದಿಲ್ಲ. ಈ ತೊಂದರೆಗಳನ್ನು ಹೀಗೇ ಎಂದು ಅಧಿಕೃತವಾಗಿ ನಿರ್ಣಯಿಸಲು ಆಗುವುದಿಲ್ಲ. ಇದೊಂದು ಬಹಳ ಸಾಧಾರಣವಾದ ಜೀವನದ ಹಂತಗಳಲ್ಲಿ ಒಂದು. ಈ ಒಂದು ಹಂತವನ್ನು ದಾಟಿ ಮುಂದೆ ನಡೆದರೆ ಬದುಕು ಸರಾಗ. ಇದಕ್ಕಾಗಿ ಕೆಲವು ಸರಳವಾದ ಹವ್ಯಾಸಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಬದುಕು ಉಲ್ಲಾಸದಿಂದಲೂ ಶಾಂತಿಯಿಂದಲೂ ಕೂಡಿರುತ್ತದೆ.

ಆದ್ಯತೆ ಅರಿಯಿರಿ: 'ಮಿ ಟೈಮ್', ಅಂದರೆ ನನ್ನ ಸಮಯವೆಂಬುದಿದೆ. ಇಷ್ಟಾನಿಷ್ಟಗಳಿಗೆ ಆದ್ಯತೆ ಕೊಡುವತ್ತ ಯೋಚಿಸಿ. ಈ ಸಮಯದಲ್ಲಿ ನಿಮಗಿಷ್ಟವಾದ ಕೆಲಸಗಳನ್ನು ಮಾಡಿ. ಅದು ಇಂಥದ್ದೇ ಆಗಿರಬೇಕೆಂದಿಲ್ಲ. ಸಂಗೀತವಾಗಿರಬಹುದು, ಆಟವಾಗಿರಬಹುದು, ಸಾಮಾಜಿಕ ಜಾಲತಾಣವಾಗಿರಬಹುದು, ನಿಮಗಿಷ್ಟವಾದ ಮನರಂಜನೆಯಾಗಿರಬಹುದು, ಕೈತೋಟದಲ್ಲಿ ನಿಮ್ಮನ್ನು ನೀವು ತೊಡಗಿಸಿಕೊಳ್ಳಬಹುದು. ಹೀಗೆ ನೀವು ಆಸಕ್ತಿಯಿಂದ ಮಾಡುವ ಯಾವುದೇ ಕೆಲಸವಾದರೂ ಸರಿ. ಬೇಡದ ಯೋಚನೆಗಳು ಆಗ ನಿಮ್ಮ ಹತ್ತಿರವೂ ಸುಳಿಯುವುದಿಲ್ಲ. ಇಷ್ಟವಾದ ಕೆಲಸದಲ್ಲಿ ತೊಡಗಿಕೊಳ್ಳುವುದೂ ಒಂದು ರೀತಿಯ ಧ್ಯಾನವೇ!

ಚಟಗಳನ್ನು ಬಿಡಿ: ಮನಸ್ಸನ್ನು ಬೇರೆಡೆಗೆ ಹೊರಳಿಸಲು ಏಕಾಗ್ರತೆ ಬೇಕು. ಇದಕ್ಕಾಗಿ ಯಾವುದೇ ರೀತಿಯ ಕೆಟ್ಟ ಚಟಗಳಿದ್ದರೂ ಅದನ್ನು ಬಿಡಿ. ಮಧ್ಯವಯಸ್ಸಿಗೆ ಬರುವ ವೇಳೆಗೆ ಬದುಕಿನ ನಾನಾ ರೀತಿಯ ಮಜಲುಗಳನ್ನು ಏರಿ ಬಂದಾಗಿರುತ್ತದೆ. ಸುಖ-ದುಃಖ, ನೋವು-ನಲಿವು ಎಲ್ಲವನ್ನೂ ಕಂಡಿರುವ ವಯಸ್ಸಾಗಿರುತ್ತದೆ. ಬಂದದ್ದನ್ನು ಬಂದಂತೆ ಸ್ವೀಕರಿಸುವ ಮನಃಸ್ಥಿತಿ ಈ ವೇಳೆಗೆ ಬಂದಿರುತ್ತದೆ. ನಿಮ್ಮ ಆರೋಗ್ಯಕ್ಕೆ ಯಾವುದು ಒಳ್ಳೆಯದು ಎಂದು ತಿಳಿದುಕೊಳ್ಳಿ. ಬದುಕಿನಲ್ಲಿ ಬರುವ ಯಾವುದೇ ಬದಲಾವಣೆಗಳನ್ನು ಸ್ವೀಕರಿಸುವ ಸಿದ್ಧತೆ ಮಾಡಿಕೊಳ್ಳಿ. ಕೆಟ್ಟ ಚಟಗಳು ಹತ್ತಿರಕ್ಕೂ ಸುಳಿಯದಂತೆ ನೋಡಿಕೊಳ್ಳಿ.

ಹೋಲಿಕೆ ಬೇಡ: ನಿಮಗಿಷ್ಟವಾದ ಸ್ನೇಹಿತರೊಂದಿಗೆ ಸ್ನೇಹವನ್ನು ಉಳಿಸಿಕೊಳ್ಳಿ. ಸ್ನೇಹಿತರೊಂದಿಗಿನ ಒಡನಾಟ ಮನಸ್ಸನ್ನು ಹಗುರಗೊಳಿಸುತ್ತದೆ. ಆದರೆ ಯಾವುದೇ ಕಾರಣಕ್ಕೂ ಮತ್ತೊಬ್ಬರೊಂದಿಗೆ ನಿಮ್ಮನ್ನು ನೀವು ಹೋಲಿಸಿಕೊಳ್ಳಬೇಡಿ. ಪ್ರತಿಯೊಬ್ಬರ ಜೀವನವೂ ವಿಭಿನ್ನವಾಗಿರುತ್ತದೆ. ಮಿತ್ರರ ಜೊತೆಯಿದ್ದಾಗ ಭಾವನಾತ್ಮಕ ಆರೋಗ್ಯ ಸುಧಾರಿಸುತ್ತದೆ.

ಕಾಳಜಿ ಮಾಡಿ: ಬೇರೆಯವರ ಬಗ್ಗೆ ತೋರುವ ಕಾಳಜಿಯನ್ನು ನಿಮ್ಮ ಬಗ್ಗೆಯೂ ತೋರಿ ನೋಡಿ.

ನಮ್ಮ ಮನಸ್ಸಿನ ಮೇಲೆ ಆಗುವ ದಾಳಿಗಳನ್ನು ನಾವೇ ನಿಯಂತ್ರಿಸಬೇಕು. ನಮ್ಮ ಭಾವನೆಗಳು ನಮ್ಮ ಹಿಡಿತದಲ್ಲಿರಬೇಕು. ಯಾವ ಭಾವ ನಮ್ಮನ್ನು ಆಳಬೇಕು ಎಂಬುದನ್ನು ನಿರ್ಧರಿಸಬೇಕಾಗಿರುವುದು ನಾವು ಮಾತ್ರ! ಈ ಮಧ್ಯ ವಯಸ್ಸಿನ ಸಮಸ್ಯೆಗಳು ನಿರಂತರವಲ್ಲ. ಬದುಕಿನ ಹಲವಾರು ಮೆಟ್ಟಿಲುಗಳಲ್ಲಿ ಒಂದೆರಡು ಮಜಲುಗಳಷ್ಟೇ! ❖

ಕಿವಿಗಳಿಗೆ ಬೇಕಾದ ಮಾತುಗಳು

ಡಾ. ವಿನಯ ಶ್ರೀನಿವಾಸ್

ಗುಣಮಟ್ಟದ ಜೀವನವನ್ನು ಹೊಂದುವಲ್ಲಿ ಕಿವಿಗಳ ಕಾಳಜಿ ಕೂಡ ಮಹತ್ವದ್ದು. ಹೊರ, ಮಧ್ಯ ಮತ್ತು ಒಳಕಿವಿ – ಎಂಬ ಮೂರು ಭಾಗಗಳಿರುವ ಈ ಇಂದ್ರಿಯವು ಮುಖ್ಯವಾಗಿ ಶ್ರವಣೇಂದ್ರಿಯವಾದರೂ, ಒಳಕಿವಿಯು ಶರೀರದ ಸಮತೋಲನವನ್ನು ಕಾಪಾಡುವಲ್ಲಿಯೂ ಪಾತ್ರವನ್ನು ವಹಿಸುತ್ತದೆ. ನಿರ್ಲಕ್ಷ್ಯ ಮಾಡಿದ ಕಿವಿಗಳ ಸಮಸ್ಯೆ ಒಮ್ಮೊಮ್ಮೆ ಶಾಶ್ವತ ಕಿವುಡುತನಕ್ಕೂ ಕಾರಣವಾಗಿ, ಬದುಕು ಅಸಹನೀಯವಾಗಬಹುದು. ಆದ್ದರಿಂದಲೇ ಸಮಸ್ಯೆ ತಲೆದೋರಿದಾಗ ಆರಂಭದಲ್ಲಿಯೇ ತಜ್ಞವೈದ್ಯರಲ್ಲಿ ಸಲಹೆ ಪಡೆಯುವುದು ಸೂಕ್ತ.

ಸಾಮಾನ್ಯ ಸಮಸ್ಯೆಗಳು

- **ಹೊರಕಿವಿಯಲ್ಲಿ ಹೆಚ್ಚಾಗುವ ಮೇಣದಂತಹ ವಸ್ತು:** ಸಾಮಾನ್ಯವಾಗಿ ಹೊರಕಿವಿಯಲ್ಲಿ ಉತ್ಪತ್ತಿಯಾಗುವ ಮೇಣದಂತಹ ವಸ್ತುವು ಕಿವಿಗಳನ್ನು ದೂಳು, ಸೂಕ್ಷ್ಮಾಣು ಮತ್ತು ಇತರ ಹೊರಗಿನ ವಸ್ತುಗಳಿಂದ ಸಂರಕ್ಷಿಸುವಲ್ಲಿ ಮಹತ್ತರವಾದ ಪಾತ್ರವನ್ನು ವಹಿಸುತ್ತದೆ. ಆದರೆ ಕೆಲವೊಮ್ಮೆ ಕಿವಿಯ ಪ್ರವೇಶದ್ವಾರ ಚಿಕ್ಕದಾಗಿದ್ದು ಅಥವಾ ಹೊರಗಿನ ಕೊಳವೆಯಂತಿರುವ ಭಾಗವು ಹೆಚ್ಚು ಉದ್ದದ್ದಾಗಿದ್ದರೆ ಈ ಮೇಣದಂತಹ ವಸ್ತು ಅಲ್ಲಿಯೇ ಸಂಗ್ರಹವಾಗಿಬಿಡಬಹುದು. ಇದು ವ್ಯಕ್ತಿಯಲ್ಲಿ ಕಿವಿನೋವು, ಕಿವಿಯಲ್ಲಿ ಏನೋ ತಡೆಯಿದ್ದಂತಹ ಅಥವಾ ತಲೆ ಭಾರವಾದಂತಹ ಅನುಭವವನ್ನು ಉಂಟುಮಾಡಬಹುದು.
- **ಮಧ್ಯಕಿವಿಯಲ್ಲಿ ಸೋಂಕು:** ಮಕ್ಕಳಲ್ಲಿ ಸಾಮಾನ್ಯವಾಗಿ ಕಂಡುಬರುವ ಈ ಸಮಸ್ಯೆಯಲ್ಲಿ ಮಧ್ಯಕಿವಿಯ ಭಾಗದಲ್ಲಿ ಸೋಂಕು ಮತ್ತು ಉರಿಯೂತ ಉಂಟಾಗಿರುತ್ತದೆ. ಅಣುಜೀವಿ ಅಥವಾ ವೈರಾಣುಗಳು ಗಂಟಲಿನ ಭಾಗದಿಂದ ಅಲ್ಲಿರುವ ಕೊಳವೆಯಂತಹ ಸಂಪರ್ಕದ ಮೂಲಕ ಮಧ್ಯಕಿವಿಯನ್ನು ತಲುಪುತ್ತವೆ. ಮಕ್ಕಳು ಕಿವಿನೋವು ಅಥವಾ ಕಿವಿ ಕೇಳಿಸದಿರುವುದು ಅಥವಾ ಕಿವಿಯಲ್ಲಿ ಏನೋ ತುಂಬಿಕೊಂಡಂತಹ ಅನುಭವ ಎಂದು ದೂರಬಹುದು.
- **ಹೊರಕಿವಿಯಲ್ಲಿ ಸೋಂಕು:** ಹೊರಕಿವಿಯಲ್ಲಿ ತೇವಾಂಶ ಹೆಚ್ಚಾಗಿ, ಸೂಕ್ಷ್ಮಾಣುಗಳು ಮತ್ತು ಶಿಲೀಂಧ್ರದ ಬೆಳವಣಿಗೆಗೆ ಪೂರಕವಾದಾಗ ಅಲ್ಲಿ ಸೋಂಕು ಉಂಟಾಗಬಹುದು. ಒಮ್ಮೊಮ್ಮೆ ಇದು ಹೊರ ಕಿವಿಯಲ್ಲಿ ತುರಿಕೆ, ದ್ರವದಂತಹ ವಸ್ತುವಿನ ಸ್ರವಿಕೆ ಮತ್ತು ಕಿವಿನೋವಿಗೆ ಕಾರಣವಾಗಬಹುದು. ಈಜುಗೊಳಕ್ಕೆ ನಿಯಮಿತವಾಗಿ ಭೇಟಿ ನೀಡುವವರಲ್ಲಿ ಮತ್ತು ಮಧುಮೇಹಿಗಳಲ್ಲಿ ಈ ಸಮಸ್ಯೆ ಸಾಮಾನ್ಯ.
- **ಕಿವಿಯಲ್ಲಿ ಒಂದು ಬಗೆಯ ಶಬ್ದ:** ಒಮ್ಮೊಮ್ಮೆ ಕಿವಿಯಲ್ಲಿ ನಿರಂತರವಾಗಿ ಗಂಟೆ ಬಾರಿಸಿದಂತಹ, 'ಗುಯ್', 'ಬಸ್ಸ್' ಅಥವಾ 'ಹಿಸ್ಸ್' ಎಂಬ ಶಬ್ದ ಕೇಳಿದಂತಾಗಬಹುದು. ಹೊರಗೆ ಯಾವುದೇ ಶಬ್ದವಿಲ್ಲದಿದ್ದರೂ ಇಂತಹ ಅನುಭವವಾದಲ್ಲಿ ಕೂಡಲೇ ವೈದ್ಯರ ಸಲಹೆಯನ್ನು ಪಡೆಯಬೇಕು. ಹೊರಕಿವಿಯಲ್ಲಿ ಮೇಣದಂತಹ ವಸ್ತು ಹೆಚ್ಚು ಶೇಖರವಾದಾಗ, ಜೋರಾದ ಕರ್ಕಶ ಶಬ್ದವನ್ನು ಬಹಳ ಹೊತ್ತು ಆಲಿಸಿದಾಗ ಮತ್ತು ಕಿವುಡುತನದ ಆರಂಭದ ಹಂತದಲ್ಲಿ ಈ ಅಸಹಜ ಶಬ್ದ ಕೇಳಿದ ಅನುಭವವಾಗಬಹುದು.
- ಕಿವಿಯ ಯಾವುದೇ ಭಾಗವು ಸೋಂಕಿಗೆ ತುತ್ತಾದಾಗ ವ್ಯಕ್ತಿಯನ್ನು ಜ್ವರ, ಕಿವಿನೋವು, ಕಿವಿ ಮುಚ್ಚಿಕೊಂಡಂತಾಗುವುದು ಮತ್ತು ಕಿವಿಯಿಂದ ಸ್ರಾವ ಸ್ರವಿಸುವಿಕೆ (ಕಿವಿ ಸೋರುವುದು) ಮೊದಲಾದ ಸಮಸ್ಯೆಗಳು ಬಾಧಿಸಬಹುದು.
- ಒಳಕಿವಿಯಲ್ಲಿನ ಸೋಂಕು ವ್ಯಕ್ತಿಯಲ್ಲಿ ತಲೆಸುತ್ತುವಿಕೆಗೂ ಕಾರಣವಾಗಬಹುದು.

ನವಜಾತಶಿಶುಗಳಲ್ಲಿ ಕಿವುಡುತನ

ನವಜಾತಶಿಶುಗಳಲ್ಲಿ ಕಿವುಡುತನ ಕಾಣಿಸಿಕೊಳ್ಳಲು ಕಾರಣಗಳು ಹಲವು. ಮಗುವು ತಾಯಿಯ ಗರ್ಭಾಶಯದಲ್ಲಿರುವಾಗ ತಾಯಿಗೆ ತಗುಲುವ ಕೆಲವು ಸೋಂಕುಗಳು, ತಾಯಿಯಿಂದ ಕಿವುಡುತನ ಉಂಟುಮಾಡಬಹುದಾದ ಔಷಧಗಳ ಸೇವನೆ ಅಥವಾ ಜನನದ ಸಮಯದಲ್ಲಿ ಮಗುವಿಗೆ ಆಮ್ಲಜನಕದ ಪೂರೈಕೆಯಲ್ಲಿ ವ್ಯತ್ಯಯ – ಮೊದಲಾದವು ಮುಖ್ಯವಾದುವು. ಆನುವಂಶೀಯ ಕಾರಣಗಳಿಂದಾಗಿಯೂ ಒಮ್ಮೊಮ್ಮೆ ಕಿವುಡುತನ ಉಂಟಾಗಬಹುದು. ಇಂತಹ ಸಂದರ್ಭಗಳಲ್ಲಿ ಶಿಶುಗಳಿಗೆ ತಜ್ಞರಿಂದ ತಪಾಸಣೆ ಮಾಡಿಸಬೇಕು. ಮುಖ್ಯವಾಗಿ ತಲೆಯ ಭಾಗದ 'ಎಂ. ಆರ್. ಐ.' ಮತ್ತು 'ಸಿ. ಟಿ. ಸ್ಕ್ಯಾನ್' ಮಾಡಿ ನರಗಳ ತೊಂದರೆ ಇಲ್ಲ ಎಂಬ ಅಂಶವು ದೃಢಪಟ್ಟು, ಒಳ ಕಿವಿಯಲ್ಲಿನ 'ಕಾಕ್ಲಿಯ' ಎಂಬ ಮುಖ್ಯ ಭಾಗದ ನ್ಯೂನತೆ ಇದ್ದಾಗ ಕೃತಕ ಕಾಕ್ಲಿಯವನ್ನು ಶಸ್ತ್ರಚಿಕಿತ್ಸೆಯ ಮೂಲಕ ಅಳವಡಿಸಬೇಕಾಗುತ್ತದೆ. ಈ ಶಸ್ತ್ರಚಿಕಿತ್ಸೆಯನ್ನು ಮಗುವಿಗೆ ಆರು ವರ್ಷ ತುಂಬುವ ಮೊದಲೇ ಮಾಡಿಸಿದರೆ ಉತ್ತಮ. ಇದರಿಂದ ಮಗುವಿನ ಎಲ್ಲ ಬಗೆಯ ಕಲಿಕೆ ಸೂಕ್ತ ವಯಸ್ಸಿನಲ್ಲಿಯೇ ಉತ್ತಮಗೊಳ್ಳುತ್ತದೆ. ಇಂತಹ ಶಸ್ತ್ರಚಿಕಿತ್ಸೆಯ ನಂತರ ವೈದ್ಯರೊಂದಿಗೆ, ವಾಕ್ ಮತ್ತು ಶ್ರವಣತಜ್ಞರೊಂದಿಗೆ ನಿಯಮಿತ ತಪಾಸಣೆ ಮತ್ತು ತರಬೇತಿ ಅತ್ಯವಶ್ಯ. ಈ ಸಂಪೂರ್ಣ ಪ್ರಕ್ರಿಯೆ ಯಶಸ್ವಿಯಾಗಲು ಪೋಷಕರು ಅತ್ಯಂತ ಸಹನೆಯಿಂದ ಮಗುವನ್ನು ಬೆಂಬಲಿಸಬೇಕಾಗುತ್ತದೆ. ❖

> ಸ್ನಾನವಾದ ನಂತರ ಮೃದುವಾದ ಬಟ್ಟೆಯ ಸಹಾಯದಿಂದ, ನಿಧಾನವಾಗಿ ಹೊರ ಕಿವಿಯಲ್ಲಿರಬಹುದಾದ ತೇವಾಂಶವನ್ನು ಒರೆಸಿ, ಒಣಗಿಸಿಕೊಳ್ಳಿ. ತಲೆಯನ್ನು ಎರಡೂ ಪಕ್ಕಕ್ಕೆ ಬಗ್ಗಿಸಿ ಒಳಸೇರಿದ ನೀರನ್ನು ಹೊರಕ್ಕೆ ಹಾಕಲು ಪ್ರಯತ್ನಿಸಿ.

ಸತ್ಯಾಂಶ ಮತ್ತು ಮಿಥ್ಯಾಂಶಗಳು

- **ಮಿಥ್ಯಾಂಶ:** ಕೇವಲ ವಯಸ್ಸಾದವರಲ್ಲಿ ಕಿವುಡುತನ ಕಾಣಿಸಿಕೊಳ್ಳುತ್ತದೆ.
  ಸತ್ಯಾಂಶ: ಸೋಂಕು, ಜೋರಾದ ಕರ್ಕಶ ಶಬ್ದಕ್ಕೆ ಹೆಚ್ಚು ಹೊತ್ತು ತೆರೆದುಕೊಂಡಿರುವುದು ಮೊದಲಾದ ಕಾರಣಗಳಿಂದಾಗಿ ಸಣ್ಣವಯಸ್ಸಿನವರಲ್ಲಿಯೂ ಕಿವುಡುತನ ಕಾಣಿಸಿಕೊಳ್ಳಬಹುದು.
- **ಮಿಥ್ಯಾಂಶ:** ಶ್ರವಣ ಸಾಧನಗಳು ಕಿವುಡುತನವನ್ನು ಸಂಪೂರ್ಣ ಗುಣಪಡಿಸುತ್ತವೆ.
  ಸತ್ಯಾಂಶ: ಅವು ಶಬ್ದವನ್ನು ವರ್ಧಿಸುತ್ತವೆಯಷ್ಟೆ.
- **ಮಿಥ್ಯಾಂಶ:** ಶ್ರವಣ ಸಾಧನಗಳು ಕಿವಿಗಳಿಗೆ ಅಪಾಯ.
  ಸತ್ಯಾಂಶ: ಕಿವಿಯ ಗಾತ್ರಕ್ಕೆ ಸೂಕ್ತವಾದ ಸಾಧನಗಳ ಬಳಕೆಯಿಂದ ಕಿವಿಗಳಿಗೆ ಯಾವುದೇ ಅಪಾಯವಿಲ್ಲ.
- **ಮಿಥ್ಯಾಂಶ:** ಕಿವುಡುತನ ವ್ಯಕ್ತಿಯ ಸಂಪೂರ್ಣ ಆರೋಗ್ಯದ ಮೇಲೆ ಯಾವುದೇ ಪರಿಣಾಮ ಬೀರದು.
  ಸತ್ಯಾಂಶ: ಕಿವುಡುತನದಿಂದ ವ್ಯಕ್ತಿಯ ಮೆದುಳಿನ ಗ್ರಹಿಕಾಶಕ್ತಿಯಷ್ಟೇ ಅಲ್ಲದೆ, ಸ್ಮರಣಶಕ್ತಿಯೂ ಕಡಿಮೆಯಾಗಿ ಆತ ಸಮಾಜದಿಂದ ದೂರವಿದ್ದು, ಒಂಟಿತನಕ್ಕೆ ಶರಣಾಗಬಹುದು ಮತ್ತು ಖಿನ್ನತೆಗೂ ಜಾರಬಹುದು.
- **ಮಿಥ್ಯಾಂಶ:** ಕಿವುಡುತನ ತೀವ್ರವಾದ ನಂತರವೇ ಶ್ರವಣಸಾಧನಗಳನ್ನು ಬಳಸಬೇಕು.
  ಸತ್ಯಾಂಶ: ಆರಂಭಿಕ ಹಂತಗಳಲ್ಲಿಯೇ ಶ್ರವಣ ಸಾಧನಗಳನ್ನು ಬಳಸುವುದು ಉತ್ತಮ. ಇಲ್ಲದಿದ್ದಲ್ಲಿ ಕ್ರಮೇಣ ಮೆದುಳು ಶಬ್ದತರಂಗಗಳನ್ನು ಗುರುತಿಸುವಲ್ಲಿ ವಿಫಲವಾಗಬಹುದು (ಶ್ರವಣೇಂದ್ರಿಯ ಕೊರತೆ).

ಏನು ಮಾಡಬಾರದು?

- ಕಿವಿಯೊಳಗೆ ಅಂಗಡಿಗಳಲ್ಲಿ ಸಿಗುವ ಬಡ್ಸ್ ಅಥವಾ ಯಾವುದೇ ವಸ್ತುಗಳನ್ನು ತೂರಿಸಿಕೊಳ್ಳಬಾರದು.
- ಮಕ್ಕಳ ಕಿವಿಯೊಳಗೆ ಬಿಸಿ ಮಾಡಿದ ಎಣ್ಣೆ, ಉಪ್ಪಿನ ದ್ರಾವಣ ಅಥವಾ ಮತ್ತಿತರ ದ್ರಾವಣಗಳನ್ನು ಹಾಕಬಾರದು.
- ಕಿವಿಗಳನ್ನು ಮುಚ್ಚಲು ಹತ್ತಿ ಉಂಡೆಗಳ ಬಳಕೆಯನ್ನು ಮಾಡಬಾರದು. ಅದು ಬೆವರಿನೊಡನೆ ಬೆರೆತು ಸೋಂಕಿಗೆ ಕಾರಣವಾಗಬಹುದು. ದೊಡ್ಡ ಬಟ್ಟೆಯ ತುಂಡು (ಸ್ಕಾರ್ಫ್) ಬಳಸುವುದು ಉತ್ತಮ.
- ದೀರ್ಘಾವಧಿಯವರೆಗೆ 'ಇಯರ್ ಫೋನ್' ಅನ್ನು ಬಳಕೆ ಮಾಡಬಾರದು.

'ವರ್ಗಾವಣೆ ದಂಧೆಯಲ್ಲಿ ₹500 ಕೋಟಿ ಕೈ ಬದಲು'

ಪ್ರಜಾವಾಣಿ ವಾರ್ತೆ

ಬೆಂಗಳೂರು/ಚನ್ನಪಟ್ಟಣ: 'ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದು ಎರಡು ತಿಂಗಳಾಗುವಷ್ಟರಲ್ಲೇ ಅಧಿಕಾರಿಗಳ ವರ್ಗಾವಣೆ ದಂಧೆಯಲ್ಲಿ ₹ 500 ಕೋಟಿ ಕೈ ಬದಲಾವಣೆ ಆಗಿದೆ ಎಂಬ ಮಾಹಿತಿ ಸಿಕ್ಕಿದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, 'ಈ ಸರ್ಕಾರದಲ್ಲಿ ಕಾಸಿಗಾಗಿ ಹುದ್ದೆಯ ವ್ಯವಹಾರ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ವರ್ಗಾವಣೆ ದಂಧೆ ಕುರಿತು ನಾನೊಬ್ಬನೇ ಮಾತನಾಡುತ್ತಿಲ್ಲ. ಅಧಿಕಾರಿಗಳು ಹಾದಿ-ಬೀದಿಯಲ್ಲಿ ಚರ್ಚಿಸುತ್ತಿದ್ದಾರೆ' ಎಂದರು.

'ವರ್ಗಾವಣೆ ದಂಧೆಯಲ್ಲಿ ನಾನು ತೊಡಗಿಲ್ಲ, ಬೇರೆ ಯಾರಾದರೂ ಹಾಗೆ ಮಾಡುತ್ತಿದ್ದರೆ ಗೊತ್ತಿಲ್ಲ ಎಂದು ಮುಖ್ಯಮಂತ್ರಿಯವರು ವಿಧಾನಸಭೆಯಲ್ಲಿ ಹೇಳಿದ್ದಾರೆ. ಮುಖ್ಯಮಂತ್ರಿಯೇ ಹೀಗೆ ಹೇಳಿದರೆ ಅರ್ಥವೇನು' ಎಂದು ಪ್ರಶ್ನಿಸಿದರು.

> ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದರೆ ನಾಡಿಗೆ ದಾರಿದ್ರ್ಯ ಬರಲಿದೆ ಎಂಬ ಪ್ರತೀತಿ ಇದೆ. ಯಾಕೋ ಈಗಲೂ ಅದೇ ವಾತಾವರಣ ಕಾಣುತ್ತಿದೆ. ಸರಿಯಾಗಿ ಮಳೆಯೂ ಆಗುತ್ತಿಲ್ಲ
> **ಎಚ್.ಡಿ. ಕುಮಾರಸ್ವಾಮಿ**

'ಚಾಲ್ತಿಯಲ್ಲಿರುವ ಕಾಮಗಾರಿಗಳ ಅಂದಾಜು ವೆಚ್ಚವನ್ನು ಶೇಕಡ 20ರಿಂದ 30ರಷ್ಟು ಹೆಚ್ಚಿಸಲಾಗುತ್ತಿದೆ. ಕಮಿಷನ್ ಹೊಡೆಯುವುದಕ್ಕೆ ಏನು ಬೇಕೋ ಅದೆಲ್ಲವನ್ನೂ ಮಾಡುತ್ತಿದ್ದಾರೆ' ಎಂದು ಆರೋಪಿಸಿದರು.

'ನಾನು ಯಾವತ್ತೂ ವರ್ಗಾವಣೆ ದಂಧೆಯಲ್ಲಿ ಭಾಗಿಯಾಗಿಲ್ಲ. ನನ್ನ ಕಾಲದಲ್ಲಿ ವರ್ಗಾವಣೆಗೆ ದರ ನಿಗದಿ ಆಗಿತ್ತು ಎಂದು ಸಚಿವರೊಬ್ಬರು ಪತ್ರಿಕೆಯಲ್ಲಿನ ಸುದ್ದಿ ತೋರಿಸಿ ಹೇಳಿದ್ದಾರೆ. ಆದರೆ, ಆ ಸುದ್ದಿ 2013ರಿಂದ 2018ರ ಅವಧಿಯಲ್ಲಿ ಅಧಿಕಾರಿಗಳ ವರ್ಗಾವಣೆಗೆ ಸಂಬಂಧಿಸಿದ್ದು. ಅದು ನನ್ನ ಅವಧಿಯದ್ದಾ' ಎಂದು ಪ್ರಶ್ನಿಸಿದ ಕುಮಾರಸ್ವಾಮಿ, 'ಪ್ರಜಾವಾಣಿ'ಯ ಸಂಚಿಕೆಯೊಂದನ್ನು ಪ್ರದರ್ಶಿಸಿದರು.

ಸೂರಿ ಪಾಯಲ್ ಯಾರು?

'ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ಹುಲುಸಾಗಿ ಮೇಯಲು ಮೇವು ಇದೆ. ಅಲ್ಲಿ ಯಾರೋ ಸೂರಿ ಪಾಯಲ್ ಎಂಬುವವರನ್ನು ಮೇಯಲು ಬಿಟ್ಟಿದ್ದಾರೆ. ಸೂರಿ ಪಾಯಲ್ ಯಾರು' ಎಂದು ಕುಮಾರಸ್ವಾಮಿ ಪ್ರಶ್ನಿಸಿದರು.

'ಯಾರೋ ವಿದೇಶಿ ವ್ಯಕ್ತಿ ಎಂದು ನಾನು ಭಾವಿಸಿದ್ದೆ, ಆತ ಸ್ಥಳೀಯ ಎಂಬುದು ಆಮೇಲೆ ಗೊತ್ತಾಯಿತು. ಮಾತೆತ್ತಿದರೆ ಸರ್ವಜನಾಂಗದ ಶಾಂತಿಯ ತೋಟ ಎನ್ನುತ್ತಾರೆ. ಆದರೆ, ಅದು ಇವರು ಮೇಯುವ ಸಮೃದ್ಧಿಯ ತೋಟವಾಗಿದೆ' ಎಂದರು.

'ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಅರುಣ್ ಕುಮಾರ್ ಎಂಬ ಅಧಿಕಾರಿಗಳನ್ನು ವರ್ಗಾವಣೆ ಮಾಡಿ, ಆ ಹುದ್ದೆಗೆ ರಾಜಶೇಖರ್ ಎಂಬುವವರನ್ನು ನೇಮಿಸಲಾಗಿತ್ತು. ವ್ಯವಹಾರ ನಡೆದಿದೆ ಎಂದು ಒಬ್ಬರು ನ್ಯಾಯಾಲಯಕ್ಕೆ ಹೋದರು. ನ್ಯಾಯಾಲಯದಿಂದ ಛೀಮಾರಿ ಹಾಕಿಸಿಕೊಂಡ ಬಳಿಕ ರಾಜಶೇಖರ್ ಅವರನ್ನು ಮರುನೇಮಕ ಮಾಡಲಾಗಿದೆ. ಇದು ಒಂದು ಸಣ್ಣ ಉದಾಹರಣೆ' ಎಂದರು.

ಚನ್ನಪಟ್ಟಣ ವರದಿ: 'ಬಿಜೆಪಿ ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟಕ್ಕೆ (ಎನ್‌ಡಿಎ) ಜೆಡಿಎಸ್ ಸೇರುವ ವಿಚಾರ ನನಗೆ ಗೊತ್ತಿಲ್ಲ' ಎಂದು ಕುಮಾರಸ್ವಾಮಿ ಹೇಳಿದರು.

'ಕೇಂದ್ರ ಸರ್ಕಾರದಲ್ಲಿ ನನ್ನನ್ನು ಸಚಿವನನ್ನಾಗಿ ಮಾಡುವ ವಿಚಾರವೂ ಗೊತ್ತಿಲ್ಲ. ಮೊದಲು ರಾಷ್ಟ್ರ ರಾಜಕಾರಣದಲ್ಲಿ ಆಸಕ್ತಿ ಇಲ್ಲ. ಮಹಾಘಟಬಂಧನ್ ಮತ್ತು ಎನ್‌ಡಿಎ ಎರಡರಿಂದಲೂ ಆಹ್ವಾನ ಬಂದಿಲ್ಲ. ಆಹ್ವಾನ ಬಂದಾಗ ಏನು ಮಾಡಬೇಕು ನೋಡೋಣ' ಎಂದು ಅವರು ಪ್ರತಿಕ್ರಿಯಿಸಿದರು.

'ಬಿಜೆಪಿಯೊಂದಿಗೆ ಮೈತ್ರಿ ಮತ್ತು ವಿರೋಧ ಪಕ್ಷದ ನಾಯಕನ ಸ್ಥಾನ ಕುರಿತು ಯಾವ ಮಾತುಕತೆಯೂ ಆಗಿಲ್ಲ. ವಿಧಾನಸಭೆ ವಿರೋಧ ಪಕ್ಷದ ಸ್ಥಾನವೂ ನನಗೆ ಬೇಕಿಲ್ಲ' ಎಂದು ಹೇಳಿದರು.

'ಜಾತ್ಯತೀತರು ಯಾರೆಂದು ಕಳೆದ ಚುನಾವಣೆಯಲ್ಲೇ ಸಾಬೀತು'

ಬೆಂಗಳೂರು: ಬಿಜೆಪಿ ವಿರುದ್ಧ ಸೆಣಸಲು ಒಂದಾಗುತ್ತಿರುವ ವಿರೋಧ ಪಕ್ಷಗಳು, 'ಮಹಾ ಮೈತ್ರಿ' ಜೊತೆ ಕೈ ಜೋಡಿಸುವಂತೆ ಜಾತ್ಯತೀತ ಜನತಾ ದಳಕ್ಕೆ (ಜೆಡಿಎಸ್) ಆಹ್ವಾನ ನೀಡಿಲ್ಲ.

'ಜೆಡಿಎಸ್‌ಗೆ ಆಹ್ವಾನ ನೀಡುತ್ತೀರಾ' ಎಂದು ಕೇಳಿದ ಪ್ರಶ್ನೆಗೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, 'ಕೇಂದ್ರದ ಬಿಜೆಪಿ ಸರ್ಕಾರದ ವಿರುದ್ಧ ಹೋರಾಡುವ ಧೈರ್ಯ ಇರುವವರು ನಮ್ಮ ಜೊತೆ ಬರುತ್ತಾರೆ. ಅವರಿಗೆ ಆಹ್ವಾನದ ಅಗತ್ಯ ಇಲ್ಲ' ಎಂದು ತಿಳಿಸಿದರು.

'ಜಾತ್ಯತೀತೆಯ ಮೇಲೆ ನಂಬಿಕೆ ಇರುವ ಮತ್ತು ಸರ್ವಾಧಿಕಾರವನ್ನು ವಿರೋಧಿಸುವ ಯಾವ ಪಕ್ಷವನ್ನಾದರೂ ನಾವು ಮೈತ್ರಿಕೂಟಕ್ಕೆ ಸ್ವಾಗತಿಸುತ್ತೇವೆ. ಆದರೆ, ಕಳೆದ ಚುನಾವಣೆಯಲ್ಲಿ ಜಾತ್ಯತೀತರು ಯಾರು ಎಂಬುದು ಸಾಬೀತಾಗಿದೆ' ಎಂದು ಜೆಡಿಎಸ್ ಪಕ್ಷವನ್ನು ಪ್ರಸ್ತಾಪಿಸದೇ ವೇಣುಗೋಪಾಲ್ ಹೇಳಿದರು.

ಜೈರಾಮ್ ರಮೇಶ್ ಮಾತನಾಡಿ, 'ಜಾತ್ಯತೀತ ಪರವಾದ, ಕೇಂದ್ರ ಸರ್ಕಾರದ ವಿರುದ್ಧ ಹೋರಾಡುವ ಎಲ್ಲ ಪಕ್ಷಗಳು ಮೈತ್ರಿಕೂಟದಲ್ಲಿ ಸೇರಲಿವೆ' ಎಂದರು.

'ಇನ್ನು ತ್ರಿಶಂಕು ಸ್ಥಿತಿಯಲ್ಲಿ ಇರುವ ಪಕ್ಷಗಳು ತಮ್ಮ ತೀರ್ಮಾನ ಮಾಡಬೇಕು. ಸಂವಿಧಾನ ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆ ಉಳಿಸಲು ಬಯಸುತ್ತಾರೋ ಇಲ್ಲವೋ ಅವರಿಗೆ (ಜೆಡಿಎಸ್) ಬಿಟ್ಟ ವಿಚಾರ' ಎಂದೂ ಹೇಳಿದರು.

ಸಿದ್ಧಾಂತವೇ ಇಲ್ಲ: ಸಿದ್ದರಾಮಯ್ಯ

'ಜೆಡಿಎಸ್‌ಗೆ ಸಿದ್ಧಾಂತವೇ ಇಲ್ಲ. ಬಿಜೆಪಿಗೆ ಬೆಂಬಲ ಸೂಚಿಸಿದ ನಂತರ ಅವರ ಜಾತ್ಯತೀತತೆ ಏನಾಯಿತು? ಪಕ್ಷವನ್ನು ಉಳಿಸಿಕೊಳ್ಳಲು ಅವರು ಸಿದ್ಧಾಂತವನ್ನು ಬಲಿ ಕೊಡುತ್ತಿದ್ದಾರೆ ಎಂದರ್ಥ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

NMDC Limited
(A GOVERNMENT OF INDIA ENTERPRISE)
'Khanij Bhavan', 10-3-311/A, Castle Hills, Masab Tank, Hyderabad - 500 028
CIN: L13100TG1958GOI001674

CONTRACTS DEPARTMENT
Pre-Tender Meeting Notice Dated: 18/07/2023

NMDC Limited, A "NAVARATNA" Public Sector Company under Ministry of Steel, Govt. of India, invites experienced, reputed and competent domestic bidders to participate in the **Pre-Tender Meeting** on **21/07/2023 (11.00 Hrs.)** for the work of **"Design, Engineering, Supply, Erection, Testing and Commissioning of new 7 MTPA Screening & Beneficiation Plant (SP-II) along with construction of Tailing Dam at Donimalai, Karnataka on Turnkey basis".**

Venue of the Meeting: M N Dastur & Company (P) Ltd., P 17, Mission Row Extension, Kolkata – 700 013.

For obtaining the details Brief agenda of the meeting, Preliminary scope of work, Time schedule, project site etc. the bidders may visit NMDC website **http://www.nmdc.co.in**

Further, for any queries the bidders may also contact following officials directly or through email:

Mr. S Sahoo, AGM (Mech.) – NMDC Ltd. (M: 9490479089) contracts@nmdc.co.in

Mr. Anirban Biswas, Sr. Principal Engineer- M N Dastur (M: 9433332898) Anirban.B@dastur.com

Executive Director (Works)

ಹಳೆ–ಹೊಸ ಮಿತ್ರರೊಂದಿಗೆ ಬಿಜೆಪಿ ಸಭೆ ಇಂದು

ಒಂದನೇ ಪುಟದಿಂದ...

ಆದರೆ, ಈಗಿನ ಸನ್ನಿವೇಶದಲ್ಲಿ ಉತ್ತರ ಪ್ರದೇಶ, ಬಿಹಾರ, ಕರ್ನಾಟಕ, ಪಶ್ಚಿಮ ಬಂಗಾಳ, ಮಧ್ಯ ಪ್ರದೇಶದಂತಹ ರಾಜ್ಯಗಳಲ್ಲಿ ಈ ಸಲ ಅಷ್ಟೊಂದು ಸ್ಥಾನಗಳನ್ನು ಗೆಲ್ಲುವುದು ಕಷ್ಟ ಎಂಬ ವಾತಾವರಣ ಇದೆ. ಅದಕ್ಕಾಗಿ ಹೊಸ ಗೆಳೆಯರನ್ನು ಹುಡುಕುವ ಕೆಲಸದಲ್ಲಿ ಬಿಜೆಪಿ ನಿರತವಾಗಿದೆ. ಬಿಹಾರದಲ್ಲಿ ಚಿರಾಗ್ ಪಾಸ್ವಾನ್, ಜಿತನ್ ರಾಮ್ ಮಾಂಝಿ, ಉತ್ತರ ಪ್ರದೇಶದಲ್ಲಿ ಓಂ ಪ್ರಕಾಶ್ ರಾಜ್‌ಭರ್ ಅವರಂತಹ ನಾಯಕರನ್ನು ಮೈತ್ರಿಕೂಟದ ತೆಕ್ಕೆಗೆ ಎಳೆದುಕೊಳ್ಳುವಲ್ಲಿ ಯಶಸ್ವಿಯಾಗಿದೆ.

ಬಿಜೆಪಿಯೇತರ ಪಕ್ಷಗಳನ್ನು ಒಗ್ಗೂಡಿಸುವಲ್ಲಿ ಮಹತ್ವದ ಪಾತ್ರ ವಹಿಸಿರುವ ಶರದ್ ಪವಾರ್ ಅವರ ಎನ್‌ಸಿಪಿಯನ್ನೇ ಬಿಜೆಪಿ ಒಡೆದಿದೆ. ಮೈತ್ರಿಕೂಟಕ್ಕೆ ಅಜಿತ್ ಪವಾರ್ ನಾಯಕತ್ವದ ಎನ್‌ಸಿಪಿ ಬಣ ಸೇರ್ಪಡೆಯಾಗಿರುವುದರಿಂದ ಮಹಾರಾಷ್ಟ್ರದಲ್ಲಿ ಅನುಕೂಲ ಆಗಲಿದೆ ಎಂಬ ವಿಶ್ವಾಸದಲ್ಲಿ ಬಿಜೆಪಿ ನಾಯಕರು ಇದ್ದಾರೆ.

ಕರ್ನಾಟಕದಲ್ಲಿ ಜೆಡಿಎಸ್ ಜತೆಗೆ ಮೈತ್ರಿ ಮಾಡಿಕೊಂಡು ಕಾಂಗ್ರೆಸ್ ಅನ್ನು ಎದುರಿಸುವ ಆಲೋಚನೆಯಲ್ಲಿ ಬಿಜೆಪಿ ನಾಯಕರು ಇದ್ದಾರೆ. ಅದಕ್ಕಾಗಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಜತೆಗೆ ಪ್ರಾಥಮಿಕ ಹಂತದ ಮಾತುಕತೆಯನ್ನೂ ನಡೆಸಿದ್ದಾರೆ. ಆದರೆ ಈ ಮೈತ್ರಿ ಕುರಿತು ಜೆಡಿಎಸ್‌ನಲ್ಲಿ ಗೊಂದಲ ಇದೆ. ಹೀಗಾಗಿ, ಮಂಗಳವಾರದ ಸಭೆಗೆ ಜೆಡಿಎಸ್‌ಗೆ ಬಿಜೆಪಿ ಆಹ್ವಾನ ನೀಡಿಲ್ಲ.

ಆಂಧ್ರದ ಗೊಂದಲ: ಆಂಧ್ರ ಪ್ರದೇಶದಲ್ಲಿ ಮೈತ್ರಿ ಕುರಿತು ಬಿಜೆಪಿ ಇನ್ನೂ ಸ್ಪಷ್ಟ ನಿರ್ಧಾರಕ್ಕೆ ಬಂದಿಲ್ಲ. ಅಲ್ಲಿನ ಮುಖ್ಯಮಂತ್ರಿ ಜಗನ್ ಮೋಹನ್ ರೆಡ್ಡಿ ಅವರ ವೈಎಸ್‌ಆರ್‌ಸಿಪಿಯೊಂದಿಗೆ ಬಿಜೆಪಿ ಉತ್ತಮ ನಂಟು ಹೊಂದಿದೆ. ಜಗನ್ ಅವರು ಸಂಕಷ್ಟದ ಕಾಲದಲ್ಲಿ ಬಿಜೆಪಿ ನೆರವಿಗೆ ಬಂದ ಉದಾಹರಣೆಗಳು ಉಂಟು. ಆದರೆ, ಅಲ್ಲಿ ಹಳೆಯ ಮಿತ್ರ ಚಂದ್ರಬಾಬು ನಾಯ್ಡು ಅವರು ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಳ್ಳಲು ಉತ್ಸುಕತೆ ತೋರಿದ್ದಾರೆ. ಈ ನಿಟ್ಟಿನಲ್ಲಿ, ಬಿಜೆಪಿ ನಾಯಕರೊಂದಿಗೆ ಒಂದು ಸುತ್ತಿನ ಮಾತುಕತೆಯನ್ನೂ ನಡೆಸಿದ್ದಾರೆ.

ಮೈತ್ರಿಗೆ ಬಿಜೆಪಿ ರಾಷ್ಟ್ರೀಯ ನಾಯಕರಿಂದ ಅಂತಿಮ ಮುದ್ರೆ ಬಿದ್ದಿಲ್ಲ. ಕಳೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯು ದಕ್ಷಿಣ ಭಾರತದ 129 ಕ್ಷೇತ್ರಗಳ ಪೈಕಿ 29 ಕ್ಷೇತ್ರಗಳಲ್ಲಷ್ಟೇ ಗೆದ್ದಿತ್ತು. ಈ ಸಲ ತಮಿಳುನಾಡು ಹಾಗೂ ತೆಲಂಗಾಣ ರಾಜ್ಯಗಳತ್ತ ದೃಷ್ಟಿ ನೆಟ್ಟಿದೆ.

ಯಾವ ಪಕ್ಷಗಳು ಭಾಗಿ

- ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ನೇತೃತ್ವದ ಶಿವಸೇನಾ ಬಣ
- ಮಹಾರಾಷ್ಟ್ರ ಉಪಮುಖ್ಯಮಂತ್ರಿ ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿ ಬಣ
- ಚಿರಾಗ್ ಪಾಸ್ವಾನ್ ಅವರ ಲೋಕ ಜನಶಕ್ತಿ ಪಕ್ಷ (ರಾಮ್ ವಿಲಾಸ್)
- ಓಂ ಪ್ರಕಾಶ್ ರಾಜ್‌ಭರ್ ಅವರ ಸುಹೇಲ್‌ದೇವ್ ಭಾರತೀಯ ಸಮಾಜ ಪಕ್ಷ (ಎಸ್‌ಬಿಎಸ್‌ಪಿ)
- ಬಿಹಾರದ ಮಾಜಿ ಮುಖ್ಯಮಂತ್ರಿ ಜಿತನ್ ರಾಮ್ ಮಾಂಝಿ ಅವರ ಹಿಂದೂಸ್ತಾನಿ ಆವಾಂ ಮೋರ್ಚಾ (ಎಚ್‌ಎಎಂ)
- ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಇ.ಪಳನಿಸ್ವಾಮಿ ನೇತೃತ್ವದ ಎಐಎಡಿಎಂಕೆ
- ಜಿ.ಕೆ.ವಾಸನ್ ಅವರ ತಮಿಳು ಮಾನಿಲ ಕಾಂಗ್ರೆಸ್
- ಅನ್ಬುಮಣಿ ರಾಮದಾಸ್ ಅವರ ಪಿಎಂಕೆ
- ನಟ ಪವನ್ ಕಲ್ಯಾಣ್ ನೇತೃತ್ವದ ಜನಸೇನಾ ಪಕ್ಷ
- ಉಪೇಂದ್ರ ಸಿಂಗ್ ಕುಶ್ವಾಹ್ ಅವರ ರಾಷ್ಟ್ರೀಯ ಲೋಕ ಸಮತಾ ಪಕ್ಷ
- ಮುಕೇಶ್ ಸಹಾನಿ ಅವರ ವಿಕಾಸಶೀಲ ಇನ್ಸಾನ್ ಪಾರ್ಟಿ

ವಿರೋಧಿ ಪಕ್ಷಗಳಿಂದ ಒಗ್ಗಟ್ಟಿನ ಜಪ

ಒಂದನೇ ಪುಟದಿಂದ...

ಈ ಮೈತ್ರಿಕೂಟದ ನಾಯಕ ಯಾರು ಎಂಬ ಪ್ರಶ್ನೆಗೆ, 'ನಾಯಕತ್ವದ ಬಗ್ಗೆ ತಲೆಕೆಡಿಸಿಕೊಳ್ಳಬೇಡಿ. ದೇಶದ ಸಮಸ್ಯೆ ಬಗ್ಗೆ ಗಮನಹರಿಸಿ. ಪ್ರತಿನಿತ್ಯ ಪ್ರಜಾಪ್ರಭುತ್ವದ ಮೇಲೆ ದಾಳಿ ಆಗುತ್ತಿದೆ. ಮಣಿಪುರ ಹೊತ್ತಿ ಉರಿಯುತ್ತಿದ್ದರೂ ಪ್ರಧಾನಿ ಮಾತನಾಡುತ್ತಿಲ್ಲ. ಚೀನಾ ಅತಿಕ್ರಮಣವನ್ನು ಸಮರ್ಥನೆ ಮಾಡಿಕೊಳ್ಳುವುದು ಯಾವ ನಾಯಕತ್ವ' ಎಂದು ಮರು ಪ್ರಶ್ನೆಹಾಕಿದರು.

ಜೈರಾಮ್ ರಮೇಶ್ ಮಾತನಾಡಿ, 'ಪಟ್ನಾ ಸಭೆ ನಂತರ ಅವರಿಗೆ (ಬಿಜೆಪಿ) ಎನ್‌ಡಿಎ ಮೈತ್ರಿಕೂಟ ನೆನಪಾಗಿದೆ. ಅವರೂ ಮಂಗಳವಾರ ಸಭೆ ನಡೆಸಿ ಮೈತ್ರಿಕೂಟಕ್ಕೆ ಜೀವ ತುಂಬುವ ಕೆಲಸ ಮಾಡುತ್ತಿದ್ದಾರೆ' ಎಂದರು.

ಔತಣಕೂಟದಲ್ಲಿ ಯಾರೆಲ್ಲಾ ಭಾಗಿ?

ಸಭೆಯಲ್ಲಿ ಭಾಗವಹಿಸಲು ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಟಿಎಂಸಿ ಮುಖ್ಯಸ್ಥೆಯೂ ಆಗಿರುವ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಅಭಿಷೇಕ್ ಬ್ಯಾನರ್ಜಿ, ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್, ಜೆಡಿಯು ನಾಯಕ ಹಾಗೂ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್, ಉಪಮುಖ್ಯಮಂತ್ರಿ ತೇಜಸ್ವಿ ಯಾದವ್, ಆರ್‌ಜೆಡಿ ಅಧ್ಯಕ್ಷ ಲಾಲು ಪ್ರಸಾದ್, ಪಿಡಿಪಿ ನಾಯಕಿ ಮೆಹಬೂಬಾ ಮುಫ್ತಿ, ನ್ಯಾಷನಲ್ ಕಾನ್ಫರೆನ್ಸ್‌ನ (ಎನ್‌ಸಿ) ಒಮರ್ ಅಬ್ದುಲ್ಲಾ, ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್, ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್, ಶಿವಸೇನಾ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ, ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಮುಂತಾದ ನಾಯಕರು ಸೋಮವಾರ ಸಂಜೆಯೇ ನಗರಕ್ಕೆ ಬಂದಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾತ್ರಿ ಆಯೋಜಿಸಿದ್ದ ಔತಣಕೂಟದಲ್ಲಿ ಎಲ್ಲ ನಾಯಕರು ಭಾಗವಹಿಸಿದರು.

ಬಾರದ ಆಂಬುಲೆನ್ಸ್!

ಒಂದನೇ ಪುಟದಿಂದ...

290 ಆಂಬುಲೆನ್ಸ್ ಹಸ್ತಾಂತರ: ಆಂಬುಲೆನ್ಸ್‌ಗಳ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು 2023ರ ಏಪ್ರಿಲ್‌ನಲ್ಲಿ ಮುಂಬೈ ಮೂಲದ ಎಜುಸ್ಪಾರ್ಕ್ ಇಂಟರ್‌ನ್ಯಾಷನಲ್ ಖಾಸಗಿ ಕಂಪನಿಗೆ ಟೆಂಡರ್ ನೀಡಲಾಗಿತ್ತು. ಗುತ್ತಿಗೆದಾರರು ಆಂಬುಲೆನ್ಸ್‌ಗೆ ಅಗತ್ಯವಿದ್ದ ಸಿಬ್ಬಂದಿಯನ್ನು ಹೊರಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಂಡು ತರಬೇತಿ ನೀಡಿದ್ದರು. ನಂತರ ಪಶು ವೈದ್ಯಕೀಯ ಸೇವಾ ಇಲಾಖೆಯಿಂದ 290 ಆಂಬುಲೆನ್ಸ್‌ಗಳನ್ನು ಗುತ್ತಿಗೆದಾರರಿಗೆ ಹಸ್ತಾಂತರ ಮಾಡಲಾಗಿತ್ತು.

ಕಾರ್ಯಾಚರಣೆ ಆರಂಭಿಸುವ ವೇಳೆಗೆ, ವಿಧಾನಸಭೆ ಚುನಾವಣೆ ನಡೆದು ಸರ್ಕಾರ ಬದಲಾಯಿತು. ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದ ಹಳೆಯ ಟೆಂಡರ್ ಅನ್ನು ಪರಿಶೀಲಿಸಿ, ಮರು ಟೆಂಡರ್ ನಡೆಸಬೇಕು ಎಂಬ ಚಿಂತನೆ ಸರ್ಕಾರದ ಮಟ್ಟದಲ್ಲಿ ನಡೆಯುತ್ತಿದೆ. ಹೀಗಾಗಿ ಆಂಬುಲೆನ್ಸ್‌ಗಳ ಕಾರ್ಯಾಚರಣೆ ಸದ್ಯಕ್ಕೆ ಸ್ಥಗಿತಗೊಂಡಿದೆ ಎನ್ನುತ್ತಾರೆ ಪಶುಪಾಲನಾ ಇಲಾಖೆ ಅಧಿಕಾರಿಗಳು.

ವೈದ್ಯರ ಕೊರತೆ: ಸಿಗದ ಚಿಕಿತ್ಸೆ

ರಾಜ್ಯದಲ್ಲಿ 4,200 ಪಶು ವೈದ್ಯಕೀಯ ಆಸ್ಪತ್ರೆಗಳಿದ್ದು, 1,600 ವೈದ್ಯರ ಕೊರತೆ ಕಾಡುತ್ತಿದೆ. ಹೀಗಾಗಿ ಜಾನುವಾರುಗಳಿಗೆ ಸಕಾಲದಲ್ಲಿ ಚಿಕಿತ್ಸೆ ಸಿಗುತ್ತಿಲ್ಲ ಎಂಬ ದೂರುಗಳು ರೈತರಿಂದ ಕೇಳಿ ಬರುತ್ತಿವೆ.

'ಪಶು ವೈದ್ಯಕೀಯ ಸೇವಾ ಇಲಾಖೆಯಲ್ಲಿ 9 ಸಾವಿರ ನೌಕರರು ಕರ್ತವ್ಯ ನಿರ್ವಹಿಸುತ್ತಿದ್ದು, 18 ಸಾವಿರಕ್ಕೂ ಹೆಚ್ಚು ಸಿಬ್ಬಂದಿ ಅಗತ್ಯವಿದೆ. ಮೊದಲ ಹಂತದಲ್ಲಿ 400 ವೈದ್ಯರ ನೇಮಕಕ್ಕೆ ಸಚಿವರು ಕ್ರಮ ಕೈಗೊಂಡಿದ್ದಾರೆ' ಎನ್ನುತ್ತಾರೆ ಇಲಾಖೆ ಅಧಿಕಾರಿಗಳು.

Karnataka Gramin Bank
(A Scheduled Bank established by Government of India: Sponsored by Canara Bank)
Head Office: Sanganakal Road, Gandhinagar, Ballari - 583 103
Phone: (08392) 254011, 254012 & 254014 E-mail: iciw.inspection@kgbk.in

Empanelment of External Chartered Accountants for Concurrent Audit

Karnataka Gramin Bank (KaGB), a leading Regional Rural Bank in Karnataka, having its Head Office at Ballari and 1121 Branches across Bidar, Kalburgi, Yadgir, Raichur, Koppal, Vijayanagara (Hosapete), Ballari, Davanagere, Chitradurga, Shivamogga, Chikkamagaluru, Hassan, Tumkur, Kolar, Chikkaballapura, Bengaluru (u), Bengaluru (R) Ramanagara, Mandya, Chamaraja nagara, Mysuru & Madikeri Disticts, desires to Engage/ Empanel Chartered Accountants for Concurrent Audit functions in KaGB Branches and Offices.

The particulars of eligibility criteria, List of Branches, application, remuneration and other detail., are posted on the website of the Bank https://www.karnatakagraminbank.com. The same can be downloaded from the Bank's website.

The Last date for receipt of completed applications at Bank's Head Office, Ballari is 31.07.2023.

Date: 17.07.2023

Sd/-
General Manager
Karnataka Gramin Bank
Head Office: Ballari

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ
ಆರೋಗ್ಯ ಸೌಧ, 4ನೇ ಮಹಡಿ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು-23.
ದೂ: 080-29557021, ಇ-ಮೇಲ್:pdksaps@gmail.com
ಸಂ: ಕೆಎಸ್‌ಎಪಿಎಸ್/ಪಿಆರ್‌ಸಿ/02/2023-24 ದಿನಾಂಕ:17.07.2023

ಇ-ಸಂಗ್ರಹಣ ವೇದಿಕೆ ಮೂಲಕ ಅಲ್ಪಾವಧಿ ಟೆಂಡರ್ (ದ್ವಿ-ಲಕೋಟೆ) ಆಹ್ವಾನ ಪ್ರಕಟಣೆ

ಹೆಚ್‌ಐವಿ ಟೆಸ್ಟ್ ಕಿಟ್-4 ಸರಬರಾಜು ಮಾಡುವ ಸಂಬಂಧ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ (ದ್ವಿ ಲಕೋಟೆ) ಕರೆಯಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ:01.08.2023 ಸಮಯ: ಸಂಜೆ 5.30 ಗಂಟೆ.** ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ ವೆಬ್‌ಸೈಟ್: **https://kppp.karnataka.gov.in**

ಸಹಿ/-ಯೋಜನಾ ನಿರ್ದೇಶಕರು, ಕೆಎಸ್‌ಎಪಿಎಸ್, ಬೆಂಗಳೂರು
ವಾಸಾಸಂಇ/ಉನಿ-ಸಿ.ಪಿ/571/ಕೆಎಸ್‌ಎಂಸಿಎ/2023-24

ನಿರ್ದೇಶಕರ ಕಛೇರಿ
ಪೌರಾಡಳಿತ ನಿರ್ದೇಶನಾಲಯ
9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ, ಡಾ|| ಅಂಬೇಡ್ಕರ್ ವೀಧಿ, ಬೆಂಗಳೂರು – 560 001. ದೂರವಾಣಿ : 080–22867172/22866302
ಫ್ಯಾಕ್ಸ್ : 080–22863576/22861665 ಇ–ಮೇಲ್ : dmablr@gmail.com
ವೆಬ್‌ಸೈಟ್ : www.municipaladmn.gov.in

ನಂ: 461479/ಡಿಎಂಎ/ಇಎಸ್‌ಟಿ1/ಎಂಐಎಸ್‌ಸಿ/20/2021 ದಿನಾಂಕ : 13–07–2023

ಉಪ ಕಾನೂನು ಅಧಿಕಾರಿ ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿಗಾಗಿ ಅರ್ಜಿ ಆಹ್ವಾನ

ಪೌರಾಡಳಿತ ನಿರ್ದೇಶನಾಲಯದ ವ್ಯಾಪ್ತಿಗೊಳಪಡುವ ಮಹಾನಗರಪಾಲಿಕೆಗಳು, ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿನ ಅಧಿಕಾರಿ/ನೌಕರರುಗಳು, ವಿವಿಧ ಸಂಘಟನೆಗಳು ಹಾಗೂ ಸಾರ್ವಜನಿಕರಿಂದ ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿ ದಾಖಲಿಸುವ ನ್ಯಾಯಾಲಯ ಪ್ರಕರಣಗಳ ನಿರ್ವಹಣೆಗಾಗಿ **ಉಪ ಕಾನೂನು ಅಧಿಕಾರಿ ಹುದ್ದೆಗೆ** ನ್ಯಾಯವಾದಿಗಳಾಗಿ ಸೇವೆ ಸಲ್ಲಿಸಿದವರನ್ನು ಕೆಳಕಂಡ ಷರತ್ತುಗಳನ್ವಯ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲು ಅರ್ಜಿಯನ್ನು ಆಹ್ವಾನಿಸಲಾಗಿದೆ.

1) ನ್ಯಾಯವಾದಿಗಳಾಗಿ ರಾಜ್ಯ ಉಚ್ಚ ನ್ಯಾಯಾಲಯ/ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಕನಿಷ್ಠ 10 ವರ್ಷ ಸೇವೆ ಸಲ್ಲಿಸಿದವರಾಗಿರಬೇಕು. 2) ಸರ್ಕಾರಿ ಕಛೇರಿಗಳಲ್ಲಿ/ಕರ್ನಾಟಕ ಸರ್ಕಾರಿ ಸಚಿವಾಲಯದಲ್ಲಿ ಕಾನೂನು ಸಲಹೆಗಾರರಾಗಿ ಉತ್ತಮ ಸೇವೆ ಸಲ್ಲಿಸಿದವರನ್ನು ಆದ್ಯತೆಯ ಮೇಲೆ ಪರಿಗಣಿಸಲಾಗುವುದು. 3) ಆಯ್ಕೆಯಾದ ಉಪ ಕಾನೂನು ಅಧಿಕಾರಿಗೆ ಸರ್ಕಾರದ ಸುತ್ತೋಲೆಗಳನ್ವಯ ನಿಯಮಾನುಸಾರ ಸಂಭಾವನೆ ನಿಗದಿಪಡಿಸಲಾಗುವುದು. 4) ಉಪ ಕಾನೂನು ಅಧಿಕಾರಿ ಹುದ್ದೆಯ ಆಯ್ಕೆಯಲ್ಲಿ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯದವರ ನಿರ್ಧಾರವೇ ಅಂತಿಮ.

ಸ್ವವಿವರಗಳೊಂದಿಗೆ ಅರ್ಜಿಯನ್ನು ಅಂಚೆ ಮೂಲಕವಾಗಲೀ ಅಥವಾ ಖುದ್ದಾಗಿಯಾಗಲೀ **ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, 9ನೇ ಮಹಡಿ, ವಿಶ್ವೇಶ್ವರಯ್ಯ ಮುಖ್ಯಗೋಪುರ, ಡಾ: ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು – 560 001** ಈ ವಿಳಾಸದಲ್ಲಿ ಸಲ್ಲಿಸತಕ್ಕದ್ದು.

ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ : 24–07–2023 ರಂದು ಸಾಯಂಕಾಲ 5:30 ಗಂಟೆಗೆ. ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬಹುದಾದ ದೂರವಾಣಿ : 080–22868386.

ಸಹಿ/–
ನಿರ್ದೇಶಕರು
ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು
ವಾಸಾಸಂಇ/ವಾ.ಪ್ರ/579/ಎಂಎಎ/2023–24

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು
"ಸಾರ್ವಜನಿಕ ಪ್ರಕಟಣೆ"

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಬರುವ ಗ್ರಾಮಗಳಲ್ಲಿನ ಜಮೀನುಗಳಲ್ಲಿ ಪ್ರಾಧಿಕಾರವು ಜಂಟಿ ಅಭಿವೃದ್ಧಿ ಯೋಜನೆಗಾಗಿ 50:50 ಅನುಪಾತದಲ್ಲಿ ವಸತಿ ಬಡಾವಣೆಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಈ ಜಂಟಿ ಅಭಿವೃದ್ಧಿ ಯೋಜನೆಯಲ್ಲಿ 50:50 ಅನುಪಾತದಲ್ಲಿ ಅಭಿವೃದ್ಧಿಪಡಿಸಿದ ಒಟ್ಟು ವಸತಿ ನಿವೇಶನದ ಶೇ.50 ರಷ್ಟನ್ನು ಭೂ ಮಾಲೀಕರಿಗೆ ಪರಿಹಾರ ರೂಪದಲ್ಲಿ ನೀಡಲಾಗುವುದು. ಉದ್ದೇಶಿತ ಬಡಾವಣೆಗಾಗಿ ಸ್ವ–ಇಚ್ಚೆಯಿಂದ ಭೂಮಿಯನ್ನು ನೀಡಲು ಆಸಕ್ತಿಯಿರುವ ರೈತರು (ಒಬ್ಬ ರೈತ ಅಥವಾ ಹಲವಾರು ರೈತರು ಸೇರಿ ಒಂದೇ ಕಡೆ ಕನಿಷ್ಠ 10 ಎಕರೆ) ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರು/ಅಧೀಕ್ಷಕ ಅಭಿಯಂತರರು/ವಿಶೇಷ ಭೂಸ್ವಾಧೀನ ಅಧಿಕಾರಿಗಳ ಕಛೇರಿಯನ್ನು ಸಂಪರ್ಕಿಸಲು ಈ ಮೂಲಕ ಕೋರಲಾಗಿದೆ.

ಸಹಿ/ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.

ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ದಿಮೆ)
4ನೇ ಮಹಡಿ, ಟಿಟಿಎಂಸಿ ಕಟ್ಟಡ, "ಎ"ಬ್ಲಾಕ್, ಬಿಎಂಟಿಸಿ ಕಟ್ಟಡ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು – 560 027. ಫೋನ್: 22483641
No. KSBCL/ED (F&A)/E-Pro/ADM11-091/2023-24/3 Dated:17.07.2023

ಟೆಂಡರ್‌ಗಾಗಿ ಆಹ್ವಾನ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯನಿರ್ವಾಹಕ ನಿರ್ದೇಶಕರು (ಹ&ಆ), ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ, ಬೆಂಗಳೂರು ಇವರು ಕರ್ನಾಟಕ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮ 2000ರ ಅನ್ವಯ KPWD / CPWD ಮತ್ತು ME ನಲ್ಲಿ ನೋಂದಾಯಿತ ವರ್ಗ–3 (KW-2) ಸಿವಿಲ್ ಗುತ್ತಿಗೆದಾರರು/ಸಂಸ್ಥೆಗಳಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಐಟಂದರ ಟೆಂಡರ್ ಗಳನ್ನು ಆಹ್ವಾನಿಸಿದ್ದಾರೆ. ಇತರೆ ವಿವರಗಳನ್ನು ವೆಬ್‌ಸೈಟ್ ವಿಳಾಸ **https://kppp.karnataka.gov.in** ನಲ್ಲಿ ಪಡೆಯಬಹುದು.

1) ಬೆಂಗಳೂರಿನ ಕೆಎಸ್‌ಬಿಸಿಎಲ್ ಐಎಂಎಲ್ ಡಿಪೋ ಹೆಬ್ಬಾಳದಲ್ಲಿ ಸಿಸಿ ಫ್ಲೋರಿಂಗ್, ಲೋಡಿಂಗ್ ಪ್ಲಾಟ್‌ಫಾರ್ಮ್, ಮೇಲಾವರಣ ಮತ್ತು ಇಂಟರ್‌ಲಾಕ್ ಪೇವರ್‌ಗಳನ್ನು ಒದಗಿಸುವ ಕಾಮಗಾರಿ. ಟೆಂಡರಿಗಿಟ್ಟ ಮೊತ್ತ: **ರೂ. 27,17,232.00 + ಜಿಎಸ್‌ಟಿ.** ಇ.ಎಂ.ಡಿ: **ರೂ. 54,345/–.** ಕಾಮಗಾರಿ ಪೂರ್ಣಗೊಳಿಸುವ ಅವಧಿ: **4 ತಿಂಗಳು.**

1) ವಿಚಾರಣೆಯನ್ನು ಸ್ವೀಕರಿಸಲು ಕೊನೆಯ **ದಿನಾಂಕ ಮತ್ತು ಸಮಯ: 28.07.2023ರ ಮಧ್ಯಾಹ್ನ 12:00 ಗಂಟೆಯವರೆಗೆ. 2)** ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ ಮತ್ತು ಸಮಯ: 10.08.2023ರ ಸಂಜೆ 4:00 ಗಂಟೆಯವರೆಗೆ. 3)** ಬಿಡ್‌ಗಳನ್ನು ತೆರೆಯುವ **ದಿನಾಂಕ ಮತ್ತು ಸಮಯ: 14.08.2023ರ ಸಂಜೆ 4:01 ಗಂಟೆಗೆ.**

ಸಹಿ/–
ಕಾರ್ಯನಿರ್ವಾಹಕ ನಿರ್ದೇಶಕರು (ಹ & ಆ)
ವಾಸಾಸಂಇ/ವಾಪ್ರ/ಜಿಎ/574/2023–24

ಘರ್ಷಣೆ: ನಾಲ್ವರ ಬಂಧನ

ಪ್ರಜಾವಾಣಿ ವಾರ್ತೆ

ಸಿಂಧನೂರು (ರಾಯಚೂರು ಜಿಲ್ಲೆ): ಯುವತಿಯೊಬ್ಬಳು ಪ್ರವಾದಿಯ ಕುರಿತು ಅವಹೇಳನಕಾರಿ ಸಂದೇಶವನ್ನು ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿದ್ದರಿಂದ ತಾಲ್ಲೂಕಿನ ಆರ್.ಎಚ್. ಕ್ಯಾಂಪ್–2ರಲ್ಲಿ ಭಾನುವಾರ ರಾತ್ರಿ 2 ಗುಂಪುಗಳ ನಡುವೆ ಘರ್ಷಣೆಯಾಗಿದೆ. ಪ್ರಕರಣ ಸಂಬಂಧಿಸಿದಂತೆ ನಾಲ್ವರನ್ನು ಪೊಲೀಸರು ಬಂಧಿಸಿದ್ದಾರೆ.

ಆರ್.ಎಚ್. ಕ್ಯಾಂಪ್–2ರಲ್ಲಿ ಬಂಗಾಲಿ ಸಮುದಾಯ ಹಾಗೂ ಮುಸ್ಲಿಂ ಸಮುದಾಯದ ಯುವಕರ ನಡುವೆ ಘರ್ಷಣೆ ನಡೆದಿದ್ದರಿಂದ ಉದ್ವಿಗ್ನ ಪರಿಸ್ಥಿತಿ ನಿರ್ಮಾಣಗೊಂಡಿದೆ.

ಅವಹೇಳನಕಾರಿ ಸಂದೇಶ ಪೋಸ್ಟ್ ಮಾಡಿದ್ದನ್ನು ಗಮನಿಸಿದ ಮುಸ್ಲಿಂ ಯುವಕರ ಗುಂಪು ಶನಿವಾರ ಸಂಜೆ ಕ್ಯಾಂಪ್‌ಗೆ ಬಂದು ಈ ಬಗ್ಗೆ ಪ್ರಶ್ನಿಸಿದ್ದರು. ಯುವತಿಯನ್ನು ಕರೆದು ಸತ್ಯಾಸತ್ಯತೆ ಕುರಿತು ಚರ್ಚಿಸಿ ಎಚ್ಚರಿಕೆ ನೀಡಲಾಗುವುದು ಎಂದು ಕ್ಯಾಂಪಿನ ಮುಖಂಡರು ಭರವಸೆ ನೀಡಿದ ಬಳಿಕ ಯುವಕರು ಸಿಂಧನೂರಿಗೆ ಮರಳಿದ್ದರು.

ಆದರೆ, ಭಾನುವಾರ ಸಂಜೆ ಪುನಃ ಅದೇ ಯುವಕರ ಗುಂಪು ಕ್ಯಾಂಪ್ ನಂ.2ನ ದುರ್ಗಾದೇವಿ ದೇವಸ್ಥಾನದ ಆವರಣಕ್ಕೆ ಬಂದು 'ಅಲ್ಲಾಹೋ ಅಕ್ಬರ್' ಎಂದು ಘೋಷಣೆ ಕೂಗಿದ್ದಾರೆ. ಆಗ ಸ್ಥಳೀಯರು ವಿರೋಧ ವ್ಯಕ್ತಪಡಿಸಿದ್ದಾರೆ. ಘರ್ಷಣೆಯಲ್ಲಿ ಗಾಯಗೊಂಡ ವ್ಯಕ್ತಿಯೊಬ್ಬರು ಆಸ್ಪತ್ರೆಗೆ ದಾಖಲಾಗಿದ್ದಾರೆ.

ಪ್ರತಿಭಟನೆ: 'ದೇವಸ್ಥಾನದೊಳಗೆ ಬಂದು ನಮಾಜ್ ಮಾಡಿ, ಹಲ್ಲೆ ನಡೆಸಿದ್ದಾರೆ' ಎಂದು ಆರೋಪಿಸಿ ಕ್ಯಾಂಪ್‌ನ ಬಂಗಾಲಿ ಸಮುದಾಯದವರು ಸಿಂಧನೂರಿನ ಮಿನಿ ವಿಧಾನಸೌಧದ ಎದುರು ಪ್ರತಿಭಟಿಸಿದರು.

₹1,200 ಲಂಚದ ಬೇಡಿಕೆ:ಅಧಿಕಾರಿ ಬಂಧನ

ರಟ್ಟೀಹಳ್ಳಿ (ಹಾವೇರಿ ಜಿಲ್ಲೆ): ಪಶು ಚಿಕಿತ್ಸಾಲಯದ ಪ್ರತಿ ಬಿಲ್‌ಗೆ ₹1,200 ಲಂಚದ ಬೇಡಿಕೆ ಇಟ್ಟಿದ್ದ ರಟ್ಟೀಹಳ್ಳಿ ತಾಲ್ಲೂಕು ಉಪ ಖಜಾನೆಯ ಸಹಾಯಕ ಖಜಾನಾಧಿಕಾರಿ ಬಸವರಾಜ ಕಡೇಮನಿ ಮತ್ತು ಪ್ರಥಮ ದರ್ಜೆ ಸಹಾಯಕ ಯಲ್ಲಪ್ಪ ಅಮ್ಮಿನಬಾವಿ ಸೋಮವಾರ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ.

ಬಸವರಾಜ

ಹಳ್ಳೂರು ಪಶು ಚಿಕಿತ್ಸಾಲಯದ 5 ಬಿಲ್‌ಗಳನ್ನು ಮಂಜೂರು ಮಾಡಲು ಪಶುವೈದ್ಯಾಧಿಕಾರಿ ಡಾ.ಅಮೃತರಾಜ ಜಿ.ಕೆ. ಅವರಿಂದ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಈ ಬಗ್ಗೆ ಲೋಕಾಯುಕ್ತ ಪೊಲೀಸರಿಗೆ ಲಿಖಿತ ದೂರು ನೀಡಲಾಗಿತ್ತು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	89.60	1,845	398
ಹಾರಂಗಿ	2,859	2,845.09	3,140	50
ಕಬಿನಿ	2,284	2,270.45	1,715	800
ಹೇಮಾವತಿ	2,922	2893.77	1,862	200
ಲಿಂಗನಮಕ್ಕಿ	1,819	1756.40	7,827	2,053
ಸೂಪಾ (ಮೀ)	564	528.18	8,809.52	4,775.28
ಮಾಣಿ	595	574.10	1,232	00
ತುಂಗಭದ್ರಾ	1,633	1,588.71	5,750	182
ಮಲಪ್ರಭಾ	2,079.50	2,043.20	877	194
ಘಟಪ್ರಭಾ	2,175	2,092.20	5,044	92
ಭದ್ರಾ	186	141.40	511	164
ಆಲಮಟ್ಟಿ (ಮೀ)	519.60	509.10	12,181	561
ತುಂಗಾ	588.24	588.24	7,291	7,291
ನಾರಾಯಣಪುರ (ಮೀ)	492.25	486.79	00	50

* ನೆಲಮಟ್ಟದಿಂದ

ಸುಧಾ ಮಯೂರ ಓದಿರಿ

Karnataka State Medical Supplies Corporation Limited
PHI Building, Opp, SJP Polytechnic College, Sheshadri Road, K.R. Circle, Bengaluru - 560 001. Tel : 080-29619201 E-mail: md.ksmscl@gmail.com

No: NHM/KSMSCL/38/2022-23 Date: 15.07.2023

NOTIFICATION FOR APPOINTMENT OF DIFFERENT POSTS ON DEPUTATION

The existing KSDLWS is transformed from Society to Corporate entity as Karnataka State Medical Supplies Corporation Limited vide Govt. Order No. HFW 76 FPR 2019, Bangalore, dated: 25-08-2020.

KSMCL intended to fill the below mentioned posts from Health & FW Department and Drug Controller Department on Deputation Basis.

Sl. No.	Name of the Post	No of Posts	Educational Qualification	Mode of Recruitment
1	Consultant (Drug Tender)	01	MD Pharmacology / M Pharma with 10 years' Experience in working with State Government, Applicant should have knowledge of Procurement of Drugs, Price regulations, Pharma regulations, drug development	Deputation From Health & FW Department
2	Manager Equipment	01	Bio Medical Engineer/Health Equipment Officer with Minimum 5 years Experience in Relevant Field or in State Government	Deputation From Health & FW Department
3	Manager Drugs	01	Drug Inspector with Minimum 5 years experience Deputy Chief Pharmacist with minimum 5 years experience in State Government	Deputation From Health & FW Department or Drug Controller
4	Manager QC	01	Drug Inspector with Minimum 5 years experience or Deputy Chief Pharmacist with minimum 5 years experience in State Government	Deputation From Health & FW Department or Drug Controller
5	Bio-Medical Engineer	01	Bachelor's Degree in Biomedical Engineer with 5 years of Experience in Medical Equipment Industry.	Deputation From Health & FW Department

Education Qualification, Experience and other related information is published on KSMSCL website: www.ksmscl.in last date for submission of application is **31.07.2023 on or before 5.00 PM.** For submitting application online Email id: md.ksmscl@gmail.com. Application to other E-mails will not be accepted.

Sd/-
Managing Director
KSMSCL, Bengaluru

DIPR/CP/BCPL/578/2023-24

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
ನಂ. 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052. ಫೋನ್: 080–22268677/78/79 ಫ್ಯಾಕ್ಸ್: 080–22268667
ಇ–ಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in

ಸಂಖ್ಯೆ: ಎನ್/68/2023/361 ದಿನಾಂಕ: 17–07–2023

ಸಾರ್ವಜನಿಕ ವಿಚಾರಣೆ ಸೂಚನಾ ಪತ್ರ

ವಿಷಯ: ಜಕಾತಿ ಆದೇಶ 2023–2024 ರಲ್ಲಿ ಮುಕ್ತ ಪ್ರವೇಶ ಗ್ರಾಹಕರ ಮೇಲೆ ವಿಧಿಸಿರುವ ಹೆಚ್ಚುವರಿ ಶುಲ್ಕದ ಸಂಬಂಧ ಸಾರ್ವಜನಿಕ ವಿಚಾರಣೆ ಬಗ್ಗೆ.

ಉಲ್ಲೇಖ: ರಿಟ್ ಅರ್ಜಿ ಸಂಖ್ಯೆ: 10401/2023, 12205/2023 ಮತ್ತು 12375/2023 ರ ಘನ ಉಚ್ಚನ್ಯಾಯಾಲಯದ ಆದೇಶ ದಿನಾಂಕ: 19.06.2023.

ಉಲ್ಲೇಖದಲ್ಲಿ ತಿಳಿಸಿರುವ ರಿಟ್ ಅರ್ಜಿಗಳನ್ನು M/s. Soham Renewable Energy India Private Limited, Matrix Green Energy Private Limited ಮತ್ತು ಇತರರು, Clean Max Environ Energy Solutions Private Limited ನ ರಿಟ್ ಅರ್ಜಿದಾರರು, ಘನ ಉಚ್ಚನ್ಯಾಯಲಯ ಮುಂದೆ KERC ವಿರುದ್ಧ ಸಲ್ಲಿಸಿದ್ದು, KERC ಸಲ್ಲಿಸಿದ್ದ ಮೆಮೊಗೆ ಅನುಗುಣವಾಗಿ ಘನ ಉಚ್ಚನ್ಯಾಯಲಯವು ಆಯೋಗಕ್ಕೆ ಆದೇಶ ನೀಡಿ, ರಿಟ್ ಅರ್ಜಿದಾರರು ಮತ್ತು ಬಾದಿತ ವ್ಯಕ್ತಿಗಳಿಗೆ ದಿನಾಂಕ: 12–05–2023 ರಂದು ಹೊರಡಿಸಲಾಗಿದ್ದ ಜಕಾತಿ ಆದೇಶ 2023–24 ಮಾಡುವ ಮೊದಲು PCKL ನಿಂದ ಸ್ವೀಕರಿಸಿದ್ದ ದತ್ತಾಂಶ / ಡೇಟಾವನ್ನು ನೀಡಿ, ಆಲಿಸಿ, ಆಯೋಗವು ಆದೇಶ ಹೊರಡಿಸಲು ಘನ ಉಚ್ಚನ್ಯಾಯಲಯವು ಆದೇಶ ಮಾಡಿರುವುದರಿಂದ, PCKL ನಿಂದ ಸ್ವೀಕರಿಸಿದ್ದ ದತ್ತಾಂಶ / ಡೇಟಾ ಆಯೋಗದ ವೆಬ್‌ಸೈಟ್ / ಜಾಲತಾಣ: **https://kerc.karnataka.gov.in** ನಲ್ಲಿ ಲಭ್ಯಪಡಿಸಲಾಗಿದೆ.

ಆಯೋಗವು ವಿಷಯ ಕಂಡಿಕೆಯಲ್ಲಿ ತಿಳಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ವಿಚಾರಣೆಯನ್ನು ದಿನಾಂಕ: **18–08–2023 ರಂದು ಆಯೋಗದ ಕೋರ್ಟ್ ಹಾಲ್‌ನಲ್ಲಿ ಬೆಳಿಗ್ಗೆ 11.00 ಗಂಟೆಗೆ ನಿಗದಿಪಡಿಸಿದೆ.** ಬೆಸ್ಕಾಂ, ಮೆಸ್ಕಾಂ, ಜೆಸ್ಕಾಂ, ಹೆಸ್ಕಾಂ ಮತ್ತು ಸೆಸ್ಕ್ ವ್ಯಾಪ್ತಿಗೆ ಒಳಪಡುವ ಜೆನರೇಟರ್‌ಗಳು / ಮುಕ್ತ ಪ್ರವೇಶ ಗ್ರಾಹಕರು / ರಿಟ್ ಅರ್ಜಿದಾರರು / ಆಸಕ್ತರು / ಭಾದಿತ ವ್ಯಕ್ತಿಗಳು ತಮ್ಮ ಆಕ್ಷೇಪಣೆ, ಅಭಿಪ್ರಾಯ ಅಥವಾ ಸಲಹೆಗಳನ್ನು ಲಿಖಿತವಾಗಿ ದಿನಾಂಕ: **14–08–2023 ರಂದು ಅಥವಾ ಅದಕ್ಕೂ ಮೊದಲು ಕಾರ್ಯದರ್ಶಿ, ಕೆಇಆರ್‌ಸಿ, ನಂ. 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು – 560052** ಇವರಿಗೆ ಸಲ್ಲಿಸಬಹುದಾಗಿದೆ ಮತ್ತು ಜಕಾತಿ ಆದೇಶ 2023–24 ರಲ್ಲಿ ವಿಧಿಸಿರುವ ಹೆಚ್ಚುವರಿ ಶುಲ್ಕ ಸಂಬಂಧಿಸಿದ ಸಾರ್ವಜನಿಕ ವಿಚಾರಣೆಯಲ್ಲಿ ಭಾಗವಹಿಸಿ, ಆಯೋಗದ ಮುಂದೆ ವೈಯಕ್ತಿಕವಾಗಿ ತಮ್ಮ ಅಭಿಪ್ರಾಯಗಳನ್ನು ಹೆಚ್ಚುವರಿಯಾಗಿ ಸಲ್ಲಿಸಬಹುದಾಗಿದೆ ಎಂದು ತಿಳಿಸಲಾಗಿದೆ.

ಸಹಿ/– ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ
ವಾಸಾಸಂಇ/ವಾ.ಪ್ರ/576/2023–24

ಸುಭಾಷಿತ

ಗಂಭೀರವಾದದ್ದನ್ನು ಹೇಳಲು ಇರುವ ಮಾರ್ಗಗಳಲ್ಲಿ ಹಾಸ್ಯವೂ ಒಂದು.

-ಟಿ.ಎಸ್.ಎಲಿಯಟ್

ರಾಗಿ ಖರೀದಿಯಲ್ಲಿ ಅಕ್ರಮ ಸಮಗ್ರ ತನಿಖೆ ನಡೆಯಲಿ

ಕೃಷಿ ಉತ್ಪನ್ನಗಳ ದರ ಕುಸಿತದಿಂದ ಸಂಕಷ್ಟಕ್ಕೆ ಸಿಲುಕುವ ರೈತರ ನೆರವಿಗೆ ನಿಲ್ಲುವುದಕ್ಕಾಗಿ ಕೇಂದ್ರ ಸರ್ಕಾರವು ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಯೋಜನೆಯನ್ನು ಜಾರಿಗೊಳಿಸಿದೆ. ಈ ಯೋಜನೆಯಡಿ ಮಾರುಕಟ್ಟೆ ಮಧ್ಯಪ್ರವೇಶ ಮಾಡಿ, ರೈತರಿಂದ ನೇರವಾಗಿ ಕೃಷಿ ಉತ್ಪನ್ನಗಳನ್ನು ಖರೀದಿಸುವ ಮೂಲಕ ದರ ಕುಸಿತವನ್ನು ತಡೆಯಲಾಗುತ್ತಿದೆ. ಭತ್ತ, ಗೋಧಿ, ರಾಗಿ, ಜೋಳ, ತೊಗರಿ ಸೇರಿದಂತೆ 24 ಕೃಷಿ ಉತ್ಪನ್ನಗಳು ಈಗ ಕನಿಷ್ಠ ಬೆಂಬಲ ಬೆಲೆ ಯೋಜನೆ ವ್ಯಾಪ್ತಿಯಲ್ಲಿವೆ. ರಾಜ್ಯದಲ್ಲಿ ಈ ಬಾರಿಯೂ ಭತ್ತ, ರಾಗಿ, ಜೋಳ, ತೊಗರಿ ಸೇರಿದಂತೆ ಹಲವು ಉತ್ಪನ್ನಗಳನ್ನು ಈ ಯೋಜನೆಯಡಿ ಖರೀದಿಸಲಾಗಿದೆ. ಕೊಬ್ಬರಿ ಖರೀದಿ ಪ್ರಕ್ರಿಯೆ ಪ್ರಗತಿಯಲ್ಲಿದೆ. ಬೆಂಬಲ ಬೆಲೆಯಲ್ಲಿ ಐದು ಲಕ್ಷ ಟನ್ ರಾಗಿ ಮತ್ತು ಎರಡು ಲಕ್ಷ ಟನ್ ಜೋಳವನ್ನು ಖರೀದಿಸಿದ್ದು, ದಾಸ್ತಾನು ಮಾಡಿರುವ ಆಹಾರ ಧಾನ್ಯಗಳನ್ನು ಪಡಿತರ ಚೀಟಿದಾರರಿಗೆ ವಿತರಿಸಲು ಬಳಸಿಕೊಳ್ಳಲಾಗುತ್ತಿದೆ. ಈ ಯೋಜನೆಯನ್ನು ಕೆಲವು ವರ್ತಕರು ಮತ್ತು ದಲ್ಲಾಳಿಗಳು ದುರ್ಬಳಕೆ ಮಾಡಿಕೊಳ್ಳುವುದು ದಶಕಗಳ ಕಾಲದಿಂದಲೂ ನಡೆದೇ ಇತ್ತು. ಕೃಷಿಕರನ್ನು ಆರ್ಥಿಕ ಸಂಕಷ್ಟದಿಂದ ಪಾರು ಮಾಡುವ ಉದ್ದೇಶದಿಂದ ಜಾರಿಯಲ್ಲಿರುವ ಯೋಜನೆಯ ದುರ್ಬಳಕೆ ತಡೆಯಲು ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. ಆದರೆ, ತಂತ್ರಜ್ಞಾನ ಆಧಾರಿತ ಖರೀದಿ ವ್ಯವಸ್ಥೆಯನ್ನೂ ವರ್ತಕರು ಮತ್ತು ಮಧ್ಯವರ್ತಿಗಳು ದುರ್ಬಳಕೆ ಮಾಡಿಕೊಂಡಿರುವುದು ಈ ಬಾರಿಯ ರಾಗಿ ಖರೀದಿ ಪ್ರಕ್ರಿಯೆಯಲ್ಲಿ ನಡೆದಿದೆ. ದಾವಣಗೆರೆ ಜಿಲ್ಲೆಯ ಜಗಳೂರು ಹಾಗೂ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗದಲ್ಲಿ ತೆರೆದಿದ್ದ ಖರೀದಿ ಕೇಂದ್ರಗಳಲ್ಲಿ ವರ್ತಕರು ಮತ್ತು ದಲ್ಲಾಳಿಗಳು ರೈತರ ಸೋಗಿನಲ್ಲಿ ರಾಗಿಯನ್ನು ಮಾರಾಟ ಮಾಡಿರುವುದು ಪತ್ತೆಯಾಗಿದೆ. ಈ ಸಂಬಂಧ ಎರಡೂ ಕಡೆ ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಿ ತನಿಖೆ ನಡೆಸಲಾಗುತ್ತಿದೆ. ಸ್ಥಳೀಯ ಜಿಲ್ಲಾಧಿಕಾರಿ ಹಾಗೂ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯ ಅಧಿಕಾರಿಗಳ ಜಂಟಿ ತಂಡವು ನಡೆಸಿದ ಪ್ರಾಥಮಿಕ ತನಿಖೆಯು ರಾಗಿ ಖರೀದಿಯಲ್ಲಿ ಅಕ್ರಮ ನಡೆದಿರುವುದನ್ನು ದೃಢಪಡಿಸಿದೆ. ರಾಜ್ಯದ ಹಲವು ಜಿಲ್ಲೆಗಳಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರಾಗಿ ಖರೀದಿ ನಡೆದಿದೆ. ಅಲ್ಲಿಯೂ ಅಕ್ರಮ ಎಸಗಿರುವ ಅನುಮಾನಗಳಿವೆ.

ಕನಿಷ್ಠ ಬೆಂಬಲ ಬೆಲೆ ಯೋಜನೆಯನ್ನು ಖರೀದಿ ಕೇಂದ್ರಗಳು ಹಾಗೂ ಏಜೆನ್ಸಿಗಳ ಅಧಿಕಾರಿಗಳ ಸಹಕಾರವಿಲ್ಲದೆ ವರ್ತಕರು, ದಲ್ಲಾಳಿಗಳು ದುರ್ಬಳಕೆ ಮಾಡಿಕೊಳ್ಳಲು ಸಾಧ್ಯವಿಲ್ಲ

ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಮಾರುಕಟ್ಟೆ ಮಧ್ಯಪ್ರವೇಶ ಮಾಡುವುದು ಸಂಪೂರ್ಣವಾಗಿ ಕೇಂದ್ರ ಸರ್ಕಾರದ ಅನುದಾನದಲ್ಲಿ ನಡೆಯುವ ಕಾರ್ಯಕ್ರಮ. ಆದರೆ, ಯೋಜನೆಯಡಿ ಕೃಷಿ ಉತ್ಪನ್ನಗಳ ಖರೀದಿಯ ಪೂರ್ಣ ಜವಾಬ್ದಾರಿ ರಾಜ್ಯ ಸರ್ಕಾರದ್ದು. ಭತ್ತ, ರಾಗಿ ಮತ್ತು ಜೋಳ ಖರೀದಿಗೆ ಕರ್ನಾಟಕ ಆಹಾರ ಮತ್ತು ನಾಗರಿಕ ಪೂರೈಕೆ ನಿಗಮ ನೋಡಲ್ ಏಜೆನ್ಸಿಯಾಗಿತ್ತು. ನಿಗಮದ ಜತೆಗೆ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ಮತ್ತು ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳವನ್ನು ಖರೀದಿ ಏಜೆನ್ಸಿಗಳನ್ನಾಗಿ ನೇಮಿಸಲಾಗಿತ್ತು. 'ಫಾರ್ಮರ್ ರಿಜಿಸ್ಟ್ರೇಷನ್ ಆ್ಯಂಡ್ ಯೂನಿಫೈಡ್ ಬೆನಿಫಿಷಿಯರಿ ಇನ್‌ಫರ್ಮೇಷನ್ ಸಿಸ್ಟಂ' (FRUITS) ಗುರುತಿನ ದಾಖಲೆಯ ಆಧಾರದಲ್ಲಿ ರೈತರು ಖರೀದಿ ಕೇಂದ್ರಗಳಲ್ಲಿ ನೋಂದಣಿ ಮಾಡಿಕೊಳ್ಳಬೇಕಿತ್ತು. ನಂತರ ನಿಗದಿತ ದಿನಾಂಕಕ್ಕೆ ಖರೀದಿ ಕೇಂದ್ರಕ್ಕೆ ರಾಗಿ ತಂದು ಮಾರಾಟ ಮಾಡಬೇಕಿತ್ತು. ರೈತರು ಮಾತ್ರವೇ ಎಂಎಸ್‌ಪಿ ಯೋಜನೆಯಡಿ ಕೃಷಿ ಉತ್ಪನ್ನ ಮಾರಾಟ ಮಾಡಬಹುದು. ಆದರೆ, ನೋಂದಣಿಗೂ ಮೊದಲೇ 'ಫ್ರೂಟ್ಸ್ ಐ.ಡಿ'ಗಳನ್ನೇ ತಿರುಚಿರುವ ಕೆಲವು ವರ್ತಕರು, ದಲ್ಲಾಳಿಗಳು ರೈತರ ಹೆಸರಿನಲ್ಲಿ ರಾಗಿ ಮಾರಾಟ ಮಾಡಿರುವುದು ಎರಡೂ ಖರೀದಿ ಕೇಂದ್ರಗಳಲ್ಲಿ ಪತ್ತೆಯಾಗಿದೆ. ಆಹಾರ ಧಾನ್ಯ ಮಾರಾಟ ಮಾಡಿದ ರೈತರಿಗೆ ಹಣ ಪಾವತಿ ಖಾತರಿಗಾಗಿ ಕಂಪ್ಯೂಟರೀಕೃತ ರಸೀದಿ (ಧಾನ್ಯ ವೋಚರ್) ನೀಡಲಾಗುತ್ತದೆ. ಕೆಲವರಿಗೆ ಈ ವೋಚರ್ ವಿತರಣೆಯಲ್ಲಿ ಆದ ವಿಳಂಬದಿಂದ ಅಕ್ರಮ ಹೊರಬರುವಂತಾಗಿದೆ. ಕೃಷಿ ಉತ್ಪನ್ನಗಳ ದರ ಕುಸಿತದಿಂದ ರೈತರಿಗೆ ರಕ್ಷಣೆ ನೀಡುವ ಉದ್ದೇಶದಿಂದ ಜಾರಿಯಲ್ಲಿರುವ ಎಂಎಸ್‌ಪಿ ಯೋಜನೆಯನ್ನು ಖರೀದಿ ಕೇಂದ್ರಗಳು ಹಾಗೂ ಏಜೆನ್ಸಿಗಳ ಅಧಿಕಾರಿಗಳ ಸಹಕಾರವಿಲ್ಲದೆ ವರ್ತಕರು, ದಲ್ಲಾಳಿಗಳು ದುರ್ಬಳಕೆ ಮಾಡಿಕೊಳ್ಳಲು ಸಾಧ್ಯವಿಲ್ಲ. ಸರ್ಕಾರದ ಯೋಜನೆಗಳಿಗೆ ಈ ರೀತಿ ಕನ್ನ ಕೊರೆದು, ರೈತರು ಮತ್ತು ಬೊಕ್ಕಸಕ್ಕೆ ಏಕಕಾಲಕ್ಕೆ ನಷ್ಟ ಉಂಟುಮಾಡುವ ವಿಷಮ ಜಾಲ ಎರಡೇ ಖರೀದಿ ಕೇಂದ್ರಗಳಿಗೆ ಸೀಮಿತವಾಗಿದೆ ಎಂದು ಭಾವಿಸುವಂತಿಲ್ಲ. ಎಂಎಸ್‌ಪಿ ಯೋಜನೆಯಡಿ ಆಹಾರ ಧಾನ್ಯಗಳ ಖರೀದಿ ನಡೆದಿರುವ ಎಲ್ಲ ಕೇಂದ್ರಗಳಿಗೂ ತನಿಖೆಯನ್ನು ವಿಸ್ತರಿಸಬೇಕು. ವರ್ತಕರು ಮತ್ತು ದಲ್ಲಾಳಿಗಳು ರೈತರ ಸೋಗಿನಲ್ಲಿ ಆಹಾರ ಧಾನ್ಯ ಮಾರಾಟ ಮಾಡಲು ಯಾವ ಮಾರ್ಗವನ್ನು ಬಳಕೆ ಮಾಡಿಕೊಂಡಿದ್ದಾರೆ ಎಂಬುದನ್ನು ಪತ್ತೆಹಚ್ಚಬೇಕು. ತಪ್ಪಿತಸ್ಥರನ್ನು ಪತ್ತೆಮಾಡಿ ಕಾನೂನಿನ ಅಡಿಯಲ್ಲಿ ಕಠಿಣ ಕ್ರಮಕ್ಕೆ ಒಳಪಡಿಸಬೇಕು. ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಖರೀದಿ ಪ್ರಕ್ರಿಯೆಯಲ್ಲಿನ ಲೋಪಗಳನ್ನು ಸರಿಪಡಿಸುವುದಕ್ಕೆ ಆದ್ಯತೆ ನೀಡಬೇಕು.

ದಿನದ ಟ್ವೀಟ್

ಯಶಸ್ಸಿನ ಸಂಕೇತ?



ನಮ್ಮ ಒಗ್ಗಟ್ಟು ನೋಡಿ ಬಿಜೆಪಿ ದಂಗಾಗಿರುವುದು ಸ್ಪಷ್ಟ. ಅವರು ಈಗ ತಮ್ಮ 'ಮೈತ್ರಿಕೂಟದ ಸಭೆ' ಆಯೋಜಿಸಲು ಮುಂದಾಗಿದ್ದಾರೆ. ಅವರು ಸಭೆ ಆಯೋಜಿಸುತ್ತಿರುವುದೇ ನಮಗೆ ಯಶಸ್ಸು ಸಿಕ್ಕಿರುವುದರ ಸೂಚಕ. ಕೇಂದ್ರ ಸರ್ಕಾರದ ಅಪ್ರಜಾಸತ್ತಾತ್ಮಕ ಧೋರಣೆಯ ವಿರುದ್ಧ ದನಿ ಎತ್ತುವುದನ್ನು ನಾವು ಮುಂದುವರಿಸುತ್ತೇವೆ. ಒಕ್ಕೂಟ ವ್ಯವಸ್ಥೆಯ ವಿರುದ್ಧ ಅವರು ದಾಕ್ಷಿಣ್ಯವಿಲ್ಲದೆ ನಡೆದುಕೊಳ್ಳುತ್ತಿದ್ದಾರೆ, ಭಿನ್ನಾಭಿಪ್ರಾಯವನ್ನು ಹತ್ತಿಕ್ಕುತ್ತಿದ್ದಾರೆ, ತಮ್ಮ ರಾಜಕೀಯ ಲಾಭಕ್ಕಾಗಿ ಸಮಾಜದಲ್ಲಿ ಒಡಕಿಗೆ ಉತ್ತೇಜನ ನೀಡುತ್ತಿದ್ದಾರೆ.

ಕೆ.ಸಿ.ವೇಣುಗೋಪಾಲ್, ಎಐಸಿಸಿ ಪ್ರಧಾನ ಕಾರ್ಯದರ್ಶಿ

ಕಿಡಿನುಡಿ



ವಿರೋಧ ಪಕ್ಷಗಳು ತಮ್ಮ ಒಕ್ಕೂಟವನ್ನು 'ಮಹಾಘಟಬಂಧನ' ಎಂದು ಕರೆಯುತ್ತಿವೆ. ಆದರೆ ವಾಸ್ತವದಲ್ಲಿ ಅಲ್ಲಿ ಯಾವ 'ಬಂಧನ'ವೂ (ಒಗ್ಗೂಡಿಸುವ ಅಂಶ) ಇಲ್ಲ. ಆ ಪಕ್ಷಗಳ ಗುರಿ ಏನಿದ್ದರೂ ನರೇಂದ್ರ ಮೋದಿ ಅವರನ್ನು ಪ್ರಧಾನಿ ಸ್ಥಾನದಿಂದ ಕೆಳಗಿಳಿಸುವುದಷ್ಟೇ. ಆದರೆ ಆ ಕಾರ್ಯ ಅಸಾಧ್ಯ. ಶೂನ್ಯಕ್ಕೆ ಶೂನ್ಯ ಸೇರಿದರೆ ಅಲ್ಲಿ ಶೂನ್ಯವಷ್ಟೇ ಇರುತ್ತದೆ.

ಬಸವರಾಜ ಬೊಮ್ಮಾಯಿ, ಬಿಜೆಪಿ ಮುಖಂಡ

25 ವರ್ಷಗಳ ಹಿಂದೆ

ಶನಿವಾರ, 18-7-1998

• ವಿದ್ಯುತ್ ದರ ಏರಿಕೆಗೆ ದಳ ಶಾಸಕರ ತೀವ್ರ ವಿರೋಧ

ಬೆಂಗಳೂರು, ಜುಲೈ 17- ವಿದ್ಯುತ್ ದರ ಏರಿಕೆ ಕ್ರಮವನ್ನು ಕೂಡಲೇ ಹಿಂತೆಗೆದುಕೊಳ್ಳಬೇಕು ಇಲ್ಲವೇ ಈ ಬಗ್ಗೆ ಚರ್ಚಿಸಲು ತುರ್ತಾಗಿ ಜನತಾದಳದ ಶಾಸಕಾಂಗ ಪಕ್ಷದ ಸಭೆ ಕರೆಯಬೇಕು ಎಂದು ಆಡಳಿತ ಪಕ್ಷದ ಶಾಸಕರ ಗುಂಪೊಂದು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರನ್ನು ಆಗ್ರಹಪಡಿಸಿದೆ.

ಈ ಸಭೆ ನಡೆಯುವವರೆಗೆ ಜನರ ಹಾಗೂ ಪಕ್ಷದ ಹಿತದೃಷ್ಟಿಯಿಂದ ದರ ಏರಿಕೆಯನ್ನು ತಡೆಹಿಡಿಯಬೇಕೆಂದು ಗುಂಪು ಒತ್ತಾಯಿಸಿದೆ. ದರ ಏರಿಸುವ ಮಂಡಳಿಯ ದಿಢೀರ್ ನಿರ್ಧಾರಕ್ಕೆ ಒಬ್ಬರು ಸಚಿವರೂ ಸೇರಿದಂತೆ ಜನತಾದಳದ ಹದಿನೈದಕ್ಕೂ ಹೆಚ್ಚು ಶಾಸಕರು ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ.

• ಗೋಡ್ಸೆ ನಾಟಕ ನಿಷೇಧಕ್ಕೆ ಕೇಂದ್ರದ ಸಲಹೆ

ನವದೆಹಲಿ, ಜುಲೈ 17 (ಯುಎನ್‌ಐ)- ಮಹಾತ್ಮ ಗಾಂಧಿ ಹತ್ಯೆ ಘಟನೆಯನ್ನು ವೈಭವೀಕರಿಸುವ ವಿವಾದಾತ್ಮಕ ಮರಾಠಿ ನಾಟಕ 'ಮೈ ನಾಥೂರಾಂ ಗೋಡ್ಸೆ ಬೋಲ್ತಾಯ್' ನಾಟಕ ಪ್ರದರ್ಶನವನ್ನು ನಿಷೇಧಿಸುವಂತೆ ಮಹಾರಾಷ್ಟ್ರ ಸರ್ಕಾರಕ್ಕೆ ಸಲಹೆ ಮಾಡಿದ್ದಾಗಿ ಗೃಹ ಸಚಿವ ಎಲ್.ಕೆ. ಅಡ್ವಾಣಿ ಇಂದು ಲೋಕಸಭೆಯಲ್ಲಿ ಪ್ರಕಟಿಸಿದರು.

50 ವರ್ಷಗಳ ಹಿಂದೆ

ಬುಧವಾರ, 18-7-1973

• ಅಫ್ಘಾನಿಸ್ತಾನದಲ್ಲಿ ರಕ್ತರಹಿತ ಕ್ರಾಂತಿ: ಗಣರಾಜ್ಯ ಘೋಷಣೆ- ದೊರೆ ಗೈರುಹಾಜರಿಯಲ್ಲಿ ರಾಜಶಾಹಿ ಅಂತ್ಯ

ನವದೆಹಲಿ, ಜುಲೈ 17- ರಕ್ತರಹಿತ ಕ್ರಾಂತಿಯಲ್ಲಿ ದೊರೆ ಜಾಹಿರ್ ಷಾರವರ ರಾಜಶಾಹಿಯನ್ನು ಇಂದು ಕಿತ್ತೊಗೆದ ಮಾಜಿ ಪ್ರಧಾನಿ ಸರ್ದಾರ್ ಮಹಮದ್ ದಾವೂದ್ ಖಾನ್‌ರವರು ಅಫ್ಘಾನಿಸ್ತಾನವು ಇನ್ನು ಮುಂದೆ ಗಣರಾಜ್ಯವಾಗಿರುವುದೆಂದು ಘೋಷಿಸಿದ್ದಾರೆ.

ಈ ಮಿಂಚಿನ ಕ್ರಾಂತಿಗೆ ಸೇನೆಯ ಬೆಂಬಲವಿದೆಯೆಂದು ಹೇಳಿದ ದಾವೂದ್ ಖಾನ್ ಅವರು, ಅಫ್ಘಾನ್ ಗಣರಾಜ್ಯವು ಅಂತರರಾಷ್ಟ್ರೀಯ ಕ್ಷೇತ್ರದಲ್ಲಿ ಅಲಿಪ್ತ ನೀತಿಯನ್ನು ಅನುಸರಿಸುವುದೆಂದೂ ಎಲ್ಲ ರಾಷ್ಟ್ರಗಳೊಡನೆ ಅತ್ಯುತ್ತಮ ಬಾಂಧವ್ಯ ಹೊಂದಿರಲು ಪ್ರಯತ್ನಿಸುವುದೆಂದೂ ಸ್ಪಷ್ಟಪಡಿಸಿದರು.

• ಕಾಂಗ್ರೆಸ್ ವಿರುದ್ಧ ಹೋರಾಟಕ್ಕೆ ಜನಸಂಘದ ಕರೆ

ಹುಬ್ಬಳ್ಳಿ, ಜುಲೈ 17- ಮುಸ್ಲಿಂ ಕೋಮುವಾದ ಮತ್ತೆ ತಲೆ ಎತ್ತಿಕೊಂಡು ಪ್ರಾಬಲ್ಯ ಹೊಂದುತ್ತಿರುವುದರ ವಿರುದ್ಧ ಮತ್ತು ಕಾಂಗ್ರೆಸ್ ನೇತೃತ್ವದ ಸರ್ಕಾರ ತನ್ನ ನೀತಿಗಳಿಂದ ಸರ್ವಾಧಿಕಾರದತ್ತ ವಾಲುತ್ತಿರುವುದರ ವಿರುದ್ಧ ಹೋರಾಡಲು ಎಲ್ಲ ವಿರೋಧ ಪಕ್ಷಗಳೂ ಒಂದಾಗಬೇಕೆಂದು ಜನಸಂಘ ಇಂದು ಕರೆ ನೀಡಿತು.

ಶಾಸನಬದ್ಧ ಶಾಶ್ವತ 'ಭ್ರಷ್ಟಾಚಾರ ಅಧ್ಯಯನ ಆಯೋಗ' ರಚನೆಗೆ ಯೋಗ್ಯ ಸಮಯ

ಭ್ರಷ್ಟಾಚಾರ: ಅಧ್ಯಯನ ಆಗಬೇಕಲ್ಲವೇ?

ವಿಶ್ಲೇಷಣೆ

ಚಂದ್ರಕಾಂತ ವಡ್ಡು

ಕಾಂಗ್ರೆಸ್ ಶಾಸಕ ಲಕ್ಷ್ಮಣ ಸವದಿ ಅವರು ಸರಿಯಾಗಿಯೇ ವ್ಯಾಖ್ಯಾನಿಸಿದಂತೆ ಬಿಜೆಪಿಯವರು 'ಎರವಲು ಸೇವೆ' ಮೇಲೆ ನೇಮಿಸಿಕೊಂಡಿರುವ 'ವಿಪಕ್ಷ ನಾಯಕ' ಎಚ್.ಡಿ. ಕುಮಾರಸ್ವಾಮಿ, ಸರ್ಕಾರದ ಮೇಲೆ ಭ್ರಷ್ಟಾಚಾರದ ಮುಂಗಾರು ಮಳೆಯನ್ನೇ ಸುರಿಸುತ್ತಿದ್ದಾರೆ. ಕತ್ತಿಗಿಂತ ಪೆನ್ನು ಹೆಚ್ಚು ಶಕ್ತಿಯುತ ಎಂಬ ಇಂಗ್ಲಿಷ್ ಗಾದೆಯನ್ನು ಪೆನ್ನಿಗಿಂತ ಪೆನ್‌ಡ್ರೈವು ಹೆಚ್ಚು ಬಲಶಾಲಿ ಎಂದು ಬದಲಿಸುವಷ್ಟು ಸಂಚಲನ ಮೂಡಿಸಿದ್ದಾರೆ.

ಎರಡು ಬಾರಿ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿರುವ ಕುಮಾರಸ್ವಾಮಿ ಅವರಿಗೆ, ಸಾಕ್ಷ್ಯ ಮುಚ್ಚಿಡುವುದು ಶಿಕ್ಷಾರ್ಹ ಅಪರಾಧ ಎಂಬುದು ತಿಳಿಯದ ಸಂಗತಿಯೇನಲ್ಲ. ಆದರೆ, ಬಿಡುಗಡೆ ಮಾಡಿದ ಪೆನ್‌ಡ್ರೈವ್‌ಗಿಂತ ಜೇಬಿನಲ್ಲಿ ಇರಿಸಿಕೊಂಡಿದ್ದಕ್ಕೇ ಹೆಚ್ಚು ರಾಜಕೀಯ ಮೌಲ್ಯ ಎಂಬ ತಂತ್ರಗಾರಿಕೆಯಲ್ಲಿ ಅವರಿಗೆ ಹೆಚ್ಚು ನಂಬಿಕೆ ಇದ್ದಂತಿದೆ.

ಬಿಜೆಪಿ ನಾಯಕರ, ಶಾಸಕರ ಕೋರಸ್ ಜೊತೆಗೆ ಸರ್ಕಾರದ ಮೇಲೆ ಆಕ್ರಮಣಶೀಲ ನಡೆ ಪ್ರದರ್ಶಿಸುತ್ತಿರುವ ಕುಮಾರಸ್ವಾಮಿ ಅವರು ಕೃಷಿ ಇಲಾಖೆಯ ಅಧಿಕಾರಿಗಳ ವರ್ಗಾವಣೆ ಮತ್ತು ವಿವಿಧ ಯೋಜನೆಗಳಿಗೆ ನಿಗದಿಪಡಿಸಿದ ಕಮಿಷನ್ ಪಟ್ಟಿಯನ್ನು ಸದನದಲ್ಲಿ ಪ್ರದರ್ಶಿಸಿದ್ದಾರೆ. ಎರಡು ಪುಟಗಳ ದರಪಟ್ಟಿಯನ್ನು ಸ್ಪೀಕರ್ ಅವರಿಗೆ ಸಲ್ಲಿಸುವ ಮೂಲಕ ಭ್ರಷ್ಟಾಚಾರ ಆರೋಪವನ್ನು ಮತ್ತೊಂದು ಎತ್ತರಕ್ಕೆ ಆರೋಹಣ ಮಾಡಿಸಿದ್ದಾರೆ ಎನ್ನಬಹುದು. ಕೃಷಿ ಇಲಾಖೆಯೊಂದರಲ್ಲೇ ₹ 111.78 ಕೋಟಿ ಕಮಿಷನ್ ಸಂಗ್ರಹಿಸುವ ಗುರಿ ಬಗೆಗಿನ ಗಂಭೀರ ಆರೋಪವನ್ನು ಹಗುರವಾಗಿ ಪರಿಗಣಿಸಲು ಸಾಧ್ಯವಿಲ್ಲ.

ಇದೀಗ, ಸಿದ್ದರಾಮಯ್ಯನವರು, 'ನನ್ನ ರಾಜಕೀಯ ಜೀವನದಲ್ಲಿ ಅಧಿಕಾರಿಗಳನ್ನು ವರ್ಗಾವಣೆ ಮಾಡುವುದಕ್ಕೆ ಒಂದೇ ಒಂದು ಬಾರಿಯೂ ಲಂಚ ತೆಗೆದುಕೊಂಡಿಲ್ಲ. ಸಾಬೀತು ಮಾಡಿದರೆ ರಾಜಕೀಯ ನಿವೃತ್ತಿ ತೆಗೆದುಕೊಳ್ಳುತ್ತೇನೆ' ಎಂದು ತಮ್ಮದೇ ಆದ ಶೈಲಿಯಲ್ಲಿ ಸವಾಲು ಎಸೆದಿದ್ದಾರೆ. 'ಒಂದು ವೇಳೆ ಯಾರಾದರೂ ನನ್ನ ಗಮನಕ್ಕೆ ಬಾರದೆ ಆ ರೀತಿ ಮಾಡಿದ್ದರೆ ಅದು ನನಗೆ ಗೊತ್ತಿಲ್ಲ. ಭ್ರಷ್ಟಾಚಾರವೇ ಇಲ್ಲ ಎನ್ನುವುದಿಲ್ಲ...' ಎಂಬ ಅವರ ಧಾಟಿಯಲ್ಲಿ ತಮ್ಮ ಸಹೋದ್ಯೋಗಿ ಸಚಿವರ ಕುರಿತಂತೆ ಎಚ್ಚರಿಕೆಯ ನಡೆ ಸ್ಪಷ್ಟವಾಗಿದೆ.

ಕುಮಾರಸ್ವಾಮಿ ಅವರ ಮಾಯಾವಿ ಪೆನ್‌ಡ್ರೈವ್, ಜೇಬಿನಲ್ಲಿ ಕುಳಿತೇ ಸದ್ದು ಮಾಡಿದಾಗ ಸಿದ್ದರಾಮಯ್ಯ ಅವರು ಕೆಲವು ಸಚಿವರೊಂದಿಗೆ ಚರ್ಚಿಸಿ ಹುಷಾರಾಗಿರಲು ಸೂಚಿಸಿದ್ದರು ಕೂಡ. ಕುಮಾರಸ್ವಾಮಿ ಅವರು ಸಾಚಾತನದಲ್ಲಿ ತಾವೇನೂ ಕಡಿಮೆಯಿಲ್ಲ ಎಂಬಂತೆ, 'ಮೈತ್ರಿ ಸರ್ಕಾರದ 14 ತಿಂಗಳ ಅವಧಿಯಲ್ಲಿ ವರ್ಗಾವಣೆಗೆ ಹಣ ಪಡೆದ ಒಂದು ಪ್ರಕರಣ ತೋರಿಸಿದರೆ ನಾನು ರಾಜಕೀಯ ನಿವೃತ್ತಿ ಪಡೆಯುತ್ತೇನೆ' ಎಂದು ಘೋಷಿಸಿದ್ದಾರೆ. ಆದರೆ, ಇಂತಹ ರಾಜಕೀಯ ನಿವೃತ್ತಿಯ ಸವಾಲುಗಳು, ಘೋಷಣೆಗಳಿಗೆ ಸಾಂದರ್ಭಿಕ ಪ್ರತಿಕ್ರಿಯೆಗೆ ಹೊರತಾದ ಯಾವುದೇ ಮಹತ್ವ ಇರುವುದಿಲ್ಲ. ಈ ಬಗೆಯ ಹೇಳಿಕೆಗಳಲ್ಲಿ ಒಂದೇ ಒಂದು ಪಾಲನೆಯಾದ ಕುರುಹು ರಾಜಕೀಯ ಇತಿಹಾಸದಲ್ಲಿ ಎಲ್ಲಿಯೂ ಕಾಣಸಿಗುವುದಿಲ್ಲ.

ಭ್ರಷ್ಟಾಚಾರದ ಯಾವುದೇ ಆರೋಪಗಳು ಹೊರಹೊಮ್ಮಿದಾಗ ತಕ್ಷಣ ಮತ್ತೊಂದು ಬದಿಯಿಂದ ಚಿಮ್ಮುವ ಪ್ರಶ್ನೆ: 'ದಾಖಲೆ ಇದೆಯಾ?' ಇದಕ್ಕೆ ಈ ಕಡೆಯ ಉತ್ತರವೂ ಸಿದ್ಧವಿರುತ್ತದೆ: 'ನೀವು ಆರೋಪ ಮಾಡಿದಾಗ ಸಾಕ್ಷ್ಯ ಕೊಟ್ಟಿದ್ದಿರಾ?' ಬಹುಪಾಲು ಭ್ರಷ್ಟಾಚಾರಗಳು ಆಚರಣೆಗೆ ಬರುವುದು ಕೊಡುವ ಮತ್ತು ಪಡೆಯುವ ಎರಡೂ ಕಡೆಯವರ ಒಡಂಬಡಿಕೆಯಿಂದ ಎಂಬ ವಸ್ತುಸ್ಥಿತಿ ಎಲ್ಲರಿಗೂ ಗೊತ್ತಿರುವುದೇ. ಆದಾಗ್ಯೂ ಇಂತಹ ಹೇಳಿಕೆ, ಪ್ರತಿಹೇಳಿಕೆಗಳನ್ನು ಸಹಿಸಿಕೊಳ್ಳಬೇಕಾದ ದುಃಸ್ಥಿತಿ ಜನತೆಯದು!

ಸಿದ್ದರಾಮಯ್ಯ, ಯಡಿಯೂರಪ್ಪ, ದೇವೇಗೌಡ ಅವರಂತಹ ರಾಜಕಾರಣಿಗಳ ಹಿನ್ನೆಲೆಯನ್ನು ಗಮನಿಸಿದರೆ, ಇವರೆಲ್ಲಾ ರಾಜಕಾರಣಕ್ಕೆ 'ವ್ಯಾಪಾರ' ಮಾಡಲೆಂದೇ ಬಂದವರೆಂದು ಖಂಡಿತವಾಗಿ ಅನ್ನಿಸುವುದಿಲ್ಲ. ಆದರೆ, ರಾಜಕಾರಣದ ದೈನಂದಿನ ಹಾಗೂ ದೀರ್ಘಕಾಲೀನ ಬೇಡಿಕೆಗಳನ್ನು ಪರಿಗಣಿಸಿ, ತಮ್ಮ ಅಸ್ತಿತ್ವ ಕಾಪಾಡಿಕೊಳ್ಳುವ ಅನಿವಾರ್ಯಕ್ಕೆ ಅನೇಕರು 'ತುತ್ತು' ಆಗಬೇಕಾಗಿರುವುದು ವ್ಯವಸ್ಥೆಯ ದಾರುಣ ವ್ಯಂಗ್ಯ. ಲಾಭ ಗಳಿಕೆಗಾಗಿಯೇ ರಾಜಕಾರಣದಲ್ಲಿ ಹೂಡಿಕೆ ಮಾಡುವ ಕ್ಯಾಪಿಟೇಷನ್ ಕುಳಗಳು, ಗಣಿ ಮಾಲೀಕರು, ರಿಯಲ್ ಎಸ್ಟೇಟ್ ಕೂಟ, ಉದ್ಯಮಪತಿಗಳಿಂದ ಕೊಳ್ಳೆ ಹೊರತಾಗಿ ಬೇರೇನನ್ನೂ ನಿರೀಕ್ಷಿಸಲು ಸಾಧ್ಯವಿಲ್ಲ. ಆದರೆ, ಪ್ರಾಮಾಣಿಕವಾಗಿ ಸಮಾಜಕ್ಕೆ ಒಂದಿಷ್ಟು ಕೊಡುಗೆ ಕೊಡಲೆಂದು ರಾಜಕೀಯ ಪ್ರವೇಶಿಸುವವರಿಗೆ ಉಳಿಗಾಲವೇ ಇಲ್ಲವೆಂಬ ಪರಿಸ್ಥಿತಿಯನ್ನು ಆಮೂಲಾಗ್ರವಾಗಿ ಅವಲೋಕಿಸುವುದು ಬಹಳ ಮುಖ್ಯ.

ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಎಂಬ ಸ್ವತಂತ್ರ ಸಂಸ್ಥೆಯ ಅಧ್ಯಯನ ವರದಿಯ ಪ್ರಕಾರ, ಈ ಬಾರಿ ವಿಧಾನಸಭೆಗೆ ಚುನಾಯಿತರಾದ ಶಾಸಕರ ಸರಾಸರಿ ಆಸ್ತಿ ಮೊತ್ತ ₹ 64.39 ಕೋಟಿ. ಇವರಲ್ಲಿ ಶೇಕಡ 97ರಷ್ಟು ಶಾಸಕರು ಕೋಟ್ಯಧಿಪತಿಗಳು, ₹ 5 ಕೋಟಿಗಿಂತ ಹೆಚ್ಚು ಆಸ್ತಿ ಇರುವವರ ಪ್ರಮಾಣ ಶೇಕಡ 81. ರಾಜ್ಯದ ಮೂರು ಪ್ರಮುಖ ರಾಜಕೀಯ ಪಕ್ಷಗಳಲ್ಲಿ ಅಂತಸ್ತಿನ ಪ್ರಮಾಣ ಹೀಗಿದೆ: ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳ ಸರಾಸರಿ ಆಸ್ತಿ ಮೌಲ್ಯ ₹ 67.13 ಕೋಟಿಯಾದರೆ, ಬಿಜೆಪಿ ಅಭ್ಯರ್ಥಿಗಳು ₹ 44.36 ಕೋಟಿ ಹಾಗೂ ಜೆಡಿಎಸ್ ₹ 46.01 ಕೋಟಿ ಸರಾಸರಿ ಸಂಪತ್ತು ಹೊಂದಿದ್ದಾರೆ.

ಭ್ರಷ್ಟಾಚಾರವನ್ನು ಒಂದೇ ಘಟಕವಾಗಿ ಪರಿಗಣಿಸುವುದರಲ್ಲೇ ಎಡವಟ್ಟಾಗುತ್ತಿದೆ. ಸ್ಥೂಲವಾಗಿ ವಿಂಗಡಿಸಿದಾಗ ರಾಜಕಾರಣಿಗಳ ಮಾದರಿಯ ಭ್ರಷ್ಟಾಚಾರ ಮತ್ತು ಆಡಳಿತಶಾಹಿ ಲಂಚಾವತಾರ ಪ್ರತ್ಯೇಕವಾಗಿ ಕಾಣಿಸುತ್ತವೆ. ಇಲ್ಲಿಯೂ ನೇಮಕಾತಿ, ವರ್ಗಾವಣೆ, ವಿವಿಧ ಗುತ್ತಿಗೆ, ಇಲಾಖಾ ಖರೀದಿಯಂತಹ ಕಾರ್ಯಗಳಲ್ಲಿ ತಮ್ಮ ಸ್ವಾರ್ಥ ಸಾಧನೆಗಾಗಿ ಸ್ವತಃ ಮುಂದೊಡ್ಡುವ ಲಂಚಗುಳಿತನ ಒಂದು ಬಗೆಯದಾದರೆ, ಸಹಜವಾಗಿ ಆಗಬೇಕಾದ ಕೆಲಸಕಾರ್ಯಗಳಿಗೆ ತಡೆಯೊಡ್ಡಿ ಲಂಚ ಉತ್ಪಾದಿಸುವುದು ಇನ್ನೊಂದು ರೀತಿಯದು.

ಮೊದಲ ನಮೂನೆಯ ಭ್ರಷ್ಟಾಚಾರವು ಪರಸ್ಪರ ಹೊಂದಾಣಿಕೆಯ ಸ್ವರೂಪ ಹೊಂದಿರುವುದರಿಂದ ಬಹಿರಂಗವಾಗುವ ಸಂಭವ ಕಡಿಮೆ. ಅದರ ಪತ್ತೆಹಚ್ಚುವಿಕೆ, ನಿಯಂತ್ರಣ ಕ್ರಮ ಸುಲಭಸಾಧ್ಯವಲ್ಲ. ಈಗ ಆಡಳಿತ ಮತ್ತು ವಿರೋಧಪಕ್ಷಗಳ ನಡುವೆ ವಾಗ್ವಾದಕ್ಕೆ ಈಡಾಗಿರುವ ಭ್ರಷ್ಟಾಚಾರ ಈ ಬಗೆಯದು. ಇನ್ನು, ಸಂಕಷ್ಟ, ಸಂದರ್ಭ, ಅಸಹಾಯಕತೆ ಬಳಸಿಕೊಂಡು ಹಣ ಕೀಳುವ ಎರಡನೇ ಮಾದರಿಯ ಭ್ರಷ್ಟಾಚಾರದಲ್ಲಿ ನೊಂದವರು ಪ್ರತಿಭಟಿಸಲು, ಸಾಕ್ಷ್ಯ ಒದಗಿಸಲು ಮುಂದಾಗುತ್ತಾರೆ. ಆದರೆ, ಅಂತಹವರಿಗೆ ನಿಯಂತ್ರಣ ವ್ಯವಸ್ಥೆ ಮೇಲೆ ಭರವಸೆ ಹುಟ್ಟಿಸುವ ವಾತಾವರಣ ಸೃಷ್ಟಿಯಾಗಬೇಕಾಗುತ್ತದೆ.

ಸರ್ಕಾರದ ವಿವಿಧ ಹಂತಗಳಲ್ಲಿ ಹಾಸುಹೊಕ್ಕಾಗಿರುವ ಭ್ರಷ್ಟಾಚಾರದ ರೂಪಗಳನ್ನು, ಆಯಾಮಗಳನ್ನು, ವೈವಿಧ್ಯವನ್ನು ಬಹುಶಿಸ್ತೀಯ ಅಧ್ಯಯನಕ್ಕೆ ಒಳಪಡಿಸುವ ಜರೂರತ್ತು ಇದೆ. ಆಡಳಿತ ವ್ಯವಸ್ಥೆಯ ಪ್ರತಿಯೊಂದು ಇಲಾಖೆಯೂ ತನ್ನದೇ ಆದ ಭ್ರಷ್ಟಾಚಾರದ ವಿಶಿಷ್ಟ ಶೈಲಿಯನ್ನು ಹೊಂದಿರುವುದರಿಂದ ಇಲಾಖಾವಾರು ಅಧ್ಯಯನ ಆಗಬೇಕಾಗುತ್ತದೆ. ಇದಕ್ಕಾಗಿ ವಿವಿಧ ಕ್ಷೇತ್ರಗಳ ಪರಿಣತರನ್ನು ಒಳಗೊಂಡ ಒಂದು ಶಾಸನಬದ್ಧ ಶಾಶ್ವತ ಸ್ವತಂತ್ರ 'ಭ್ರಷ್ಟಾಚಾರ ಅಧ್ಯಯನ ಆಯೋಗ' ರಚನೆಯಾಗಲಿ.

ಆಯೋಗದಿಂದ ಕಾಲಕಾಲಕ್ಕೆ ಲಭ್ಯವಾಗುವ ವರದಿಯನ್ನು, ದತ್ತಾಂಶವನ್ನು, ಸತ್ಯಾಂಶವನ್ನು ವೈಜ್ಞಾನಿಕ ವಿಶ್ಲೇಷಣೆಗೆ ಒಳಪಡಿಸಿದಾಗ ಪರಿಹಾರದ ಹಾದಿ ತೆರೆದುಕೊಳ್ಳಲು ಸಾಧ್ಯ. ಈವರೆಗೆ ಇಂತಹ ಒಂದು ಅತ್ಯಗತ್ಯ ಪ್ರಯತ್ನ ಸರ್ಕಾರದಿಂದಾಗಲೀ ಸ್ವತಂತ್ರ ಸಂಸ್ಥೆಗಳಿಂದಾಗಲೀ ವ್ಯವಸ್ಥಿತವಾಗಿ, ಸಮಗ್ರವಾಗಿ ನಡೆದ ಬಗ್ಗೆ ಮಾಹಿತಿ ಇಲ್ಲ. ಹೀಗೆ, ಈ ಬಗೆಯ ಕ್ರಮಕ್ಕೆ ಮುಂದಾಗದೆ ಶಾಸನಸಭೆಯಲ್ಲಿ ಗಂಟೆಗಟ್ಟಲೆ ಕಾಲಹರಣ ಮಾಡಿದರೆ ಪ್ರಯೋಜನವೇನು?

ಎಂದಿಗೂ ಯಾವ ತಾರ್ಕಿಕ ತುದಿಯನ್ನೂ ತಲುಪದ 'ಶುದ್ಧ ರಾಜಕೀಯ' ಗದ್ದಲಗಳ ನಡುವೆ ಕೃಷ್ಣ ಬೈರೇಗೌಡ, ಸತೀಶ್ ಜಾರಕಿಹೊಳಿ ಅವರಂತಹ ಒಂದಿಬ್ಬರು ಸಚಿವರು ತಮ್ಮ ಇಲಾಖೆಯಲ್ಲಿ ಸದ್ದಿಲ್ಲದೇ ಅಳವಡಿಸಿಕೊಳ್ಳಲು ಯತ್ನಿಸುತ್ತಿರುವ ಸುಧಾರಣೆ ಕ್ರಮಗಳು ಮರೆಯಾಗದಿರಲಿ.

ಚುರುಮುರಿ

ಹಾರುವ ವಸ್ತುಗಳು

• ಲಿಂಗರಾಜು ಡಿ.ಎಸ್.

'ಸಾ, ಕಾಂಗ್ರೆಸ್ಸು, ಬಿಜೆಪಿ ಆಪೀಸಿನ ಮ್ಯಾಲೆ ಯಾವ್ಯಾವೋ ಗುರುತಿಸಲಾಗದಂತಹ ಅನ್ ಐಡೆಂಟಿಫೈಡ್ ಪೊಲಿಟಿಕಲ್ ಆಬ್ಜೆಕ್ಟುಗಳು ಹಾರಾಡ್ತಾ ಅವಂತೆ!' ಅಂತ ಬ್ರೇಕಿಂಗ್ ನ್ಯೂಸ್ ಹೇಳಿದೆ.

'ಹ್ಞೂಂ ಕಯ್ಯಾ, 'ದಳದೇಲಿ ಕುಮಾರಣ್ಣನ ಜೊತೆ ಸಂಸಾರ ಮಾಡದು ಕಷ್ಟಾಗ್ಯದೆ. ಭಾಳ ರೋಸ್ತನೆ. ನಾವು ಕುಮಾರಣ್ಣನಿಗೆ ಸೋಡಾಚೀಟಿ ಕೊಟ್ಟು ನಿಮ್ಮ ಬಡ್ಡೆಗೆ ಬತ್ತೀವಿ' ಅಂತ 12 ಅನ್ ಐಡೆಂಟಿಫೈಡ್ ಪೊಲಿಟಿಕಲ್ ಆಬ್ಜೆಕ್ಟುಗಳು ಕಾಂಗ್ರೆಸ್ ಜೊತೆಗೆ ಕ್ಲೋಸ್ ಎನ್‌ಕೌಂಟರ್ ಆಫ್ ದಿ ಥರ್ಡ್ ಕೈಂಡ್ ಮಾಡ್ಯವಂತೆ' ಅಂದ್ರು ತುರೇಮಣೆ.

'ಹೌದೇಳ್ರಿ, ಮನ್ನೆ ಚೆಲುವಣ್ಣ, ಬಾಲಣ್ಣ ಹೇಳ್ತಿದ್ರಲ್ಲ!' ಅಂದ ಚಂದ್ರು.

'ಕುಮಾರಣ್ಣ 'ನಾನು ಕಮಲದ ದಳವಾಗದೇ ಸೈ. ಮೋದಿ ಮಾವಾರು ಹೋದ ಸತೀಲೇ ಕರೆದು ತಲೆ ಸವರಿ, ಯಾವಾಗ ಬತ್ತೀಲಾ ಅಂತ ಕೇಳ್ಯವುರೆ ಅಂದದೆ' ಯಂಟಪ್ಪಣ್ಣ ಬಿರುಸಾಗಿ ಹೇಳಿತು.

'ಹೌದಂತೆ ಕನಣ್ಣೆ! 'ನೀನೇ ಇರೋಧ ಪಕ್ಸದ ನಾಯಕ, ಮುಂದ್ಲ ಮುಖ್ಯಮಂತ್ರಿ ನೀನೇಯಾ' ಅಂತ ಮೂಗಿಗೆ ತುಪ್ಪ ಹಚ್ಚವ್ರಂತೆ' ಅದುಕ್ಕೆ ಕುಮಾರಣ್ಣ 'ಬ್ಯಾಡ ಕಾ ಮಾವೋ. ನಿಮ್ಮಟ್ಟೀಲೇ ಮನೆಮಗ ಇದ್ದಂಗಿರತೀನಿ. ನನ್ನನ್ನೋ ನನ್ನ ಕಂದನ್ನೋ ಸೆಂಟ್ರಲ್ ಮಿನಿಸ್ಟರ್ ಮಾಡಿಬುಡಿ' ಅಂದದಂತೆ' ಚಂದ್ರು ವಿಶ್ಲೇಷಿಸಿದ.

'ಯಾವ್ಯಾವ ಪಕ್ಸದ ಪೊಲಿಟಿಕಲ್ ಆಬ್ಜೆಕ್ಟುಗಳು ಎಲ್ಲೆಲ್ಲಿ ನಿಂತುಗಂಡು ಲ್ಯಾಂಡಿಂಗಿಗೆ ಅವಕಾಶಕ್ಕೆ ಕಾಯ್ತಾ ಅವೋ ಗೊತ್ತಾಯ್ತಿಲ್ಲ. ರಾಜಾವುಲಿ 17 ಪೊಲಿಟಿಕಲ್ ಆಬ್ಜೆಕ್ಟುಗಳ ಹಾರಿಸಿಗ್ಯಂಡೋಗಿ ಸಿಎಂ ಆಗಿರನಿಲ್ವೇ!' ಅಂತು ಯಂಟಪ್ಪಣ್ಣ.

'ಈಗ ಪಕ್ಸಗಳು ಮೂರಾಬಟ್ಟೆ ಆಗಿ ಜನದ ಇತಾಪರ ಮರೆತು ಅಲಾಕಾಗೋಗ್ಯವೆ ಕನ್ರೋ. ಕೈ, ದಳ, ಕಮಲಗಳೆಲ್ಲಾ ವರ್ಗಾವಣೆಗೆ ಕಾಸು ಇಸುಗಂಡು ಗಂಟು ಮಾಡಿಕ್ಯಂದಿದ್ದೋರೇ! ಈಗ ಕಮಲದ ಬಸ್ಸಿಗೆ ಡ್ರೈವರ್ ಇಲ್ಲ, ದಳದ ವ್ಯಾನಿಗೆ ಜನವೇ ಇಲ್ಲ' ತುರೇಮಣೆ ರಾಜಕೀಯದ ಪುಟ ಬಿಚ್ಚಿಟ್ಟರು.

ಸಂಗತ

ದೌರ್ಜನ್ಯ ತಡೆಗೆ ಬೇಕು ಇಚ್ಛಾಶಕ್ತಿ

ಪ್ರತಿವರ್ಷ ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳು ಹೆಚ್ಚುತ್ತಿರುವುದಕ್ಕೆ ಕಾರಣಗಳೇನು ಎಂಬ ಬಗ್ಗೆ ಸರ್ಕಾರ ಗಂಭೀರವಾಗಿ ವಿಮರ್ಶೆ ಮಾಡಿಕೊಳ್ಳಬೇಕಾದ ಅವಶ್ಯಕತೆ ಇದೆ

• ಮಂಗ್ಳೂರ ವಿಜಯ

ಶಾಸಕರೊಬ್ಬರ ಪ್ರಶ್ನೆಗೆ ಗೃಹ ಸಚಿವ ಜಿ. ಪರಮೇಶ್ವರ ಅವರು ಸದನದಲ್ಲಿ ಇತ್ತೀಚೆಗೆ ನೀಡಿದ ಉತ್ತರದಲ್ಲಿ, 'ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಮೇಲೆ ಹಿಂದಿನ ಐದು ವರ್ಷಗಳಲ್ಲಿ 10,883 ದೌರ್ಜನ್ಯ ಪ್ರಕರಣಗಳು ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿವೆ. ಈ ಪೈಕಿ 8,357 ಪ್ರಕರಣಗಳಲ್ಲಿ ಚಾರ್ಜ್‌ಶೀಟ್ ಮತ್ತು ಉಳಿದವುಗಳಿಗೆ 'ಬಿ' ರಿಪೋರ್ಟ್ ಹಾಕಲಾಗಿದೆ' ಎಂದು ತಿಳಿಸಿದರು. ಈ ಐದು ವರ್ಷಗಳ ಪೈಕಿ 2022ರಲ್ಲಿ ಅತಿ ಹೆಚ್ಚು, ಅಂದರೆ 2,377 ದೌರ್ಜನ್ಯ ಪ್ರಕರಣಗಳು ದಾಖಲಾಗಿದ್ದು, ಇವುಗಳಲ್ಲಿ 1,822 ಪ್ರಕರಣಗಳಲ್ಲಿ ಚಾರ್ಜ್‌ಶೀಟ್ ಹಾಕಲಾಗಿದೆ ಎಂದೂ ಅವರು ಮಾಹಿತಿ ನೀಡಿದರು.

ಪೊಲೀಸ್ ಠಾಣೆವರೆಗೆ ಬರುವ ಪ್ರಕರಣಗಳ ಸಂಖ್ಯೆಯೇ ಇಷ್ಟಿರುವಾಗ, ಇನ್ನು ದೌರ್ಜನ್ಯಗಳು ನಡೆದರೂ ದಲಿತರು ಅಸಹಾಯಕತೆಯಿಂದ ಅಥವಾ ದೌರ್ಜನ್ಯಕೋರರ ಬೆದರಿಕೆಗೆ ಹೆದರಿ ಬಹಳಷ್ಟು ಪ್ರಕರಣಗಳನ್ನು ಅಲ್ಲಲ್ಲಿಗೇ ಮುಗಿಸಿಕೊಂಡು ಬಿಡುತ್ತಾರೆ ಎಂಬುದನ್ನೂ ಅಲ್ಲಗಳೆಯಲು ಆಗುವುದಿಲ್ಲ. ದಲಿತರ ಮೇಲಿನ ದೌರ್ಜನ್ಯ ತಡೆಗಟ್ಟಲೆಂದೇ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆ, 1989 ಮತ್ತು ನಿಯಮಗಳು- 1995 ಎಂಬ ವಿಶೇಷ ಕಾಯ್ದೆಯನ್ನು ರೂಪಿಸಲಾಗಿದೆ. ಇದು ನಮ್ಮ ರಾಜ್ಯದಲ್ಲಿ 1995ರಿಂದಲೂ ಜಾರಿಯಲ್ಲಿದೆ. ಆದರೂ, ಪ್ರತಿವರ್ಷ ಈ ಸಂಬಂಧ ಹೆಚ್ಚು ಹೆಚ್ಚು ದೌರ್ಜನ್ಯ ಪ್ರಕರಣಗಳು ಠಾಣೆಗಳಲ್ಲಿ ದಾಖಲಾಗುತ್ತಿರುವುದಕ್ಕೆ ಕಾರಣಗಳೇನು ಎಂಬ ಬಗ್ಗೆ ಸರ್ಕಾರ ಗಂಭೀರವಾಗಿ ವಿಮರ್ಶೆ ಮಾಡಿಕೊಳ್ಳಬೇಕಾದ ಅವಶ್ಯಕತೆ ಇದೆ.

ಹೀಗೆ ದಾಖಲಾದ ಪ್ರಕರಣಗಳ ಪೈಕಿ ಶೇ 5ಕ್ಕಿಂತ ಹೆಚ್ಚು ಪ್ರಕರಣಗಳಲ್ಲಿ ಆರೋಪಿಗಳಿಗೆ ಶಿಕ್ಷೆ ಆಗುತ್ತಿಲ್ಲ ಎಂಬ ಕಳವಳಕಾರಿ ಮಾಹಿತಿಯು ಈ ವಿಷಯದ ಬಗ್ಗೆ ಅಧ್ಯಯನ ನಡೆಸಿದಾಗ ತಿಳಿದುಬರುತ್ತದೆ. ರಾಜ್ಯದಲ್ಲಿ ಸರ್ಕಾರದ ಆಡಳಿತ ಸೂತ್ರ ಹಿಡಿದವರು ಬದಲಾದಾಗ, 1995ರ ನಿಯಮಗಳಲ್ಲಿನ 16ನೇ ವಿಧಿಯ ಅನುಸಾರ, ಹೊಸ ಮುಖ್ಯಮಂತ್ರಿಯು ತಮ್ಮ ಅಧ್ಯಕ್ಷತೆಯಲ್ಲಿ 'ರಾಜ್ಯ ಮಟ್ಟದ ಜಾಗೃತಿ ಮತ್ತು ಉಸ್ತುವಾರಿ ಸಮಿತಿ'ಯನ್ನು ರಚಿಸಬೇಕು ಮತ್ತು ಈ ಸಮಿತಿಯು ಪ್ರತಿವರ್ಷದ ಜನವರಿ ಮತ್ತು ಜುಲೈ ತಿಂಗಳಲ್ಲಿ ಸಭೆ ನಡೆಸಬೇಕಾಗುತ್ತದೆ. ಈ ಸಭೆಯಲ್ಲಿ ಹಿಂದಿನ ಆರು ವರ್ಷಗಳಲ್ಲಿ ದಲಿತರ ಮೇಲೆ ನಡೆದ ದೌರ್ಜನ್ಯಗಳ ಸಂಖ್ಯೆಯಲ್ಲಿ ಹೆಚ್ಚಳ ಅಥವಾ ಇಳಿಕೆ ಆಗಿರುವ ಬಗ್ಗೆ, ದೌರ್ಜನ್ಯ ಪ್ರಕರಣಗಳು ಸಮರ್ಪಕವಾಗಿ ದಾಖಲಾಗುತ್ತಿರುವ ಬಗ್ಗೆ, ದಾಖಲಾದ ಪ್ರಕರಣಗಳಿಗೆ ಸಂಬಂಧಿಸಿ ಸರ್ಕಾರದ ವಕೀಲರು ಸಮರ್ಪಕವಾಗಿ ವಾದ ಮಂಡನೆ ಮಾಡುತ್ತಿರುವ ಬಗ್ಗೆ ವಿಮರ್ಶೆ ಮಾಡಬೇಕಾಗುತ್ತದೆ.

2013ರಿಂದ ಇತ್ತೀಚಿನವರೆಗೆ ರಾಜ್ಯದಲ್ಲಿ ಆಡಳಿತ ನಡೆಸಿದವರ ಅವಧಿಯಲ್ಲಿ ಈ ಕಾಯ್ದೆಯ ಅನುಷ್ಠಾನ ಎಷ್ಟರಮಟ್ಟಿಗೆ ಆಗಿದೆ ಎಂಬುದನ್ನು ಗಮನಿಸಿದರೆ, ಮೊದಲ ಹೆಜ್ಜೆಯಲ್ಲೇ ಸರ್ಕಾರ ಮುಗ್ಗರಿಸಿ ಬಿದ್ದಿರುವುದು ಸ್ಪಷ್ಟವಾಗಿ ಕಾಣುತ್ತದೆ. ಸಿದ್ದರಾಮಯ್ಯ ಐದು ವರ್ಷ, ಕುಮಾರಸ್ವಾಮಿ, ಯಡಿಯೂರಪ್ಪ- ಬೊಮ್ಮಾಯಿ ಅವರ ಐದು ವರ್ಷ ಸೇರಿ ಒಟ್ಟು ಹತ್ತು ವರ್ಷಗಳ ಈ ಆಡಳಿತಾವಧಿಯಲ್ಲಿ ಯಾವ ಮುಖ್ಯಮಂತ್ರಿಯ ಕಾಲದಲ್ಲೂ ನಿಗದಿತ ಸಭೆಗಳನ್ನು ನಡೆಸದಿರುವುದು ಎದ್ದು ಕಾಣುತ್ತದೆ.

ಮುಖ್ಯಮಂತ್ರಿ ಮತ್ತು ಆಡಳಿತ ಪಕ್ಷಗಳು ಬದಲಾದರೂ, ದಲಿತರ ಮೇಲಿನ ದೌರ್ಜನ್ಯಗಳನ್ನು ತಡೆಗಟ್ಟುವ ದಿಸೆಯಲ್ಲಿ ರೂಪಿಸಲಾಗಿರುವ ಕಾಯ್ದೆಯ ಅನುಷ್ಠಾನದಲ್ಲಿ ಮಾತ್ರ ಕಾಳಜಿ, ಉತ್ಸುಕತೆ ಕಾಣುವುದೇ ಇಲ್ಲ.

ದೌರ್ಜನ್ಯ ಪ್ರಕರಣಗಳಲ್ಲಿ ಸಂತ್ರಸ್ತರಿಗೆ ನೀಡುವ ಪರಿಹಾರದ ಮೊತ್ತದಲ್ಲಿ ಶೇ 50ರಷ್ಟನ್ನು ರಾಜ್ಯವು ಮತ್ತು ಇನ್ನು ಶೇ 50ರಷ್ಟನ್ನು ಕೇಂದ್ರವು ನೀಡುತ್ತವೆ. ಕಾಯ್ದೆಗೆ ರೂಪಿಸಲಾಗಿರುವ ನಿಯಮಗಳಲ್ಲಿನ ವಿಧಿ 18, 'ರಾಜ್ಯ ಸರ್ಕಾರವು ಈ ಕಾಯ್ದೆಯನ್ನು ಅನುಷ್ಠಾನಕ್ಕೆ ತರುವ ದಿಸೆಯಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ಮತ್ತು ಹಿಂದಿನ ಕ್ಯಾಲೆಂಡರ್ ವರ್ಷದ ಅವಧಿಯಲ್ಲಿ ತಾನು ರೂಪಿಸಿದ ವಿವಿಧ ಯೋಜನೆಗಳು, ಕಾರ್ಯಯೋಜನೆಗಳ ಬಗ್ಗೆ ವರದಿಯನ್ನು ಪ್ರತಿವರ್ಷ ಮಾರ್ಚ್ 31ಕ್ಕಿಂತ ಮುಂಚೆ ಕೇಂದ್ರ ಸರ್ಕಾರಕ್ಕೆ ಸಲ್ಲಿಸತಕ್ಕದ್ದು' ಎಂದು ತಿಳಿಸುತ್ತದೆ. ರಾಜ್ಯ ಸರ್ಕಾರ ಸಮರ್ಪಕವಾಗಿ ಸಭೆಗಳನ್ನೇ ನಡೆಸದೆ, ಏನು ತಾನೆ ವರದಿಯನ್ನು ಸಲ್ಲಿಸಬಲ್ಲದು? ವಾರ್ಷಿಕ ವರದಿಯನ್ನು ರಾಜ್ಯ ಸರ್ಕಾರ ಸಮರ್ಪಕವಾಗಿ ಕಳಿಸದೇ ಹೋದರೆ ಕೇಂದ್ರ ಸರ್ಕಾರ ತನ್ನ ಪಾಲನ್ನು ಬಿಡುಗಡೆ ಮಾಡುವುದಿಲ್ಲ. ಆಗ, ಸಂತ್ರಸ್ತರಿಗೆ ರಾಜ್ಯದ ಪಾಲು ಮಾತ್ರ ದೊರಕುತ್ತದೆ.



ಈ ವರ್ಷದ ಜನವರಿ ತಿಂಗಳಿನಲ್ಲಿ ಆಗಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸಭೆಯನ್ನು ನಡೆಸಲಿಲ್ಲ. ಈಗ ಜುಲೈ ತಿಂಗಳು ಬರುವ ಹೊತ್ತಿಗೆ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಿದೆ. ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿಯಬೇಕಾದ ಮುಖ್ಯಮಂತ್ರಿಯ ಸ್ಥಾನದಲ್ಲಿ ಸಿದ್ದರಾಮಯ್ಯ ಇದ್ದಾರೆ. ಇವರಾದರೂ ಕಾಯ್ದೆ ತಿಳಿಸುವಂತೆ ಸಭೆಯನ್ನು ನಡೆಸಿ, ನಿಯಮ ಪಾಲನೆಗೆ ಮುಂದಾಗಬೇಕು.

ದೌರ್ಜನ್ಯ ತಡೆ ಕಾಯ್ದೆಯ ಆಶಯವನ್ನು ಜಾರಿ ಮಾಡಿ, ದಲಿತರ ಮೇಲಿನ ದೌರ್ಜನ್ಯಗಳನ್ನು ತಡೆಗಟ್ಟುವ ಕಾರ್ಯದಲ್ಲಿ ಪ್ರಗತಿ ಸಾಧಿಸಬೇಕು. ಈ ವಿಷಯದಲ್ಲಿ ಸಾಮಾಜಿಕ ನ್ಯಾಯಪರರು, ದಲಿತ ಸಂಘಟನೆಗಳ ಮುಖಂಡರು ಸರ್ಕಾರದ ಮೇಲೆ ನಿರಂತರವಾಗಿ ಒತ್ತಡ ತರುವುದು ಅವಶ್ಯ.

ವಾಚಕರ ವಾಣಿ

ಉದ್ದಿಮೆ ಸ್ಥಿತಿಗತಿ: ದಶಕದ ಹಿಂದಿನದೇ ಚಿತ್ರಣ!

ರಾಜ್ಯ ಸರ್ಕಾರದ ಉದ್ದಿಮೆಗಳ ಬಗೆಗಿನ ಮಹಾಲೇಖಪಾಲರ (ಸಿಎಜಿ) ವರದಿಯ (ಪ್ರ.ವಾ., ಜುಲೈ 12) ವಿವರ ಓದಿ ಆಶ್ಚರ್ಯವೇನೂ ಆಗಲಿಲ್ಲ. ಹತ್ತು ವರ್ಷಗಳ ಹಿಂದೆ ಪತ್ರಿಕೆಯು ಇಂಥದ್ದೇ ವರದಿ ಪ್ರಕಟಿಸಿತ್ತು. ಆಗ 90 ಉದ್ಯಮಗಳನ್ನು ಪರಿಶೀಲನೆಗೆ ಒಳಪಡಿಸಲಾಗಿತ್ತು, ನಷ್ಟದ ಹೊರೆ ₹ 1,897 ಕೋಟಿ. ಈಗ 125 ಕಂಪನಿ, ನಿಗಮಗಳು, ನಷ್ಟ ₹ 37,893 ಕೋಟಿ. ಒಂದು ಸಮಾಧಾನಕರ ಅಂಶ- 50 ಉದ್ಯಮಗಳು ಈ ಹಿಂದೆಯೂ ಲಾಭ ಮಾಡುತ್ತಿದ್ದವು, ಈಗ ಲಾಭದ ಮೊತ್ತ ಕಡಿಮೆಯಾಗಿದೆ. 'ಶೂನ್ಯ' ಸ್ಥಿತಿ ತಲುಪಿದ 26 ಉದ್ಯಮಗಳು ₹ 42,568 ಕೋಟಿ ಸಾಲ ಹೊಂದಿವೆ. ಅದನ್ನು ತೀರಿಸಲು ಕರ್ನಾಟಕ ಸರ್ಕಾರ ಏನು ಮಾಡಲಿದೆ? ಈ ಅಧಿವೇಶನದಲ್ಲಿ ಇದರ ಬಗ್ಗೆ ಚರ್ಚೆ ಆಗುವ ಸುಳಿವು ಕಾಣುತ್ತಿಲ್ಲ.

ಈಗ ನಾಲ್ಕು ಎಸ್ಕಾಂಗಳ ಸಂಕಷ್ಟ ತೀವ್ರವಾಗಿದೆ. ರಾಜ್ಯ ಸರ್ಕಾರದ ಇಲಾಖೆಗಳೇ ಬಾಕಿ ಉಳಿಸಿಕೊಂಡಿವೆ. ಉಚಿತ ಬಿಲ್ ಸಿದ್ಧ ಮಾಡಲು ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಮೊದಲೇ ಇವುಗಳಿಗೆ ಹಣ ನೀಡಬೇಕು. ಪ್ರವಾಸೋದ್ಯಮದ ಅಭಿವೃದ್ಧಿಯ ಬಗೆಗೆ ಮಾತನಾಡುವ ಸಚಿವರು, ಮೊದಲು ಕೆಎಸ್‌ಟಿಡಿಸಿ ನಷ್ಟದಿಂದ ಹೊರಬರಲು ಏನು ಮಾಡಲಿದ್ದಾರೆ ಎಂಬುದನ್ನು ಹೇಳಬೇಕು. ರಸ್ತೆ ನಿಗಮಗಳಿಗೆ ಮುಂಗಡ ಹಣ ಕೊಟ್ಟು ಬಸ್‌ಗಳಲ್ಲಿ ಆಮೇಲೆ ಉಚಿತ ಟಿಕೆಟ್ ನೀಡಿಕೆ ಆರಂಭಿಸಬೇಕಿತ್ತು. ಒಟ್ಟಿನಲ್ಲಿ ಸರ್ಕಾರಿ ಉದ್ಯಮಗಳಿಗೆ ಮೊದಲ ಕುತ್ತು ಸರ್ಕಾರವೇ!

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಅಗಲಿಕೆಯಲ್ಲಿ ಕಣ್ಣೀರು ಸಹಜ

ಶಾಲೆಯ ಶಿಕ್ಷಕರು ಬೇರೆ ಶಾಲೆಗೆ ವರ್ಗಾವಣೆಗೊಂಡರೆ ಅಥವಾ ವೃತ್ತಿಯಿಂದ ನಿವೃತ್ತರಾದರೆ, ಮಕ್ಕಳು ತಮ್ಮ ದುಃಖವನ್ನು ವ್ಯಕ್ತಪಡಿಸುವ ಕ್ರಮವಾಗಿ ಕಣ್ಣೀರು ಹಾಕುತ್ತಾರೆ. ಇದು ಹೆಚ್ಚುಕಡಿಮೆ ಎಲ್ಲ ಶಾಲೆಗಳಲ್ಲಿ, ಅದರಲ್ಲೂ ಗ್ರಾಮಾಂತರ ಪ್ರದೇಶಗಳ ಸರ್ಕಾರಿ, ಖಾಸಗಿ ಮತ್ತು ಅನುದಾನಿತ ಶಾಲೆಗಳಲ್ಲಿ ಸಹಜ ವಿದ್ಯಮಾನ. ಪ್ರೌಢಶಾಲೆಯವರೆಗಿನ ಮಕ್ಕಳು ಸಣ್ಣಪುಟ್ಟದ್ದಕ್ಕೆಲ್ಲ ಹೊಡೆಯುವ ಶಿಕ್ಷಕರನ್ನು ಹೊರತುಪಡಿಸಿ, ಎಲ್ಲ ಶಿಕ್ಷಕರನ್ನೂ ಇಷ್ಟಪಡುತ್ತಾರೆ. ಮಕ್ಕಳ ಮನಸ್ಸಿನಲ್ಲಿ ಶಿಕ್ಷಕರ ಬಗ್ಗೆ ಇಷ್ಟ, ಅನಿಷ್ಟ, ಪ್ರೀತಿ, ದ್ವೇಷದ ಭಾವನೆಗಳು ಚಿಗುರೊಡೆಯುವುದು ಪ್ರೌಢಶಾಲಾ ಶಿಕ್ಷಣ ನಂತರದ ಶಿಕ್ಷಣ ಕ್ರಮದ ಸಂದರ್ಭದಲ್ಲಿ.

ತಮಗೆ ಒಗ್ಗಿಹೋಗಿರುವ ಶಿಕ್ಷಕ, ಶಿಕ್ಷಕಿ ವರ್ಗಾವಣೆಯ ಕಾರಣದಿಂದಲೋ ನಿವೃತ್ತಿಯ ಕಾರಣದಿಂದಲೋ ಶಾಲೆಯನ್ನು ತೊರೆದಾಗ ಮಕ್ಕಳಿಗೆ ದುಃಖವಾಗುತ್ತದೆ. ಆ ದುಃಖವನ್ನು ವ್ಯಕ್ತಪಡಿಸಲು ಮಾತಿನ ಚಾಕಚಕ್ಯತೆಯ ಕೊರತೆಯಿಂದ ಮಕ್ಕಳು ಕಣ್ಣೀರು ಹಾಕುತ್ತಾರೆ. ಮಕ್ಕಳ ಕಣ್ಣೀರು ಶಿಕ್ಷಕರ ಮೌಲ್ಯಮಾಪನದ ಮಾನದಂಡವಲ್ಲ. ಇಲ್ಲಿ ಸಮರ್ಥ ಶಿಕ್ಷಕ ಅಥವಾ ಅಸಮರ್ಥ ಶಿಕ್ಷಕ ಎಂಬ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಇದು ಬರೀ ಅಗಲಿಕೆಯ ನೋವು ಅಷ್ಟೇ. ತಮ್ಮ ಭಾವನೆಯ ಅಭಿವ್ಯಕ್ತಿಯ ಕ್ರಮವಾಗಿ ಮಕ್ಕಳು ಕಣ್ಣೀರು ಹಾಕುತ್ತಾರೆ. ಒಂದೆರಡು ದಿನಗಳು ಕಳೆಯುವುದರಲ್ಲಿ ಮಕ್ಕಳ ಮನಸ್ಸಿನಿಂದ ಆ ಶಿಕ್ಷಕ ಮರೆಯಾಗಿ ಹೊಸ ಶಿಕ್ಷಕ ಆ ಜಾಗದಲ್ಲಿ ಸ್ಥಾಪಿತನಾಗುತ್ತಾನೆ. ಇಂಥ ಸಹಜ ಮಾನಸಿಕ ಸ್ಥಿತಿಯನ್ನು ಅರ್ಥ ಮಾಡಿಕೊಳ್ಳದೆ ಮಕ್ಕಳ ಕಣ್ಣೀರಿಗೆ ವಿಶೇಷ ಅರ್ಥ ಕಲ್ಪಿಸಿ, ಶಿಕ್ಷಕನನ್ನು ಅನಗತ್ಯವಾಗಿ ಅಟ್ಟಕ್ಕೇರಿಸುವ ಅಗತ್ಯ ಖಂಡಿತ ಇಲ್ಲ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ರಾಜ್ಯದ ವಿರೋಧಪಕ್ಷಕ್ಕೂ 'ಸ್ವಂತ ಬಲ' ಬರಲಿ

'ಸ್ವಂತ ಬಲವಿಲ್ಲದ ಪ್ರತಿಪಕ್ಷಗಳು' ಎಂದು ಬಿಜೆಪಿ ಮುಖಂಡ ಬಸವರಾಜ ಬೊಮ್ಮಾಯಿ ಅವರು, ದೇಶದಲ್ಲಿ ಪ್ರತಿಪಕ್ಷಗಳು ಒಂದಾಗುತ್ತಿರುವ ಬಗ್ಗೆ ಪ್ರತಿಕ್ರಿಯೆ ನೀಡಿರುವುದು ವರದಿಯಾಗಿದೆ (ಪ್ರ.ವಾ., ಜುಲೈ 17). ಈ ಮಾತು ರಾಜ್ಯ ರಾಜಕಾರಣದಲ್ಲಿ, ವಿರೋಧಪಕ್ಷದ ಸದ್ಯದ ರಾಜಕೀಯ ಪರಿಸ್ಥಿತಿಯನ್ನು ಅಣಕಿಸುವಂತಿದೆ. ಬೊಮ್ಮಾಯಿಯವರು, ದೇಶದಲ್ಲಿ ತಮ್ಮದು ಸ್ವಂತ ಬಲವಿರುವ ಆಡಳಿತ ಪಕ್ಷವೆಂದು ಪರೋಕ್ಷವಾಗಿ ಹೇಳಿಕೊಳ್ಳುತ್ತಿರುವ ಬೆನ್ನಲ್ಲೇ, ಬಿಜೆಪಿ ಜೊತೆ ಜೆಡಿಎಸ್ ಮೈತ್ರಿ ಮಾಡಿಕೊಳ್ಳಲಿರುವ ಸುಳಿವನ್ನೂ ನೀಡಿದ್ದಾರೆ. ಅಂದರೆ, ಇವರಿಗೆ ಸ್ವಂತ ಬಲ ಎಲ್ಲಿಂದ ಬಂತು?

ರಾಜ್ಯದಲ್ಲಿ ಚುನಾವಣೆ ಮುಗಿದು, ಸರ್ಕಾರ ರಚನೆಯಾಗಿ ಇಷ್ಟು ದಿನಗಳಾದರೂ ವಿರೋಧಪಕ್ಷದ ನಾಯಕ ಯಾರೆಂದು ಮತದಾರರಿಗೆ ಇನ್ನೂ ತಿಳಿಯಲಿಲ್ಲ. ರಾಜ್ಯದಲ್ಲಿ ರಚನಾತ್ಮಕ ಹಾಗೂ ಸಂಘಟನಾತ್ಮಕ ಪ್ರತಿಪಕ್ಷವಾಗಿ ಕೆಲಸ ಮಾಡಬೇಕಾದ ರಾಜ್ಯದ ಈ ನಾಯಕರು, ಕೇಂದ್ರದಲ್ಲಿ ನರೇಂದ್ರ ಮೋದಿ ಅವರ ಜನಪ್ರಿಯತೆಯನ್ನೇ ಹೊಗಳುತ್ತಾ ಹೋಗಿ ಕ್ರಮೇಣ ತಾವೇ ಶೂನ್ಯ ಸೇರುವಂತಹ ಪರಿಸ್ಥಿತಿ ಆಗಬಾರದು.

ತಾ.ಸಿ.ತಿಮ್ಮಯ್ಯ, ಬೆಂಗಳೂರು

ಕಲಾವಿದರೆಡೆ ನಿರ್ಲಕ್ಷ್ಯ ಸಲ್ಲದು

ಚಿತ್ರರಂಗದ ಹಿರಿಯ ಗಾನ ಕೋಗಿಲೆಗಳಾದ ಎಲ್.ಆರ್.ಈಶ್ವರಿ ಮತ್ತು ಪಿ.ಸುಶೀಲಾ ಅವರಿಗೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಸಂಗೀತ ರತ್ನ ವಿದ್ಯಾಲಯ ಹಾಗೂ ಚಿ. ಉದಯಶಂಕರ್ ಪ್ರತಿಷ್ಠಾನದ ಸಹಯೋಗದಲ್ಲಿ ಸನ್ಮಾನ ಸಮಾರಂಭವನ್ನು ಭಾನುವಾರ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ಆನಂದಿಸಲು ಮತ್ತು ಗಾಯಕ ಸಾಧಕಿಯರನ್ನು ಕಣ್ತುಂಬಿಕೊಳ್ಳಲು ಅಪಾರ ಸಂಖ್ಯೆಯ ಅಭಿಮಾನಿಗಳು ಸೇರಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾರ್ಯಕ್ರಮವನ್ನು ಉದ್ಘಾಟಿಸಬೇಕೆಂದು ನಿಗದಿ ಆಗಿತ್ತು. ಆದರೆ, 'ಆರೋಗ್ಯದಲ್ಲಿ ವ್ಯತ್ಯಾಸ ಆಗಿರುವುದರಿಂದ ಮುಖ್ಯಮಂತ್ರಿಯವರು ಕಾರ್ಯಕ್ರಮಕ್ಕೆ ಬರಲಾಗದೆ ಶುಭ ಸಂದೇಶವನ್ನು ಕಳಿಸಿದ್ದಾರೆ' ಎಂದು ಆಯೋಜಕರು ತಿಳಿಸಿದರು. ಸಮಸ್ತ ಕನ್ನಡಿಗರ ಪರವಾಗಿ ಮುಖ್ಯಮಂತ್ರಿಯವರು ಸಾಧಕಿಯರನ್ನು ಸನ್ಮಾನಿಸಬೇಕಿತ್ತು. ಖುದ್ದು ತಾವು ಬರಲಾಗದ ಪರಿಸ್ಥಿತಿಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಸಚಿವರನ್ನಾದರೂ ಅವರು ಕಳಿಸಬೇಕಿತ್ತು ಅಥವಾ ಸರ್ಕಾರದ ಪ್ರತಿನಿಧಿಯಾಗಿ ಹಿರಿಯ ಅಧಿಕಾರಿಗಳಾದರೂ ಬರಬೇಕಿತ್ತು. ಸರ್ಕಾರದಿಂದ ಯಾವ ಪ್ರತಿನಿಧಿಯೂ ಇಲ್ಲದಿದ್ದುದು ಸಭಿಕರಿಗೆ ಬೇಸರ ತಂದಿತು. ನೂರಾರು ಕಿ.ಮೀ. ದೂರದಿಂದ ಆಗಮಿಸಿದ್ದ ಆ ಹಿರಿಯ ಜೀವಗಳಿಗೂ ಈ ಕುರಿತು ಬೇಸರ ಆಗಿರುವ ಸಾಧ್ಯತೆ ಇದೆ. ಕಲಾವಿದರನ್ನು ಈ ರೀತಿ ಕಡೆಗಣಿಸುವುದು ಸರ್ಕಾರದ ಘನತೆಗೆ ತಕ್ಕುದಲ್ಲ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮತ್ತೆ ಮತ್ತೆ ಮೈತ್ರಿ ರಾಜಕಾರಣ

ಲೋಕಸಭೆ ಚುನಾವಣೆ ಹತ್ತಿರವಾಗುತ್ತಿರುವ ಈ ಹೊತ್ತಿನಲ್ಲಿ ಬಿಜೆಪಿ, ಕಾಂಗ್ರೆಸ್ ಮೈತ್ರಿಕೂಟ ವಿಸ್ತರಣೆಗೆ ಮುಂದಾಗಿವೆ. ಭಾರತಕ್ಕೆ ರಾಷ್ಟ್ರಮಟ್ಟದಲ್ಲಿ ಮೈತ್ರಿ ರಾಜಕಾರಣ ಹೊಸ ವಿಚಾರ ಅಲ್ಲ. 60–70ರ ದಶಕದಲ್ಲೇ ಮೈತ್ರಿಕೂಟ ರಚನೆಯಾಗಿತ್ತು. ಕೇಂದ್ರದಲ್ಲಿ ಪ್ರಬಲ ಪಕ್ಷದ ಬಹುಮತದ ಸರ್ಕಾರ ಇದ್ದಾಗ, ಅದರ ನೀತಿಗಳ ವಿರುದ್ಧ ವಿರೋಧ ಪಕ್ಷಗಳು ಒಟ್ಟಾಗಿದ್ದು ಭಾರತದಲ್ಲಿ ಹಲವು ಬಾರಿ ನಡೆದಿದೆ. ಈಗ ಮತ್ತೆ ಅಂಥದ್ದೇ ಪ್ರಯತ್ನ ನಡೆಯುತ್ತಿದೆ.ಈಚಿನ ವರ್ಷಗಳಲ್ಲಿ ರಾಷ್ಟ್ರ ರಾಜಕಾರಣದಲ್ಲಿ ಏಕಪಕ್ಷದ ಪಾರಮ್ಯವೇ ಇರಲಿದೆ ಎಂಬ ಅಭಿಪ್ರಾಯ ವ್ಯಕ್ತವಾಗಿತ್ತಾದರೂ, ಎರಡು ಪ್ರಮುಖ ರಾಷ್ಟ್ರೀಯ ಪಕ್ಷಗಳಾದ ಬಿಜೆಪಿ ಮತ್ತು ಕಾಂಗ್ರೆಸ್ ಮೈತ್ರಿಕೂಟದ ಮೊರೆ ಹೋಗುತ್ತಿವೆ

ಪ್ರಜಾವಾಣಿ ವಾರ್ತೆ

1971: ಮೊದಲ ಮೈತ್ರಿಕೂಟ

ಜವಾಹರಲಾಲ್ ನೆಹರೂ ಅವರ ನಿಧನದ ನಂತರ ಇಂದಿರಾ ಗಾಂಧಿ ಅವರು ಪ್ರಧಾನಿಯಾಗಿದ್ದು, ಪಕ್ಷದಲ್ಲಿ ಬಿಗಿಹಿಡಿತ ಸಾಧಿಸಿದ್ದು ಕಾಂಗ್ರೆಸ್ ಒಳಗೇ ಅಸಮಾಧಾನಕ್ಕೆ ಕಾರಣವಾಗಿತ್ತು. ಸಾರ್ವಜನಿಕವಾಗಿ ಈ ಅತೃಪ್ತಿ ಹಲವು ಬಾರಿ, ಹಲವು ಸ್ವರೂಪದಲ್ಲಿ ವ್ಯಕ್ತವಾಗಿತ್ತು. ಕಾಂಗ್ರೆಸ್‌ನಲ್ಲಿನ ಈ ಒಳಬೇಗುದಿಯೇ ನಂತರದ ವರ್ಷಗಳಲ್ಲಿ ದೇಶದಲ್ಲಿ ಚುನಾವಣಾಪೂರ್ವ ಮೈತ್ರಿಕೂಟ ರೂಪುಗೊಳ್ಳಲು ಕಾರಣವಾಯಿತು ಎಂಬುದಕ್ಕೆ ಭಾರತವು ಸಾಕ್ಷಿಯಾಗಿದೆ.

1967ರ ಲೋಕಸಭಾ ಚುನಾವಣೆಯಲ್ಲೇ ಇಂದಿರಾ ಅವರ ವಿರುದ್ಧ ಅತೃಪ್ತಿ ಕೇಳಿಬಂದಿತ್ತಾದರೂ, ಚುನಾವಣೆಯಲ್ಲಿ ಕಾಂಗ್ರೆಸ್ ಬಹುಮತ ಸಾಧಿಸಿತ್ತು. ಆ ಕ್ಷಣಕ್ಕೆ ಒಡಕು ಹಿನ್ನೆಲೆಗೆ ಸರಿದಿತ್ತು. ಆದರೆ ದಿನದಿಂದ ದಿನಕ್ಕೆ ಪಕ್ಷದಲ್ಲಿ ಇಂದಿರಾ ಅವರ ಹಿಡಿತ ಹೆಚ್ಚಾಯಿತು. ಪಕ್ಷದ ಇತರ ನಾಯಕರು ಇದನ್ನು ದಬ್ಬಾಳಿಕೆ ಎಂದೇ ಭಾವಿಸಿದರು. ಈ ಎಲ್ಲಾ ಅಸಮಾಧಾನಗಳು, ಇಂದಿರಾ ಸರ್ಕಾರದ ನೀತಿಗಳ ಕಾರಣದಿಂದ ಇನ್ನಷ್ಟು ತೀವ್ರ ಸ್ವರೂಪ ಪಡೆಯಿತು. ಬ್ಯಾಂಕ್‌ಗಳ ರಾಷ್ಟ್ರೀಕರಣದಂತಹ ಕ್ರಮಗಳು ಕಾಂಗ್ರೆಸ್ ಎಡಚಿಂತನೆಯತ್ತ ವಾಲುತ್ತಿರುವುದರ ಪ್ರತೀಕ ಎಂಬುದು ಕೆಲವು ಹಿರಿಯ ಕಾಂಗ್ರೆಸ್ಸಿಗರ ಆರೋಪವಾಗಿತ್ತು. ಪಕ್ಷದ ಶಿಸ್ತನ್ನು ಉಲ್ಲಂಘಿಸಿದ ಆರೋಪದಲ್ಲಿ ಇಂದಿರಾ ಅವರನ್ನು 1969ರಲ್ಲಿ ಕಾಂಗ್ರೆಸ್‌ನಿಂದ ಉಚ್ಚಾಟಿಸಲಾಗಿತ್ತು. ಇದು ಹಿರಿಯ ಕಾಂಗ್ರೆಸ್ಸಿಗರಿದ್ದ ಕಾಂಗ್ರೆಸ್ (ಸಂಸ್ಥಾ) ಮತ್ತು ಇಂದಿರಾ ನೇತೃತ್ವದ ಕಾಂಗ್ರೆಸ್ (ಆರ್) ಸ್ಥಾಪನೆಗೆ ಕಾರಣವಾಯಿತು.

ಇಂದಿರಾ ಗಾಂಧಿ ಅವರ ನಿಲುವುಗಳನ್ನು ವಿರೋಧಿಸಿದ್ದ ಹಿರಿಯ ಕಾಂಗ್ರೆಸ್ಸಿಗರು ಸಂಸ್ಥಾ ಕಾಂಗ್ರೆಸ್‌ನಲ್ಲಿ ಉಳಿದರು ಮತ್ತು ಹೊಸ ತಲೆಮಾರಿನ ಕಾಂಗ್ರೆಸ್ಸಿಗರು ಇಂದಿರಾ ನೇತೃತ್ವದ ಕಾಂಗ್ರೆಸ್ (ಆರ್) ಸೇರಿದರು. 1971ರ ಲೋಕಸಭಾ ಚುನಾವಣೆ ಘೋಷಣೆಯಾದಾಗ ಇಂದಿರಾ ಕಾಂಗ್ರೆಸ್ (ಆರ್) ಏಕಾಂಗಿಯಾಗಿ ಕಣಕ್ಕೆ ಇಳಿದಿತ್ತು. ಅದರ ವಿರುದ್ಧ ಸಂಸ್ಥಾ ಕಾಂಗ್ರೆಸ್ ನೇತೃತ್ವದಲ್ಲಿ ನಾಲ್ಕು ಪಕ್ಷಗಳು ಒಟ್ಟಾಗಿ ಜನತಾ ಮೋರ್ಚಾ ಎಂಬ ಹೆಸರಿನಲ್ಲಿ ಚುನಾವಣಾ ಕಣಕ್ಕೆ ಇಳಿದವು.

ಮೊರಾರ್ಜಿ ದೇಸಾಯಿ ನೇತೃತ್ವದ ಸಂಸ್ಥಾ ಕಾಂಗ್ರೆಸ್, ಸ್ವತಂತ್ರ ಪಾರ್ಟಿ, ಜನಸಂಘ ಪಾರ್ಟಿ, ಸಂಯುಕ್ತ ಸೋಷಿಯಲಿಸ್ಟ್ ಪಾರ್ಟಿ ಸೇರಿ ಜನತಾ ಮೋರ್ಚಾ ಎಂಬ ಮೈತ್ರಿಕೂಟವನ್ನು ಮಾಡಿಕೊಂಡವು. ಭಾರತದ ಚುನಾವಣಾ ಇತಿಹಾಸದಲ್ಲಿ ಇದೇ ಮೊದಲ ಚುನಾವಣಾ ಪೂರ್ವ ಮೈತ್ರಿಕೂಟ ಎನಿಸಿದೆ. ಇಂದಿರಾ ನೇತೃತ್ವದ ಕಾಂಗ್ರೆಸ್ (ಆರ್) 'ಬಡತನ ತೊಲಗಿಸಿ' ಎಂದು ಕಣಕ್ಕೆ ಇಳಿದರೆ, ಜನತಾ ಮೋರ್ಚಾ ಮೈತ್ರಿಕೂಟವು 'ಇಂದಿರಾ ತೊಲಗಿಸಿ' ಎಂದು ಕಣಕ್ಕೆ ಇಳಿದಿತ್ತು. ಆದರೆ, ಮೈತ್ರಿಕೂಟವು 46 ಸ್ಥಾನಗಳಲ್ಲಿ ಮಾತ್ರ ಗೆಲುವು ಸಾಧಿಸುವಲ್ಲಿ ಯಶಸ್ವಿಯಾಗಿತ್ತು.

1977: ಮೊದಲ ಮೈತ್ರಿಸರ್ಕಾರ



ಮೊರಾರ್ಜಿ ದೇಸಾಯಿ



ಚರಣ್ ಸಿಂಗ್

1971–1977ರ ಮಧ್ಯೆ ಇಂದಿರಾ ನೇತೃತ್ವದ ಸರ್ಕಾರದ ನೀತಿಗಳ ವಿರುದ್ಧ ದೇಶದಾದ್ಯಂತ ಭಾರಿ ಅಸಮಾಧಾನ ಸೃಷ್ಟಿಯಾಗಿತ್ತು. ತುರ್ತುಪರಿಸ್ಥಿತಿ ಹೇರಿದ್ದು, ಸರ್ಕಾರದ ಟೀಕಾಕಾರರನ್ನು, ವಿರೋಧಿಗಳನ್ನು, ವಿಪಕ್ಷಗಳ ನಾಯಕರನ್ನು ಸೆರೆಮನೆಗೆ ಹಾಕಿದ್ದು, ಇಂದಿರಾ ಸರ್ಕಾರದ ವಿರುದ್ಧ ಜನರ ಸಿಟ್ಟನ್ನು ಮತ್ತಷ್ಟು ತೀವ್ರಗೊಳಿಸಿತ್ತು. ಸೆರೆಮನೆಯಲ್ಲಿದ್ದ ಎಲ್ಲಾ ನಾಯಕರನ್ನು 1976ರಲ್ಲಿ ಸರ್ಕಾರವು ಬಿಡುಗಡೆ ಮಾಡಿತ್ತು. ಸೆರೆಮನೆಯಿಂದ ಹೊರಬಂದ ವಿರೋಧ ಪಕ್ಷಗಳ ನಾಯಕರು, ಸರ್ಕಾರದ ವಿರುದ್ಧ ಹೋರಾಟಕ್ಕೆ ಇಳಿದರು. ಈ ಹೋರಾಟಕ್ಕೆ ವ್ಯಾಪಕ ಬೆಂಬಲ ವ್ಯಕ್ತವಾಯಿತು. ಒಂದೆಡೆ ಸರ್ಕಾರದ ನೀತಿಗಳ ವಿರುದ್ಧ ಜಯಪ್ರಕಾಶ್ ನಾರಾಯಣ್ ಅವರ ಸಂಪೂರ್ಣ ಕ್ರಾಂತಿ ಚಳವಳಿ ನಡೆಯುತ್ತಿತ್ತು. ಮೊರಾರ್ಜಿ ದೇಸಾಯಿ ನೇತೃತ್ವದಲ್ಲಿ ಸಂಸ್ಥಾ ಕಾಂಗ್ರೆಸ್, ಭಾರತೀಯ ಜನಸಂಘ, ಭಾರತೀಯ ಲೋಕದಳ, ಪ್ರಜಾ ಸೋಷಿಯಲಿಸ್ಟ್ ಪಾರ್ಟಿ ಸೇರಿ ಚುನಾವಣಾಪೂರ್ವ ಮೈತ್ರಿಕೂಟವನ್ನು ರಚಿಸಿಕೊಂಡವು. ಈ ಮೈತ್ರಿಕೂಟವನ್ನು 'ಜನತಾ ಪಾರ್ಟಿ' ಎಂದು ಕರೆಯಲಾಯಿತು. ಇಂದಿರಾ ಸರ್ಕಾರದ ವಿರುದ್ಧ ಸಂಸತ್ತಿನ ಒಳಗೂ ಮತ್ತು ಹೊರಗೂ ಈ ಮೈತ್ರಿಕೂಟವು ಹೋರಾಟಕ್ಕೆ ಇಳಿದಿತ್ತು. ಸಿಪಿಎಂ, ಶಿರೋಮಣಿ ಅಕಾಲಿ ದಳ, ಫಾರ್ವರ್ಡ್ ಬ್ಲಾಕ್, ರಿಪಬ್ಲಿಕನ್ ಪಾರ್ಟಿ, ಪಿಡಬ್ಲ್ಯುಪಿ, ಆರ್‌ಎಸ್‌ಪಿಗಳು ಈ ಮೈತ್ರಿಕೂಟವನ್ನು ಬೆಂಬಲಿಸಿದವು. ಉತ್ತರ ಭಾರತದ ರಾಜ್ಯಗಳಲ್ಲಿ ಮೈತ್ರಿಕೂಟಕ್ಕೆ ವ್ಯಾಪಕ ಬೆಂಬಲ ದೊರೆಯಿತು. ಇಂದಿರಾ ಅವರ ಕಾಂಗ್ರೆಸ್‌ಗೆ ಹೆಚ್ಚು ಸ್ಥಾನಗಳು ದೊರೆತದ್ದು ದಕ್ಷಿಣದ ರಾಜ್ಯಗಳಲ್ಲಿ ಮಾತ್ರ. ಐದು ಪಕ್ಷಗಳ 'ಜನತಾ ಪಾರ್ಟಿ'ಯು 1977ರ ಚುನಾವಣೆಯಲ್ಲಿ 298 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿತು. ಆ ಮೂಲಕ ಬಹುಮತ ಪಡೆದು, ಸರ್ಕಾರ ರಚಿಸಿತು.

ಮೊರಾರ್ಜಿ ದೇಸಾಯಿ ದೇಶದ ಮೊದಲ ಕಾಂಗ್ರೆಸ್ಸೇತರ ಪಕ್ಷದ ಪ್ರಧಾನಿಯಾದರು. ಜನತಾ ಪಾರ್ಟಿಯು ರಚಿಸಿದ ಸರ್ಕಾರವು, ದೇಶದ ಮೊದಲ ಕಾಂಗ್ರೆಸ್ಸೇತರ ಸರ್ಕಾರವಾಯಿತು. ಜತೆಗೆ ದೇಶದ ಮೊದಲ ಮೈತ್ರಿಕೂಟ ಸರ್ಕಾರ ಎಂಬ ಹೆಗ್ಗಳಿಕೆಯನ್ನೂ ಪಡೆಯಿತು. ಆದರೆ, ಆಂತರಿಕ ಅಸಮಾಧಾನ, ಭಿನ್ನಾಭಿಪ್ರಾಯಗಳ ಕಾರಣದಿಂದ ಮೈತ್ರಿಕೂಟ ದುರ್ಬಲವಾಯಿತು. 1979ರಲ್ಲಿ ದೇಸಾಯಿ ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಿದರು, ನಂತರ ಚೌಧರಿ ಚರಣ್ ಸಿಂಗ್ ಪ್ರಧಾನಿಯಾದರು. ಆದರೆ, ಕೆಲವೇ ತಿಂಗಳಲ್ಲಿ ಅವರೂ ರಾಜೀನಾಮೆ ನೀಡಿದರು. ಆನಂತರ ಅದೇ ವರ್ಷದಲ್ಲಿ ಲೋಕಸಭೆಯನ್ನು ವಿಸರ್ಜಿಸಲಾಯಿತು.

ತೃತೀಯ ರಂಗ

1989ರಲ್ಲಿ ಹುಟ್ಟಿಕೊಂಡ ತೃತೀಯ ರಂಗ ಎನ್ನುವ ಪರಿಕಲ್ಪನೆಯೇ ಭಾರತೀಯ ರಾಜಕಾರಣದಲ್ಲಿ ಹೊಸ ಸಂಚಲನ ಸೃಷ್ಟಿಸಿತ್ತು. ಕಾಂಗ್ರೆಸ್ ಪಕ್ಷದ ಪ್ರಾಬಲ್ಯವನ್ನು ಕುಗ್ಗಿಸಿದ್ದು ಇದೇ ತೃತೀಯ ರಂಗ. 1989ರಲ್ಲಿ ರಾಷ್ಟ್ರೀಯ ರಂಗ ಹಾಗೂ 1996ರಲ್ಲಿ ಸಂಯುಕ್ತ ರಂಗವು ಕೆಲವು ವರ್ಷಗಳ ಕಾಲ ಅಧಿಕಾರದಲ್ಲಿದ್ದವು. ಕಾಂಗ್ರೆಸ್ ಮತ್ತು ಬಿಜೆಪಿಯನ್ನು ವಿರೋಧಿಸುವುದು ಈ ರಂಗ ರಚನೆಯ ಹಿಂದಿನ ಉದ್ದೇಶವಾಗಿತ್ತು. ಆದರೆ, ಕಾಂಗ್ರೆಸ್ ಹಾಗೂ ಬಿಜೆಪಿ ಪಕ್ಷಗಳು ಈ ಸರ್ಕಾರಗಳಿಗೆ ಪ್ರತ್ಯೇಕ ಸಂದರ್ಭಗಳಲ್ಲಿ ಬಾಹ್ಯ ಬೆಂಬಲ ನೀಡಿದ್ದವು.

ರಾಷ್ಟ್ರೀಯ ರಂಗ

ಪ್ರಮುಖ ಪಕ್ಷಗಳು
ಟಿಡಿಪಿ
ಡಿಎಂಕೆ
ಅಸ್ಸಾಂ ಗಣ ಪರಿಷತ್
ಎಡಪಕ್ಷಗಳು

ವಿ.ಪಿ. ಸಿಂಗ್ ಅವರು ರಾಜೀವ್ ಗಾಂಧಿ ಅವರ ಸರ್ಕಾರದಲ್ಲಿ ರಕ್ಷಣಾ ಸಚಿವರಾಗಿದ್ದರು. ಹಗರಣವೊಂದರ ಕಾರಣದಿಂದ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಈ ಬಳಿಕ ರಾಜೀವ್ ಗಾಂಧಿ ನೇತೃತ್ವದ ಸರ್ಕಾರದ ಮೇಲೆ ಬೊಫೋರ್ಸ್ ಹಗರಣದ ಆರೋಪ ದಟ್ಟವಾಗಿ ಕೇಳಿಬಂತು. ಸಿಂಗ್ ಅವರು 1987ರಲ್ಲಿ ಜನ ಮೋರ್ಚಾವನ್ನು ರಚಿಸಿದರು. ಬಿಜೆಪಿ ಮತ್ತು ಕೆಲವು ಎಡ ಪಕ್ಷಗಳು ಜನ ಮೋರ್ಚಾದೊಂದಿಗೆ ಕೈ ಜೋಡಿಸಿದವು. 1988ರಲ್ಲಿ ಜನ್ ಮೋರ್ಚಾ, ಕಾಂಗ್ರೆಸ್ (ಸೋಷಿಯಲಿಸ್ಟ್), ಲೋಕದಳ ಪಕ್ಷಗಳೊಂದಿಗೆ ಸೇರಿ ಸಿಂಗ್ ಅವರು ರಾಷ್ಟ್ರೀಯ ರಂಗವನ್ನು ಹುಟ್ಟುಹಾಕಿದರು.

ಚುನಾವಣೆಗೂ ಮುನ್ನ ರಾಷ್ಟ್ರೀಯ ರಂಗ ಹಾಗೂ ಬಿಜೆಪಿ ಮಧ್ಯೆ ಕೆಲವು ಒಪ್ಪಂದಗಳು ಏರ್ಪಟ್ಟವು. ಚುನಾವಣೆ ನಡೆದು, ಫಲಿತಾಂಶದಲ್ಲಿ ಯಾವ ಪಕ್ಷಕ್ಕೂ ಬಹುಮತ ದೊರಕಲಿಲ್ಲ. ಆಗ ಬಿಜೆಪಿಯ ಬಾಹ್ಯ ಬೆಂಬಲದೊಂದಿಗೆ ರಾಷ್ಟ್ರೀಯ ರಂಗದ ವಿ.ಪಿ. ಸಿಂಗ್ ಅವರು ಪ್ರಧಾನಿಯಾದರು. ಆದರೆ, ಮಂಡಲ್ ಆಯೋಗದ ಶಿಫಾರಸುಗಳ ಜಾರಿಗೆ ಯತ್ನ, ಎಲ್.ಕೆ. ಅಡ್ವಾಣಿ ಅವರ ರಥಯಾತ್ರೆ, ಅಡ್ವಾಣಿ ಅವರ ಬಂಧನದ ಕಾರಣಗಳಿಂದ 1990ರಲ್ಲಿ ಬಿಜೆಪಿಯು ತನ್ನ ಬಾಹ್ಯ ಬೆಂಬಲವನ್ನು ವಾಪಸು ಪಡೆಯಿತು. ನಂತರ 1990ರಲ್ಲಿ ಚಂದ್ರಶೇಖರ್ ಅವರಿಗೆ ಕಾಂಗ್ರೆಸ್ ಪಕ್ಷವು ಬಾಹ್ಯ ಬೆಂಬಲ ನೀಡಿತು. ನಂತರ 1991ರಲ್ಲಿ ಕಾಂಗ್ರೆಸ್ ತನ್ನ ಬೆಂಬಲವನ್ನು ವಾಪಸು ಪಡೆದುಕೊಂಡಿತು.

ವಿ.ಪಿ. ಸಿಂಗ್

ಎಚ್‌.ಡಿ. ದೇವೇಗೌಡ

ಸಂಯುಕ್ತ ರಂಗ

ಪ್ರಮುಖ ಪಕ್ಷಗಳು
ಜನತಾ ದಳ
ಸಮಾಜವಾದಿ ಪಕ್ಷ
ಡಿಎಂಕೆ
ಟಿಡಿಪಿ
ಅಸ್ಸಾಂ ಗಣ ಪರಿಷತ್
ಆಲ್ ಇಂಡಿಯಾ ಇಂದಿರಾ ಕಾಂಗ್ರೆಸ್ (ತಿವಾರಿ)
ಎಡಪಕ್ಷಗಳು
ನ್ಯಾಷನಲ್ ಕಾನ್ಫರೆನ್ಸ್

1996ರಲ್ಲಿ ಚುನಾವಣೋತ್ತರವಾಗಿ ಹುಟ್ಟಿಕೊಂಡದ್ದು ಸಂಯುಕ್ತ ರಂಗ. ಬಿಜೆಪಿಯನ್ನು ಅಧಿಕಾರದಿಂದ ದೂರ ಇಡಬೇಕು ಎನ್ನುವ ಕಾರಣದಿಂದ ಕಾಂಗ್ರೆಸ್ ಪಕ್ಷದ ಬಾಹ್ಯ ಬೆಂಬಲದೊಂದಿಗೆ ಜನತಾದಳದ ಎಚ್‌.ಡಿ. ದೇವೇಗೌಡ ಅವರು ಪ್ರಧಾನಿಯಾದರು.

ಚುನಾವಣಾ ಫಲಿತಾಂಶದಲ್ಲಿ ಬಿಜೆಪಿ ಹೆಚ್ಚಿನ ಸ್ಥಾನಗಳನ್ನು ಗೆದ್ದುಕೊಂಡಿತ್ತು. ಆದರೆ, ಸರ್ಕಾರ ರಚನೆಗೆ ಬಹುಮತ ಇರಲಿಲ್ಲ. ರಾಷ್ಟ್ರಪತಿ ಅವರು ಬಿಜೆಪಿಯನ್ನು ಸರ್ಕಾರ ರಚನೆಗೆ ಕರೆದರು. ಅಟಲ್ ಬಿಹಾರಿ ವಾಜಪೇಯಿ ಅವರು ಪ್ರಧಾನಿಯೂ ಆದರು. ಆದರೆ, ಸಂಸತ್ತಿನಲ್ಲಿ ವಿಶ್ವಾಸಮತ ಗಳಿಸುವಲ್ಲಿ ಸೋತರು. ಬಳಿಕ ರಾಷ್ಟ್ರಪತಿ ಅವರು ನಂತರದ ಹೆಚ್ಚಿನ ಸದಸ್ಯ ಬಲದ ಸಂಯುಕ್ತ ರಂಗಕ್ಕೆ ಸರ್ಕಾರ ರಚನೆಗೆ ಕರೆದರು. ಆಗ ಕಾಂಗ್ರೆಸ್‌ನ ಬಾಹ್ಯ ಬೆಂಬಲದೊಂದಿಗೆ ದೇವೇಗೌಡರು ಸರ್ಕಾರ ರಚಿಸಿದರು. ಆದರೆ, ಈ ಸರ್ಕಾರವು ಹೆಚ್ಚು ವರ್ಷ ಬಾಳಲಿಲ್ಲ. ಐ.ಕೆ. ಗುಜ್ರಾಲ್ ಅವರನ್ನು ಪ್ರಧಾನಿ ಮಾಡಬೇಕೆಂದು ಕಾಂಗ್ರೆಸ್ ಪಟ್ಟುಹಿಡಿಯಿತು. ನಂತರ 1997ರಲ್ಲಿ ಗುಜ್ರಾಲ್ ಅವರು ಪ್ರಧಾನಿಯಾದರು. ಅದೇ ವರ್ಷವೇ ರಾಜೀವ್ ಗಾಂಧಿ ಹತ್ಯೆಯ ಸಂಬಂಧ ರಚಿಸಿದ್ದ ಜೈನ್ ಸಮಿತಿಯ ವರದಿ ಬಿಡುಗಡೆಯಾಯಿತು. ಈ ರಂಗದ ಭಾಗವಾಗಿದ್ದ ಡಿಎಂಕೆ ಪಕ್ಷವು ಎಲ್‌ಟಿಟಿಇ ಜೊತೆ ಸಂಬಂಧ ಹೊಂದಿದೆ. ಆದ್ದರಿಂದ ಈ ಪಕ್ಷದ ಸಚಿವರೊಬ್ಬರನ್ನು ಸಂಪುಟದಿಂದ ಕೈಬಿಡಬೇಕು ಎಂದು ಕಾಂಗ್ರೆಸ್ ಪಟ್ಟು ಹಿಡಿಯಿತು. ಇದೇ ಕಾರಣಕ್ಕೆ ಗುಜ್ರಾಲ್ ಅವರ ಸರ್ಕಾರವು ಪತನಗೊಂಡಿತು.

ಆಧಾರ: ಗ್ರಾನ್‌ವಿಲ್ ಆಸ್ಟಿನ್ ಅವರ 'ಇಂದಿರಾ ಗಾಂಧಿ ಡಿಫೀಟೆಡ್–ಜನತಾ ಫಾರ್ಮ್ಸ್ ಗವರ್ನಮೆಂಟ್' ಪುಸ್ತಕ, ಬ್ರಿಟಾನಿಕಾ ಎನ್‌ಸೈಕ್ಲೊಪೀಡಿಯಾ, ಎಂ.ಪಿ. ಸಿಂಗ್ ಅವರ 'ಇಂಡಿಯಾಸ್ ನ್ಯಾಷನಲ್ ಫ್ರಂಟ್ ಅಂಡ್ ಯುನೈಟೆಡ್ ಫ್ರಂಟ್ ಕೊಯಲಿಷನ್ ಗವರ್ನಮೆಂಟ್ಸ್' ಲೇಖನ, ಚುನಾವಣಾ ಆಯೋಗ

ಸಿನಿ ಬಿಟ್ಸ್

'ಟಗರು' ಸಿನಿಮಾದಲ್ಲಿನ ನಟನೆ ಬಳಿಕ ಸ್ಯಾಂಡಲ್‌ವುಡ್‌ನ 'ಟಗರು ಪುಟ್ಟಿ'ಯಾದ ನಟಿ ಮಾನ್ವಿತ ಕಾಮತ್ ನಟನೆಯಿಂದ ಕೊಂಚ ಬಿಡುವು ಪಡೆದಿದ್ದರು. ಇದೀಗ ಬ್ಯಾಕ್ ಟು ಬ್ಯಾಕ್ ಸಿನಿಮಾಗಳನ್ನು ಒಪ್ಪಿಕೊಳ್ಳುತ್ತಿರುವ ಮಾನ್ವಿತ ಹಳ್ಳಿ ಹುಡ್ಗಿಯಾಗಿ ತೆರೆಗೆ ಬರಲು ಸಜ್ಜಾಗಿದ್ದಾರೆ.

'ಲವ್ ಬರ್ಡ್ಸ್' ಸಿನಿಮಾ ಬಳಿಕ ಪಿ.ಸಿ. ಶೇಖರ್ ಆ್ಯಕ್ಷನ್ ಕಟ್ ಹೇಳುತ್ತಿರುವ ಹೊಸ ಚಿತ್ರ 'BAD'. ಈ ಚಿತ್ರದಲ್ಲಿ ಮಾನ್ವಿತ ನಟಿಸುತ್ತಿದ್ದು, ಅವರ ಪಾತ್ರದ ಫಸ್ಟ್‌ಲುಕ್ ಬಿಡುಗಡೆಯಾಗಿದೆ. ಚಿತ್ರದಲ್ಲಿ ನಾಯಕನಾಗಿ ನಕುಲ್ ಗೌಡ ನಟಿಸಿದ್ದಾರೆ. 'BAD ಚಿತ್ರದಲ್ಲಿ ಮಾನ್ವಿತ ಅವರ ಪಾತ್ರದ ಹೆಸರು ಪವಿತ್ರ(ಪವಿ). ತುಂಬಾ ಬೋಲ್ಡ್ ಕ್ಯಾರೆಕ್ಟರ್ ಅವರದು. ಹಳ್ಳಿಯ ಹಿನ್ನೆಲೆಯಲ್ಲಿ ಪವಿತ್ರಳ ಕಥೆ ಸಾಗುತ್ತದೆ. ಕಾಮ, ಕ್ರೋಧ ಸೇರಿದಂತೆ ಅರಿಷಡ್ವರ್ಗಗಳನ್ನು ಪ್ರತಿನಿಧಿಸುವ ಆರು ಪಾತ್ರಗಳು ನಮ್ಮ ಚಿತ್ರದಲ್ಲಿದೆ. ಈ ಆರು ಪಾತ್ರಗಳಲ್ಲದೆ ಇನ್ನೊಂದು ಪಾತ್ರವಿದ್ದು, ಅದುವೇ ಮಾನ್ವಿತ ಅವರ ಪಾತ್ರ' ಎನ್ನುತ್ತಾರೆ ಪಿ.ಸಿ.ಶೇಖರ್.

'ಯಾವುದಕ್ಕೂ ಅಂಜದ, ಬೋಲ್ಡ್ ಹುಡುಗಿಯ ಪಾತ್ರ ನನ್ನದು. ನಿರ್ದೇಶಕ ಸೂರಿ ಅವರು ಚಿತ್ರದಲ್ಲಿನ ಪಾತ್ರಗಳ ಉಡುಪಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಾರೆ. ಅದೇ ರೀತಿ ಪಿ.ಸಿ.ಶೇಖರ್ ಅವರೂ ಕಾಸ್ಟ್ಯೂಮ್ಸ್‌ಗೆ ಹೆಚ್ಚು ಒತ್ತು ಕೊಟ್ಟಿದ್ದಾರೆ. ನಾನು ಈವರೆಗೂ ಮಾಡಿರದ ಪಾತ್ರದಲ್ಲಿ ನಟಿಸುತ್ತಿದ್ದೇನೆ' ಎಂದರು ಮಾನ್ವಿತ.

ಎಸ್. ಆರ್. ವೆಂಕಟೇಶ್ ಗೌಡ ನಿರ್ಮಾಣದ ಈ ಚಿತ್ರಕ್ಕೆ ಅರ್ಜುನ್ ಜನ್ಯ ಸಂಗೀತ ನಿರ್ದೇಶನ, ಪಿ.ಸಿ.ಶೇಖರ್ ಸಂಕಲನ ಹಾಗೂ ಶಕ್ತಿ ಶೇಖರ್ ಛಾಯಾಚಿತ್ರಗ್ರಹಣವಿದೆ. ಸಚಿನ್ ಬಿ. ಹೊಳಗುಂಡಿ ಸಂಭಾಷಣೆ ಬರೆದಿದ್ದಾರೆ. ಜಿ.ರಾಜಶೇಖರ್ ಅವರ ಕಲಾ ನಿರ್ದೇಶನ ಚಿತ್ರಕ್ಕಿದೆ. 'ಪ್ರೀತಿಯ ರಾಯಭಾರಿ' ಚಿತ್ರದಲ್ಲಿ ನಾಯಕನಾಗಿ ನಟಿಸಿದ್ದ ನಕುಲ್ ಗೌಡ, ಮಾನ್ವಿತ, ಸಾಯಿ ಕೃಷ್ಣ, ಅಪೂರ್ವ ಭಾರದ್ವಾಜ್, ಮಂಜುನಾಥ್, ಅಶ್ವಿನಿ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ.

'ಈ ಹುಡ್ಗಿ ಎಷ್ಟು ಚೆಂದ' ಎಂದಿದ್ಯಾರು?

ಚಂದನವನದ ಕನಸಿನ ರಾಣಿ ಮಾಲಾಶ್ರೀ ಹಾಗೂ ಬಿಗ್‌ಬಾಸ್ ಖ್ಯಾತಿಯ ಭೂಮಿ ಶೆಟ್ಟಿ ನಟನೆಯ ಹೊಸ ಸಿನಿಮಾ 'ಕೆಂಡದ ಸೆರಗು' ಬಿಡುಗಡೆಗೆ ಸಜ್ಜಾಗುತ್ತಿದೆ. ಈ ಹೊಸ್ತಿಲಲ್ಲೇ ಚಿತ್ರದ ಎರಡನೇ ಹಾಡು 'ಈ ಹುಡ್ಗಿ ಎಷ್ಟು ಚೆಂದ' ಬಿಡುಗಡೆಯಾಗಿದೆ.

ವಿಶೇಷ ಏನೆಂದರೆ ಈ ಸಿನಿಮಾದಲ್ಲಿ ಕನ್ನಡ ಚಲನಚಿತ್ರಗಳ ಸಾರ್ವಜನಿಕ ಸಂಪರ್ಕ ಅಧಿಕಾರಿ(ಪಿಆರ್‌ಒ) ಆಗಿ ಕಾರ್ಯನಿರ್ವಹಿಸುತ್ತಿರುವ ಹರೀಶ್ ಅರಸು ಬಣ್ಣಹಚ್ಚಿದ್ದಾರೆ. ಈ ಹಾಡಿನಲ್ಲಿ ನಟ ಪೂರ್ಣಿಮಾ ಜೊತೆಗೆ ಹೆಜ್ಜೆ ಹಾಕುವ ಮೂಲಕ ತಮ್ಮ ಸಿನಿಮಾ ಕನಸನ್ನು ಹರೀಶ್ ನನಸಾಗಿಸಿದ್ದಾರೆ.

ಕಾದಂಬರಿ ಆಧಾರಿತ ಈ ಚಿತ್ರ ಶೂಟಿಂಗ್ ಪೂರ್ಣಗೊಳಿಸಿ ಸದ್ಯ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ಕುಸ್ತಿ ಸುತ್ತ ಹೆಣೆಯಲಾದ ಚಿತ್ರದಲ್ಲಿ ಮಾಲಾಶ್ರೀ ಪೊಲೀಸ್ ಕಮಿಷನರ್ ಪಾತ್ರದಲ್ಲಿ ನಟಿಸಿದ್ದು, ಭೂಮಿ ಶೆಟ್ಟಿ ಕುಸ್ತಿ ಪಟುವಾಗಿ ಬಣ್ಣಹಚ್ಚಿದ್ದಾರೆ. ಚಿತ್ರದ ನಿರ್ದೇಶಕ ರಾಕಿ ಸೋಮ್ಲಿ ಅವರೇ 'ಈ ಹುಡ್ಗಿ ಎಷ್ಟು ಚೆಂದ' ಹಾಡಿಗೆ ಸಾಹಿತ್ಯ ಬರೆದಿದ್ದಾರೆ. ಅನಿರುದ್ಧ್ ಶಾಸ್ತ್ರೀ ಅವರ ಧ್ವನಿಗೆ ವೀರೇಶ್ ಕಬ್ಲಿ ಸಂಗೀತ ನೀಡಿದ್ದಾರೆ.

ಹರೀಶ್ ಅರಸು ಮತ್ತು ಪೂರ್ಣಿಮಾ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ತ್ರಿವರ್ಣ ಧ್ವಜವನ್ನು ನೆಲದ ಮೇಲೆ ಹಾಸಿ, ಅದರ ಮೇಲೆ ವಾಹನಗಳನ್ನು ಚಲಾಯಿಸುತ್ತಿರುವ ದೃಶ್ಯವಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಅದರ ಜತೆಯಲ್ಲಿ, 'ಇದು ಕೇರಳದಲ್ಲಿನ ದೃಶ್ಯ. ಭಾರತದ ಹಿಂದೂ ಪ್ರಿಯರೇ, ಜೀವನವನ್ನು ನರಕ ಮಾಡಬೇಡಿ, ನಿಮ್ಮ ಮಕ್ಕಳು ಮೊಮ್ಮಕ್ಕಳುಗಳಿಗೆ ಅಪಾಯ ಬರುವ ಮುನ್ನ ಎಚ್ಚರಗೊಳ್ಳಿ. ಚುನಾವಣೆಯಲ್ಲಿ ಸರಿಯಾದ ಪಕ್ಷಕ್ಕೆ ಮತ ನೀಡಿ. ಇಲ್ಲದಿದ್ದಲ್ಲಿ ಕೇರಳದಲ್ಲಿ ಬಂದಿರುವ ಸ್ಥಿತಿ, ಮುಂದಿನ ದಿನ ದೇಶದ ಎಲ್ಲಾ ರಾಜ್ಯಗಳಲ್ಲೂ ಬರಬಹುದು' ಎಂಬ ಸಂದೇಶವನ್ನು ಹಂಚಿಕೊಳ್ಳಲಾಗಿದೆ. ಆದರೆ ಇದು ತಿರುಚಲಾದ ಮಾಹಿತಿ.

ಇದು ಪಾಕಿಸ್ತಾನಕ್ಕೆ ಸಂಬಂಧಿಸಿದ ವಿಡಿಯೊ. 2020ರಲ್ಲಿ ಇದನ್ನು ಮೊದಲು ಹಂಚಿಕೊಳ್ಳಲಾಗಿತ್ತು. ಕರಾಚಿಯಲ್ಲಿ ಭಾರತದ ವಿರುದ್ಧ ನಡೆದ ಪ್ರತಿಭಟನೆಯ ವೇಳೆ ಅಲ್ಲಿನ ಜನರು ಭಾರತದ ತ್ರಿವರ್ಣ ಧ್ವಜಕ್ಕೆ ಅಗೌರವ ತೋರಿಸಿದ್ದರು. ಆದರೆ, ಅದನ್ನು ಕೇರಳದ ಜನರು ಮಾಡಿದ ಕೃತ್ಯ ಎಂದು ತಪ್ಪು ಮಾಹಿತಿ ಹಂಚಿಕೊಳ್ಳಲಾಗುತ್ತಿದೆ. ಈ ಹಿಂದೆ ಇದು ತಮಿಳುನಾಡಿನ ತಂಜಾವೂರಿನ ವಿಡಿಯೊ ಎಂದೂ ತಪ್ಪು ಮಾಹಿತಿ ಹಂಚಿಕೊಳ್ಳಲಾಗಿತ್ತು ಎಂದು ಆಲ್ಟ್ ನ್ಯೂಸ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ನಿದ್ರೆಯಂತೆ ಸಾವು

ಸದ್ದು ಮಾಡದೆ ನೀನು ಜಗಕೆ ಬಂದವನಲ್ಲ |
ಒದ್ದಾಟ ಗುದ್ದಾಟ ಬಾಳೆಲ್ಲವಾಯ್ತು ||
ಗದ್ದಲವ ಬಿಡಲು ಕಡೆದಿನವಾನುಮಾದೀತೆ? |
ನಿದ್ದೆವೊಲು ಸಾವ ಪಡೆ – ಮಂಕುತಿಮ್ಮ || **929** ||

ಪದ-ಅರ್ಥ: ಬಾಳೆಲ್ಲವಾಯ್ತು = ಬಾಳೆಲ್ಲವೂ + ಆಯ್ತು, ಕಡೆದಿನವಾನುಮಾದೀತೆ = ಕಡೆದಿನವಾನುಮ್(ಕಡೆದಿನವಾದರೂ) + ಆದೀತೆ, ನಿದ್ದೆವೊಲು = ನಿದ್ರೆಯ ಹಾಗೆ.

ವಾಚ್ಯಾರ್ಥ: ಜಗಕ್ಕೆ ನೀನು ಸದ್ದು ಮಾಡದೆ ಬಂದವನಲ್ಲ. ಆಮೇಲೆಯೂ ಬದುಕೆಲ್ಲ ಒದ್ದಾಟ, ಗುದ್ದಾಟವೇ ಆಯಿತು. ಬದುಕಿನ ಕಡೆಯ ದಿನವಾದರೂ ಗದ್ದಲವನ್ನು ಬಿಡಲು ಆದೀತೆ? ನಿದ್ರೆಯಂತೆ ಸಾವನ್ನು ಪಡೆ.

ವಿವರಣೆ: ಹುಟ್ಟುವಾಗ ಬಂದ ಉಸಿರು ಸಾಯುವಾಗ ಹೋಗಿಬಿಡುತ್ತದೆ. ಉಸಿರು ಬಂದು ಹೋಗುವ ನಡುವಿನ ಸಮಯ ಬದುಕು ಎನ್ನಿಸಿಕೊಳ್ಳುತ್ತದೆ. ಹುಟ್ಟಿದೊಡನೆಯೇ ಅಳಬೇಕು. ಅದೇ ಬದುಕಿಗೆ ಮೊದಲ ಪ್ರತಿಕ್ರಿಯೆ. ಅಳದೆ ಹೋದರೆ ಸೂಲಗಿತ್ತಿ ಬೆನ್ನ ಮೇಲೆ ಪೆಟ್ಟು ಹಾಕಿ ಅಳಿಸುತ್ತಾಳೆ. ಮಗು ಅತ್ತಾಗ ಆಕೆ ನಗುತ್ತಾಳೆ, ತಾಯಿಯೂ ನಗುತ್ತಾಳೆ. ಬಹುಶ: ಮಗು ಅತ್ತಾಗ ತಾಯಿ ನಗುವುದು ಅದೊಂದೇ ಬಾರಿ. ಅಲ್ಲಿಂದ ಪ್ರಾರಂಭವಾದದ್ದು ಅಳು, ನಗುಗಳ ಸರದಿ. ಕೆಲವರಿಗೆ ಒಂದು ಹೆಚ್ಚು ಒಂದು ಕಡಿಮೆ. ಆದರೆ ಬಾಳೆಲ್ಲ ಒದ್ದಾಟವೇ. ಇಲ್ಲದ್ದಕ್ಕೆ ಕೊರಗು. ಹೆಚ್ಚು ಬಂದರೆ ಕಾಪಾಡಿಕೊಳ್ಳುವ ಭಯ. ಬಂದದ್ದರ ಚಿಂತೆ, ಬರದಿರುವುದರ ಬಗ್ಗೆ ಆತಂಕ. ಅದನ್ನೇ ಕಗ್ಗ ಹೇಳುತ್ತದೆ, "ಒದ್ದಾಟ ಗುದ್ದಾಟ ಬಾಳೆಲ್ಲವಾಯ್ತು". ಬದುಕೆಲ್ಲ ಹೀಗಾದರೆ, ಅಂತ್ಯವಾದರೂ ನಿರಾಳವಾದೀತೆ? ಹುಟ್ಟುವಾಗ ಅಮ್ಮನಿಗೆ ಅಷ್ಟು ಕಷ್ಟಕೊಟ್ಟ ಮನುಷ್ಯ ಸಾಯುವಾಗಲಾದರೂ ಸುತ್ತಮುತ್ತಲಿನವರಿಗೆ, ತನಗೆ ಸಂಕಟಕೊಡದೇ ಅನಾಯಾಸವಾಗಿ ಹೋಗಲಾದೀತೇ? ಅದು ಕೆಲವರಿಗೆ, ಪುಣ್ಯವಂತರಿಗೆ ಮಾತ್ರ ಸಾಧ್ಯ ಎನ್ನುತ್ತಾರೆ. ಒಬ್ಬ ಝೆನ್ ಗುರುವಿದ್ದ. ತನಗೆ ಸಾವು ಹತ್ತಿರ ಬಂದಿತು ಎಂಬುದು ತಿಳಿಯಿತು. ಶಿಷ್ಯರಿಗೆ ಕೇಳಿದ, "ಹೇಗೆ ಸತ್ತರೆ ಒಳ್ಳೆಯದು?". ಅವರು ಏನೇನೋ ಉತ್ತರಗಳನ್ನು ಕೊಟ್ಟರು. ಆತ ಹೇಳಿದ, "ಎಲ್ಲರ ಹಾಗೆ ಸತ್ತರೆ ಏನು ವಿಶೇಷ? ನಾನು ತಲೆ ಕೆಳಗಾಗಿ ಸಾಯುತ್ತೇನೆ". ಹಾಗೆಂದು ಕಾಲಿಗೆ ಹಗ್ಗ ಕಟ್ಟಿಕೊಂಡು ಮರದ ಕೊಂಬೆಯಿಂದ ನೇತಾಡುತ್ತ ಉಸಿರು ನಿಲ್ಲಿಸಿಬಿಟ್ಟ. ಅವನು ಸತ್ತು ಹೋದದ್ದನ್ನು ಖಾತ್ರಿ ಮಾಡಿಕೊಂಡ ಶಿಷ್ಯರು, ಅವನ ಅಕ್ಕನಿಗೆ ಸಂದೇಶ ಮುಟ್ಟಿಸಿದರು. ಆಕೆಯೂ ಒಬ್ಬ ಮಹಾನ್ ಸಾಧಕಿ, ಝೆನ್ ಸನ್ಯಾಸಿನಿ. ಆಕೆ ಕೈಯಲ್ಲೊಂದು ಕೋಲು ಹಿಡಿದುಕೊಂಡು ಧಾವಿಸಿ ಬಂದಳು. ತಲೆ ಕೆಳಗಾಗಿ ನೇತಾಡುತ್ತಿದ್ದ ತಮ್ಮನ ದೇಹಕ್ಕೆ ನಾಲ್ಕು ರಪರಪನೆ ಕೋಲಿನಿಂದ ಹೊಡೆದು, "ಛೇ, ಸಾಯುವಾಗಲಾದರೂ ಶಾಂತವಾಗಿ ಮಲಗಿ ಸಾಯಿ" ಎಂದಳು. ಆಗ ಝೆನ್ ಸನ್ಯಾಸಿ ಛಕ್ಕನೇ ಹಗ್ಗದಿಂದ ಬಿಡಿಸಿಕೊಂಡು, ನೆಲದ ಮೇಲೆ ಕಾಲುಚಾಚಿ ನಗುತ್ತ ಮಲಗಿ ಸತ್ತು ಹೋದ. ಇದು ಕಥೆ. ಸಾವು ಇಷ್ಟು ಸುಲಭವೇ? ಬಹಳಷ್ಟು ಜನರಿಗೆ ನಿದ್ರೆಯೇ ಕಷ್ಟ. ಒದ್ದಾಡಿ ಹೋಗುತ್ತಾರೆ. ಇನ್ನು ಸಾವಿನ ಗತಿಯೇನು? ನಿದ್ರೆಯಂತೆ ಸಾವನ್ನು ಪಡೆ ಎನ್ನುತ್ತದೆ ಕಗ್ಗ. ಅದಕ್ಕೆ ಬದುಕು ಪರಿಷ್ಕಾರವಾಗಬೇಕು. ಅಪೇಕ್ಷೆಗಳ ಅಂಟು ಕಡಿಮೆಯಾಗಬೇಕು. ಆಗ ಅದು ಶರಣರ ಸಾವು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಮಂಗಳವಾರ ಜುಲೈ 18, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಅಧಿಕ ಶ್ರಾವಣ ಶುದ್ಧ ಪ್ರತಿಪದ್ ಗಂ. 26-10 ನಕ್ಷತ್ರ: ಪುಷ್ಯ ಅಹೋರಾತ್ರ ಯೋಗ: ಹರ್ಷಣ ಗಂ. 09-36 ಕರಣ: ಕಿಸ್ತುಂಘ್ನ ಗಂ. 13-04, ಕರ್ಕಾಟಕ ಮಾಸದ 01 ನೇ ದಿನ, ಮಳೆನಕ್ಷತ್ರ: ಪುನರ್ವಸು 4.
ರಾಹುಕಾಲ : ಸಾಯಂಕಾಲ 03-00 - 04-30
ಸೂರ್ಯೋದಯ : 06-16 **ಸೂರ್ಯಾಸ್ತ :** 06-58
ಮುಸ್ಲಿಂ ದಿನಾಂಕ : 29 ಜುಲ್‌ಹಿಜಾ
ಅದೃಷ್ಟ ಸಂಖ್ಯೆ : 6, 10

ಮೇಷ: ಹಳೆಯ ಮನಸ್ತಾಪ ನೆನೆಸಿಕೊಂಡು ಮತ್ತೆ ಆಪ್ತರಲ್ಲಿ ವಾದವಿವಾದ ತೆಗೆಯಬೇಡಿ. ಮಗಳ ಗಂಡನ ಮನೆಯಲ್ಲಿನ ವಿಶೇಷ ಕಾರ್ಯಕ್ರಮಗಳಿಗೆ ಭೇಟಿ ನೀಡುವಂತಾಗಿ ಸಂತೋಷ ಹೊಂದುವಿರಿ.

ವೃಷಭ: ತಪ್ಪುಗಳನ್ನು ಮುಚ್ಚಿಹಾಕುವ ಸಲುವಾಗಿ ಬೇರೆಯವರ ಮೇಲೆ ವೃಥಾ ಆರೋಪ ಹೊರೆಸುವಂಥ ಪ್ರಯತ್ನ ನಡೆಸುವಿರಿ. ಕಾರ್ಯಕ್ಷೇತ್ರದಲ್ಲಿನ ಕೆಲಸಗಳನ್ನು ಎಲ್ಲರೂ ಶ್ಲಾಘಿಸುವಂತೆ ಮಾಡಿ ಮುಗಿಸುವಿರಿ.

ಮಿಥುನ: ಕಲೆಗೆ ಒಂದು ನೆಲೆ ಕಲ್ಪಿಸುವ ಹೋರಾಟವು ಅಕ್ಷರಶಃ ಸಫಲವಾಗಲಿದೆ. ವೃದ್ಧರ ಹಾಗೂ ಅನಾಥ ಮಕ್ಕಳ ಸೇವೆಯಿಂದ ಸಂತೋಷ ಹೊಂದುವ ಸಾಧ್ಯತೆ ಇದೆ. ಬಡ್ಡಿ ವ್ಯವಹಾರದವರಿಗೆ ಉತ್ತಮ ದಿನ.

ಕರ್ಕಾಟಕ: ಬಹುದೊಡ್ಡ ಪ್ರಮಾಣದ ಸಿಹಿ ತಿಂಡಿಯ ತಯಾರಕರಿಗೆ ಕಾರ್ಮಿಕರ ಕೊರತೆ ಎದುರಾಗುವ ಸಾಧ್ಯತೆ ಇದೆ. ಬರೆಯುತ್ತಿರುವ ಪುಸ್ತಕಕ್ಕೆ ಕಣ್ಣೆದುರು ನಡೆದ ಒಂದು ಘಟನೆ ಮುಖ್ಯವಸ್ತುವನ್ನೇ ಬದಲು ಮಾಡುತ್ತದೆ.

ಸಿಂಹ: ತಾಂತ್ರಿಕ ಕ್ಷೇತ್ರದಲ್ಲಿ ಪರಿಣತಿ ಹೊಂದಿರುವವರಿಗೆ ಉತ್ತಮ ಅವಕಾಶಗಳು ಅರಸಿ ಬರಲಿವೆ. ಮಕ್ಕಳು ವಿದ್ಯಾಭ್ಯಾಸದ ಕಡೆಗೆ ಗಮನ ಹರಿಸಿ, ಏಕಾಗ್ರತೆ ಕಾಯ್ದುಕೊಳ್ಳಿ. ಸರ್ಕಾರಿ ಕೆಲಸಗಳು ಕೈಗೂಡುವುದು.

ಕನ್ಯಾ: ಉದ್ಯೋಗ ಬದಲಾವಣೆ ವಿಚಾರದಲ್ಲಿದ್ದ ಗೊಂದಲ ಮಾರ್ಗದರ್ಶಕರ ಸೂಚನೆಯಂತೆ ನಿವಾರಿಸಿಕೊಳ್ಳಿರಿ. ವಿವಿಧ ಮೂಲಗಳಿಂದ ದ್ರವ್ಯಲಾಭ ಇರುವುದು. ಪೂರ್ಣ ಪ್ರಯತ್ನದಿಂದ ಕುಟುಂಬದ ಸಮಸ್ಯೆ ಪರಿಹರಿಸುವಿರಿ.

ತುಲಾ: ಮದುವೆಯ ವಿಷಯಕ್ಕೆ ಸಂಬಂಧಪಟ್ಟಂತೆ ಮನಸ್ಸಂಕಲ್ಪವನ್ನು ಈಡೇರಿಸಿಕೊಳ್ಳಲು ತಾಯಿಯ ಮತ್ತು ಅಣ್ಣಂದಿರ ಮನವನ್ನು ಸೆಳೆಯುವಲ್ಲಿ ಯಶಸ್ವಿಯಾಗುವಿರಿ. ಕೆಲಸದ ಒತ್ತಡ ಹಾಗೂ ಜವಾಬ್ದಾರಿ ಹೆಚ್ಚಲಿವೆ.

ವೃಶ್ಚಿಕ: ಹಣದ ಪರಿಸ್ಥಿತಿ ಸುಧಾರಿಸಿ ಮನಸ್ಸಿಗೆ ನೆಮ್ಮದಿ ಉಂಟಾಗುವುದು. ಆಸ್ತಿ ಕೊಳ್ಳುವ ಅಥವಾ ಮಾರಾಟ ಮಾಡುವ ವಿಷಯದ ಮಾತುಕತೆ ನಡೆಯುವುದು. ಮನೆಯಲ್ಲಿ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ.

ಧನು: ಕಠಿಣ ಪ್ರಯತ್ನಗಳು ಫಲಕಾರಿಯಾಗಿ ಆರ್ಥಿಕವಾಗಿ ಅನುಕೂಲ ಮತ್ತು ಮನಸ್ಸಿಗೆ ಸಂತೋಷ ಉಂಟಾಗುವುದು. ಬಲ ಕಣ್ಣಿಗೆ ಅಪಾಯವಾಗುವ ಸಾಧ್ಯತೆಗಳಿದೆ. ಕೃಷಿಕಾರ್ಯಗಳು ಬಿಡುವಿಲ್ಲದೆ ನಡೆಯುವುದು.

ಮಕರ: ಸತ್ಯ ವಾಕ್ಯಕೆ ತಪ್ಪಿ ನಡೆದರೆ ಮೆಚ್ಚನಾ ಪರಮಾತ್ಮನು ಎಂಬುವ ಮಾತನ್ನು ನೆನಪಿನಲ್ಲಿ ಇಟ್ಟುಕೊಂಡಿರುವುದು ಒಳ್ಳೆಯದು. ಎಣಿಕೆಯಂತೆ ಜವಾಬ್ದಾರಿಯ ಕಾರ್ಯಗಳು ಸಿದ್ಧಿಸುವವು.

ಕುಂಭ: ಹಣಕಾಸಿನ ಪರಿಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳುವ ಸನ್ನಿವೇಶಗಳು ನಡೆಯುವುದು. ಸಗಟು ವ್ಯಾಪಾರಿಗಳಿಗೆ ಹೇರಳ ವ್ಯಾಪಾರ ಇರುವುದು. ಮೇಧಾವಿಗಳ ಮೂಲಕ ಅಧಿಕ ಧನ ಸಂಪಾದನೆ ಹೊಂದುವಿರಿ.

ಮೀನ: ಹಿರಿಯರ ಕೋರಿಕೆಯಂತೆ ಮನೆಯಲ್ಲಿ ದೇವತಾ ಕಾರ್ಯಗಳನ್ನು ನಡೆಸಲು ಮುಂದಾಗುವಿರಿ. ಗುರು ಹಿರಿಯರ ಆಶೀರ್ವಾದ ಫಲವು ಫಲಿಸಲಿದೆ. ಬಿಳಿ ಬಣ್ಣದ ಉಡುಗೆ ಶುಭ ತರುವುದು. ನಿರ್ಧಾರದಲ್ಲಿ ಅಸ್ಥಿರತೆ ಬೇಡ.

ಪದಬಂಧ 5383 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಶ್ರಿ ವೆಂಕಟೇಶ್ವರನ ನೆಲೆನಾಡು (4)
3.ದೇವರನ್ನು ರಥದಲ್ಲಿಟ್ಟು ಮಾಡುವ ಮೆರವಣಿಗೆ (4)
5.ಲೋಹದ ಅಥವಾ ಮರದ ಹಾಳೆ (3)
6.ಈ ಮಾಣಿ ಬಹಳ ನಂಬಿಗಸ್ತ! (4)
8.ವನವಿಲ್ಲಿ ಉಲ್ಟಾ ಪಲ್ಟಾ ಕಾಣುತಿದೆ (2)
9.ಅಧಿಕ ಜ್ವರದಿಂದುಂಟಾಗುವ ಪರಿಣಾಮ(2)
10.ಸತ್ವರಹಿತವಾದುದು (4)
12.ಆ ಹೊತ್ತು ಎದುರಾದ ತೊಂದರೆ (3)
16.ಕಾಳಜಿಯನ್ನು ಹೀಗೆ ಹೇಳಿ (4)
17.ಸುಗಂಧ ಲೇಪನವಿದು (4)

ಮೇಲಿಂದ ಕೆಳಕ್ಕೆ
1.ಬೆಂಕಿಗೆ ಗಾಳಿಯೂದುವ ಸಲಕರಣೆ (2)
2.ತೆಳುವಾದ ಸೀರೆ (3)
3.ಚಾಂದ್ರಮಾನ ವರ್ಷದ ಒಂಬತ್ತನೆತಿಂಗಳಿಲ್ಲಿ ಉಲ್ಟಾ ಕಾಣುತ್ತಿದೆ (4)
4.ಅತ್ಯಂತ ಕಠಿಣವಾದ ರತ್ನ (2)
5.ಈತ ಸಂದೇಶವಾಹಕ (4)
6.ಹಳೆಯ ಕಾಲದ್ದು (3)
7.ಸರ ಧರಿಸಿದವ ತೋರಿದ ಶಕ್ತಿ ಪ್ರದರ್ಶನ(4)
11.ಕೆಟ್ಟ ಅಭ್ಯಾಸವನ್ನು ಹೀಗೆನ್ನಿ (4)
13.ಉತ್ತರದವರ ಮಂಚ (3)
14.ಕಂಬಿಯ ಹಿಂದೆ ತೋರಿದ ಡೌಲು (2)
15.ಮದುವೆಯಿಂದ ಸಂಬಂಧ ಬೆಳಸಿದವನು(2)



5382ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉನ್ನತ್ತ 2.ಹಗರಣ
4.ಕಡುಕೋಪ
6.ಸಂತೋಷ 7.ಣಬಾ
9.ಗತಕ 11.ವರ
13.ಸಿಂಬಳ 14.ನಳಪಾಕ
16.ಆಕರ್ಷಣೆ 17.ಹಕ್ಕಳೆ

ಮೇಲಿಂದ ಕೆಳಕ್ಕೆ:
1.ಉಪಕರಣ 2.ಹಸು
3.ರಜತೋತ್ಸವ
5.ಪರಾಗ 8.ಬಾಲಬಡುಕ
10.ಕದನ 12.ರಣಕಹಳೆ
15.ಜಾಣೆ

ಸುಡೊಕು 5769

	2			5		8	4	
8			3		9			1
	4			1				7
	3	2				7		6
				7			9	
7	9							5
3	1		9				7	
	7			8		1	6	9
	6	9			1		3	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5768 ಸುಡೊಕು

4	2	1	3	8	9	5	6	7
8	7	9	1	5	6	4	2	3
3	6	5	4	2	7	9	8	1
6	8	7	5	9	4	3	1	2
2	1	4	7	6	3	8	5	9
5	9	3	8	1	2	6	7	4
9	3	2	6	7	8	1	4	5
1	4	8	2	3	5	7	9	6
7	5	6	9	4	1	2	3	8

ಮೋದಿ ಅವಧಿಯಲ್ಲಿ ಪ್ರಮುಖ ಸುಧಾರಣೆಗಳು ಜಾರಿ: ಬರ್ನ್‌ಸ್ಟೀನ್

ನವದೆಹಲಿ (ಪಿಟಿಐ): '2014ರಲ್ಲಿ ಜಗತ್ತಿನ 10ನೇ ಅತಿದೊಡ್ಡ ಆರ್ಥಿಕತೆಯಾಗಿದ್ದ ಭಾರತವು ಸದ್ಯ ಐದನೇ ಅತಿದೊಡ್ಡ ಆರ್ಥಿಕತೆಯ ಸ್ಥಾನದಲ್ಲಿದೆ. ಈ ಮಟ್ಟದ ಬೆಳವಣಿಗೆ ಕಾಣಲು ಜಿಎಸ್‌ಟಿಯಂತಹ ಸುಧಾರಣೆಗಳು ಮತ್ತು ಮೂಲಸೌಕರ್ಯ ವಲಯದ ಅಭಿವೃದ್ಧಿಗೆ ನೀಡಿರುವ ಅಭೂತಪೂರ್ವ ಉತ್ತೇಜನ ಮುಖ್ಯವಾಗಿವೆ' ಎಂದು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಆಡಳಿತಾವಧಿಯ ಕುರಿತು ಬ್ರೋಕಿಂಗ್ ಸಂಸ್ಥೆ ಬರ್ನ್‌ಸ್ಟೀನ್ ಸಿದ್ಧಪಡಿಸಿರುವ ವರದಿ ಹೇಳಿದೆ.

'ದಿ ಡಿಕೇಡ್ ಅಂಡರ್ ಪಿಎಂ ಮೋದಿ–ಅ ಡೀಪ್–ಡೈವ್' ಶೀರ್ಷಿಕೆಯ 31 ಪುಟಗಳ ವರದಿಯಲ್ಲಿ ಸರ್ಕಾರದ ಸುಧಾರಣಾ ಕ್ರಮಗಳು, ಹಣದುಬ್ಬರ ನಿಯಂತ್ರಣ, ವಿತ್ತೀಯ ಒಳಗೊಳ್ಳುವಿಕೆ ಹಾಗೂ ಡಿಜಿಟಲೀಕರಣದ ಕುರಿತು ಮೆಚ್ಚುಗೆ ವ್ಯಕ್ತಪಡಿಸಲಾಗಿದೆ.

2014ರಿಂದ ಜಿಡಿಪಿಯ ವಾರ್ಷಿಕ ಸಂಯುಕ್ತ ಬೆಳವಣಿಗೆ ದರ (ಸಿಎಜಿಆರ್) ಶೇ 5.7ರಷ್ಟು ಇದೆ. ಕೋವಿಡ್‌ಗೂ ಮುಂಚಿನ ಬೆಳವಣಿಗೆಯು ಶೇ 6.7ರಷ್ಟು ಆಗಿದೆ. ಆದರೆ, ಯುಪಿಎ ಅವಧಿಯಲ್ಲಿನ ಶೇ 7.6ಕ್ಕಿಂತ ಕಡಿಮೆ ಇದೆ ಎಂದು ವರದಿ ತಿಳಿಸಿದೆ.

ಜಿಡಿಪಿ ಬೆಳವಣಿಗೆಯಲ್ಲಿ ಭಾರತವು ಸದ್ಯ ಜಾಗತಿಕವಾಗಿ ಐದನೇ ಸ್ಥಾನದಲ್ಲಿ ಇದ್ದರೂ ತಲಾ ಆದಾಯದ ದೃಷ್ಟಿಯಿಂದ ಸದ್ಯ 127ನೇ ಸ್ಥಾನದಲ್ಲಿ ಇದೆ. 2014ರಲ್ಲಿ ದೇಶವು 147ನೇ ಸ್ಥಾನದಲ್ಲಿ ಇತ್ತು.

ಕೆಲವು ವಿಷಯಗಳಲ್ಲಿ ಸುಧಾರಣೆಯ ಅಗತ್ಯ ಇದೆ ಎಂದು ವರದಿ ತಿಳಿಸಿದೆ. ಮಾನವ ಅಭಿವೃದ್ಧಿ ಸೂಚ್ಯಂಕವು (ಎಚ್‌ಡಿಐ) 2016ರಿಂದ ಈಚೆಗೆ ಇಳಿಕೆ ಕಾಣುತ್ತಲೇ ಇದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,564
ಇಂದಿನ ಅಂತ್ಯ	19,711
▲	147
ದಿನದ ಗರಿಷ್ಠ	19,731

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹505
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹512

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹210-445

ದ್ವಿತಳಿ (ಬಿ.ವಿ) ₹280-555

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹149
ಆರ್‌ಎಸ್‌ಎಸ್-5	₹145
ಗುಡ್ ಲಾಟ್	₹127

ನೀತಿ ಆಯೋಗದ ವರದಿಯಲ್ಲಿ ಉಲ್ಲೇಖ ● ಕೇರಳದಲ್ಲಿ ಬಡತನ ಅತ್ಯಂತ ಕಡಿಮೆ

13.5 ಕೋಟಿ ಜನ ಬಡತನದಿಂದ ಹೊರಕ್ಕೆ

ನವದೆಹಲಿ (ಪಿಟಿಐ): 2015–16ರಿಂದ 2019–21ರ ನಡುವಿನ ಅವಧಿಯಲ್ಲಿ ದೇಶದಲ್ಲಿ 13.5 ಕೋಟಿ ಜನರು ಬಹು ಆಯಾಮಗಳ ಬಡತನದಿಂದ ಹೊರಬಂದಿದ್ದಾರೆ ಎಂದು ನೀತಿ ಆಯೋಗದ ವರದಿಯೊಂದು ಹೇಳಿದೆ.

ಆರೋಗ್ಯ, ಶಿಕ್ಷಣ ಮತ್ತು ಜೀವನಮಟ್ಟವನ್ನು ಮಾನದಂಡಗಳನ್ನಾಗಿ ಇರಿಸಿಕೊಂಡು ವರದಿಯು ಈ ಮಾತು ಹೇಳಿದೆ.

ಉತ್ತರ ಪ್ರದೇಶ, ಬಿಹಾರ, ಒಡಿಶಾ, ರಾಜಸ್ಥಾನ ಮತ್ತು ಮಧ್ಯಪ್ರದೇಶದಲ್ಲಿ ಬಡವರ ಸಂಖ್ಯೆಯು ತೀವ್ರಗತಿಯಲ್ಲಿ ಕಡಿಮೆಯಾಗಿದೆ. ರಾಷ್ಟ್ರೀಯ ಬಹುಆಯಾಮಗಳ ಬಡತನ ಸೂಚ್ಯಂಕದ (ಎಂಪಿಐ) ಎರಡನೆಯ ವರದಿಯ ಪ್ರಕಾರ, ದೇಶದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಬಡತನವು ತೀವ್ರಗತಿಯಲ್ಲಿ ಕಡಿಮೆಯಾಗಿದೆ. ನೀತಿ ಆಯೋಗದ ಉಪಾಧ್ಯಕ್ಷ ಸುಮನ್ ಬೇರಿ ಅವರು ಈ ವರದಿಯನ್ನು ಬಿಡುಗಡೆ ಮಾಡಿದ್ದಾರೆ.

ನೈರ್ಮಲ್ಯ ಸುಧಾರಣೆ, ಪೌಷ್ಟಿಕಾಂಶಯುಕ್ತ ಆಹಾರ ಲಭ್ಯತೆ, ಅಡುಗೆ ಅನಿಲ ಲಭ್ಯತೆ, ಹಣಕಾಸಿನ ಒಳಗೊಳ್ಳುವಿಕೆ, ಕುಡಿಯುವ ನೀರಿನ ಪೂರೈಕೆ ಮತ್ತು ವಿದ್ಯುತ್ ಪೂರೈಕೆಯಲ್ಲಿ ಸರ್ಕಾರವು ಕೈಗೊಂಡ ಕ್ರಮಗಳು ಬಡತನ ಕಡಿಮೆಯಾಗಲು ಕಾರಣ ಎಂದು ವರದಿ ಹೇಳಿದೆ.

ಬಹುಆಯಾಮಗಳ ಬಡತನವನ್ನು ಕನಿಷ್ಠಪಕ್ಷ ಅರ್ಧದಷ್ಟು ತಗ್ಗಿಸಬೇಕು ಎಂಬ ಗುರಿಯನ್ನು 2030ರ ಗಡುವಿಗೆ ಮೊದಲೇ ತಲುಪುವ ಹಾದಿಯಲ್ಲಿ ಭಾರತ ಇದೆ ಎಂದು ನೀತಿ ಆಯೋಗದ ಸಿಇಒ ಬಿ.ವಿ.ಆರ್. ಸುಬ್ರಹ್ಮಣ್ಯಂ ಅವರು ಹೇಳಿದ್ದಾರೆ.

ವರದಿಯ ಪ್ರಕಾರ ಕೇರಳ ರಾಜ್ಯದಲ್ಲಿ ಬಡವರ ಪ್ರಮಾಣವು ಅತ್ಯಂತ ಕಡಿಮೆ (ಶೇ 0.55) ಇದೆ. ಬಿಹಾರದಲ್ಲಿ ಬಡವರ ಪ್ರಮಾಣ ದೇಶದಲ್ಲೇ ಅತಿಹೆಚ್ಚು (ಶೇ 33.76).

ಕರ್ನಾಟಕದಲ್ಲಿ ಪರಿಸ್ಥಿತಿ ಹೀಗಿದೆ...

ಬೆಂಗಳೂರು: ನೀತಿ ಆಯೋಗದ ವರದಿಯ ಪ್ರಕಾರ ಕರ್ನಾಟಕದಲ್ಲಿ 2019–20ರ ವೇಳೆಗೆ ಬಹುಆಯಾಮಗಳ ಬಡತನದ ದವಡೆಗೆ ಸಿಲುಕಿದ್ದ ಜನರ ಪ್ರಮಾಣವು ಶೇಕಡ 7.58ರಷ್ಟು ಆಗಿತ್ತು. ಇದು ಐದು ವರ್ಷಗಳ ಹಿಂದೆ (2015–16) ಶೇ 12.77ರಷ್ಟು ಆಗಿತ್ತು.

2019–20ರಲ್ಲಿ ಯಾದಗಿರಿ ಜಿಲ್ಲೆಯಲ್ಲಿ ಒಟ್ಟು ಜನಸಂಖ್ಯೆಯಲ್ಲಿ ಬಡವರ ಪ್ರಮಾಣವು ಶೇ 25.38ರಷ್ಟು ಆಗಿತ್ತು. ಇದು ರಾಜ್ಯದಲ್ಲಿ ಅತಿಹೆಚ್ಚು. ಆ ಸಂದರ್ಭದಲ್ಲಿ ರಾಮನಗರ ಜಿಲ್ಲೆಯಲ್ಲಿ ಬಡವರ ಪ್ರಮಾಣವು ಶೇ 0.88ರಷ್ಟು ಮಾತ್ರ. ವರದಿಯ ಪ್ರಕಾರ ರಾಜ್ಯದಲ್ಲಿ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಬಡತನ ಇರುವುದು ರಾಮನಗರ ಜಿಲ್ಲೆಯಲ್ಲಿ.

ಬೆಂಗಳೂರು ಗ್ರಾಮಾಂತರ (ಶೇ 0.99), ಬೆಂಗಳೂರು ನಗರ (ಶೇ 1.47), ದಕ್ಷಿಣ ಕನ್ನಡ (ಶೇ 1.71) ಮತ್ತು ಕೋಲಾರ (ಶೇ 1.78) ಜಿಲ್ಲೆಗಳು ಅತಿಕಡಿಮೆ ಬಡತನ ಹೊಂದಿವೆ.

ಎಚ್‌ಡಿಎಫ್‌ಸಿ ಬ್ಯಾಂಕ್ ಲಾಭ ಶೇ 29ರಷ್ಟು ಹೆಚ್ಚಳ

ಮುಂಬೈ (ಪಿಟಿಐ): ಎಚ್‌ಡಿಎಫ್‌ಸಿ ಬ್ಯಾಂಕ್‌ನ ನಿವ್ವಳ ಲಾಭವು ಜೂನ್ ತ್ರೈಮಾಸಿಕದಲ್ಲಿ ಶೇಕಡ 29ರಷ್ಟು ಹೆಚ್ಚಾಗಿದ್ದು ₹12,370 ಕೋಟಿಗೆ ತಲುಪಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಬ್ಯಾಂಕ್ ₹9,679 ಕೋಟಿ ನಿವ್ವಳ ಲಾಭ ಗಳಿಸಿತ್ತು. ಬ್ಯಾಂಕ್‌ನ ಒಟ್ಟು ವರಮಾನವು ₹44,202 ಕೋಟಿಯಿಂದ ₹61,021 ಕೋಟಿಗೆ ಏರಿಕೆ ಕಂಡಿದೆ ಎಂದು ಷೇರುಪೇಟೆಗೆ ಮಾಹಿತಿ ನೀಡಿದೆ.

ಜುಲೈ 1ರಿಂದ ಜಾರಿಗೆ ಬರುವಂತೆ ಎಚ್‌ಡಿಎಫ್‌ಸಿ ಲಿಮಿಟೆಡ್, ಎಚ್‌ಡಿಎಫ್‌ಸಿ ಬ್ಯಾಂಕ್‌ನಲ್ಲಿ ವಿಲೀನಗೊಂಡಿದೆ.

ಕಾರ್ಯಾಚರಣಾ ವೆಚ್ಚವು ₹14,057 ಕೋಟಿಗೆ, ಅಂದರೆ ಶೇ 33.9ರಷ್ಟು, ಏರಿಕೆ ಕಂಡಿದೆ ಎಂದು ಮಾಹಿತಿ ನೀಡಿದೆ.

ವಸೂಲಾಗದ ಸಾಲದ ಸರಾಸರಿ ಪ್ರಮಾಣವು (ಜಿಎನ್‌ಪಿಎ) ಶೇ 1.28ರಿಂದ ಶೇ 1.17ಕ್ಕೆ ಇಳಿಕೆ ಕಂಡಿದೆ. ಮಾರ್ಚ್ ತ್ರೈಮಾಸಿಕದಲ್ಲಿ ಶೇ 1.12ರಷ್ಟು ಇತ್ತು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ		ಕೋಕ	26099-36989	ತಟ್ಟಿಬೆಟ್ಟೆ	42419-43409
ಬಂಟ್ವಾಳ		ಕೆಂಪುಗೋಟು	28119-42009	**ಶಿರಸಿ**	
ಕೋಕ	12500-25000	ರಾಶಿ	44199-55099	ಬೆಟ್ಟೆ	41096-48901
ಹೊಸತು	27500-42500	ಸಿಪ್ಪೆಗೋಟು	18299-22455	ಬಿಳಿಗೋಟು	26289-35809
ಹಳತು	46000-49000	**ಶಿವಮೊಗ್ಗ**		ಚಾಲಿ	35029-40719
ಕುಮಟಾ		ಬೆಟ್ಟೆ	46599-55052	ಕೆಂಪುಗೋಟು	28199-36299
ಚಿಪ್ಪು	30509-33899	ಗೊರಬಲು	18000-43050	ರಾಶಿ	46699-52449
ಕೋಕ	22089-34299	ರಾಶಿ	43728-55699	**ಯಲ್ಲಾಪುರ**	
ಫ್ಯಾಕ್ಟರಿ	14509-22929	ಸರಕು	55069-84130	ಆಪಿ	58179-58179
ಹಳೆಚಾಲಿ	38869-41099	**ಸಿದ್ದಾಪುರ**		ಬಿಳಿಗೋಟು	28299-36212
ಹೊಸಚಾಲಿ	37599-40039	ಬಿಳಿಗೋಟು	30509-33999	ಚಾಲಿ	33899-40333
ಕುಂದಾಪುರ		ಚಾಲಿ	38509-40199	ಕೋಕ	18499-35512
ಹಳೆಚಾಲಿ	43500-47000	ಕೋಕ	30699-33619	ಕೆಂಪುಗೋಟು	30718-34919
ಹೊಸಚಾಲಿ	37000-41500	ಕೆಂಪುಗೋಟು	32699-34319	ರಾಶಿ	45101-51699
ಸಾಗರ		ರಾಶಿ	49009-52349	ತಟ್ಟಿಬೆಟ್ಟೆ	41690-48869
ಬಿಳಿಗೋಟು	12099-34209				
ಚಾಲಿ	31099-39999				

ಮುಂಬೈ ಧಾರಣೆ ಲಭ್ಯವಾಗಿಲ್ಲ

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹14100
ಎಸಿ	₹7140
ಆರ್‌ಪಿ	₹10100
ಆರ್‌ಸಿ	₹5960

ಕೋವಿಡ್ ಬಳಿಕ ಸಿಗುತ್ತಿರುವ ಉತ್ತಮ ದರ: ವಿವಿಧ ನಗರಗಳಿಗೆ 8,300 ಟನ್ ರವಾನೆ

ದಾಳಿಂಬೆ ಬೆಳೆಗೆ ಬಂತು ಬಂಪರ್ ಬೆಲೆ

● ಸಿ.ಶಿವಾನಂದ

ಹಗರಿಬೊಮ್ಮನಹಳ್ಳಿ (ವಿಜಯನಗರ ಜಿಲ್ಲೆ): ನಾಲ್ಕೈದು ವರ್ಷಗಳಿಂದ ಉತ್ತಮ ಬೆಲೆ ಸಿಗದೆ ಬಸವಳಿದಿದ್ದ ತಾಲ್ಲೂಕಿನ ದಾಳಿಂಬೆ ಬೆಳೆಗಾರರಿಗೆ ಈ ವರ್ಷ ಕೆ.ಜಿ.ಗೆ ₹160ರವರೆಗೂ ಬೆಲೆ ದೊರೆತಿದೆ.

ತಾಲ್ಲೂಕಿನ ಗದ್ದಿಕೇರಿ, ಜಿ.ಕೋಡಿಹಳ್ಳಿ, ಏಣಿಗಿ, ಏಣಿಗಿ ಬಸಾಪುರ, ಅಂಕಸಮುದ್ರ, ಬಾಚಿಗೊಂಡನಹಳ್ಳಿ ಸೇರಿದಂತೆ ಹಲವು ಗ್ರಾಮಗಳಲ್ಲಿ 2,650 ಹೆಕ್ಟೇರ್ ಪ್ರದೇಶದಲ್ಲಿ 'ಬಗವಾ' ತಳಿಯ ದಾಳಿಂಬೆ ಬೆಳೆಯಲಾಗಿದೆ. ದೇಶದ ವಿವಿಧ ನಗರಗಳಿಗೆ 8,300 ಟನ್ ದಾಳಿಂಬೆ ಇದುವರೆಗೆ ರವಾನೆಯಾಗಿದೆ. ಸಾಮಾನ್ಯ ದಾಳಿಂಬೆಗೂ ರೈತರು ಪ್ರತಿ ಕೆ.ಜಿ.ಗೆ ಕನಿಷ್ಠ ₹ 80 ಪಡೆದಿದ್ದಾರೆ.

> **ಈ ವರ್ಷ ದಾಳಿಂಬೆ ಕೈ ಹಿಡಿದಿದೆ, ಉತ್ತಮ ಬೆಲೆ ಮತ್ತು ಇಳುವರಿ ಬಂದಿದೆ. ಸಾಲದಿಂದ ಪಾರಾಗಲು ಸಾಧ್ಯವಾಗಿದೆ**
> **ಸುರೇಶ್,** ದಾಳಿಂಬೆ ಬೆಳೆಗಾರ, ಗದ್ದಿಕೇರಿ.

> **ಬಗವಾ ತಳಿಯ ಗಾತ್ರ ಮತ್ತು ಕೆಂಪು ಬಣ್ಣ ಉತ್ತಮ ಬೆಲೆ ತಂದುಕೊಡುತ್ತಿದೆ. ಉತ್ತಮ ನಿರ್ವಹಣೆಯಿಂದ ಹೆಚ್ಚು ಲಾಭ ನಿಶ್ಚಿತ**
> **ನಾಗರಾಜ,** ಸಹಾಯಕ ತೋಟಗಾರಿಕೆ ನಿರ್ದೇಶಕ, ಹಗರಿಬೊಮ್ಮನಹಳ್ಳಿ

ಕೋವಿಡ್‌ಗಿಂತ ಮೊದಲು ಬೆಳೆಗಾರರಿಗೆ ಕೆ.ಜಿ.ದಾಳಿಂಬೆಗೆ ₹230 ಸಿಕ್ಕಿತ್ತು. ಅದು ಈ ಭಾಗದಲ್ಲಿ ರೈತರು ಪಡೆದ ಗರಿಷ್ಠ ದರವಾಗಿತ್ತು. ಕೋವಿಡ್ ನಂತರ ಇದೀಗ ದಾಳಿಂಬೆಗೆ ಉತ್ತಮ ದರ ಸಿಗುತ್ತಿದೆ.

ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಗದ್ದಿಕೇರಿಯಲ್ಲಿ ದಾಳಿಂಬೆ ಪ್ಯಾಕಿಂಗ್ ಕೆಲಸದಲ್ಲಿ ನಿರತರಾಗಿರುವ ಕಾರ್ಮಿಕರು

'ಇಲ್ಲಿನ ದಾಳಿಂಬೆಗೆ ಬೆಂಗಳೂರು, ಕೋಲ್ಕತ್ತ, ಚೆನ್ನೈ, ಮುಂಬೈ ಮಾರುಕಟ್ಟೆಗಳಲ್ಲಿ ಭಾರಿ ಬೇಡಿಕೆ ಇದೆ' ಎನ್ನುತ್ತಾರೆ ಗದ್ದಿಕೇರಿಯ ದಾಳಿಂಬೆ ಖರೀದಿದಾರ ಸಿ.ರಮೇಶ್. ರೈತರು ಪ್ರತಿ ಎಕರೆಯಲ್ಲಿ 300ರಿಂದ 350 ಗಿಡಗಳನ್ನು ನಾಟಿ ಮಾಡಿದ್ದಾರೆ. ಕಟಾವಿನ ಸಂದರ್ಭದಲ್ಲಿ ಎಲ್ಲ ಗಿಡಗಳಿಗೂ ಬಟ್ಟೆಯ ಹೊದಿಕೆ ಹಾಗೂ ಹಸಿರು ಚಪ್ಪರ ಹಾಕಿ ಬೇಸಿಗೆಯಲ್ಲಿ ಸೂರ್ಯನ ಶಾಖದಿಂದ ಹಣ್ಣು ಅಂದಗೆಡುವುದನ್ನು ತಪ್ಪಿಸಿದ್ದಾರೆ. ಉತ್ಪನ್ನದ ಗಾತ್ರದ ಜತೆಗೆ ಬಣ್ಣಕ್ಕೂ ಆದ್ಯತೆ ನೀಡಿದ್ದಾರೆ. ಮಾರುಕಟ್ಟೆಯಲ್ಲಿ ಗಾತ್ರ ಮತ್ತು ಕೆಂಪು ವರ್ಣದ ದಾಳಿಂಬೆಗೆ ಅತ್ಯುತ್ತಮ ಬೆಲೆ ದೊರೆಯುತ್ತದೆ.

ಈ ಬಾರಿ ದುಂಡಾಣು ಮಚ್ಚೆರೋಗ ಅಷ್ಟಾಗಿ ಕಾಣಿಸದಿರುವುದರಿಂದ ರೈತರ ಮತ್ತಷ್ಟು ಖುಷಿಪಡುವಂತಾಗಿದೆ. ಕಟಾವು ಸಂದರ್ಭದಲ್ಲಿ ನೂರಾರು ಜನರಿಗೆ ಉದ್ಯೋಗ ದೊರಕುತ್ತದೆ. ತಾಲ್ಲೂಕಿನ ಹಂಪಾಪಟ್ಟಣ, ಅಡವಿ ಆನಂದೇವನಹಳ್ಳಿ, ಅಂಕಸಮುದ್ರ ಸೇರಿದಂತೆ ಹಲವು ಗ್ರಾಮಗಳಿಂದ ಯುವಕರು ತಂಡೋಪತಂಡವಾಗಿ ಹೋಗುತ್ತಿದ್ದಾರೆ. ಉತ್ತಮ ಕೂಲಿ ಪಡೆಯುತ್ತಿದ್ದಾರೆ. ಖರೀದಿದಾರರು ತೋಟಕ್ಕೆ ಬಂದು ದಾಳಿಂಬೆ ತೆಗೆದುಕೊಂಡು ಹೋಗುತ್ತಿರುವುದರಿಂದ ರೈತರು ಸಾಗಣೆಯ ಕಿರಿಕಿರಿಯಿಂದಲೂ ಪಾರಾಗಿದ್ದಾರೆ.

ಸೆನ್ಸೆಕ್ಸ್, ನಿಫ್ಟಿ ಸಾರ್ವಕಾಲಿಕ ದಾಖಲೆ

ಮುಂಬೈ (ಪಿಟಿಐ): ಷೇರುಪೇಟೆ ಸೂಚ್ಯಂಕಗಳಾದ ಸೆನ್ಸೆಕ್ಸ್ ಮತ್ತು ನಿಫ್ಟಿ ಸತತ ಮೂರನೆಯ ದಿನವೂ ಏರಿಕೆ ಕಂಡಿದ್ದು, ಮತ್ತೆ ಸಾರ್ವಕಾಲಿಕ ಗರಿಷ್ಠ ಮಟ್ಟ ತಲುಪಿವೆ. ಬ್ಯಾಂಕಿಂಗ್ ಮತ್ತು ತೈಲ ವಲಯದಲ್ಲಿ ಖರೀದಿ ವಹಿವಾಟು ಜೋರಾಗಿದ್ದುದು, ವಿದೇಶಿ ಹೂಡಿಕೆ ಮುಂದುವರಿದಿರುವುದು ಏರಿಕೆಗೆ ಕಾರಣ.

ದೇಶದ ವಿವಿಧ ಕಂಪನಿಗಳ ಜೂನ್ ತ್ರೈಮಾಸಿಕದ ಹಣಕಾಸು ಫಲಿತಾಂಶವು ನಿರೀಕ್ಷೆಗೆ ಅನುಗುಣವಾಗಿ ಇರುವುದು ಕೂಡ ಷೇರುಪೇಟೆಗಳಲ್ಲಿ ಗೂಳಿಯ ಓಟ ಮುಂದುವರಿದಿರಲು ಕಾರಣ ಎಂದು ವಿಶ್ಲೇಷಕರು ಹೇಳಿದ್ದಾರೆ.

ಸೋಮವಾರದ ವಹಿವಾಟಿನಲ್ಲಿ ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 529 ಅಂಶ ಏರಿಕೆ ಕಂಡು 66,589 ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 146 ಅಂಶ ಏರಿಕೆ ಕಂಡು 19,711 ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಿದೆ.

ಸೋಮವಾರದ ವಹಿವಾಟಿನ ಅಂತ್ಯಕ್ಕೆ ಬಿಎಸ್‌ಇ ನೋಂದಾಯಿತ ಕಂಪನಿಗಳ ಮಾರುಕಟ್ಟೆ ಬಂಡವಾಳ ಮೌಲ್ಯವು ದಾಖಲೆಯ ₹303.59 ಲಕ್ಷ ಕೋಟಿಗೆ ತಲುಪಿದೆ. 'ಜೂನ್ ತ್ರೈಮಾಸಿಕದ ಫಲಿತಾಂಶ ಬಹುತೇಕ ನಿರೀಕ್ಷೆಗೆ ಅನುಗುಣವಾಗಿ ಇದೆ. ಇದು ದೇಶದ ಅರ್ಥವ್ಯವಸ್ಥೆಯ ಆರೋಗ್ಯ ಸುಧಾರಣೆ ಆಗುತ್ತಿರುವುದನ್ನು ತೋರಿಸುತ್ತಿದೆ' ಎಂದು ಕೋಟಕ್ ಸೆಕ್ಯುರಿಟೀಸ್‌ನ ಸಣ್ಣ ಹೂಡಿಕೆಗಳ ಸಂಶೋಧನಾ ಮುಖ್ಯಸ್ಥ ಶ್ರೀಕಾಂತ ಚೌಹಾಣ್ ಹೇಳಿದ್ದಾರೆ.

ಸಂತ್ರಸ್ತರಿಗೆ ಬಿತ್ತನೆ ಬೀಜ ವಿತರಿಸಿದ ಪಂಜಾಬ್ ರೈತರು

ಚಂಡೀಗಢ (ಪಿಟಿಐ): ಜಲಂಧರ್ ಜಿಲ್ಲೆಯ ರೈತರೊಬ್ಬರು ಬಿತ್ತನೆ ಬೀಜಗಳನ್ನು ಉಚಿತವಾಗಿ ನೀಡಿ ಪಂಜಾಬ್‌ನ ಪ್ರವಾಹಪೀಡಿತ ರೈತರಿಗೆ ಆಸರೆಯಾಗುತ್ತಿದ್ದಾರೆ.

ರೈತ ಬಲದೇವ್ ಸಿಂಗ್ ಜಲಂಧರ್ ಜಿಲ್ಲೆಯ ಶಾಹ ಕೋಟ್ ಪ್ರದೇಶದಲ್ಲಿ ಭತ್ತ ಬೆಳೆದಿದ್ದರು. ಪ್ರವಾಹದಲ್ಲಿ ಸಿಕ್ಕಿ ಬೆಳೆ ಹಾನಿಯಾಗಿದೆ. ಆದರೂ ಅವರು, ಪ್ರವಾಹ ಪೀಡಿತ ಪ್ರದೇಶದ ರೈತರಿಗೆ ಅಲ್ಪಾವಧಿಯ ಆರ್‌ಆರ್ 126 ತಳಿಯ ಬಿತ್ತನೆ ಬೀಜ ಭತ್ತವನ್ನು ಉಚಿತವಾಗಿ ನೀಡುತ್ತಿದ್ದಾರೆ.

'ನನ್ನ ಬಳಿ 70ರಿಂದ 80 ಕ್ವಿಂಟಲ್ ಪಿಆರ್ 126 ತಳಿಯ ಬಿತ್ತನೆ ಬೀಜ ಭತ್ತವಿದ್ದು, ಪ್ರವಾಹ ಪೀಡಿತ ರೈತರಿಗೆ ಉಚಿತವಾಗಿ ನೀಡುತ್ತಿದ್ದೇನೆ' ಎಂದು ಶಾಹಕೋಟ್‌ನ ಗಟ್ಟಿ ರಾಯ್‌ಪುರ ಗ್ರಾಮದ ಬಲದೇವ್ ಸಿಂಗ್ ಸುದ್ದಿಸಂಸ್ಥೆ ತಿಳಿಸಿದರು.

ಕಳೆದ ವಾರ ರಾಜ್ಯವನ್ನು ಪೀಡಿಸಿದ ಪ್ರವಾಹದಲ್ಲಿ ಬಲದೇವ್ ಸಿಂಗ್ ಅವರು 50ರಿಂದ 60 ಎಕರೆಗಳಲ್ಲಿ ಬೆಳೆದ ಭತ್ತದ ಬೆಳೆಯನ್ನು ಕಳೆದುಕೊಂಡಿದ್ದಾರೆ.

ಪ್ರವಾಹ ಕಾಣಿಸದ ಮುಕ್ತಸರ್ ಜಿಲ್ಲೆಯ ರೈತ ಕುಲ್ವೀರ್ ಸಿಂಗ್ ಅವರು ಪಿಬಿ 1629 ಬಾಸ್ಮತಿ ತಳಿಯ ನಾಲ್ಕು ಕ್ವಿಂಟಲ್‌ಗಿಂತಲೂ ಹೆಚ್ಚಿನ ಬಿತ್ತನೆ ಬೀಜವನ್ನು ಹಲವು ಬೆಳೆಗಾರರಿಗೆ ಉಚಿತವಾಗಿ ನೀಡಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Vishal : 9845114560

Jerry : 9731810277 | Tanveer : 9886213331

Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ

https://homages.deccanherald.com

ಅಥವಾ QR code ಸ್ಕ್ಯಾನ್ ಮಾಡಿ

ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Multiple Vacancy

ಅಗತ್ಯವಿದೆ,ದೊಮ್ಮಲೂರಿನಲ್ಲಿ ಹೈಎಂಡ್ ಶೋರೂಮ್ ಗಾಗಿ ಹೂಗಾರ, 3ವರ್ಷಗಳ ಅನುಭವ,ಆನ್ ಲೈನ್ ಆರ್ಡರ್ ಗಳನ್ನು ಪೂರೈಸಲು ಹೂಗುಚ್ಛಗಳನ್ನುಮಾಡಿ ಮತ್ತು ವಾಕ್-ಇನ್ ಗ್ರಾಹಕರನ್ನು ಸಂಗ್ರಹಿಸಿ.ಅಂಗಡಿಯನ್ನು ಸ್ವಚ್ಛವಾಗಿ ಮತ್ತು ಉತ್ತಮವಾಗಿ ನಿರ್ವಹಿಸಿ ಅಗತ್ಯವಿರುವಂತೆ ತಾಜಾಹೂವುಗಳೊಂದಿಗೆ ಅಂಗಡಿಯನ್ನುಇರಿಸಿಕೊಳ್ಳಿ.ಆಸಕ್ತ ಅಭ್ಯರ್ಥಿಗಳು ಸಂಪರ್ಕಿಸಬಹುದು.ಮೊಬೈಲ್: +91 9886073911ಅಥವಾ sales@thebloomstory.com ಇಮೇಲ್ ಮಾಡಿ

ತಕ್ಷಣ ಬೇಕಾಗಿದ್ದಾರೆ ಕಂಪನಿ ಆಫೀಸ್‌ಗಳಿಗೆ, 5ನೇ, 10ನೇ,ಪಿಯುಸಿ, ಐಟಿಐಡಿಗ್ರಿ ಪಾಸ್/ಫೇಲ್ ನಗರ-ಗ್ರಾಮೀಣ ಹಳ್ಳಿಯುವಕರು ಯುವತಿಯರಿಗೆ, ವಸತಿಯೂಟದೊಂದಿಗೆ 16,900-45000. 9916799477, 9964140505

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು,ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ.ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 15,000/- . ಬೆಂಗಳೂರು- 56.ಸಂಪರ್ಕಿಸಿ : 9606523337, 9606385001

General

ತಕ್ಷಣ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ, ಟಿ.ವಿ.ಎಸ್ ಕಂಪನಿಗಳಿಗೆ ಎಸ್.ಎಸ್.ಎಲ್.ಸಿ,ಪಿಯುಸಿ, ಡಿಗ್ರಿ, ITIನವರುಗಳು 16,600-65.000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ 7259552930

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

Book Your Classifieds Ads Online Log in to dhclassifieds.com

Contact :
9845114560 : 9731810277
9901641752 : 9886213331
080 - 45557163 / 164

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611227266 /9611221244

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ ತಿಂಗಳಿಗೆ 18,000-22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

Wanted

ಎಂಎನ್ಸಿಗೆ &ಇತರೆ ಕಂಪನಿಗಳಿಗೆ ಡಿಪ್ಲೋಮಾ ಮೆಕ್ಯಾನಿಕಲ್ಸ್, ಎಲೆಕ್ಟ್ರಿಕಲ್ಸ್ /ಹೊರದೇಶದ ಕಂಪೆನಿಗಳಿಗೆ ಯುಕೆ ಯುಎಸ್‌ಎ ಕೆನಡಾ ಕೆಲಸಕ್ಕೆ ಬೇಕಾಗಿದ್ದಾರೆ: 8892501007/ 9606701007

ಕಂಪನಿ ಕೆಲಸಕ್ಕೆ ಯುವಕ ಯುವತಿಯರು ಬೇಕಾಗಿದ್ದಾರೆ.16,000-45,000. SSLC, PUC, DEGREEPASS/FAIL 9945791526, 9945791526

ಪ್ರವಾಸ

Travel

20.09.2023 12 ದಿನಗಳು ಚಾರ್ ಧಾಮ್. 05.12.2023 9 ದಿನಗಳು ಕಾಶಿ,ಅಯೋಧ್ಯಾ, ಗಯಾ,ಕೋಲ್ಕತಾ ಪುರಿಜಗನ್ನಾಥ್ ಸಂಪರ್ಕಿಸಿ: ವಿಜಯ ಟ್ರಾವಲ್ಸ್ ಬೆಂಗಳೂರು. 9448294477

19.09.2023 17.11.2023 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 04.11.2023 22.11.2023 08.12.2023 ದುಬೈ,ಅಬುದಾಬಿ 5 ದಿನಗಳು. 11.10.2023 29.11.2023 ನೇಪಾಳ 9 ದಿನಗಳು. 11.09.2023 09.10.2023 17.11.2023 ಶ್ರೀಲಂಕಾ 6 ದಿನಗಳು. 19.09.2023 06.10.2023 ಕಾಶಿ,ಗಯಾ,ಅಯೋಧ್ಯ 8 ದಿನಗಳು. 11.09.2023 09.10.2023 ಗುಜರಾತ್ 8 ದಿನಗಳು. 13.10.2023 25.11.2023 ರಾಜಸ್ಥಾನ್ 9 ದಿನಗಳು. 07.10.2023 11.11.2023 ದೆಹಲಿ,ಆಗ್ರಾ,ಜೈಪುರ್ 6 ದಿನಗಳು. ಸಂಪರ್ಕಿಸಿ: ಜೈನ್ ಟ್ರಾವಲ್ಸ್ ಮಲ್ಲೇಶ್ವರ. ಬೆಂಗಳೂರು.03 9448402248 7022547922

8 ದಿನಗಳ ಕಾಶಿಯಾತ್ರೆ, 12ದಿನಗಳ ಚಾರ್‌ಧಾಮ್‌ಯಾತ್ರೆ, 12 ದಿನಗಳ ನೇಪಾಳ, ಮುಕ್ತಿನಾಥ್, 10 ದಿನಗಳ ಗುಜರಾತ್, ಸಂಪರ್ಕಿಸಿ: ಶ್ರೀನಂದಿ ಹಾಲಿಡೇಸ್ 9980270467, 9740228186

★1.9.2023 13/8ದಿನಗಳು★ ದೆಹಲಿ, ಆಗ್ರಾ,ಕಾಶಿ,ಗಯಾ, ಹರಿದ್ವಾರ ಪ್ರವಾಸ. 21.09.2023 16ದಿನಗಳು ಕಾಶಿ,ನೇಪಾಳ ಮುಕ್ತಿನಾಥ ಪ್ರವಾಸ. ಆರ್.ಗಾಂಧಿ ಟೂರ್ಸ್. 9902433500/ 9945445809

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಬಾಂಗ್ಲಾ, ನೇಪಾಳದ ಜತೆ ದ್ವಿಪಕ್ಷೀಯ ಸಹಕಾರ ಚರ್ಚೆ

ಬ್ಯಾಂಕಾಕ್ (ಪಿಟಿಐ) ಭಾರತದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಸೋಮವಾರ ನೇಪಾಳ ಮತ್ತು ಬಾಂಗ್ಲಾದೇಶದ ವಿದೇಶಾಂಗ ಸಚಿವರನ್ನು ಬ್ಯಾಂಕಾಕ್‌ನಲ್ಲಿ ಭೇಟಿಯಾಗಿದ್ದು, ಸಹಕಾರ ಕಾರ್ಯಸೂಚಿಯನ್ನು ಕಾರ್ಯಗತಗೊಳಿಸುವ ನಿಟ್ಟಿನಲ್ಲಿ ಒಟ್ಟಾಗಿ ಕೆಲಸ ಮಾಡುವ ಬಗ್ಗೆ ಚರ್ಚಿಸಿದರು. ಜತೆಗೆ ಪ್ರಾದೇಶಿಕ ವಿಚಾರಗಳನ್ನು ವಿನಿಮಯ ಮಾಡಿಕೊಂಡರು.

ಥಾಯ್ಲೆಂಡ್ ರಾಜಧಾನಿ ಬ್ಯಾಂಕಾಕ್‌ನಲ್ಲಿ ನಡೆಯುತ್ತಿರುವ 'ಮೆಕಾಂಗ್ ಗಂಗಾ ಸಹಕಾರ ಕಾರ್ಯವಿಧಾನ'ದ ವಿದೇಶಾಂಗ ಸಚಿವರ 12ನೇ ಸಭೆಯಲ್ಲಿ ಜೈಶಂಕರ್ ಭಾಗವಹಿಸಿದ್ದರು. ನಂತರ 'ಬಹು-ವಲಯ ತಾಂತ್ರಿಕ ಮತ್ತು ಆರ್ಥಿಕ ಸಹಕಾರಕ್ಕಾಗಿ ಬಂಗಾಳ ಕೊಲ್ಲಿ ಉಪಕ್ರಮ (ಬಿಐಎಂಎಸ್‌ಟಿಇಸಿ)'ದ ಸದಸ್ಯ ರಾಷ್ಟ್ರಗಳ ವಿದೇಶಾಂಗ ಸಚಿವರ ಸಭೆಯಲ್ಲೂ ಪಾಲ್ಗೊಂಡರು.

ಭಾರತ, ಶ್ರೀಲಂಕಾ, ಬಾಂಗ್ಲಾದೇಶ, ಮ್ಯಾನ್ಮಾರ್, ಥಾಯ್ಲೆಂಡ್, ನೇಪಾಳ ಮತ್ತು ಭೂತಾನ್ ಅನ್ನು ಬಿಐಎಂಎಸ್‌ಟಿಇಸಿ ಒಳಗೊಂಡಿದೆ. ಏಳು ದೇಶಗಳು 1.73 ಶತಕೋಟಿ ಜನರಿಗೆ ನೆಲೆಯಾಗಿದ್ದು, 4 ಟ್ರಿಲಿಯನ್ ಡಾಲರ್‌ಗಿಂತಲೂ ಹೆಚ್ಚಿನ ಒಟ್ಟು ಆಂತರಿಕ ಉತ್ಪನ್ನವನ್ನು ಹೊಂದಿವೆ.

ಸಭೆಯ ನಂತರ ಟ್ವೀಟ್ ಮಾಡಿದ ಜೈಶಂಕರ್, 'ನೇಪಾಳ ವಿದೇಶಾಂಗ ಸಚಿವ ನಾರಾಯಣ್ ಪ್ರಕಾಶ್ ಸೌದ್ ಅವರೊಂದಿಗೆ ಒಂದೊಳ್ಳೆ ಭೇಟಿಯಾಗಿದೆ. ನಮ್ಮ ಸರ್ಕಾರಗಳು ನಿಗದಿಪಡಿಸುವ ಸಹಕಾರದ ಕಾರ್ಯಸೂಚಿಯನ್ನು ಕಾರ್ಯಗತಗೊಳಿಸುವ ನಿಟ್ಟಿನಲ್ಲಿ ಒಟ್ಟಿಗೆ ಕೆಲಸ ಮಾಡಲು ನಾವು ಒಪ್ಪಿಕೊಂಡಿದ್ದೇವೆ' ಎಂದು ಹೇಳಿದರು.

ಜೈಶಂಕರ್

'ದ್ವಿಪಕ್ಷೀಯ ಸಹಕಾರಕ್ಕೆ ಸಂಬಂಧಿಸಿದ ವಿಷಯಗಳ ಕುರಿತು ಉಭಯ ರಾಷ್ಟ್ರಗಳ ಮಂತ್ರಿಗಳು ಅಭಿಪ್ರಾಯ ವಿನಿಮಯ ಮಾಡಿಕೊಂಡಿದ್ದಾರೆ' ಎಂದು ನೇಪಾಳ ವಿದೇಶಾಂಗ ವ್ಯವಹಾರಗಳ ಇಲಾಖೆ ಟ್ವೀಟ್ ಮಾಡಿ ತಿಳಿಸಿದೆ.

'ಪರಸ್ಪರ ಹಿತಾಸಕ್ತಿಗಾಗಿ ನೇಪಾಳದೊಂದಿಗೆ ನಿರಂತರವಾಗಿ ಕೆಲಸ ಮಾಡಲು ಸಿದ್ಧ ಎಂದು ಜೈಶಂಕರ್ ಹೇಳಿದ್ದಾರೆ' ಎಂದು ವಿದೇಶಾಂಗ ಸಚಿವ ಸೌದ್ ಅವರ ಕಚೇರಿ ತಿಳಿಸಿದೆ.

ಬಾಂಗ್ಲಾದೇಶದ ವಿದೇಶಾಂಗ ಸಚಿವ ಅಬ್ದುಲ್ ಮೊಮೆನ್ ಅವರನ್ನೂ ಜೈಶಂಕರ್ ಇದೇ ವೇಳೆ ಭೇಟಿಯಾದರು.

'ಮೊಮೆನ್ ಅವರೊಂದಿಗಿನ ಭೇಟಿಯ ವೇಳೆ, ದ್ವಿಪಕ್ಷೀಯ ಮತ್ತು ಬಹುಪಕ್ಷೀಯ ಸಹಕಾರದ ಕುರಿತು ಚರ್ಚಿಸಲಾಯಿತು. ಪ್ರಾದೇಶಿಕ ವಿಚಾರಗಳ ಕುರಿತು ಅಭಿಪ್ರಾಯ ವಿನಿಮಯ ಮಾಡಿಕೊಂಡಿದ್ದೇವೆ' ಎಂದು ಜೈಶಂಕರ್ ಟ್ವೀಟ್ ಮಾಡಿದ್ದಾರೆ.

ಅಭಿವೃದ್ಧಿಯ ದೃಷ್ಟಿಯಿಂದ ಬಿಐಎಂಎಸ್‌ಟಿಇಸಿ ರಾಷ್ಟ್ರಗಳು ಪರಸ್ಪರ ಸಹಕಾರ ಉತ್ತೇಜನಕ್ಕೆ ಈ ಸಭೆಯಲ್ಲಿ ಹೆಚ್ಚಿನ ಆದ್ಯತೆ ನೀಡಿವೆ.

1997ರಲ್ಲಿ ಸ್ಥಾಪಿತವಾದ ಬಿಐಎಂಎಸ್‌ಟಿಇಸಿ, ಪರಸ್ಪರ ಸಹಕಾರಕ್ಕಾಗಿ ಬಂಗಾಳ ಕೊಲ್ಲಿಯ ದೇಶಗಳನ್ನು ಒಟ್ಟುಗೂಡಿಸುವ ಆರ್ಥಿಕ ಮತ್ತು ತಾಂತ್ರಿಕ ಉಪಕ್ರಮವಾಗಿದೆ. ಇದಕ್ಕೂ ಮುನ್ನ ಜೈಶಂಕರ್ ಅವರು ಥಾಯ್ಲೆಂಡ್ ಪ್ರಧಾನಿ ಪ್ರಯುತ್ ಚಾನ್-ಒ-ಚಾ ಅವರನ್ನು ಭೇಟಿ ಮಾಡಿ ಪ್ರಧಾನಿ ನರೇಂದ್ರ ಮೋದಿಯವರ ಶುಭಾಶಯಗಳನ್ನು ತಿಳಿಸಿದರು.

ಸಿಂಗಪುರ: ಸಂಸತ್ ನಾಮನಿರ್ದೇಶಿತ ಸದಸ್ಯರಲ್ಲಿ ಮೂವರು ಭಾರತೀಯರು

ಸಿಂಗಪುರ (ಪಿಟಿಐ): ಇಲ್ಲಿನ ಸಂಸತ್‌ಗೆ ನಾಮನಿರ್ದೇಶಿತ ಸದಸ್ಯರಾಗಿ (ಎನ್‌ಎಂಪಿ) ನೇಮಕಗೊಳ್ಳಲಿರುವ ಒಂಬತ್ತು ಮಂದಿಯಲ್ಲಿ ಮೂವರು ಸಿಂಗಪುರದಲ್ಲಿ ನೆಲೆಸಿರುವ ಭಾರತೀಯ ಸಂಜಾತರೂ ಸೇರಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸಿಂಗಪುರ ಇಂಡಿಯನ್ ಛೇಂಬರ್ ಆಫ್ ಕಾಮರ್ಸ್ ಆ್ಯಂಡ್ ಇಂಡಸ್ಟ್ರಿಯ ಅಧ್ಯಕ್ಷ ನೀಲ್ ಪರೇಖ್ ನಿಮಿಲ್ ರಜನಿಕಾಂತ್, ಚಂದ್ರದಾಸ್ ಉಷಾ ರಾಣಿ, ಫ್ಲೋರಲ್ ಆರ್ಟ್ ಮ್ಯಾಗಜಿನ್‌ನ ಸಹ-ಸಂಸ್ಥಾಪಕ ಮತ್ತು ವಕೀಲರಾದ ರಾಜ್ ಜೋಶುವಾ ಥಾಮಸ್ ನಾಮನಿರ್ದೇಶನಕ್ಕೆ ಆಯ್ಕೆಯಾಗಿರುವ ಭಾರತ ಸಂಜಾತರು.

ಸಿಂಗಪುರದ ಅಧ್ಯಕ್ಷೆ ಹಲೀಮಾ ಯಾಕೂಬ್ ಅವರು ನಾಮನಿರ್ದೇಶಿತ ಸದಸ್ಯರನ್ನು ಎರಡೂವರೆ ವರ್ಷಗಳ ಅವಧಿಗೆ ಜುಲೈ 24ರಂದು ನೇಮಕ ಮಾಡಲಿದ್ದಾರೆ ಮತ್ತು ಆಗಸ್ಟ್‌ನಲ್ಲಿ ಅವರು ಪ್ರಮಾಣ ವಚನ ಸ್ವೀಕರಿಸಲಿದ್ದಾರೆ ಎಂದು ಮೂಲಗಳು ಹೇಳಿವೆ.

ಜರ್ಮನಿ: ಆಹಿರಾಳನ್ನು ಪೋಷಕರಿಗೆ ಒಪ್ಪಿಸಲು ಆಗ್ರಹಿಸಿ ಪ್ರತಿಭಟನೆ

ಲಂಡನ್ (ಪಿಟಿಐ): ಜರ್ಮನಿಯ ಅಧೀನದಲ್ಲಿರುವ ಭಾರತ ಮೂಲದ ಹೆಣ್ಣು ಮಗು 'ಆಹಿರಾ ಶಾ'ಳನ್ನು ಆಕೆಯ ಪೋಷಕರ ಜೊತೆ ಒಗ್ಗೂಡಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರನ್ನು ಆಗ್ರಹಿಸಿ ಜರ್ಮನಿಯ ಭಾರತೀಯ ಸಮುದಾಯದ ಸದಸ್ಯರು ಫ್ರಾಂಕ್‌ಫರ್ಟ್‌ನಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು.

'ಮೋದಿಜಿ ಸೇವ್ ಆಹಿರಾ' (ಮೋದಿ ಅವರೇ ಆಹಿರಾಳನ್ನು ಉಳಿಸಿ), ಆಹಿರಾ ಈಸ್ ಇಂಡಿಯನ್ (ಆಹಿರಾ ಭಾರತೀಯಳು) ಎಂದು ಬರೆಯಲಾಗಿದ್ದ ಫಲಕಗಳು ಮತ್ತು ಭಿತ್ತಿಚಿತ್ರಗಳನ್ನು ಹಿಡಿದು ಜನರು ಸುರಿವ ಮಳೆಯನ್ನೂ ಲೆಕ್ಕಿಸದೇ ಪ್ರತಿಭಟಿಸಿದರು.

2021 ಆಹಿರಾಳನ್ನು ಪೋಷಕರಿಂದ ಬೇರ್ಪಡಿಸಲಾಗಿತ್ತು. ಈಗ ಆಕೆಗೆ 2 ವರ್ಷ ತುಂಬಿದೆ. ಗುಜರಾತ್ ಮೂಲದವರಾದ ಭಾವೇಶ್ ಜರ್ಮನಿಯಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿ ಉದ್ಯೋಗದಲ್ಲಿದ್ದ ವೇಳೆ ಆಹಿರಾ ಜನಿಸಿದಳು. ಭಾವೇಶ್ ತಾಯಿ ಆಹಿರಾಳನ್ನು ಆಕಸ್ಮಿಕವಾಗಿ ಗಾಯಗೊಳಿಸಿದ್ದರು. ಮಗುವನ್ನು ಪೋಷಕರು ಆಸ್ಪತ್ರೆಗೆ ಕರೆದೊಯ್ದಾಗ ಆಕೆಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಲಾಗಿದೆ ಎಂದು ವೈದ್ಯರು ಹೇಳಿದ್ದರು.

ಪಂಜಾಬ್‌ನಲ್ಲೂ ರಾಜ್ಯಪಾಲ–ಸಿ.ಎಂ ಸಂಘರ್ಷ

ಚಂಡೀಗಢ (ಪಿಟಿಐ): ರಾಜ್ಯಪಾಲರು ಮತ್ತು ಮುಖ್ಯಮಂತ್ರಿ ನಡುವಣ ಸಂಘರ್ಷ ಈಗ ಪಂಜಾಬ್‌ನಲ್ಲಿ ಆರಂಭವಾಗಿದೆ. ಜೂನ್‌ನಲ್ಲಿ ನಡೆದಿದ್ದ ವಿಧಾನಸಭೆ ಅಧಿವೇಶನದ ಸಿಂಧುತ್ವವನ್ನು ಪ್ರಶ್ನಿಸಿರುವ ರಾಜ್ಯಪಾಲರು, 'ಕಾನೂನಿನ ಉಲ್ಲಂಘನೆಯಾಗಿದೆ' ಎಂದು ತಕರಾರು ತೆಗೆದಿದ್ದಾರೆ.

ಆ ವಿಶೇಷ ಅಧಿವೇಶನದಲ್ಲಿ ಅಂಗೀಕರಿಸಿದ ಮಸೂದೆಗಳಿಗೆ ಸಹಿ ಹಾಕುವುದಿಲ್ಲ ಎಂದು ರಾಜ್ಯಪಾಲ ಬನ್ವಾರಿಲಾಲ್ ಪುರೋಹಿತ್ ಅವರು ಮುಖ್ಯಮಂತ್ರಿ ಭಗವಂತ ಮಾನ್ ಅವರಿಗೆ ಪತ್ರ ಬರೆದಿದ್ದಾರೆ.

ವಿಶೇಷ ಅಧಿವೇಶನದಲ್ಲಿ ಅಂಗೀಕರಿಸಿದ ಮಸೂದೆಗಳ ಕಾನೂನುಬದ್ಧತೆ ಕುರಿತಂತೆ ಅಟಾರ್ನಿ ಜನರಲ್ ಅವರ ಸಲಹೆ ಪಡೆಯುವುದಾಗಿ ಹೇಳಿದ್ದಾರೆ. ರಾಜ್ಯಪಾಲರ ಪತ್ರವು ರಾಜಭವನ ಹಾಗೂ ಆಮ್ ಆದ್ಮಿ ಪಕ್ಷ ನೇತೃತ್ವದ ಸರ್ಕಾರದ ನಡುವಿನ ಸಂಘರ್ಷವನ್ನು ಹೆಚ್ಚಿಸಲಿದೆ ಎನ್ನಲಾಗಿದೆ.

ಅಮೃತಸರದ ಗೋಲ್ಡನ್ ಟೆಂಪಲ್‌ನಲ್ಲಿ ನಡೆಯಲಿರುವ ಗುರ್ಬಾನಿಯ ನೇರಪ್ರಸಾರಕ್ಕೆ ಅವಕಾಶ ಕಲ್ಪಿಸುವ ಸಿಖ್ ಗುರುದ್ವಾರ (ತಿದ್ದುಪಡಿ) ಕಾಯ್ದೆ 2023ಕ್ಕೆ ತಿದ್ದುಪಡಿ ಕೋರಿದ್ದ ಮಸೂದೆಗೆ ಅನುಮೋದನೆ ನೀಡುವಂತೆ ಮುಖ್ಯಮಂತ್ರಿ ಎರಡು ದಿನದ ಹಿಂದೆ ಒತ್ತಾಯಿಸಿದ್ದರು.

ಇದು ಸೇರಿ ನಾಲ್ಕು ಮಸೂದೆಗಳನ್ನು ವಿಶೇಷ ಅಧಿವೇಶನದಲ್ಲಿ ಅಂಗೀಕರಿಸಲಾಗಿತ್ತು. ಮುಖ್ಯಮಂತ್ರಿಯವರ ಒತ್ತಾಯಕ್ಕೆ ಪ್ರತಿಕ್ರಿಯೆಯಾಗಿ ಪತ್ರ ಬರೆದಿರುವ ರಾಜ್ಯಪಾಲರು, ಈಗ ವಿಶೇಷ ಅಧಿವೇಶನದ ಸಿಂಧುತ್ವವನ್ನೇ ಪ್ರಶ್ನಿಸಿದ್ದಾರೆ.

'ದೇವಸ್ಥಾನ ಕೆಡವಿ ವಾಣಿಜ್ಯ ಕಟ್ಟಡ ನಿರ್ಮಿಸಲು ಅವಕಾಶವಿಲ್ಲ'

ಕರಾಚಿ (ಪಿಟಿಐ): ಪೂಜಾ ಸ್ಥಳದ ಕಟ್ಟಡವನ್ನು ನೆಲಸಮಗೊಳಿಸಿ ವಾಣಿಜ್ಯ ಬಳಕೆಯ ಕಟ್ಟಡವನ್ನು ನಿರ್ಮಿಸಲು ಅನುವು ಮಾಡುವುದಿಲ್ಲ. ಪೂಜಾ ಸ್ಥಳವು ಅಲ್ಪಸಂಖ್ಯಾತ ಸುಮುದಾಯಕ್ಕೆ ಸೇರಿದ ಕಟ್ಟವಾದರೂ ಸರಿಯೇ ಎಂದು ಪಾಕಿಸ್ತಾನದ ಸಿಂಧ್ ಸರ್ಕಾರವು ಹೇಳಿದೆ.

ಕರಾಚಿಯಲ್ಲಿದ್ದ 150 ವರ್ಷ ಹಳೆಯದಾದ ಹಿಂದೂ ದೇವಸ್ಥಾನವನ್ನು ಕೆಡವಿದ ಪ್ರಕರಣ ವರದಿಯಾದ ಬಳಿಕ ಸರ್ಕಾರ ಹೀಗೆ ಪ್ರತಿಕ್ರಿಯಿಸಿದೆ. ಕಟ್ಟಡ ನಿರ್ಮಾಣಗಾರರ ದುಷ್ಟಕೂಟವು ಮಾರಿ ದೇವಿ ದೇವಸ್ಥಾನವನ್ನು ನೆಲಸಮಗೊಳಿಸಿದೆ.

ಇಮ್ರಾನ್ ಹಶ್ಮಿ ಮತ್ತು ರೇಖಾ ಬಾಯಿ ಎಂಬುವವರು ನಕಲಿ ದಾಖಲೆಗಳನ್ನು ಬಳಸಿ ದೇವಸ್ಥಾನದ ಆಸ್ತಿ ಮಾರಿದ ಬಳಿಕ ಈ ಕೃತ್ಯ ನಡೆದಿದೆ ಎಂದು ಹಿಂದು ಸಮುದಾಯ ಆರೋಪಿಸಿದೆ. ಈ ಆರೋಪವನ್ನು ಅಲ್ಲಗಳೆದಿರುವ ಸಿಂಧ್ ಸರ್ಕಾರವು, ದೇವಸ್ಥಾನ ಇದ್ದ ಜಾಗದಲ್ಲಿ ಕಟ್ಟಡ ನಿರ್ಮಾಣ ಮತ್ತು ನೆಲಸಮಗೊಳಿಸುವ ಪ್ರಕ್ರಿಯೆಗೆ ತಡೆ ನೀಡುವಂತೆ ಪೊಲೀಸರು ಮತ್ತು ಸ್ಥಳೀಯ ಆಡಳಿತಕ್ಕೆ ಆದೇಶ ನೀಡಿದೆ.

ಅಂತಹ ಆಟಗಾರನನ್ನು ಎದುರಿಸಿಯೇ ಇಲ್ಲ: ನೊವಾಕ್ ಜೊಕೊವಿಚ್ ಶ್ಲಾಘನೆ

‘ಅಲ್ಕರಾಜ್ ಪರಿಪೂರ್ಣ ಆಟಗಾರ’

ಲಂಡನ್ (ರಾಯಿಟರ್ಸ್/ಎಎಫ್‌ಪಿ): ನೊವಾಕ್ ಜೊಕೊವಿಚ್ ಅವರು ತಮ್ಮ 23 ವರ್ಷಗಳ ವೃತ್ತಿಜೀವನದಲ್ಲಿ ಟೆನಿಸ್ ಕೋರ್ಟ್‌ನಲ್ಲಿ ಸಾಧ್ಯವಿರುವ ಎಲ್ಲ ಅನುಭವಗಳನ್ನು ಪಡೆದಿದ್ದಾರೆ. ಆದರೆ ಕಾರ್ಲೋಸ್ ಅಲ್ಕರಾಜ್ ಅವರಂತಹ ಆಟಗಾರನನ್ನು ಅವರು ಒಮ್ಮೆಯೂ ಎದುರಿಸಿಲ್ಲವಂತೆ!

ಭಾನುವಾರ ನಡೆದ ವಿಂಬಲ್ಡನ್ ಟೂರ್ನಿಯ ಫೈನಲ್‌ನಲ್ಲಿ ಸ್ಪೇನ್‌ನ ಯುವ ಆಟಗಾರ ಅಲ್ಕರಾಜ್, ಸರ್ಬಿಯದ ಜೊಕೊವಿಚ್ ಅವರನ್ನು ಮಣಿಸಿ ಚಾಂಪಿಯನ್ ಆಗಿದ್ದರು. ವಿಂಬಲ್ಡನ್ ಟೂರ್ನಿಯ ಮೇಲೆ ಜೊಕೊವಿಚ್ ಹಲವು ವರ್ಷಗಳಿಂದ ಹೊಂದಿದ್ದ ಪಾರಮ್ಯಕ್ಕೆ ಅಂತ್ಯ ಹಾಡಿದ್ದರು.

ಫೈನಲ್‌ನಲ್ಲಿ ಅಲ್ಕರಾಜ್ 1-6, 7-6, 6-1, 3-6, 6-4 ರಿಂದ ಗೆದ್ದಿದ್ದರು. 36 ವರ್ಷದ ಜೊಕೊವಿಚ್ ಅವರು ತಮ್ಮನ್ನು ಮಣಿಸಿದ ಯುವ ಪ್ರತಿಭೆಯ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡಿದ್ದಾರೆ.

‘ಪ್ರಾಮಾಣಿಕವಾಗಿ ಹೇಳಬೇಕೆಂದರೆ ನಾನು ಅವನಂತಹ ಆಟಗಾರನ ವಿರುದ್ಧ ಆಡಿಯೇ ಇಲ್ಲ. ಅಲ್ಕರಾಜ್ ಆಟದ ಬಗ್ಗೆ ಜನರು ಕಳೆದ 12 ತಿಂಗಳುಗಳಿಂದ ವಿವಿಧ ಮಾತುಗಳನ್ನು ಆಡುತ್ತಿದ್ದರು. ರೋಜರ್ ಫೆಡರರ್, ರಫೆಲ್ ನಡಾಲ್ ಮತ್ತು ನನ್ನ ಆಟದಲ್ಲಿರುವ ಕೆಲವು ಅಂಶಗಳು ಆತನ ಆಟದಲ್ಲಿ ಮಿಳಿತವಾಗಿದೆ ಎನ್ನುತ್ತಿದ್ದರು. ಅದನ್ನು ನಾನು ಒಪ್ಪುತ್ತೇನೆ’ ಎಂದು ಪಂದ್ಯದ ಬಳಿಕ ಪ್ರತಿಕ್ರಿಯಿಸಿದ್ದಾರೆ.

‘ನಡಾಲ್ ಅವರಲ್ಲಿರುವ ಹೋರಾಟದ ಮನೋಭಾವ ಮತ್ತು ರಕ್ಷಣಾತ್ಮಕ ಆಟವನ್ನು ಅಲ್ಕರಾಜ್ ಅವರಲ್ಲಿ ಕಾಣಬಹುದು. ಅವರ ಬ್ಯಾಕ್‌ಹ್ಯಾಂಡ್ ಹೊಡೆತಗಳಿಗೂ ನನ್ನ ಬ್ಯಾಕ್‌ಹ್ಯಾಂಡ್ ಹೊಡೆತಗಳಿಗೂ ಹೋಲಿಕೆಯಿದೆ. ಅವರೊಬ್ಬ ಪರಿಪೂರ್ಣ ಆಟಗಾರ’ ಎಂದು ಬಣ್ಣಿಸಿದರು.

20 ವರ್ಷದ ಅಲ್ಕರಾಜ್ ಅವರು ಎಲ್ಲ ಮೂರು ರೀತಿಯ ಕೋರ್ಟ್‌ಗಳಲ್ಲಿ (ಕ್ಲೇ, ಹಾರ್ಡ್‌ಕೋರ್ಟ್ ಮತ್ತು ಹುಲ್ಲುಹಾಸು) ಚೆನ್ನಾಗಿ ಆಡುವ ಸಾಮರ್ಥ್ಯವನ್ನು ಬಹಳ ಬೇಗನೇ ಕರಗತ ಮಾಡಿಕೊಂಡಿರುವುದಕ್ಕೆ ಜೊಕೊವಿಚ್ ಅಚ್ಚರಿ ವ್ಯಕ್ತಪಡಿಸಿದ್ದಾರೆ.

‘ಅವರು ಈ ಋತುವಿನಲ್ಲಿ ಹುಲ್ಲುಹಾಸಿನಲ್ಲಿ ಅಷ್ಟು ಚೆನ್ನಾಗಿ ಆಡುವರು ಎಂದು ನಾನು ನಿರೀಕ್ಷಿಸಿಯೇ ಇರಲಿಲ್ಲ. ಆದರೆ ಅವರು ವಿಶ್ವದ ಅತ್ಯುತ್ತಮ ಆಟಗಾರ ಎಂಬುದನ್ನು ಸಾಬೀತುಪಡಿಸಿದ್ದಾರೆ’ ಎಂದು ಶ್ಲಾಘಿಸಿದರು.

ಸಿಕ್ಕ ಅವಕಾಶ ಬಳಸಿಕೊಳ್ಳಲಿಲ್ಲ: ನಿರ್ಣಾಯಕ ಘಟ್ಟಗಳಲ್ಲಿ ನನ್ನ ಪರವಾಗಿ ಬಂದಿದ್ದ ಕೆಲವು ಅವಕಾಶಗಳನ್ನು ಸಮರ್ಥವಾಗಿ ಬಳಸಿಕೊಳ್ಳಲು ವಿಫಲವಾಗಿದ್ದಕ್ಕೆ ವಿಷಾದವಿದೆ ಎಂದು ಜೊಕೊವಿಚ್ ಹೇಳಿದರು.

ಮೊದಲ ಸೆಟ್‌ನಲ್ಲಿ ನಿರಾಯಾಸ ಗೆಲುವು ಸಾಧಿಸಿದ್ದ ಜೊಕೊವಿಚ್‌ಗೆ ಟೈಬ್ರೇಕರ್‌ನಲ್ಲಿ ನಿರ್ಧಾರವಾಗಿದ್ದ ಎರಡನೇ ಸೆಟ್ ಗೆಲ್ಲಲು ಅವಕಾಶವಿತ್ತು. ಆದರೆ, ಬ್ಯಾಕ್‌ಹ್ಯಾಂಡ್ ರಿಟರ್ನ್‌ನಲ್ಲಿ ಚೆಂಡನ್ನು ನೆಟ್‌ಗೆ ಹೊಡೆದಿದ್ದರು.

‘ಎರಡನೇ ಸೆಟ್‌ನ ಟೈಬ್ರೇಕರ್‌ನಲ್ಲಿ 6-6 ರಿಂದ ಸಮಬಲ ಆಗಿದ್ದಾಗ, ನನ್ನ ಬ್ಯಾಕ್‌ಹ್ಯಾಂಡ್ ಹೊಡೆತದಲ್ಲಿ ಚೆಂಡು ನೆಟ್‌ಗೆ ಬಡಿಯಿತು. ಆ ಹೊಡೆತದಲ್ಲಿ ತಪ್ಪು ಮಾಡಬಾರದಿತ್ತು’ ಎಂದರು.

ಐದನೇ ಸೆಟ್‌ನ ಎರಡನೇ ಗೇಮ್‌ನಲ್ಲಿ ಎದುರಾಳಿಯ ಸರ್ವ್ ಬ್ರೇಕ್ ಮಾಡಿ 2-0 ರಲ್ಲಿ ಮುನ್ನಡೆ ಗಳಿಸುವ ಅತ್ಯುತ್ತಮ ಅವಕಾಶವನ್ನು ಜೊಕೊವಿಚ್ ಕಳೆದುಕೊಂಡಿದ್ದರು. ಅವರ ಸ್ಮ್ಯಾಷ್‌ನಲ್ಲಿ ಚೆಂಡು ನೆಟ್‌ಗೆ ಬಡಿದಿತ್ತು.

‘ಆ ಬ್ರೇಕ್ ಪಾಯಿಂಟ್‌ನಲ್ಲಿ (ಐದನೇ ಸೆಟ್) ಚೆನ್ನಾಗಿ ಆಡಿದ್ದೆ. ಆದರೆ, ಬಲವಾಗಿ ಗಾಳಿ ಬೀಸುತ್ತಿದ್ದರಿಂದ ದೇಹದ ಮೇಲೆ ಸಮತೋಲನ ಸಾಧಿಸಲು ಆಗಲಿಲ್ಲ. ಸ್ಮ್ಯಾಷ್ ಹೊಡೆಯಲು ವಿಫಲನಾದೆ’ ಎಂದು ಹೇಳಿದರು.



ಪಂದ್ಯದ ಬಳಿಕ ನಡೆದ ಸುದ್ದಿಗೋಷ್ಠಿಯಲ್ಲಿ ಭಾವುಕರಾದ ನೊವಾಕ್ ಜೊಕೊವಿಚ್ (ಎಡಚಿತ್ರ). ಕಾರ್ಲೋಸ್ ಅಲ್ಕರಾಜ್ –ಎಎಫ್‌ಪಿ ಚಿತ್ರಗಳು

‘ಪರಿವರ್ತನೆಯ ಯುಗ ಆರಂಭದ ಸೂಚನೆ’

ವಿಂಬಲ್ಡನ್ ಫೈನಲ್‌ನಲ್ಲಿ ನೊವಾಕ್ ಜೊಕೊವಿಚ್ ವಿರುದ್ಧದ ಗೆಲುವು ‘ಪುರುಷರ ಟೆನಿಸ್‌ನಲ್ಲಿ ಪರಿವರ್ತನೆಯ ಯುಗದ ಆರಂಭದ ಸೂಚನೆ’ ಎಂದು ಕಾರ್ಲೋಸ್ ಅಲ್ಕರಾಜ್ ಅಭಿಪ್ರಾಯಪಟ್ಟಿದ್ದಾರೆ.

‘ನಾನು ಅವರನ್ನು (ಜೊಕೊವಿಚ್) ಸೋಲಿಸುವುದನ್ನು ನೋಡುವುದು ಯುವ ಪೀಳಿಗೆಯ ಆಟಗಾರರಿಗೆ ವಿಶೇಷ ಅನುಭವ ಆಗಿದೆ. ನಮಗೂ ಸೋಲಿಸಲು ಸಾಧ್ಯ ಎಂಬ ಭಾವನೆಯನ್ನು ಅವರಲ್ಲಿ ಮೂಡಿಸಿದೆ. ನನ್ನ ಹಾಗೂ ಯುವ ಆಟಗಾರರ ಪಾಲಿಗೆ ಇದು ಒಳ್ಳೆಯ ವಿಚಾರ’ ಎಂದು ಪ್ರತಿಕ್ರಿಯಿಸಿದ್ದಾರೆ.

‘ಇದೊಂದು ಕನಸು. ನನಗೆ ಈಗ 20 ವರ್ಷ. ಇಂತಹ ಕ್ಷಣಗಳನ್ನು ನಾನು ಅನೇಕ ಸಲ ಅನುಭವಿಸಿಲ್ಲ. ಇದು ನನ್ನ ಜೀವನದ ಅತ್ಯಂತ ಸಂತಸದ ಕ್ಷಣ’ ಎಂದರು.

10ನೇ ಸ್ಥಾನಕ್ಕೇರಿದ ವೊಂಡ್ರೊಸೋವಾ

ವಿಂಬಲ್ಡನ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ವಿಭಾಗದ ಪ್ರಶಸ್ತಿ ಜಯಿಸಿರುವ ಜೆಕ್ ರಿಪಬ್ಲಿಕ್‌ನ ಮಾರ್ಕೆತ ವೊಂಡ್ರೊಸೋವಾ ಅವರು ಡಬ್ಲ್ಯುಟಿಎ ರ‍್ಯಾಂಕಿಂಗ್‌ನಲ್ಲಿ 10ನೇ ಸ್ಥಾನಕ್ಕೇರಿದ್ದಾರೆ. ಇದು ಅವರ ವೃತ್ತಿಜೀವನದ ಅತ್ಯುತ್ತಮ ರ‍್ಯಾಂಕ್ ಆಗಿದೆ. ವಿಂಬಲ್ಡನ್ ಟೂರ್ನಿಗೆ ಮುನ್ನ 42ನೇ ಸ್ಥಾನದಲ್ಲಿದ್ದ ಅವರು, 32 ಸ್ಥಾನಗಳಷ್ಟು ಮೇಲಕ್ಕೇರಿದ್ದಾರೆ. ಎಟಿಪಿ ರ‍್ಯಾಂಕಿಂಗ್‌ನಲ್ಲಿ ಅಲ್ಕರಾಜ್ ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ.

ಪ್ರಾಗ್ ಟೂರ್ನಿಯಲ್ಲಿ ಮೂರನೇ ನಾರ್ಮ್ ಗಳಿಕೆ

ಶರಣ್ ಇಂಟರ್‌ನ್ಯಾಷನಲ್ ಮಾಸ್ಟರ್

ಪ್ರಜಾವಾಣಿ ವಾರ್ತೆ

ಮಂಗಳೂರು: ನಗರದ ಚೆಸ್ ಆಟಗಾರ ಶರಣ್ ರಾವ್ ಇಂಟರ್‌ನ್ಯಾಷನಲ್ ಮಾಸ್ಟರ್ (ಐಎಂ) ಪಟ್ಟ ತಮ್ಮದಾಗಿಸಿಕೊಂಡಿದ್ದಾರೆ. ಆಸ್ಟ್ರಿಯಾದಲ್ಲಿ ಜುಲೈ 15ರಂದು ಮುಕ್ತಾಯಗೊಂಡ ಸೇಂಟ್ ವೇಟ್ ಜಾಕ್ಸ್ ಲೇಮಾನ್ಸ್ ಓಪನ್ ಟೂರ್ನಿಯಲ್ಲಿ ಅವರು ಈ ಸಾಧನೆ ಮಾಡಿದರು.

ಯುರೋಪ್ ಪ್ರವಾಸದಲ್ಲಿರುವ ಅವರು ಜೆಕ್ ಗಣರಾಜ್ಯದ ಪ್ರಾಗ್‌ನಲ್ಲಿ ನಡೆದ ಟೂರ್ನಿಯಲ್ಲಿ ಐಎಂ ಪಟ್ಟದ ಮೂರನೇ ನಾರ್ಮ್ ಗಳಿಸಿದ್ದರು. ಅವರು ಐಎಂ ಪಟ್ಟ ಪಡೆದ ಕರ್ನಾಟಕದ ಹತ್ತನೇ ಆಟಗಾರ.

ಒಂಬತ್ತು ಸುತ್ತುಗಳ ಸೇಂಟ್ ವೇಟ್ ಜಾಕ್ಸ್ ಲೇಮಾನ್ಸ್ ಓಪನ್ ಟೂರ್ನಿಯಲ್ಲಿ 7.5 ಪಾಯಿಂಟ್ ಕಲೆ ಹಾಕಿದ್ದ ಶರಣ್ ಎರಡನೇ ಸ್ಥಾನ ಪಡೆದಿದ್ದಾರೆ. ಅಂತಿಮ ಸುತ್ತಿನಲ್ಲಿ ಜರ್ಮನಿಯ ಸೆಬಾಸ್ಟಿಯನ್ ಹಫ್‌ಮ್ಯಾನ್ ವಿರುದ್ಧ ಜಯ ಸಾಧಿಸುವುದರೊಂದಿಗೆ ರೇಟಿಂಗ್‌ನಲ್ಲಿ 2400ರ ಗಡಿ ದಾಟಿದರು.

ಇಲ್ಲಿನ ಲಾಲ್‌ಬಾಗ್ ನಿವಾಸಿಗಳಾದ ಶುಭಾನಂದ ರಾವ್ ಮತ್ತು ಜ್ಯೋತಿ ರಾವ್ ಅವರ ಪುತ್ರ ಶರಣ್ ಇಂಟರ್‌ನ್ಯಾಷನಲ್ ಮಾಸ್ಟರ್ ಪಟ್ಟದ ಮೊದಲ ನಾರ್ಮ್ ಗಳಿಸಿದ್ದು 2021ರಲ್ಲಿ. ಸ್ಪೇನ್‌ನ ಬಾರ್ಸಿಲೋನಾದಲ್ಲಿ ನಡೆದ ಸನ್‌ವೇ ಸಿಟ್ಜಸ್ ಚೆಸ್ ಫೆಸ್ಟಿವಲ್‌ನಲ್ಲಿ ಈ ಸಾಧನೆ ಮಾಡಿದ ಅವರು ಕಳೆದ ವರ್ಷ ನಡೆದ ಮಹಾರಾಷ್ಟ್ರ ಓಪನ್ ಟೂರ್ನಿಯಲ್ಲಿ ಎರಡನೇ ನಾರ್ಮ್ ಗಳಿಸಿದ್ದರು.

ಜುಲೈ ಮೊದಲ ವಾರದಲ್ಲಿ 2255 ಎಲೊ ರೇಟಿಂಗ್ ಹೊಂದಿದ್ದ ಶರಣ್ ಜೆಕ್ ಗಣರಾಜ್ಯದ ಪ್ರಾಗ್ ಟೂರ್ನಿಯಲ್ಲಿ 69.6 ಪಾಯಿಂಟ್‌ಗಳ ಸಾಧನೆ ಮಾಡಿದರು. ನಂತರ ಬಲ್ಗೇರಿಯಾದಲ್ಲಿ 40.2 ಮತ್ತು ಆಸ್ಟ್ರಿಯಾದಲ್ಲಿ 37 ಪಾಯಿಂಟ್ ಕಲೆ ಹಾಕುವ ಮೂಲಕ ಒಟ್ಟು ಪಾಯಿಂಟ್‌ಗಳನ್ನು 2401.8ಕ್ ಕೇರಿಸಿಕೊಂಡರು. ಈ ನಡುವೆ ಸ್ಲೊವಾಕಿಯಾದಲ್ಲಿ ನಡೆದ ಟೂರ್ನಿಯಲ್ಲೂ ಅವರು ಪ್ರಶಸ್ತಿ ಗೆದ್ದುಕೊಂಡಿದ್ದರು.

‘2021ರಲ್ಲಿ ಮೊದಲ ನಾರ್ಮ್ ಗಳಿಸಿದಾಗ ಮುಂದಿನ ಹಾದಿಯ ಬಗ್ಗೆ ಸ್ಪಷ್ಟ ಗುರಿ ಇರಲಿಲ್ಲ. ನಂತರ, ಎಲ್ಲವೂ ಸ್ಪಷ್ಟವಾಗುತ್ತಿದ್ದಂತೆ ಇಂಟರ್‌ನ್ಯಾಷನಲ್ ಮಾಸ್ಟರ್ ಆಗಬೇಕೆಂಬ ಛಲ ಉಂಟಾಯಿತು. ಮುಂದಿನ ಎರಡು ನಾರ್ಮ್‌ಗಳನ್ನು ಗಳಿಸಲು ಸುದೀರ್ಘ ಎರಡು ವರ್ಷಗಳು ಹಿಡಿದವು. ಈ ಬಾರಿಯ ಯುರೋಪ್ ಪ್ರವಾಸದಲ್ಲಿ ಪ್ರಶಸ್ತಿಗಳನ್ನು ಗೆಲ್ಲಲು ಮತ್ತು ಪಂದ್ಯಗಳಲ್ಲಿ ಸೋಲದೇ ಇರಲು ಗಮನಹರಿಸಿದ್ದೆ. ಅದು ಕೈ ಹಿಡಿಯಿತು. ಕೊನೆಗೂ ಇಂಟರ್‌ನ್ಯಾಷನಲ್ ಮಾಸ್ಟರ್ ಆಗಿರುವುದು ಖುಷಿ ತಂದಿದೆ’ ಎಂದು ಶರಣ್ ಅಭಿಪ್ರಾಯಪಟ್ಟಿದ್ದಾರೆ.



ಶರಣ್ ರಾವ್

ಏಷ್ಯನ್ ಗೇಮ್ಸ್‌ಗೆ ಫುಟ್‌ಬಾಲ್ ತಂಡ ಕಳುಹಿಸಿ: ಆಗ್ರಹ

ಪ್ರಧಾನಿ ಮಧ್ಯಪ್ರವೇಶಕ್ಕೆ ಸ್ಟಿಮ್ಯಾಕ್ ಮನವಿ

ನವದೆಹಲಿ (ಪಿಟಿಐ): ಮುಂಬರುವ ಏಷ್ಯನ್ ಗೇಮ್ಸ್‌ಗೆ ಭಾರತ ಫುಟ್‌ಬಾಲ್ ತಂಡದ ಪಾಲ್ಗೊಳ್ಳುವಿಕೆ ಕುರಿತಂತೆ ಮಧ್ಯಪ್ರವೇಶ ಮಾಡಬೇಕೆಂದು ರಾಷ್ಟ್ರೀಯ ಫುಟ್‌ಬಾಲ್ ತಂಡದ ಕೋಚ್ ಇಗೊರ್ ಸ್ಟಿಮ್ಯಾಕ್ ಅವರು ಪ್ರಧಾನಿ ಮತ್ತು ಕ್ರೀಡಾ ಸಚಿವ ಅನುರಾಗ್ ಠಾಕೂರ್ ಅವರಿಗೆ ಮನವಿ ಮಾಡಿದ್ದಾರೆ.

ಹಾಂಗ್‌ಝೌನಲ್ಲಿ ಸೆ.23 ರಿಂದ ನಡೆಯಲಿರುವ ಏಷ್ಯನ್ ಗೇಮ್ಸ್‌ಗೆ ಭಾರತ 23 ವರ್ಷದೊಳಗಿನ ಫುಟ್‌ಬಾಲ್ ತಂಡ ವನ್ನು ಕಳುಹಿಸಲು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಯೋಜನೆ ಹಾಕಿಕೊಂಡಿತ್ತು.

ಆದರೆ ಭಾರತ ತಂಡವು ಏಷ್ಯಾದಲ್ಲಿ ಅಗ್ರ 8ರೊಳಗಿನ ಸ್ಥಾನ ಹೊಂದಿಲ್ಲ ಎಂಬ ಕಾರಣ, ಫುಟ್‌ಬಾಲ್ ತಂಡವನ್ನು ಏಷ್ಯನ್ ಗೇಮ್ಸ್‌ಗೆ ಕಳುಹಿಸದಿರಲು ಕ್ರೀಡಾ ಸಚಿವಾಲಯ ನಿರ್ಧರಿಸಿದೆ.

ಇಗೊರ್ ಸ್ಟಿಮ್ಯಾಕ್

ಏಷ್ಯನ್ ಫುಟ್‌ಬಾಲ್ ಕಾನ್ಫೆಡರೇಷನ್‌ನ ದೇಶಗಳಲ್ಲಿ ಭಾರತವು 18ನೇ ರ‍್ಯಾಂಕ್ ಹೊಂದಿದೆ. ಆದರೆ ತಂಡವನ್ನು ಕಳುಹಿಸಲು ಕ್ರಮ ವಹಿಸುವಂತೆ ಸ್ಟಿಮ್ಯಾಕ್ ಅವರು ಸಾಮಾಜಿಕ ಮಾಧ್ಯಮದಲ್ಲಿ ಬರೆದ ಪತ್ರದಲ್ಲಿ ಪ್ರಧಾನಿಗೆ ಮನವಿ ಮಾಡಿದ್ದಾರೆ. ‘ನೀವು ಮಧ್ಯಪ್ರವೇಶಿಸಿ ಭಾರತ ತಂಡ ಪಾಲ್ಗೊಳ್ಳುವಂತೆ ಮಾಡಬೇಕು’ ಎಂದು ಕೋರಿದ್ದಾರೆ.

‘23 ವರ್ಷದೊಳಗಿನವರ ತಂಡವು ಪ್ರತಿಭಾನ್ವಿತ ಆಟಗಾರರನ್ನು ಒಳಗೊಂಡಿದೆ. 23 ವರ್ಷದೊಳಗಿನವರ ವಿಶ್ವಕಪ್ ಟೂರ್ನಿಯ ಅರ್ಹತಾ ಹಂತದಲ್ಲಿ ಉತ್ತಮ ಪ್ರದರ್ಶನ ನೀಡಿತ್ತು. ಆದರೆ ಈ ತಂಡ ಏಷ್ಯನ್ ಗೇಮ್ಸ್‌ನಲ್ಲಿ ಭಾಗವಹಿಸುವುದರಿಂದ ವಂಚಿತವಾಗಿದೆ’ ಎಂದು ಅಸಮಾಧಾನ ಹೊರಹಾಕಿದ್ದಾರೆ.

‘ಈ ತಂಡವು ಏಷ್ಯನ್ ಗೇಮ್ಸ್‌ನಲ್ಲಿ ಭಾಗವಹಿಸಲು ಅರ್ಹವಾಗಿದೆ. ತಂಡಕ್ಕೆ ಅವಕಾಶ ನಿರಾಕರಿಸಲು ನೀಡಿರುವ ಕಾರಣವನ್ನು ಒಪ್ಪಲಾಗದು. ರಾಷ್ಟ್ರೀಯ ಫುಟ್‌ಬಾಲ್ ತಂಡದ ಕೋಚ್ ಆಗಿದ್ದುಕೊಂಡು, ಈ ವಿಷಯ ನಿಮ್ಮ ಗಮನಕ್ಕೆ ತರುವುದು ಮುಖ್ಯ ಎಂದು ನಾನು ಭಾವಿಸಿದೆ’ ಎಂದು ಪತ್ರದಲ್ಲಿ ಹೇಳಿದ್ದಾರೆ.

ಕೊರಿಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿ ಇಂದಿನಿಂದ

ಸಿಂಧು, ಶ್ರೀಕಾಂತ್ ಮೇಲೆ ನಿರೀಕ್ಷೆ

ಯೋಸು. ಕೊರಿಯಾ (ಪಿಟಿಐ): ಭಾರತದ ಅನುಭವಿ ಷಟ್ಲರ್‌ಗಳಾದ ಪಿ.ವಿ. ಸಿಂಧು ಮತ್ತು ಕಿದಂಬಿ ಶ್ರೀಕಾಂತ್ ಮಂಗಳವಾರ ಆರಂಭವಾಗಲಿರುವ ಕೊರಿಯಾ ಓಪನ್ 500 ಟೂರ್ನಿಯಲ್ಲಿ ತಮ್ಮ ಅಭಿಯಾನ ಮುಂದುವರಿಸಲಿದ್ದು, ಪ್ರಸಕ್ತ ಋತುವಿನಲ್ಲಿ ಚೊಚ್ಚಲ ಪ್ರಶಸ್ತಿಯ ನಿರೀಕ್ಷೆಯಲ್ಲಿದ್ದಾರೆ. ಭಾರತದ ಲಕ್ಷ್ಯ ಸೇನ್ ಸೇರಿ ಪ್ರಮುಖ ಆಟಗಾರರು ಹಿಂದೆ ಸರಿದಿರುವುದರಿಂದ ಈ ಟೂರ್ನಿ ಕೊಂಚ ಕಳೆಗುಂದಿದೆ.

ಒಲಿಂಪಿಕ್ಸ್‌ನಲ್ಲಿ ಎರಡು ಬಾರಿ ಪದಕ ವಿಜೇತೆಯಾಗಿರುವ ಸಿಂಧು ಪಾದದ ನೋವಿನಿಂದಾಗಿ ಐದು ತಿಂಗಳು ವಿಶ್ರಾಂತಿ ಪಡೆದು ಬಂದು ಅರ್ಧ ಋತು ಮುಗಿದರೂ ಒಂದೂ ಪ್ರಶಸ್ತಿ ಗೆಲ್ಲಲು ಸಾಧ್ಯವಾಗಲಿಲ್ಲ. ಮ್ಯಾಡ್ರಿಡ್‌ನಲ್ಲಿ ನಡೆದ ಸ್ಪೇನ್ ಮಾಸ್ಟರ್ಸ್ ಟೂರ್ನಿಯಲ್ಲಿ ಫೈನಲ್ ತಲುಪಿದ್ದೇ ಅವರ ಈ ಋತುವಿನ ಶ್ರೇಷ್ಠ ಸಾಧನೆಯಾಗಿದೆ.

ಕೆನಡಾ ಓಪನ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಮತ್ತು ಅಮೆರಿಕ ಓಪನ್‌ನಲ್ಲಿ ಕ್ವಾರ್ಟರ್ ಫೈನಲ್ ಹಂತದಲ್ಲಿ ಅವರು ಹೊರಬಿದ್ದಿದ್ದರು. ವಿಶ್ವದ 12ನೇ ಕ್ರಮಾಂಕದಲ್ಲಿರುವ ಸಿಂಧು, ಕೊರಿಯಾ ಓಪನ್ ಟೂರ್ನಿಯ ಮೊದಲ ಸುತ್ತಿನಲ್ಲಿ ಚೈನೀಸ್ ತೈಪೆಯ ಪೈ ಯು ಪೊ ಅವರ ಸವಾಲನ್ನು ಎದುರಿಸಲಿದ್ದಾರೆ.

ಸಿಂಧು ಅವರು ತಮ್ಮ ಹೊಸ ಕೋಚ್ ಆಗಿರುವ ಮಾಜಿ ಆಲ್ ಇಂಗ್ಲೆಂಡ್ ಚಾಂಪಿಯನ್ ಹಫೀಜ್ ಹಾಷಿಮ್ ಅವರೊಂದಿಗೆ ಇಲ್ಲಿಗೆ ಬಂದಿದ್ದು, ಉತ್ತಮ ಪ್ರದರ್ಶನ ನೀಡುವ ವಿಶ್ವಾಸದಲ್ಲಿದ್ದಾರೆ. ಮುಂದಿನ ವರ್ಷದ ಒಲಿಂಪಿಕ್ಸ್‌ಗೆ ಅರ್ಹತಾ ಅವಧಿ ಬರುವ ಏಪ್ರಿಲ್‌ನೊಳಗೆ ಮುಗಿಯಲಿದೆ. ಹೀಗಾಗಿ ಅಷ್ಟರೊಳಗೆ ರ‍್ಯಾಂಕಿಂಗ್ ಸುಧಾರಿಸಬೇಕಾಗಿದೆ.

2021ರ ವಿಶ್ವ ಚಾಂಪಿಯನ್‌ಷಿಪ್‌ನ ಬೆಳ್ಳಿ ಪದಕ ವಿಜೇತ ಶ್ರೀಕಾಂತ್ ಕೂಡ ಪ್ರಶಸ್ತಿಯ ಬರವನ್ನು ಎದುರಿಸುತ್ತಿದ್ದಾರೆ. ಈ ಋತುವಿನಲ್ಲಿ ಸ್ಪೇನ್ ಮಾಸ್ಟರ್ಸ್, ಮಲೇಷ್ಯಾ ಮಾಸ್ಟರ್ಸ್ ಮತ್ತು ಇಂಡೋನೇಷ್ಯಾ ಓಪನ್ ಟೂರ್ನಿಯಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿದ್ದೇ ಅವರ ಉತ್ತಮ ಸಾಧನೆಯಾಗಿದೆ. ಇಲ್ಲಿ ಮೊದಲ ಸುತ್ತಿನಲ್ಲಿ ಅವರು ಜಪಾನ್‌ನ ಕೆಂಟೊ ಮೊಮೊಟಾ ಅವರನ್ನು ಎದುರಿಸಲಿದ್ದಾರೆ. ಐದನೇ ಶ್ರೇಯಾಂಕ ಪಡೆದಿರುವ ಭಾರತದ ಎಚ್.ಎಸ್. ಪ್ರಣಯ್ ಮೊದಲ ಸುತ್ತಿನಲ್ಲಿ ಬೆಲ್ಜಿಯಂನ ಜೂಲಿಯನ್ ಕರ‍್ರಗಿ ವಿರುದ್ಧ ಅಭಿಯಾನ ಆರಂಭಿಸುವರು.

ಇಂಡೋನೇಷ್ಯಾ ಓಪನ್‌ನ ಪುರುಷರ ಡಬಲ್ಸ್‌ನ ಚಾಂಪಿಯನ್ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಮೇಲೆ ಎಲ್ಲರ ಗಮನ ನೆಟ್ಟಿದ್ದು, ಅವರು ಮೊದಲ ಸುತ್ತಿನಲ್ಲಿ ಥಾಯ್ಲೆಂಡ್‌ನ ಸುಪಕ್ ಜೊಮ್ಕೋಹ್ ಮತ್ತು ಕಿಟ್ಟಿನುಪಾಂಗ್ ಕೆಡ್ರೆನ್ ಅವರನ್ನು ಎದುರಿಸುವರು.

‘ಭಾವನಾತ್ಮಕವಾಗಿ ಪರಿಣಾಮ ಬೀರಿದೆ’

ನವದೆಹಲಿ (ಪಿಟಿಐ): ‘ಅಮೆರಿಕ ಓಪನ್ ಟೂರ್ನಿಯ ಕ್ವಾರ್ಟರ್ ಫೈನಲ್‌ನಲ್ಲಿನ ಸೋಲು ನಿರಾಸೆ ಮೂಡಿಸಿದೆ. ಮಾತ್ರವಲ್ಲ, ನನ್ನ ಮೇಲೆ ಭಾವನಾತ್ಮಕವಾಗಿ ಪರಿಣಾಮ ಬೀರಿದೆ’ ಎಂದು ಪಿ.ವಿ. ಸಿಂಧು ಟ್ವಿಟರ್‌ನಲ್ಲಿ ಬರೆದುಕೊಂಡಿದ್ದಾರೆ.

ಶನಿವಾರ ನಡೆದ ಪಂದ್ಯದಲ್ಲಿ ಸಿಂಧು ಅವರು ಚೀನಾದ ಗಾವೊ ಫಾಂಗ್ ಜೀ ಎದುರು 20–22, 13–21ರಿಂದ ಸೋತಿದ್ದರು. ಈ ಕುರಿತು ಪ್ರತಿಕ್ರಿಯಿಸಿರುವ ಅವರು, ‘ಫಾಂಗ್ ಜೀ ಅವರನ್ನು ಕೆನಡಾ ಓಪನ್‌ನಲ್ಲಿ ಮಣಿಸಿದ್ದರೂ ನನ್ನ ಕೆಲ ದೌರ್ಬಲ್ಯದಿಂದಾಗಿ ಅವರ ಎದುರು ಸೋಲಬೇಕಾಯಿತು. ಮುಂದೆ ಉತ್ತಮ ಪ್ರದರ್ಶನದ ವಿಶ್ವಾಸದಲ್ಲಿದ್ದೇನೆ’ ಎಂದಿದ್ದಾರೆ.

ವಿಶ್ವ ಜೂನಿಯರ್ ಶೂಟಿಂಗ್:

ಭಾರತಕ್ಕೆ ಮತ್ತೊಂದು ಚಿನ್ನ

ನವದೆಹಲಿ (ಪಿಟಿಐ): ಭಾರತದ ಅಭಿನವ್ ಶಾ ಮತ್ತು ಗೌತಮಿ ಭಾನೋಟ್ ಜೋಡಿ, ಕೊರಿಯಾದ ಚಾಂಗ್ವಾನ್‌ನಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ವಿಶ್ವ ಜೂನಿಯರ್ ಶೂಟಿಂಗ್ ಚಾಂಪಿಯನ್‌ಷಿಪ್‌ನ ಎರಡನೇ ದಿನವಾದ ಸೋಮವಾರ 10 ಮೀ. ಮಿಶ್ರ ತಂಡ ವಿಭಾಗದಲ್ಲಿ ಚಿನ್ನದ ಪದಕ ಗೆದ್ದುಕೊಂಡಿತು.

ಚಿನ್ನದ ಪದಕದ ಸ್ಪರ್ಧೆಯಲ್ಲಿ ಭಾರತದ ಜೋಡಿ 17–13 ಅಂತರದಿಂದ ಫ್ರಾನ್ಸ್‌ನ ಒಷಾನೆ ಮುಲ್ಲರ್ ಮತ್ತು ರೊಮೇನ್ ಅಫ್ರೀರ್ ಜೋಡಿಯನ್ನು ಸೋಲಿಸಿತು. ಇದು ಚಾಂಪಿಯನ್‌ಷಿಪ್‌ನಲ್ಲಿ ಭಾರತಕ್ಕೆ ಮೂರನೇ ಚಿನ್ನ.

ಒಟ್ಟು ಮೂರು ಚಿನ್ನ, ಒಂದು ಬೆಳ್ಳಿ ಮತ್ತು ಎರಡು ಕಂಚಿನ ಪದಕಗಳೊಡನೆ ಭಾರತ ಎರಡನೇ ಸ್ಥಾನದಲ್ಲಿದೆ. ಹೆಚ್ಚುವರಿಯಾಗಿ ಒಂದು ಬೆಳ್ಳಿ ಗೆದ್ದಿರುವ ಚೀನಾ ಅಗ್ರಸ್ಥಾನದಲ್ಲಿದೆ.

ಎರಡನೇ ದಿನ ಭಾರತ 10 ಮೀ. ಏರ್ ಪಿಸ್ತೂಲ್ ಮಿಕ್ಸೆಡ್ ತಂಡ ವಿಭಾಗದಲ್ಲಿ ಕಂಚಿನ ಪದಕ ಗಳಿಸಿತು. ಅಭಿನವ್ ಚೌಧರಿ– ಸೈನ್ಯಾಮ್ ಅವರು ಕಂಚಿನ ಪದಕಕ್ಕೆ ನಡೆದ ಸ್ಪರ್ಧೆಯಲ್ಲಿ 17–11 ರಿಂದ ಕೊರಿಯಾದ ಕಿಮ್ ಜುರಿ– ಕಿಮ್ ಕಂಗ್ಯುನ್ ತಂಡದ ಮೇಲೆ ಜಯಗಳಿಸಿದರು.

ಚಿನ್ನದ ಪದಕದೊಂದಿಗೆ ಗೌತಮಿ ಭಾನೋಟ್ ಮತ್ತು ಅಭಿನವ್ ಶಾ

ಹಾಕಿ ಕರ್ನಾಟಕ ಲೀಗ್: ಪಂದ್ಯ ಡ್ರಾ

ಬೆಂಗಳೂರು: ಅಕೌಂಟೆಂಟ್ ಜನರಲ್ ಆಫೀಸ್ ರಿಕ್ರಿಯೇಷನ್ ಕ್ಲಬ್ ಮತ್ತು ಕೆನರಾ ಬ್ಯಾಂಕ್ ತಂಡಗಳ ಮಧ್ಯೆ ನಡೆದ ಏಳನೇ ಆವೃತ್ತಿಯ ಹಾಕಿ ಕರ್ನಾಟಕ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯ 2–2ರಿಂದ ಡ್ರಾ ಗೊಂಡಿದೆ.

ಸೋಮವಾರ ನಡೆದ ಪಂದ್ಯದಲ್ಲಿ ಕೆನರಾ ಬ್ಯಾಂಕ್ ತಂಡದ ಪೃಥ್ವಿರಾಜ್ 25ನೇ ಮತ್ತು 38ನೇ ನಿಮಿಷಕ್ಕೆ ಗೋಲು ದಾಖಲಿಸಿದರೆ, ರಿಕ್ರಿಯೇಷನ್ ಕ್ಲಬ್‌ನ ತ್ರಿಶೂಲ್ ಗಣಪತಿ 14ನೇ ಮತ್ತು 50ನೇ ನಿಮಿಷಕ್ಕೆ ಗೋಲು ಗಳಿಸಿದರು.

ಚೀನಾ ಎದುರು ಭಾರತಕ್ಕೆ ಸೋಲು

ಲಿಂಬರ್ಗ್ (ಜರ್ಮನಿ), (ಪಿಟಿಐ): ಭಾರತ ಮಹಿಳಾ ಹಾಕಿ ತಂಡ, ಭಾನುವಾರ ರಾತ್ರಿ ನಡೆದ ಪಂದ್ಯದಲ್ಲಿ ಚೀನಾ ತಂಡಕ್ಕೆ 2–3 ಗೋಲುಗಳಿಂದ ಸೋಲುವ ಮೂಲಕ ಜರ್ಮನಿ ಪ್ರವಾಸವನ್ನು ನಿರಾಶಾದಾಯಕ ರೀತಿ ಆರಂಭಿಸಿತು.

ನವನೀತ್ ಕೌರ್ ಅವರು ಭಾರತ ತಂಡದ ಎರಡೂ ಗೋಲುಗಳನ್ನು (24ನೇ ಮತ್ತು 45ನೇ ನಿಮಿಷ) ಗಳಿಸಿದರೆ, ಚೆನ್ ಜಿಯಾಲಿ (9ನೇ ನಿಮಿಷ) ಝೂಂಗ್ ಜಿಯಾಖಿ (45) ಮತ್ತು ಕ್ಸು ಯನಾನ್ (51ನೇ ನಿಮಿಷ) ಚೀನಾ ತಂಡಕ್ಕೆ ಗೋಲುಗಳನ್ನು ಗಳಿಸಿದರು.

ಶ್ರೀಲಂಕಾ ವಿರುದ್ಧ ಮೊದಲ ಟೆಸ್ಟ್: ಕುಸಿತದ ನಂತರ ಪಾಕ್ ಹೋರಾಟ

ಗಾಲ್ (ಶ್ರೀಲಂಕಾ), (ಎಪಿ): ಸಾವುದ್ ಶಕೀಲ್ (ಬ್ಯಾಟಿಂಗ್ 69, 88 ಎ) ಮತ್ತು ಆಗಾ ಸಲ್ಮಾನ್ (ಬ್ಯಾಟಿಂಗ್ 61, 84 ಎ) ಅವರ ಅಜೇಯ ಅರ್ಧಶತಕಗಳ ನೆರವಿನಿಂದ ಪಾಕಿಸ್ತಾನ ತಂಡ ಮೊದಲ ಟೆಸ್ಟ್ ಪಂದ್ಯದಲ್ಲಿ ಆರಂಭಿಕ ಕುಸಿತದಿಂದ ಚೇತರಿಸಿಕೊಂಡಿತು. ಎರಡನೇ ದಿನದಾಟದ ಕೊನೆಗೆ ಪ್ರವಾಸಿ ತಂಡ 5 ವಿಕೆಟ್‌ಗೆ 221 ರನ್ ಗಳಿಸಿದೆ.

ಇದಕ್ಕೆ ಮೊದಲು, ಭಾನುವಾರ 6 ವಿಕೆಟ್‌ಗೆ 242 ರನ್ ಗಳಿಸಿದ್ದ ಶ್ರೀಲಂಕಾ, ಧನಂಜಯ ಡಿ ಸಿಲ್ವ (122, 214 ಎ., 4X12, 6x3) ಅವರ ಶತಕದ ನೆರವಿನಿಂದ 312 ರನ್‌ಗಳ ಗೌರವಾರ್ಹ ಮೊತ್ತ ಗಳಿಸಿತು. ಲಂಚ್ ನಂತರ ಪ್ರಭಾತ್ ಜಯಸೂರ್ಯ 3 ವಿಕೆಟ್ ಪಡೆದು ಪಾಕ್ ತಂಡವನ್ನು ಇಕ್ಕಟ್ಟಿಗೆ ಸಿಲುಕಿಸಿದರು. ಒಂದು ಹಂತದಲ್ಲಿ ಪಾಕಿಸ್ತಾನದ ಐದು ವಿಕೆಟ್‌ಗಳು 101 ರನ್‌ಗಳಾಗುವಷ್ಟರಲ್ಲಿ ಉರುಳಿದ್ದವು. ಶಕೀಲ್ ಜೊತೆಗೂಡಿದ ಸಲ್ಮಾನ್ ಮುರಿಯದ ಆರನೇ ವಿಕೆಟ್‌ಗೆ 120 ರನ್ ಸೇರಿಸಿ ತಂಡಕ್ಕೆ ಜೀವ ತುಂಬಿದರು. ಶ್ರೀಲಂಕಾ ಬೌಲರ್‌ಗಳನ್ನು ಆಗಾಗ ಬದಲಾಯಿಸಿದರೂ, ಇವರಿಬ್ಬರ ಮೇಲೆ ಅಂಥ ಪರಿಣಾಮವಾಗಲಿಲ್ಲ. ಮಳೆಯಿಂದಾಗಿ 2ನೇ ದಿನ 75 ಓವರುಗಳ ಆಟವಷ್ಟೇ ಸಾಧ್ಯವಾಯಿತು.

ಸ್ಕೋರುಗಳು: ಮೊದಲ ಇನಿಂಗ್ಸ್: ಶ್ರೀಲಂಕಾ: 95.2 ಓವರುಗಳಲ್ಲಿ 312 (ಧನಂಜಯ ಡಿ ಸಿಲ್ವ 122, ವಿಶ್ವ ಫೆರ್ನಾಂಡೊ ಔಟಾಗದೇ 21; ಶಾಹೀನ್ ಶಾ ಅಫ್ರಿದಿ 86ಕ್ಕೆ3, ನಸೀಮ್ ಶಾ 90ಕ್ಕೆ3, ಅಬ್ರಾರ್ ಅಹ್ಮದ್ 68ಕ್ಕೆ3); ಪಾಕಿಸ್ತಾನ: 45 ಓವರುಗಳಲ್ಲಿ 5 ವಿಕೆಟ್‌ಗೆ 221 (ಶಾನ್ ಮಸೂದ್ 39, ಸಾವುದ್ ಶಕೀಲ್ ಔಟಾಗದೇ 69, ಆಗಾ ಸಲ್ಮಾನ್ ಔಟಾಗದೇ 61; ಪ್ರಭಾತ್ ಜಯಸೂರ್ಯ 83ಕ್ಕೆ3).

ಉಗ್ರರ ನಂಟು: ಕಾಶ್ಮೀರ ವಿ.ವಿ ಪಿಆರ್‌ಒ ಸೇರಿ ಮೂವರು ಉದ್ಯೋಗಿಗಳ ವಜಾ

ಪ್ರಜಾವಾಣಿ ವಾರ್ತೆ

ಶ್ರೀನಗರ: ಉಗ್ರರ ಜತೆ ನಂಟು ಹೊಂದಿದ ಆರೋಪದ ಮೇಲೆ ಕಾಶ್ಮೀರ ವಿಶ್ವವಿದ್ಯಾಲಯದ ಸಾರ್ವಜನಿಕ ಸಂಪರ್ಕ ಅಧಿಕಾರಿ ಸೇರಿದಂತೆ ಮೂವರು ಉದ್ಯೋಗಿಗಳ ವಜಾಕ್ಕೆ ಸೋಮವಾರ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಆದೇಶಿಸಿದ್ದಾರೆ.

ವಜಾಗೊಂಡವರಲ್ಲಿ ವಿಶ್ವವಿದ್ಯಾಲಯದ ಸಾರ್ವಜನಿಕ ಸಂಪರ್ಕ ಅಧಿಕಾರಿ ಫಹೀಮ್ ಅಸ್ಲಂ, ಕಂದಾಯ ಇಲಾಖೆ ಅಧಿಕಾರಿ ಮುರಾವತ್ ಹುಸೇನ್ ಮಿರ್, ಜಮ್ಮು ಮತ್ತು ಕಾಶ್ಮೀರದ ಕಾನ್‌ಸ್ಟೆಬಲ್ ಅರ್ಷಿದ್ ಅಹ್ಮದ್‌ಥೋಕ ರ್‌ಸೇರಿದ್ದಾರೆ.

ಸಂವಿಧಾನದ ಅನುಚ್ಛೇದ 311 (2) (ಸಿ) ಅಡಿ ಯಾವುದೇ ವಿಚಾರಣೆ ನಡೆಸಲಾಗುವುದಿಲ್ಲ ಮತ್ತು ವಜಾಗೊಂಡ ನೌಕರರು ಪರಿಹಾರಕ್ಕಾಗಿ ಹೈಕೋರ್ಟ್ ಸಂಪರ್ಕಿಸಬಹುದು.

ರಾಜ್ಯದ ಭದ್ರತೆಯ ಹಿತಾಸಕ್ತಿಗೆ ಧಕ್ಕೆ ತರುವ ಚಟುವಟಿಕೆಗಳಲ್ಲಿ ಭಾಗಿಯಾಗಿರುವ ಹಿನ್ನೆಲೆಯಲ್ಲಿ ಮೂವರು ಉದ್ಯೋಗಿಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಸೇವೆಯಿಂದ ವಜಾಗೊಳಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

‘ಉಗ್ರರ ಸಂಪರ್ಕದ ಆರೋಪದ ಮೇಲೆ ನೌಕರರನ್ನು ವಜಾಗೊಳಿಸುವುದು ನಿರಂತರ ಪ್ರಕ್ರಿಯೆಯಾಗಿದೆ. ವಿಶ್ವವಿದ್ಯಾಲಯದ ನೌಕರರು ಸೇರಿದಂತೆ ಹಲವು ಉದ್ಯೋಗಿಗಳ ಪಟ್ಟಿಯನ್ನು ಸಿದ್ಧಪಡಿಸಲಾಗಿದ್ದು, ಅವರ ವಿರುದ್ಧ ಪುರಾವೆಗಳನ್ನು ಸಂಗ್ರಹಿಸಲಾಗುತ್ತಿದೆ’ ಎಂದು ಜಮ್ಮು, ಕಾಶ್ಮೀರದ ಸಾಮಾನ್ಯ ಆಡಳಿತ ಇಲಾಖೆಯ (ಜಿಎಡಿ) ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

2008ರಿಂದ ವಿಶ್ವವಿದ್ಯಾಲಯದ ಪಿಆರ್‌ಒ ಆಗಿರುವ ಅಸ್ಲಾಂ, ಸ್ಥಳೀಯ ಇಂಗ್ಲಿಷ್ ದೈನಿಕ ಗ್ರೇಟರ್ ಕಾಶ್ಮೀರ ಪತ್ರಿಕೆ ವರದಿಗಾರರಾಗಿಯೂ ಕಾರ್ಯನಿರ್ವಹಿಸುತ್ತಿದ್ದರು. ದಕ್ಷಿಣ ಕಾಶ್ಮೀರದ ನಿವಾಸಿ ಮೀರ್, 1985ರಲ್ಲಿ ಕಂದಾಯ ಇಲಾಖೆಯಲ್ಲಿ ಕಿರಿಯ ಸಹಾಯಕರಾಗಿ ನೇಮಕಗೊಂಡರು. ಥೋಕರ್ ಅವರು 2006 ರಲ್ಲಿ ಜಮ್ಮು ಮತ್ತು ಕಾಶ್ಮೀರ ಪೊಲೀಸ್‌ನ ಸಶಸ್ತ್ರ ವಿಭಾಗದಲ್ಲಿ ಕಾನ್‌ಸ್ಟೆಬಲ್ ಆಗಿ ನೇಮಕಗೊಂಡರು.

ಜಮ್ಮು ಮತ್ತು ಕಾಶ್ಮೀರದ ಮುಖ್ಯ ಕಾರ್ಯದರ್ಶಿ ಅರುಣ್ ಕುಮಾರ್ ಮೆಹ್ತಾ ನೇತೃತ್ವದ ಸಮಿತಿ ಉದ್ಯೋಗಿಗಳ ವಜಾಕ್ಕೆ ಹಸಿರು ನಿಶಾನೆ ತೋರಿಸಿದೆ ಎಂದು ಮೂಲಗಳು ತಿಳಿಸಿವೆ. 2021 ರಿಂದ 50ಕ್ಕೂ ಹೆಚ್ಚು ಸರ್ಕಾರಿ ನೌಕರರನ್ನು 311 ನೇ ವಿಧಿಯಡಿ ವಜಾಗೊಳಿಸಲಾಗಿದೆ.

ಪೂಂಛ್: ಇಬ್ಬರು ಉಗ್ರರ ಹತ್ಯೆ

ಪೂಂಛ್/ ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಪೂಂಛ್ ಜಿಲ್ಲೆಯ ಗಡಿ ನಿಯಂತ್ರಣ ರೇಖೆಯ (ಎಲ್‌ಒಸಿ) ಬಳಿ ಒಳನುಸುಳಲು ಯತ್ನಿಸಿದ್ದ ಇಬ್ಬರು ಉಗ್ರರನ್ನು ಭಾರತೀಯ ಸೇನಾಪಡೆ ಹೊಡೆದುರುಳಿಸಿದೆ ಎಂದು ಸೇನಾ ವಕ್ತಾರರು ಸೋಮವಾರ ತಿಳಿಸಿದ್ದಾರೆ.

ಪೂಂಛ್ ಜಿಲ್ಲೆಯ ಕೃಷ್ಣ ಘಾಟಿ ವಲಯದಲ್ಲಿ ಸೇನೆ ಹಾಗೂ ಜಮ್ಮು–ಕಾಶ್ಮೀರ ಪೊಲೀಸರು ಜಂಟಿಯಾಗಿ ಕಾರ್ಯಾಚರಣೆ ನಡೆಸಿದರು. ಸ್ಥಳದಲ್ಲಿದ್ದ ಶಸ್ತ್ರಾಸ್ತ್ರ ಹಾಗೂ ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅವರು ಹೇಳಿದ್ದಾರೆ.

ಚುನಾವಣೆಯಲ್ಲಿ ಸೀಟು ಹೊಂದಾಣಿಕೆಯತ್ತ ಎಲ್‌ಜೆಪಿ ಚಿತ್ತ?

ಎನ್‌ಡಿಎ ಸಭೆಗೂ ಮುನ್ನ ಶಾ ಭೇಟಿ ಮಾಡಿದ ಚಿರಾಗ್

ನವದೆಹಲಿ (ಪಿಟಿಐ): ಆಡಳಿತಾರೂಢ ಎನ್‌ಡಿಎ ಮಂಗಳವಾರ ನಡೆಸಲಿರುವ ಸಭೆಗೆ ಒಂದು ದಿನ ಮುನ್ನವೇ ಲೋಕ ಜನಶಕ್ತಿ ಪಕ್ಷದ (ಎಲ್‌ಜೆಪಿ– ರಾಮ್ ವಿಲಾಸ್) ಮುಖ್ಯಸ್ಥ ಚಿರಾಗ್ ಪಾಸ್ವಾನ್ ಅವರು ದೆಹಲಿಯಲ್ಲಿ ಸೋಮವಾರ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿದ್ದಾರೆ.

ಚಿರಾಗ್ ಪಾಸ್ವಾನ್

ಸಭೆಯ ಬಳಿಕ ಎಲ್‌ಜೆಪಿ (ಆರ್) ಮೂಲಗಳು ‘ಸಕಾರಾತ್ಮಕ ಫಲಿತಾಂಶ’ದ ಬಗ್ಗೆ ವಿಶ್ವಾಸ ವ್ಯಕ್ತಪಡಿಸಿದ್ದು, ಬಿಜೆಪಿ ನೇತೃತ್ವದ ಎನ್‌ಡಿಎ ಸಭೆಯಲ್ಲಿ ಚಿರಾಗ್ ಪಾಲ್ಗೊಳ್ಳುವುದನ್ನು ಖಚಿತಪಡಿಸಿವೆ.

2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಜತೆಗೆ ತಮ್ಮ ಪಕ್ಷದ ಸ್ಥಾನ ಹೊಂದಾಣಿಕೆ ಕುರಿತು ಖಚಿತಪಡಿಸಿಕೊಳ್ಳುವುದು ಈ ಭೇಟಿಯ ಹಿಂದಿನ ಉದ್ದೇಶ ಎನ್ನಲಾಗಿದೆ. ಈ ಹಿಂದೆ ಬಿಹಾರ ಬಿಜೆಪಿಯ ಹಿರಿಯ ನಾಯಕ ಹಾಗೂ ಕೇಂದ್ರ ಸಚಿವ ನಿತ್ಯಾನಂದ ರೈ ಅವರು ಎರಡು ಬಾರಿ ಚಿರಾಗ್ ಅವರನ್ನು ಭೇಟಿ ಮಾಡಿದ್ದರು.

ರಾಮ್ ವಿಲಾಸ್ ಪಾಸ್ವಾನ್ ನೇತೃತ್ವದ ಅವಿಭಜಿತ ಎಲ್‌ಜೆಪಿಯು 2019ರ ಲೋಕಸಭಾ ಚುನಾವಣೆಯಲ್ಲಿ ಆರು ಸ್ಥಾನಗಳಲ್ಲಿ ಸ್ಪರ್ಧಿಸಿತ್ತು. ಆಗ ಬಿಜೆಪಿಯೊಂದಿಗೆ ತನ್ನ ಸೀಟು ಹಂಚಿಕೆಯ ಒಪ್ಪಂದದ ಭಾಗವಾಗಿ ರಾಜ್ಯಸಭಾ ಸ್ಥಾನವನ್ನೂ ಪಡೆದಿತ್ತು. ಇದೀಗ ರಾಮ್ ವಿಲಾಸ್ ಬಣದಲ್ಲಿರುವ ಚಿರಾಗ್ ಅವರು ಬಿಜೆಪಿಯು ಈ ಹಿಂದಿನಂತೆಯೇ ತನ್ನ ಸೀಟು ಹಂಚಿಕೆಯ ಒಪ್ಪಂದವನ್ನು ಮುಂದುವರಿಸಬೇಕೆಂಬ ಇಂಗಿತ ವ್ಯಕ್ತಪಡಿಸಿದ್ದಾರೆ.

ಸಭೆಯಲ್ಲಿ ನಟ ಪವನ್ ಕಲ್ಯಾಣ್ ಭಾಗಿ

ತಿರುಪತಿ (ಪಿಟಿಐ): ದೆಹಲಿಯಲ್ಲಿ ಮಂಗಳವಾರ ನಡೆಯಲಿರುವ ಎನ್‌ಡಿಎ ಸಭೆಯಲ್ಲಿ ಜನಸೇನಾ ಪಕ್ಷದ ಸ್ಥಾಪಕ, ನಟ ಪವನ್ ಕಲ್ಯಾಣ್ ಅವರು ಪಾಲ್ಗೊಳ್ಳಲಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಜನಸೇನಾದ ರಾಜಕೀಯ ವ್ಯವಹಾರಗಳ ಸಮಿತಿ ಅಧ್ಯಕ್ಷ ನಾದೆಂಡ್ಲ ಮನೋಹರ್ ಕೂಡಾ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಪವನ್ ಅವರಿಗೆ ಎನ್‌ಡಿಎ ಸಭೆಯಲ್ಲಿ ಪಾಲ್ಗೊಳ್ಳಲು ಆಹ್ವಾನಿಸಲಾಗಿದ್ದು, ಅವರು ಸೋಮವಾರ ದೆಹಲಿಗೆ ತೆರಳಿದ್ದಾರೆ ಎಂದೂ ಮೂಲಗಳು ಹೇಳಿವೆ.

‘ಮೋದಿಗೆ ಪರ್ಯಾಯವಿಲ್ಲ’

ಪಟ್ನಾ ವರದಿ: ‘2024ರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪರ್ಯಾಯ ಯಾರೂ ಇರುವುದಿಲ್ಲ’ ಎಂದು ಕೇಂದ್ರದ ಮಾಜಿ ಸಚಿವ ಉಪೇಂದ್ರ ಕುಶ್ವಾಹ ಸೋಮವಾರ ಪ್ರತಿಪಾದಿಸಿದ್ದು, ಮೋದಿ ಅವರನ್ನು ಅಧಿಕಾರದಿಂದ ಕೆಳಗಿಳಿಸುವ ಏಕೈಕ ಕಾರ್ಯಸೂಚಿಯಿಂದ ವಿರೋಧಪಕ್ಷಗಳು ಒಂದಾಗುತ್ತಿವೆ ಎಂದು ಹೇಳಿದ್ದಾರೆ.

ಪ್ರತಿಪಕ್ಷಗಳ ಸಭೆ: ಮೋದಿ ಚಡಪಡಿಕೆ– ಖರ್ಗೆ ಲೇವಡಿ

ನವದೆಹಲಿ (ಪಿಟಿಐ): ‘ಬೆಂಗಳೂರಿನಲ್ಲಿ ನಡೆಯುತ್ತಿರುವ ಪ್ರತಿಪಕ್ಷಗಳ ಸಭೆಯು ಅಕ್ಷರಶಃ ಬಿಜೆಪಿಯ ಮಾನಸಿಕ ಒತ್ತಡವನ್ನು ದುಪ್ಪಟ್ಟುಗೊಳಿಸಿದೆ. ಪ್ರಧಾನಿ ನರೇಂದ್ರ ಮೋದಿ ಕೂಡ ಚಡಪಡಿಸುತ್ತಿದ್ದಾರೆ’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಲೇವಡಿ ಮಾಡಿದ್ದಾರೆ.

ಮಲ್ಲಿಕಾರ್ಜುನ ಖರ್ಗೆ

ದೆಹಲಿಯಲ್ಲಿ ಮಂಗಳವಾರ ಸಂಖ್ಯಾಬಲ ಪ್ರದರ್ಶನಕ್ಕೆ ಮುಂದಾಗಿರುವ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟದ (ಎನ್‌ಡಿಎ) ವಿರುದ್ಧ ಚಾಟಿ ಬೀಸಿದ ಖರ್ಗೆ, ‘ವಿಪಕ್ಷಗಳನ್ನು ಒಬ್ಬಂಟಿಯಾಗಿ ಎದುರಿಸುತ್ತೇನೆ ಎಂದು ಮೋದಿ ಅವರು ರಾಜ್ಯಸಭೆಯಲ್ಲಿ ಹೂಂಕರಿಸಿದ್ದರು. ಆಗಿದ್ದರೆ 30 ಪಕ್ಷಗಳ ಜೊತೆ ಮೈತ್ರಿಗೆ ಅವರೇಕೆ ಹಂಬಲಿಸಬೇಕು’ ಎಂದು ವ್ಯಂಗ್ಯವಾಡಿದ್ದಾರೆ.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಈಗಾಗಲೇ, ಎನ್‌ಡಿಎಯಿಂದ ಹಲವು ಪಕ್ಷಗಳು ಹೊರ ನಡೆದಿವೆ. ಅವುಗಳನ್ನು ಮತ್ತೆ ಬರಸೆಳೆಯಲು ಮೋದಿ ಮುಂದಾಗಿದ್ದಾರೆ. ಬೆಂಗಳೂರಿನಲ್ಲಿ ನಡೆಯುತ್ತಿರುವ ಪ್ರತಿಪಕ್ಷಗಳ ಸಭೆಯಿಂದ ಅವರು ತಬ್ಬಿಬ್ಬುಗೊಂಡಿದ್ದಾರೆ. ಹಾಗಾಗಿಯೇ, ಸಂಖ್ಯಾಬಲ ಪ್ರದರ್ಶನಕ್ಕೆ ಮುಂದಾಗಿದ್ದಾರೆ’ ಎಂದರು.

‘ಮೋದಿ ಅವರು ಎನ್‌ಡಿಎ ಮಿತ್ರ ಪಕ್ಷಗಳನ್ನು ಒಗ್ಗೂಡಿಸಲು ಮುಂದಾಗಿದ್ದಾರೆ. ಚುನಾವಣಾ ಆಯೋಗದಲ್ಲಿ ಅವು ನೋಂದಣಿಯಾಗಿವೆಯೇ, ಆಗಿದ್ದರೆ ಅವುಗಳ ಹೆಸರೇನು’ ಎಂದು ಪ್ರಶ್ನಿಸಿದರು.

ದೆಹಲಿಯ ಸೇವಾ ವಿಷಯಗಳ ಆಡಳಿತಾತ್ಮಕ ನಿಯಂತ್ರಣ ಕುರಿತು ಕೇಂದ್ರ ಹೊರಡಿಸಿದ ಸುಗ್ರೀವಾಜ್ಞೆ ವಿರುದ್ಧ ಸಂಸತ್‌ನಲ್ಲಿ ಮತ ಚಲಾಯಿಸ ಬಾರದು ಎಂದು ದೆಹಲಿ ಮತ್ತು ಪಂಜಾಬ್ ಕಾಂಗ್ರೆಸ್ ಘಟಕಗಳ ಒತ್ತಡದ ನಡುವೆಯೇ ಎಎಪಿಗೆ ಬೆಂಬಲ ಘೋಷಿಸಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ಇದು ಒಬ್ಬ ವ್ಯಕ್ತಿ (ಕೇಜ್ರಿವಾಲ್) ಕುರಿತಾದ ನಿರ್ಣಯವಲ್ಲ. ಸಂವಿಧಾನ ಮತ್ತು ಜನತಂತ್ರ ವ್ಯವಸ್ಥೆಯ ರಕ್ಷಣೆ ದೃಷ್ಟಿಯಿಂದ ಪಕ್ಷ ಈ ನಿರ್ಧಾರ ಕೈಗೊಂಡಿದೆ’ ಎಂದು ಸ್ಪಷ್ಟಪಡಿಸಿದರು.

ಇ.ಡಿ ದಾಳಿ ಮೂಲಕ ಪ್ರತಿಪಕ್ಷಗಳನ್ನು ವಿಭಜಿಸಲು ಬಿಜೆಪಿಯು ತಂತ್ರಗಾರಿಕೆ ಹೆಣೆಯುತ್ತಿದೆ. ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ಸರ್ಕಾರವನ್ನು ಅಸ್ಥಿರಗೊಳಿಸಲು ಕೇಂದ್ರ ಸರ್ಕಾರ ಯತ್ನಿಸುತ್ತಿದೆ ಎಂದು ಟೀಕಿಸಿದರು.

ಜನತಂತ್ರದಲ್ಲಿ ಅಧಿಕಾರ ಹಂಚಿಕೆ ಇರಬೇಕು’: ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ವಿರುದ್ಧ ಒಗ್ಗೂಡಲು ಪ್ರತಿಪಕ್ಷಗಳು ಕೈಗೊಂಡಿರುವ ನಿರ್ಧಾರವನ್ನು ಅರ್ಥಶಾಸ್ತ್ರಜ್ಞ ಅಮಾರ್ತ್ಯ ಸೇನ್ ಸ್ವಾಗತಿಸಿದ್ದಾರೆ. ‘ಪ್ರಜಾಪ್ರಭುತ್ವದಲ್ಲಿ ಅಧಿಕಾರದ ಹಂಚಿಕೆ ಇರಬೇಕು. ಜನತಂತ್ರ ವ್ಯವಸ್ಥೆ ಕೂಡ ಇದನ್ನೇ ಅಪೇಕ್ಷಿಸುತ್ತದೆ’ ಎಂದಿದ್ದಾರೆ.

ಅಧಿಕಾರ ದಾಹದ ಸಭೆ: ಬಿಜೆಪಿ ವ್ಯಂಗ್ಯ

ನವದೆಹಲಿ (ಪಿಟಿಐ): ‘ಅಧಿಕಾರ ದಾಹದಿಂದ ಬಳಲಿರುವ ಅವಕಾಶವಾದಿಗಳು ಬೆಂಗಳೂರಿನಲ್ಲಿ ಸಭೆ ನಡೆಸುತ್ತಿದ್ದಾರೆ. ಅವರ ಮೈತ್ರಿಕೂಟದಿಂದ ದೇಶಕ್ಕೆ ಈಗಲೂ ಮತ್ತು ಭವಿಷ್ಯದಲ್ಲಿಯೂ ನಯಾಪೈಸೆ ಪ್ರಯೋಜನವಾಗುವುದಿಲ್ಲ’ ಎಂದು ಬಿಜೆಪಿ ಹಿರಿಯ ನಾಯಕ ರವಿಶಂಕರ್ ಪ್ರಸಾದ್ ವ್ಯಂಗ್ಯವಾಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ರಾಷ್ಟ್ರ ರಾಜಧಾನಿಯಲ್ಲಿ ಯಮುನೆಯ ಪ್ರಕೋಪದಿಂದ ಜನರ ಬದುಕು ಬೀದಿಪಾಲಾಗಿದೆ. ಸಮರ್ಪಕವಾಗಿ ಪ್ರವಾಹ ಪರಿಸ್ಥಿತಿ ನಿರ್ವಹಣೆಯಲ್ಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಸೋತಿದ್ದಾರೆ. ಇದನ್ನು ಮರೆಮಾಚಿ ಸಭೆಯಲ್ಲಿ ಪಾಲ್ಗೊಳ್ಳಲು ತೆರಳುತ್ತಿದ್ದಾರೆ’ ಎಂದು ಟೀಕಿಸಿದರು.

ಪಶ್ಚಿಮ ಬಂಗಾಳದ ಪಂಚಾಯಿತಿ ಚುನಾವಣೆಯಲ್ಲಿ ಹಿಂಸಾಚಾರ ಭುಗಿಲೆದ್ದಿತ್ತು. ಇದನ್ನು ನಿಯಂತ್ರಿಸುವಲ್ಲಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ವಿಫಲರಾಗಿದ್ದರು. ಅವರು ಕೂಡ ಸಭೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ ಎಂದರು.

ಇಂದಿನ ಸಭೆಗೆ ಶರದ್ ಪವಾರ್

ಬೆಂಗಳೂರಿನಲ್ಲಿ ಮಂಗಳವಾರ ನಡೆಯಲಿರುವ ವಿರೋಧಪಕ್ಷಗಳ ನಾಯಕರ ಸಭೆಯಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ(ಎನ್‌ಸಿಪಿ) ಅಧ್ಯಕ್ಷ ಶರದ್ ಪವಾರ್ ಅವರು ಭಾಗವಹಿಸಲಿದ್ದಾರೆ ಎಂದು ಪಕ್ಷದ ವಕ್ತಾರ ಮಹೇಶ್ ತಾಪಸೆ ಸೋಮವಾರ ತಿಳಿಸಿದ್ದಾರೆ.

‘ತಮ್ಮ ಪಕ್ಷದ ಬಿಕ್ಕಟ್ಟಿನ ನಡುವೆಯೂ ಶರದ್ ಅವರು ಸಭೆಯಲ್ಲಿ ಪಾಲ್ಗೊಳ್ಳಲು ತೀರ್ಮಾನಿಸಿದ್ದಾರೆ’ ಎಂದೂ ಅವರು ಹೇಳಿದ್ದಾರೆ.

ಅಜಿತ್ ಬಣದಿಂದ ಮತ್ತೆ ಶರದ್ ಭೇಟಿ

ಮುಂಬೈ (ಪಿಟಿಐ): ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಅವರು ತಮ್ಮ ಬಣದ 15 ಶಾಸಕರೊಂದಿಗೆ ಸೋಮವಾರ ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರನ್ನು ಮತ್ತೊಮ್ಮೆ ಭೇಟಿ ಮಾಡಿದ್ದು, ಪಕ್ಷ ಒಗ್ಗಟ್ಟಾಗಿ ಉಳಿಯ ಬೇಕು ಎಂದು ಮನವಿ ಮಾಡಿದ್ದಾರೆ.

ಅಜಿತ್ ಪವಾರ್

ಎನ್‌ಸಿಪಿಯನ್ನು ವಿಭಜಿಸಿ ಶಿವಸೇನಾ–ಬಿಜೆಪಿ ಮೈತ್ರಿ ಸರ್ಕಾರದ ಜೊತೆ ಕೈಜೋಡಿಸಿದ್ದ ಅಜಿತ್ ಪವಾರ್ ತಮ್ಮ ಬಣದ ಶಾಸಕರೊಂದಿಗೆ ಭಾನುವಾರವಷ್ಟೇ ಶರದ್ ಪವಾರ್ ಅವರನ್ನು ಭೇಟಿಯಾಗಿದ್ದರು.

ಭೇಟಿ ಕುರಿತು ಮಾತನಾಡಿದ ರಾಜ್ಯಸಭಾ ಸದಸ್ಯ ಪ್ರಫುಲ್ ಪಟೇಲ್, ಎನ್‌ಸಿಪಿ ಒಗ್ಗಟ್ಟಾಗಿ ಉಳಿಯಬೇಕು ಎಂದು ಪವಾರ್ ಅವರಿಗೆ ಮನವಿ ಮಾಡಿದ್ದಾಗಿ ತಿಳಿಸಿದರು.

ಮಂಗಳವಾರ ದೆಹಲಿಯಲ್ಲಿ ನಡೆಯಲಿರುವ ಎನ್‌ಡಿಎ ಸಭೆಯಲ್ಲಿ ತಾವು ಮತ್ತು ಅಜಿತ್ ಪವಾರ್ ಭಾಗಿಯಾಗುವುದಾಗಿ ಪಟೇಲ್ ತಿಳಿಸಿದರು.

ಮಣಿಪುರ: ಗುಂಡಿನ ದಾಳಿಗೆ ಒಬ್ಬ ಸಾವು

ಇಂಫಾಲ (ಪಿಟಿಐ): ಮಣಿಪುರದ ಕಾಂಗ್‌ಪೊಕ್ಪಿ ಜಿಲ್ಲೆಯ ಲೈಮಾಟನ್ ಥ ಜಿಬಿಹ್ ಹಳ್ಳಿಯ ಒಂದು ಸಮುದಾಯದ ಗ್ರಾಮ ರಕ್ಷಣಾ ಪಡೆ ಮೇಲೆ ಶಸ್ತ್ರ ಸಜ್ಜಿತ ದಾಳಿಕೋರರು ದಾಳಿ ನಡೆಸಿದ ವೇಳೆ ಒಬ್ಬ ವ್ಯಕ್ತಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಎಸಿಸಿ ಎಮರ್ಜಿಂಗ್ ಕಪ್ ಕ್ರಿಕೆಟ್: ನೇಪಾಳ ವಿರುದ್ಧ ಗೆಲುವು

ಸೆಮಿಫೈನಲ್‌ಗೆ ಭಾರತ 'ಎ' ತಂಡ

ಕೊಲಂಬೊ (ಪಿಟಿಐ): ಸಾಯಿ ಸುದರ್ಶನ್ ಮತ್ತು ಅಭಿಷೇಕ್ ಶರ್ಮಾ ಅವರ ಅರ್ಧಶತಕಗಳ ನೆರವಿನಿಂದ ನೇಪಾಳ ತಂಡವನ್ನು 9 ವಿಕೆಟ್‌ಗಳಿಂದ ಮಣಿಸಿದ ಭಾರತ 'ಎ' ತಂಡ, ಎಸಿಸಿ ಎಮರ್ಜಿಂಗ್ ಕಪ್ ಏಕದಿನ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿತು.

ಸೋಮವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ನೇಪಾಳ 39.2 ಓವರ್‌ಗಳಲ್ಲಿ 167 ರನ್‌ಗಳಿಗೆ ಆಲೌಟಾಯಿತು. ನಿಶಾಂತ್ ಸಿಂಧು (14ಕ್ಕೆ 4) ಮತ್ತು ರಾಜವರ್ಧನ್ ಹಂಗರ್ಗೇಕರ್ (25ಕ್ಕೆ 3) ಪರಿಣಾಮಕಾರಿ ಬೌಲಿಂಗ್ ದಾಳಿಯನ್ನು ಎದುರಿಸಲು ನೇಪಾಳ ಬ್ಯಾಟರ್‌ಗಳು ವಿಫಲರಾದರು. ನಾಯಕ ರೋಹಿತ್ ಪೌದೆಲ್ (65 ರನ್) ಗರಿಷ್ಠ ಸ್ಕೋರ್ ಎನಿಸಿಕೊಂಡರು.

ಭಾರತ 'ಎ' ತಂಡ 22.1 ಓವರ್‌ಗಳಲ್ಲಿ ಕೇವಲ ಒಂದು ವಿಕೆಟ್ ಕಳೆದುಕೊಂಡು ಗೆಲುವಿನ ಗಡಿ ದಾಟಿತು.

ಅಭಿಷೇಕ್ ಶರ್ಮಾ (ಎಡ) ಮತ್ತು ಸಾಯಿ ಸುದರ್ಶನ್ –ಬಿಸಿಸಿಐ ಟ್ವಿಟರ್ ಚಿತ್ರ

ಅಭಿಷೇಕ್ (87 ರನ್, 69 ಎ., 4X12, 6X2) ಮತ್ತು ಸುದರ್ಶನ್ (ಔಟಾಗದೆ 58, 52 ಎ) ಅವರು ಮೊದಲ ವಿಕೆಟ್‌ಗೆ 19 ಓವರ್‌ಗಳಲ್ಲಿ 139 ರನ್ ಸೇರಿಸಿ ಗೆಲುವಿನ ಹಾದಿ ಸುಗಮಗೊಳಿಸಿದರು.

ಅಭಿಷೇಕ್ ಔಟಾದ ಬಳಿಕ ಬಂದ ಧ್ರುವ್ ಜುರೇಲ್ 12 ಎಸೆತಗಳಲ್ಲಿ ಒಂದು ಬೌಂಡರಿ, ಎರಡು ಸಿಕ್ಸರ್‌ಗಳ ನೆರವಿನಿಂದ ಅಜೇಯ 21 ರನ್ ಗಳಿಸಿದರು. ಸಿಕ್ಸ್ ಹೊಡೆದು ಅವರು ಗೆಲುವು ತಂದುಕೊಟ್ಟರು.

ಸತತ ಎರಡನೇ ಗೆಲುವು ಪಡೆದ ಭಾರತ, ನಾಲ್ಕು ಪಾಯಿಂಟ್ಸ್‌ಗಳೊಂದಿಗೆ ಅಗ್ರಸ್ಥಾನದಲ್ಲಿದೆ. ಯಶ್ ಧುಲ್ ಬಳಗ ಬುಧವಾರ ನಡೆಯಲಿರುವ ಕೊನೆಯ ಲೀಗ್ ಪಂದ್ಯದಲ್ಲಿ ಪಾಕಿಸ್ತಾನ 'ಎ' ತಂಡವನ್ನು ಎದುರಿಸಲಿದೆ.

ಸಂಕ್ಷಿಪ್ತ ಸ್ಕೋರ್: ನೇಪಾಳ 39.2 ಓವರ್‌ಗಳಲ್ಲಿ 167 (ರೋಹಿತ್ ಪೌದೆಲ್ 65, ಗುಲ್ಶನ್ ಝಾ 38, ನಿಶಾಂತ್ ಸಿಂಧು 14ಕ್ಕೆ 4, ರಾಜವರ್ಧನ್ ಹಂಗರ್ಗೇಕರ್ 25ಕ್ಕೆ 3, ಹರ್ಷಿತ್ ರಾಣಾ 16ಕ್ಕೆ 2) ಭಾರತ 'ಎ': 22.1 ಓವರ್‌ಗಳಲ್ಲಿ 1 ವಿಕೆಟ್‌ಗೆ 172 (ಸಾಯಿ ಸುದರ್ಶನ್ ಔಟಾಗದೆ 58, ಅಭಿಷೇಕ್ ಶರ್ಮಾ 87, ಧ್ರುವ್ ಜುರೇಲ್ ಔಟಾಗದೆ 21) **ಫಲಿತಾಂಶ:** ಭಾರತ 'ಎ' ತಂಡಕ್ಕೆ 9 ವಿಕೆಟ್ ಗೆಲುವು

ಕುಸ್ತಿ: ಚುನಾವಣೆ ಮತ್ತಷ್ಟು ಮುಂದಕ್ಕೆ

ಗುವಾಹಟಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್‌ನ ಚುನಾವಣೆಯಲ್ಲಿ ಪಾಲ್ಗೊಳ್ಳಲು ಅವಕಾಶ ನೀಡುವಂತೆ ಕೋರಿ ಅಸ್ಸಾಂ ಕುಸ್ತಿ ಸಂಸ್ಥೆ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಗುವಾಹಟಿ ಹೈಕೋರ್ಟ್ ಜುಲೈ 28ಕ್ಕೆ ಮುಂದೂಡಿದೆ. ಹೀಗಾಗಿ ಫೆಡರೇಷನ್‌ನ ಚುನಾವಣೆ ದಿನಾಂಕ ಇನ್ನಷ್ಟು ಮುಂದಕ್ಕೆ ಹೋಗಲಿದೆ.

ಜುಲೈ 11ರಂದು ಈ ಚುನಾವಣೆ ನಡೆಸಬೇಕಾಗಿತ್ತು. ಆದರೆ ಅಸ್ಸಾಂ ಸಂಸ್ಥೆಯು ತಕರಾರು ಅರ್ಜಿ ಸಲ್ಲಿಸಿದ ಹಿನ್ನೆಲೆಯಲ್ಲಿ ಚುನಾವಣೆಗೆ ಪ್ರಕ್ರಿಯೆಗೆ ತಡೆ ನೀಡಲಾಗಿತ್ತು. ಅರ್ಜಿಯ ವಿಚಾರಣೆಯನ್ನು ನ್ಯಾಯಾಲಯ ಸೋಮವಾರ ಮುಂದೂಡಿದೆ ಎಂದು ಕುಸ್ತಿ ಸಂಸ್ಥೆಯ ವಕೀಲ ದೇವಜಿತ್ ಸೈಕಿಯಾ ತಿಳಿಸಿದರು.

ಅಡ್‌ಹಾಕ್ ಸಮಿತಿ ಪರ ವಕೀಲರು ಹಾಜರಿರಲಿಲ್ಲ. ಆದರೆ ಪ್ರತಿವಾದಿಗಳಲ್ಲಿ ಒಬ್ಬರಾದ ಕ್ರೀಡಾ ಸಚಿವಾಲಯದ ಪ್ರತಿನಿಧಿ, ತಮ್ಮ ಪ್ರಮಾಣಪತ್ರ ಸಲ್ಲಿಸಲು ಒಂದು ವಾರ ಕೇಳಿದರು. ನ್ಯಾಯಾಲಯವು, 26ರೊಳಗೆ ಪ್ರಮಾಣಪತ್ರ ಸಲ್ಲಿಸಲು ಸೂಚಿಸಿತು.

ಇಂಗ್ಲೆಂಡ್ ತಂಡಕ್ಕೆ ವೇಗಿ ಆ್ಯಂಡರ್ಸನ್

ಲಂಡನ್ (ರಾಯಿಟರ್ಸ್): ಇಂಗ್ಲೆಂಡ್ ತಂಡ, ಬುಧವಾರ ಓಲ್ಡ್ ಟ್ರಾಫರ್ಡ್‌ನಲ್ಲಿ ಆರಂಭವಾಗಲಿರುವ ಆ್ಯಷಸ್ ಸರಣಿಯ ನಾಲ್ಕನೇ ಟೆಸ್ಟ್ ಪಂದ್ಯಕ್ಕೆ ವೇಗದ ಬೌಲರ್ ಜೇಮ್ಸ್ ಆ್ಯಂಡರ್ಸನ್ ಅವರನ್ನು ಸೇರ್ಪಡೆ ಮಾಡಿಕೊಂಡಿದೆ.

ಟೆಸ್ಟ್‌ಗಳಲ್ಲಿ 688 ವಿಕೆಟ್ ಗಳಿಸಿರುವ 40 ವರ್ಷದ ಆ್ಯಂಡರ್ಸನ್ ಅವರಿಗೆ ಓಲ್ಡ್ ಟ್ರಾಫರ್ಡ್ ತವರು ಮೈದಾನ. ಹೆಡಿಂಗ್ಲೆಯಲ್ಲಿ ಮೂರನೇ ಟೆಸ್ಟ್ ಗೆದ್ದ ಇಂಗ್ಲೆಂಡ್ ತಂಡದಲ್ಲಿ ಒಂದು ಬದಲಾವಣೆ ಮಾತ್ರ ಮಾಡಲಾಗಿದ್ದು, ಬೆನ್ನು ನೋವಿನಿಂದ ಬಳಲುತ್ತಿರುವ ವೇಗದ ಬೌಲರ್ ಒಲಿ ರಾಬಿನ್ಸನ್ ಅವರನ್ನು ಕೈಬಿಡಲಾಗಿದೆ.

ತಂಡ ಹೀಗಿದೆ: ಬೆನ್ ಡಕೆಟ್, ಜಾಕ್ ಕ್ರಾಲಿ, ಮೊಯೀನ್ ಅಲಿ, ಜೋ ರೂಟ್, ಹ್ಯಾರಿ ಬ್ರೂಕ್, ಬೆನ್ ಸ್ಟೋಕ್ಸ್ (ನಾಯಕ), ಜೊನಾಥನ್ ಬೇರ್‌ಸ್ಟೊ, ಕ್ರಿಸ್ ವೋಕ್ಸ್, ಮಾರ್ಕ್ ವುಡ್, ಸ್ಟುವರ್ಟ್ ಬ್ರಾಡ್, ಜೇಮ್ಸ್ ಆ್ಯಂಡರ್ಸನ್.